ಶನಿವಾರ, ಫೆಬ್ರುವರಿ 24, 2024 | ₹ 7.00 ●www.pra

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ವೋಲ್ವೊ ಬಸ್‌ಗಳಲ್ಲಿ ಬಳಕೆಯಲ್ಲಿರುವ ಡಿಜಿಟಲ್ ಪಾವತಿ ಪದ್ಧತಿ

ಬಿಎಂಟಿಸಿಯಲ್ಲಿ ಕ್ಯೂಆರ್ ಕೋಡ್

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿ ಬಸ್‌ಗಳಲ್ಲಿ ಟಿಕೆಟ್ ಖರೀದಿಗಾಗಿ ಎಲ್ಲ ನಿರ್ವಾಹಕರಿಗೆ ಡಿಜಿಟಲ್ ಪಾವತಿ ಮಾಡಿಸಿಕೊಳ್ಳಲು ಕ್ಯೂಆರ್ ಕೋಡ್ ಸ್ಕ್ಯಾನರ್ ನೀಡಿದ್ದರೂ, ಅದು ವೋಲ್ವೊ ಬಸ್‌ಗಳಲ್ಲಿ ಮಾತ್ರ ಬಳಕೆಯಾಗುತ್ತಿದೆ. ಎಲ್ಲ ನಿರ್ವಾಹಕರು ಈ ವ್ಯವಸ್ಥೆ ಬಳಸುವುದನ್ನು ಕಡ್ಡಾಯಗೊಳಿಸಲು ಬಿಎಂಟಿಸಿ ಮುಂದಾಗಿದೆ.

ಕೋವಿಡ್ ಕಾಲದಲ್ಲಿ ವ್ಯಕ್ತಿಗಳ ನಡುವೆ ಅಂತರವನ್ನು ಕಾಯ್ದುಕೊಳ್ಳುವುದು ಕಡ್ಡಾಯವಾಗಿದ್ದರಿಂದ, 2020ರಲ್ಲಿಯೇ ಬಿಎಂಟಿಸಿ ಡಿಜಿಟಲ್ ಪಾವತಿ ವ್ಯವಸ್ಥೆಯನ್ನು ಜಾರಿಗೆ ತಂದಿತ್ತು. ಕೋವಿಡ್ ನಂತರದಲ್ಲಿ ದೂರ ಪ್ರಯಾಣದ ಬಸ್‌ಗಳನ್ನು ಹೊರತುಪಡಿಸಿ ಉಳಿದವುಗಳಲ್ಲಿ ಕ್ಯೂಆರ್ ಕೋಡ್ ಬಳಕೆ ಕಡಿಮೆಯಾಯಿತು.

ನಗರದ ಒಳಗೆ ಬಸ್ ನಿಲ್ದಾಣಗಳ ಅಂತರ ಕಡಿಮೆ ಇರುವಲ್ಲಿ ಕ್ಯೂಆರ್ ಕೋಡ್ ಬಳಕೆಯೇ ಸಮಸ್ಯೆಗಳನ್ನು ಸೃಷ್ಟಿಸಿತು. ಒಂದು ನಿಲ್ದಾಣದಿಂದ ಪಕ್ಕದ ನಿಲ್ದಾಣಕ್ಕೆ ತೆರಳುವವರು ಟಿಕೆಟ್

ಬಿಎಂಟಿಸಿ ಬಸ್

ತೆಗೆದುಕೊಳ್ಳಲು ಸ್ಕ್ಯಾನ್ ಮಾಡುವಾಗ ನೆಟ್‌ವರ್ಕ್ ಇನ್ನಿತರ ಕಾರಣದಿಂದ ವಿಳಂಬವಾದರೆ, ಅವರು ಇಳಿಯಬೇಕಿದ್ದ ಸ್ಥಳ ಬಂದು ಬಿಡುತ್ತಿತ್ತು. ಇದರಿಂದ ಬಹುತೇಕ ನಿರ್ವಾಹಕರು ಡಿಜಿಟಲ್ ಪಾವತಿ ಇರುವುದನ್ನೇ ಮರೆಮಾಚಿ ನಗದು ಪಡೆದು ಟಿಕೆಟ್ ನೀಡುವುದನ್ನು ಮುಂದುವರಿಸಿದ್ದರು.

‘ಕೆಲವು ಮಾರ್ಗಗಳಲ್ಲಿ ಒಂದೇ ಬಾರಿ ಹತ್ತಿಪ್ಪತ್ತು ಪ್ರಯಾಣಿಕರು ಬಸ್ ಹತ್ತುತ್ತಾರೆ. ಅವರಲ್ಲಿ ಕೆಲವರು ಮುಂದಿನ ಅಥವಾ ಎರಡನೇ ನಿಲ್ದಾಣದಲ್ಲಿ ಇಳಿಯುವವರಾಗಿರುತ್ತಾರೆ. ಅಷ್ಟು ಮಂದಿ ಒಬ್ಬೊಬ್ಬರೇ ಸ್ಕ್ಯಾನ್ ಮಾಡಲು ಹೆಚ್ಚು ಅವಧಿ ಬೇಕಾಗುತ್ತದೆ. ಅದಕ್ಕೆ ಸ್ಕ್ಯಾನರ್ ಇಟ್ಟುಕೊಂಡಿಲ್ಲ’ ಎಂದು ಬಸ್ ನಿರ್ವಾಹಕರೊಬ್ಬರು ಪ್ರತಿಕ್ರಿಯಿಸಿದರು.

‘₹5, ₹10 ಮೊತ್ತವನ್ನು ಸ್ಕ್ಯಾನಿಂಗ್ ಮಾಡುತ್ತಾ ಕುಳಿತರೆ ಎಲ್ಲರಿಗೂ ಟಿಕೆಟ್ ಕೊಡುವುದು ಯಾವಾಗ ಎಂದು ಕೆಲವು ನಿರ್ವಾಹಕರು ಪ್ರಶ್ನಿಸುತ್ತಾರೆ. ಇನ್ನು ಕೆಲವರು, ನಮ್ಮಲ್ಲಿ ಕ್ಯೂಆರ್ ಕೋಡ್ ವ್ಯವಸ್ಥೆಯೇ ಇಲ್ಲ ಎಂದು ತಪ್ಪು ಮಾಹಿತಿ ನೀಡುತ್ತಾರೆ. ನಮ್ಮಲ್ಲಿ ಹಣವಿಲ್ಲ ಎಂದಲ್ಲ. ಆದರೆ ಚಿಲ್ಲರೆ ಇರುವುದಿಲ್ಲ. ಅದಕ್ಕೂ ನಿರ್ವಾಹಕರಿಂದ ಬೈಗುಳ ಕೇಳಬೇಕು’ ಎಂದು ಬಸ್ ಪ್ರಯಾಣಿಕ ರಾಜಾಜಿನಗರದ ಎಚ್‌.ಸಿ. ರಮೇಶ್ ಅಭಿಪ್ರಾಯ ವ್ಯಕ್ತಪಡಿಸಿದರು.

ಬಸ್ಸಲ್ಲಿ ಪ್ರಯಾಣಿಸುವ ಕೆಲವರಷ್ಟೇ ಯುಪಿಐ ಮೂಲಕ ಹಣ ಪಾವತಿಸುತ್ತಾರೆ. ಎಲ್ಲ ಬಸ್‌ಗಳಲ್ಲೂ ಡಿಜಿಟಲ್ ಪಾವತಿ ವ್ಯವಸ್ಥೆ ಇದ್ದರೆ ಪ್ರಯಾಣಿಕರಿಗೆ ಅನುಕೂಲವಾಗುತ್ತದೆ ಎಂದು ಅವರು ತಿಳಿಸಿದರು.

ಶೇ 7 ಆದಾಯ: ಸಾರಿಗೆಯ ನಾಲ್ಕು ನಿಗಮಗಳಲ್ಲಿ ಮೊದಲ ಬಾರಿಗೆ ಕ್ಯೂಆರ್ ಕೋಡ್ ಸ್ಕ್ಯಾನರ್ ಪದ್ಧತಿಯನ್ನು ಜಾರಿಗೊಳಿಸಿದ್ದೇ ಬಿಎಂಟಿಸಿ. ಈಗ ಬಿಎಂಟಿಸಿಗೆ ಪ್ರಯಾಣಿಕರಿಂದ ಬರುವ ಆದಾಯದಲ್ಲಿ ಶೇ 7ರಷ್ಟು ಕ್ಯೂಆರ್ ಕೋಡ್ ಮೂಲಕ ಬರುತ್ತಿದೆ ಎಂದು ಬಿಎಂಟಿಸಿ ಅಧಿಕಾರಿ ಮಾಹಿತಿ ನೀಡಿದರು.

‘ಎಲ್ಲ ನಿರ್ವಾಹಕರಿಗೆ ಸೂಚನೆ’

‘ಪ್ರಯಾಣದರವನ್ನು ಯುಪಿಐ ಆಧಾರಿತ ಪಾವತಿ ಮಾಡಲು ನಾಲ್ಕು ವರ್ಷಗಳ ಹಿಂದೆಯೇ ಬಿಎಂಟಿಸಿಯ ಎಲ್ಲ ನಿರ್ವಾಹಕರಿಗೆ ಕ್ಯೂಆರ್ ಕೋಡ್ ಸ್ಕ್ಯಾನರ್ ನೀಡಲಾಗಿದೆ. ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಚರಿಸುವ ಬಸ್‌ಗಳೂ ಒಳಗೊಂಡಂತೆ ಎಲ್ಲ ಹವಾನಿಯಂತ್ರಿತ ಬಸ್‌ಗಳಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ಬಳಕೆಯಾಗುತ್ತಿದೆ. ವಿವಿಧ ಕಾರಣಗಳಿಂದ ಕೆಲವು ಮಾರ್ಗಗಳಲ್ಲಿ ನಿರ್ವಾಹಕರು ಬಳಸುತ್ತಿಲ್ಲ. ಎಲ್ಲ ನಿರ್ವಾಹಕರು ಬಳಸುವಂತೆ ಸೂಚನೆ ನೀಡಲಾಗುವುದು’ ಎಂದು ಬಿಎಂಟಿಸಿ ನಿರ್ದೇಶಕ ರಾಮಚಂದ್ರನ್ ಆರ್. ‘ಪ್ರಜಾವಾಣಿ’ಗೆ ತಿಳಿಸಿದ್ದಾರೆ.

ದೆಹಲಿ ಚಲೋ: 29ರಂದು ತೀರ್ಮಾನ

ಚಂಡೀಗಢ (ಪಿಟಿಐ): ‘ದೆಹಲಿ ಚಲೋ’ ಕರೆಗೆ ಸಂಬಂಧಿಸಿದಂತೆ ಮುಂದಿನ ನಡೆ ಏನಿರಬೇಕು ಎಂಬ ಬಗ್ಗೆ ಗುರುವಾರ (ಫೆ. 29) ತೀರ್ಮಾನ ಕೈಗೊಳ್ಳುವುದಾಗಿ ರೈತ ಮುಖಂಡರು ತಿಳಿಸಿದ್ದಾರೆ.

ಮೇಣದ ಬತ್ತಿ ಹಿಡಿದು ಶನಿವಾರ ಜಾಥಾ ನಡೆಸಲಾಗುವುದು, ಎರಡು ದಿನಗಳ ನಂತರ (ಸೋಮವಾರ) ಕೇಂದ್ರ ಸರ್ಕಾರದ ಪ್ರತಿಕೃತಿಯನ್ನು ದಹಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ಖಾತರಿ ಸೇರಿದಂತೆ ಹಲವು ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರೈತರು ನಡೆಸುತ್ತಿರುವ ಪ್ರತಿಭಟನೆಯ ನೇತೃತ್ವ ವಹಿಸಿರುವ ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾ ಸಂಘಟನೆಗಳು ಶುಕ್ರವಾರ ಸಂಜೆ ಈ ತೀರ್ಮಾನ ಕೈಗೊಂಡಿವೆ.

ಜನದಟ್ಟಣೆ: 3 ನಿಮಿಷಕ್ಕೊಂದು ಮೆಟ್ರೊ ರೈಲು ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಗಿನ ಜನದಟ್ಟಣೆ ಕಡಿಮೆ ಮಾಡಲು ಫೆ.26ರಿಂದ 3 ನಿಮಿಷಕ್ಕೊಂದು ಮೆಟ್ರೊ ರೈಲು ಕಾರ್ಯಾಚರಣೆ ನಡೆಸಲು ಬಿಎಂಆರ್‌ಸಿಎಲ್ ನಿರ್ಧರಿಸಿದೆ.

ನೇರಳೆ ಮಾರ್ಗದಲ್ಲಿ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಿಂದ ಗರುಡಾಚಾರ್ ಪಾಳ್ಯ ಮೆಟ್ರೊ ನಿಲ್ದಾಣದ ನಡುವೆ ಬೆಳಿಗ್ಗೆ 8.45ರಿಂದ ಬೆಳಿಗ್ಗೆ 10.20ರವರೆಗೆ ಪ್ರತಿ 3 ನಿಮಿಷಗಳಿಗೆ ಒಂದು ಮೆಟ್ರೊ ರೈಲು ಸಂಚರಿಸಲಿದೆ. ಶನಿವಾರ, ಭಾನುವಾರ, ರಜಾ ದಿನ ಹೊರತುಪಡಿಸಿ ಈ ಸಂಚಾರ ಇರಲಿದೆ.

ಎಂ.ಜಿ. ರಸ್ತೆ, ಟ್ರಿನಿಟಿ, ಇಂದಿರಾನಗರ, ಬೆನ್ನಿಗಾನಹಳ್ಳಿ, ಕೆ.ಆರ್. ಪುರ ಕಡೆಗೆ ತೆರಳುವವರಿಗೆ ಅನುಕೂಲವಾಗಲಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಮೆಟ್ರೊ ಫೀಡರ್ ಬಸ್ ಮಾಹಿತಿಗಾಗಿ ಕ್ಯೂಆರ್ ಕೋಡ್

ಬೆಂಗಳೂರು: ಮೆಟ್ರೊ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ‘ಮೆಟ್ರೊ ಫೀಡರ್ ಬಸ್’ಗಳ ಮಾಹಿತಿ ಒದಗಿಸಲು ಬಿಎಂಟಿಸಿ ಕ್ಯೂಆರ್ ಕೋಡ್ ಸೇವೆ ಪರಿಚಯಿಸಿದೆ.

40 ಮೆಟ್ರೊ ನಿಲ್ದಾಣಗಳಲ್ಲಿ ಕ್ಯೂಆರ್ ಕೋಡ್ ಅಳವಡಿಸಲಾಗಿದ್ದು, ಪ್ರಯಾಣಿಕರು ಸ್ಕ್ಯಾನ್ ಮಾಡಿ ಮಾಹಿತಿ ಪಡೆಯಬಹುದು. ಮೆಟ್ರೊ ಫೀಡರ್ ಬಸ್‌ಗಳ ವೇಳಾಪಟ್ಟಿ, ಮಾರ್ಗ, ತಲುಪುವ ಸಮಯ ಸಹಿತ ವಿವಿಧ ಮಾಹಿತಿಗಳು ಇಲ್ಲಿ ದೊರೆಯಲಿವೆ.

ಮೆಟ್ರೊ ಫೀಡರ್ ಮಾರ್ಗಗಳಲ್ಲಿ 151 ಬಸ್ ಕಾರ್ಯಾಚರಿಸುತ್ತಿವೆ. 300 ಬಸ್ ಕಾರ್ಯಾಚರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಇದಲ್ಲದೆ ಮುಂದೆ ವಿಶೇಷ ಮಿನಿಬಸ್‌ಗಳನ್ನು ಬ್ರ್ಯಾಂಡ್ ಮಾಡಿ, ಕಾರ್ಯಾಚರಣೆಗೆ ಇಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ಲಾಸ್ಟಿಕ್ ಸಾಮಗ್ರಿ ಗೋದಾಮಿನಲ್ಲಿ ಅವಘಡ • ಚಾಲಕರ ಕಣ್ಣೀರು

29 ಆಟೊ ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಂಗೊಂಡನಹಳ್ಳಿಯಲ್ಲಿರುವ ಪ್ಲಾಸ್ಟಿಕ್ ಸಾಮಗ್ರಿ ಸಂಗ್ರಹ ಗೋದಾಮಿನಲ್ಲಿ ಬೆಂಕಿ ಅವಘಡ ಸಂಭವಿಸಿದ್ದು, ಗೋದಾಮು ಪಕ್ಕದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಿದ್ದ 29 ಆಟೊಗಳು ಬೆಂಕಿಯಿಂದ ಸುಟ್ಟು ಕರಕಲಾಗಿವೆ.

‘ಹಳೇ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಗೋದಾಮಿನಲ್ಲಿ ಸಂಗ್ರಹಿಸಿಡಲಾಗಿತ್ತು. ಗುರುವಾರ ತಡರಾತ್ರಿ ಗೋದಾಮಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಇಡೀ ಗೋದಾಮು ಬೆಂಕಿಯಿಂದ ಹೊತ್ತಿ ಉರಿಯಲಾರಂಭಿಸಿತ್ತು’ ಎಂದು ಸ್ಥಳೀಯರು ಹೇಳಿದರು.

‘ಬೆಂಕಿ ಕಂಡು ಅಕ್ಕ-ಪಕ್ಕದ ನಿವಾಸಿಗಳು ಮನೆಯಿಂದ ಹೊರಗೆ ಬಂದಿದ್ದರು. ಪೊಲೀಸರು ಹಾಗೂ ಅಗ್ನಿಶಾಮಕ ದಳಕ್ಕೆ ಕರೆ ಮಾಡಿದ್ದರು. ಅಗ್ನಿಶಾಮಕ ದಳದ ಸಿಬ್ಬಂದಿ ನಸುಕಿನವರೆಗೂ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು’ ಎಂದರು.

ಹಣ ಕೊಟ್ಟು ಆಟೊ ನಿಲ್ಲಿಸಿದ್ದ ಚಾಲಕರು: ‘ಗೋದಾಮು ಪಕ್ಕದಲ್ಲಿ ಖಾಲಿ ಜಾಗವಿದ್ದು, ಇಲ್ಲಿ ವಾಹನಗಳ ಪಾರ್ಕಿಂಗ್‌ಗೆ ವ್ಯವಸ್ಥೆ ಕಲ್ಪಿಸಲಾಗಿದೆ. ಚಾಲಕರು ದಿನಕ್ಕೆ ₹20ರಿಂದ ₹30 ಕೊಟ್ಟು ತಮ್ಮ ಆಟೊಗಳನ್ನು ಪಾರ್ಕಿಂಗ್ ಜಾಗದಲ್ಲಿ ರಾತ್ರಿ ನಿಲ್ಲಿಸುತ್ತಿದ್ದರು. ಬೆಳಿಗ್ಗೆ ಪುನಃ ಆಟೊ ತೆಗೆದುಕೊಂಡು ಹೋಗುತ್ತಿದ್ದರು’ ಎಂದು ಚಂದ್ರಾ ಲೇಔಟ್ ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ₹20–₹30 ಕೊಟ್ಟು ಆಟೊ ನಿಲುಗಡೆ
- ಅವಶೇಷಗಳ ಎದುರು ಚಾಲಕರ ಗೋಳಾಟ
- ಸೂಕ್ತ ಪರಿಹಾರಕ್ಕೆ ಒತ್ತಾಯ

‘ಗುರುವಾರ ರಾತ್ರಿಯೂ ಚಾಲಕರು ಆಟೊ ನಿಲ್ಲಿಸಿ ಹೋಗಿದ್ದರು. ತಡರಾತ್ರಿ ಗೋದಾಮಿಗೆ ತಗುಲಿದ್ದ ಬೆಂಕಿಯ ಕೆನ್ನಾಲಗೆ ಪಾರ್ಕಿಂಗ್ ಜಾಗದಲ್ಲಿದ್ದ ಆಟೊಗಳಿಗೂ ತಗುಲಿತ್ತು. ಆಟೊಗಳು ಸಹ ಬೆಂಕಿಯಿಂದ ಹೊತ್ತಿ ಉರಿದವು. ಹಲವು ಆಟೊಗಳು ಸಂಪೂರ್ಣ ಸುಟ್ಟಿವೆ. ಕೆಲ ಆಟೊಗಳು ಭಾಗಶಃ ಸುಟ್ಟಿವೆ’ ಎಂದರು.

ಚಾಲಕರ ಕಣ್ಣೀರು: ಆಟೊ ಸುಟ್ಟಿರುವ ಮಾಹಿತಿ ತಿಳಿದು ಸ್ಥಳಕ್ಕೆ ಬಂದಿದ್ದ ಚಾಲಕರು, ಸುಟ್ಟ ಆಟೊಗಳ ಅವಶೇಷ ಕಂಡು ಗೋಳಾಡಿದರು.

‘ಆಟೊ ನಂಬಿ ಜೀವನ ಸಾಗಿಸುತ್ತಿದ್ದೆ. ಮನೆ ಬಳಿ ಆಟೊ ನಿಲ್ಲಿಸಲು ಜಾಗವಿರಲಿಲ್ಲ. ಹೀಗಾಗಿ, ಹಣ ಕೊಟ್ಟು ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸುತ್ತಿದ್ದೆ. ಇದೀಗ ಆಟೊ ಸಂಪೂರ್ಣ ಸುಟ್ಟಿದ್ದು, ಬದುಕು ಬೀದಿಗೆ ಬಂದಿದೆ’ ಎಂದು ಚಾಲಕರೊಬ್ಬರು ಕಣ್ಣೀರಿಟ್ಟರು.

‘ಸಾಲ ಮಾಡಿ ಆಟೊ ಖರೀದಿಸಿದ್ದೆ. ಆಟೊ ದುಡಿಮೆಯಿಂದ ಸಾಲದ ಕಂತು ಪಾವತಿಸುತ್ತಿದ್ದೆ. ಉಳಿದ ಹಣದಲ್ಲಿ ಮನೆ ಬಾಡಿಗೆ, ಮನೆ ಖರ್ಚು ಹಾಗೂ ಮಕ್ಕಳ ವಿದ್ಯಾಭ್ಯಾಸ ನೋಡಿಕೊಳ್ಳುತ್ತಿದ್ದೆ. ಇದೀಗ, ಆಟೊ ಬೆಂಕಿಗೆ ಆಹುತಿಯಾಗಿ ದಿಕ್ಕು ತೋಚದಂತಾಗಿದೆ’ ಎಂದು ಚಾಲಕ ಅಳಲು ತೋಡಿಕೊಂಡರು.

‘ಗೋದಾಮು ಅಕ್ರಮವಾಗಿತ್ತು. ಗೋದಾಮು ನಿರ್ವಹಣೆ ಕೊರತೆಯಿಂದ ಬೆಂಕಿ ಅವಘಡ ಸಂಭವಿಸಿದೆ. ಆಟೊಗಳು ಸುಟ್ಟಿರುವುದಕ್ಕೆ ಸೂಕ್ತ ಪರಿಹಾರ ಕೊಡಿಸಬೇಕು. ಹೊಸ ಆಟೊ ಕೊಂಡುಕೊಳ್ಳಲು ನೆರವು ನೀಡಬೇಕು’ ಎಂದು ಚಾಲಕರು ಆಗ್ರಹಿಸಿದರು.

ಬೆಂಕಿ ಅವಘಡದಿಂದ ಸುಟ್ಟ ಆಟೊಗಳ ಅವಶೇಷಗಳನ್ನು ಚಾಲಕರೊಬ್ಬರು ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

‘ಪ್ರಕರಣ ದಾಖಲು: ಕಾರಣ ನಿಗೂಢ’

‘ಬೆಂಕಿ ಅವಘಡ ಸಂಬಂಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಬೆಂಕಿ ಹೊತ್ತಿಕೊಳ್ಳಲು ಕಾರಣವೇನು ಎಂಬುದು ಸದ್ಯಕ್ಕೆ ಗೊತ್ತಾಗಿಲ್ಲ’ ಎಂದು ಪೊಲೀಸರು ಹೇಳಿದರು.

‘29 ಆಟೊಗಳು ಸುಟ್ಟಿರುವ ಮಾಹಿತಿ ಇದ್ದು, ಚಾಲಕರ ಪಟ್ಟಿ ಸಿದ್ಧಪಡಿಸಲಾಗುತ್ತಿದೆ. ಯಾವ ಆಟೊಗೆ ವಿಮೆ ಇದೆ ? ಇಲ್ಲವೋ ? ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ’ ಎಂದರು.

ಅಗ್ನಿಶಾಮಕ ದಳದ ಅಧಿಕಾರಿಯೊಬ್ಬರು, ‘ನಾಯಂಡಹಳ್ಳಿಗೆ ಹೊಂದಿಕೊಂಡಿರುವ ಗಂಗೊಂಡನಹಳ್ಳಿಯಲ್ಲಿ ಗೋದಾಮು ಇದೆ. ಹಳೇ ಪ್ಲಾಸ್ಟಿಕ್ ಸಾಮಗ್ರಿಗಳನ್ನು ಸಂಗ್ರಹಿಸಲಾಗಿತ್ತು. ಗೋದಾಮಿನಲ್ಲಿ ಬೆಂಕಿ ಹೇಗೆ ಹೊತ್ತಿಕೊಂಡಿತು ಎಂಬುದು ಪರಿಶೀಲನೆಯಿಂದ ತಿಳಿಯಬೇಕಿದೆ’ ಎಂದರು.

ಶ್ರೀ ರಾಘವೇಂದ್ರ ಸಂಗೀತ ಸೇವಾ ಪ್ರತಿಷ್ಠಾನ ನಗರದಲ್ಲಿ ಹಮ್ಮಿಕೊಂಡಿದ್ದ 24ನೇ ವರ್ಷದ ವಾರ್ಷಿಕೋತ್ಸವ ಮತ್ತು ಸಂಗೀತ ಹಾಗೂ ನೃತ್ಯ ಕಾರ್ಯಕ್ರಮದಲ್ಲಿ ಹಿಂದೂಸ್ಥಾನಿ ಗಾಯಕ ರಾಯಚೂರು ಶೇಷಗಿರಿದಾಸ್ ಮತ್ತು ರಶ್ಮಿ ದಾಸ್ ದಂಪತಿಗೆ ‘ಸಪ್ತಸ್ವರ ಸಂಗೀತ ಸ್ವರ್ಶಮಣಿ ಪ್ರಶಸ್ತಿ’ ನೀಡಿ ಗೌರವಿಸಲಾಯಿತು. ಬನಶಂಕರಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮೀ ವಿಶ್ವೇಶ್ವರನ್, ವಿದ್ವಾಂಸ ಆರ್.ಕೆ. ಪದ್ಮನಾಭ, ವೀಣಾ ಸುರೇಶ್ ಪಾಲ್ಗೊಂಡಿದ್ದರು.

ರೈಲು ನಿಲ್ದಾಣ ಮೇಲ್ದರ್ಜೆಗೆ: 26ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತ್ ಭಾರತ್ ಸ್ಟೇಷನ್ ಸ್ಕೀಮ್ (ಎಬಿಎಸ್ಎಸ್) ಅಡಿ ನೈರುತ್ಯ ರೈಲ್ವೆಯ 15 ರೈಲು ನಿಲ್ದಾಣಗಳು ಮೇಲ್ದರ್ಜೆಗೆ ಏರಲಿವೆ. ಫೆ. 26ರಂದು ಪ್ರಧಾನಿ ನರೇಂದ್ರ ಮೋದಿ ಈ ಕಾಮಗಾರಿಗಳಿಗೆ ವರ್ಚುವಲ್ ಮೂಲಕ ಚಾಲನೆ ನೀಡಲಿದ್ದಾರೆ.

ಬೆಂಗಳೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಎಂ. ಯೋಗೇಶ್ ಮೋಹನ್ ಈ ಬಗ್ಗೆ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಭಾರತೀಯ ರೈಲ್ವೆ ಜಾಲದ ರೈಲು ನಿಲ್ದಾಣಗಳನ್ನು ಆಧುನೀಕರಣಗೊಳಿಸಲು ಪ್ರಧಾನ ಮಂತ್ರಿಯವರು ಎಬಿಎಸ್ಎಸ್ ಯೋಜನೆ ರೂಪಿಸಿದ್ದಾರೆ. ಅದರಲ್ಲಿ ನೈರುತ್ಯ ರೈಲ್ವೆಯ 15 ನಿಲ್ದಾಣಗಳು ಮೊದಲ ಹಂತದಲ್ಲಿ ಸೇರಿದೆ ಎಂದು ತಿಳಿಸಿದರು.

ರೈಲ್ವೆ ನಿಲ್ದಾಣಕ್ಕೆ ಉತ್ತಮ ಪ್ರವೇಶದ್ವಾರ, ಕಾಯುವ ಸ್ಥಳ, ಲಿಫ್ಟ್, ಎಸ್ಕಲೇಟರ್, ಸ್ವಚ್ಛತೆ, ಉಚಿತ ವೈಫೈ ವ್ಯವಸ್ಥೆ, ‘ಒಂದು ನಿಲ್ದಾಣ ಒಂದು ಉತ್ಪನ್ನ’ ವ್ಯವಸ್ಥೆ, ಮಾಹಿತಿ ವ್ಯವಸ್ಥೆ ಸಹಿತ ಅನೇಕ ಸೌಲಭ್ಯಗಳನ್ನು ಈ ಯೋಜನೆ ಒಳಗೊಂಡಿದೆ ಎಂದು ತಿಳಿಸಿದರು.

ನೈರುತ್ಯ ರೈಲ್ವೆ ವ್ಯಾಪ್ತಿಯ ಬಂಗಾರಪೇಟೆ, ಚನ್ನಪಟ್ಟಣ, ಧರ್ಮಪುರಿ, ದೊಡ್ಡಬಳ್ಳಾಪುರ, ಹಿಂದೂಪುರ, ಹೊಸೂರು, ಕೆಂಗೇರಿ, ಕೃಷ್ಣರಾಜಪುರ, ಕುಪ್ಪಂ, ಮಲ್ಲೇಶ್ವರ, ಮಾಲೂರು, ಮಂಡ್ಯ, ರಾಮನಗರ, ತುಮಕೂರು, ವೈಟ್ ಫೀಲ್ಡ್ ರೈಲು ನಿಲ್ದಾಣಗಳು ಒಟ್ಟು ₹372.13 ಕೋಟಿ ವೆಚ್ಚದಲ್ಲಿ ಉನ್ನತೀಕರಣಗೊಳ್ಳಲಿವೆ ಎಂದರು.

ಬಿಟ್ ಕಾಯಿನ್: ಇನ್‌ಸ್ಪೆಕ್ಟರ್, ಸೈಬರ್ ತಜ್ಞನಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಬಂಧಿಸಲಾಗಿರುವ ಇನ್‌ಸ್ಪೆಕ್ಟರ್ ಡಿ.ಎಂ. ಪ್ರಶಾಂತ್ ಬಾಬು ಹಾಗೂ ಸೈಬರ್ ತಜ್ಞ ಕೆ.ಎಸ್. ಸಂತೋಷ್ ಕುಮಾರ್ ಅವರಿಗೆ ನಗರದ 51ನೇ ಹೆಚ್ಚುವರಿ ಸಿಟಿ ಸಿವಿಲ್ ಹಾಗೂ ಸೆಷನ್ಸ್ ನ್ಯಾಯಾಲಯ ಜಾಮೀನು ಮಂಜೂರು ಮಾಡಿದೆ.



ಪ್ರಶಾಂತ್ ಬಾಬು

ಸಂತೋಷ್ ಕುಮಾರ್

ಸಾಕ್ಷ್ಯ ನಾಶ ಆರೋಪದಡಿ ಸಿಐಡಿ ಸೈಬರ್ ಕ್ರೈಂ ಠಾಣೆಯಲ್ಲಿ ಜ. 24ರಂದು ಪ್ರತ್ಯೇಕ ಎಫ್‌ಐಆರ್ ದಾಖಲಿಸಿದ್ದ ವಿಶೇಷ ತನಿಖಾ ತಂಡ (ಎಸ್ಐಟಿ) ಅಧಿಕಾರಿಗಳು, ಪ್ರಶಾಂತ್ ಬಾಬು ಹಾಗೂ ಸಂತೋಷ್ ಅವರನ್ನು ಜ. 25ರಂದು ಬಂಧಿಸಿದ್ದರು.

ನಂತರ, ಆರು ದಿನ ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ್ದರು. ಬಳಿಕ, ಇಬ್ಬರೂ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು. ಅಂದಿನಿಂದ ಇಬ್ಬರೂ ಆರೋಪಿಗಳು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿದ್ದಾರೆ.

ಪ್ರಕರಣದಲ್ಲಿ ಜಾಮೀನು ನೀಡುವಂತೆ ಕೋರಿ ಸಂತೋಷ್ ಕುಮಾರ್ ಪರ ವಕೀಲ ಸುಧನ್ವ ಡಿ.ಎಸ್ ಹಾಗೂ ಪ್ರಶಾಂತ್ ಬಾಬು ಪರ ಹಿರಿಯ ವಕೀಲ ಎಂ.ಎಸ್. ಶ್ಯಾಮಸುಂದರ್ ಅವರು ಅರ್ಜಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಾಧೀಶರಾದ ಯಶವಂತ ಕುಮಾರ್, ಆರೋಪಿಗಳಿಗೆ ಜಾಮೀನು ಮಂಜೂರು ಮಾಡಿ ಶುಕ್ರವಾರ ಆದೇಶ ಹೊರಡಿಸಿದ್ದಾರೆ.

ಎರಡು ದಿನ ಜೈಲಿನಲ್ಲಿ: ನಾಲ್ಕನೇ ಶನಿವಾರ ಹಾಗೂ ಭಾನುವಾರ ರಜೆ ದಿನವಾಗಿದ್ದರಿಂದ ಜಾಮೀನು ಸಿಕ್ಕರೂ ಇಬ್ಬರೂ ಆರೋಪಿಗಳು 2 ದಿನ ಜೈಲಿನಲ್ಲಿ ಇರಲಿದ್ದಾರೆ. ಸೋಮವಾರ ಇಬ್ಬರೂ ಬಿಡುಗಡೆ ಆಗುವ ಸಾಧ್ಯತೆ ಇದೆ.

ಡಿವೈಎಸ್ಪಿ ಶ್ರೀಧರ್ ಪೂಜಾರ ಅರ್ಜಿ ತಿರಸ್ಕೃತ

ಬಿಟ್ ಕಾಯಿನ್ ಪ್ರಕರಣದಲ್ಲಿ ಆರೋಪಿ ಆಗಿರುವ ಡಿವೈಎಸ್ಪಿ ಶ್ರೀಧರ್ ಪೂಜಾರ ಅವರು ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯ ತಿರಸ್ಕರಿಸಿದೆ.

‘ಅಂತರರಾಷ್ಟ್ರೀಯ ಹ್ಯಾಕರ್ ಎನ್ನಲಾದ ಶ್ರೀಕೃಷ್ಣ ವಿರುದ್ಧ ದಾಖಲಾಗಿದ್ದ ಪ್ರಕರಣದ ತನಿಖಾಧಿಕಾರಿಯೂ ಆಗಿದ್ದ ಸಿಸಿಬಿಯ ಅಂದಿನ ಇನ್‌ಸ್ಪೆಕ್ಟರ್ ಶ್ರೀಧರ್ ಪೂಜಾರ (ಸದ್ಯ ಡಿವೈಎಸ್ಪಿ), ಸಾಕ್ಷ್ಯ ನಾಶ ಮಾಡಿದ್ದ ಸಂಗತಿ ಎಸ್ಐಟಿ ತನಿಖೆಯಿಂದ ಗೊತ್ತಾಗಿತ್ತು. ಇದೇ ಕಾರಣಕ್ಕೆ ಶ್ರೀಧರ್ ವಿರುದ್ಧವೂ ಎಫ್‌ಐಆರ್ ದಾಖಲಾಗಿತ್ತು. ಎಸ್ಐಟಿ ವಿಚಾರಣೆಗೂ ಅವರು ಹಾಜರಾಗುತ್ತಿದ್ದರು. ಬಂಧನ ಭೀತಿಯಲ್ಲಿದ್ದ ಅವರು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ನಲಪಾಡ್ ವಿರುದ್ಧದ ಪ್ರಕರಣ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಷನಲ್ ಹೆರಾಲ್ಡ್’ ಪತ್ರಿಕೆ ಹೆಸರಿನಲ್ಲಿ ಅಕ್ರಮವಾಗಿ ಹಣ ವರ್ಗಾವಣೆ ಮಾಡಿದ್ದ ಆರೋಪದಡಿ ಎಐಸಿಸಿ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ವಿಚಾರಣೆ ನಡೆಸಿದ್ದ ಜಾರಿ ನಿರ್ದೇಶನಾಲಯದ (ಇ.ಡಿ) ಕ್ರಮ ವಿರೋಧಿಸಿ ಬೆಂಗಳೂರಿನಲ್ಲಿ ಪ್ರತಿಭಟನೆ ನಡೆಸಿದ ಕಾರಣಕ್ಕಾಗಿ ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮ್ಮದ್ ಹ್ಯಾರಿಸ್ ನಲಪಾಡ್ ವಿರುದ್ಧ ದಾಖಲಾಗಿದ್ದ ಖಾಸಗಿ ದೂರನ್ನು ಹೈಕೋರ್ಟ್ ರದ್ದುಪಡಿಸಿದೆ.

‘ಪ್ರಕರಣಕ್ಕೆ ಸಂಬಂಧಿಸಿದಂತೆ 42ನೇ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿಯ ವಿಚಾರಣೆ ರದ್ದುಪಡಿಸಬೇಕು’ ಎಂದು ಕೋರಿ ಮೊಹಮ್ಮದ್ ಹ್ಯಾರಿಸ್ ನಲಪಾಡ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಶಿವಾಜಿನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

250 ಕ್ಯಾಮೆರಾ ಪರಿಶೀಲನೆ: ಸಿಕ್ಕಿಬಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶೇಷಾದ್ರಿಪುರ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ನಡೆದಿದ್ದ ಕಳ್ಳತನ ಪ್ರಕರಣದ ಆರೋಪಿ ಪ್ರದೀಪ್ ಮಂಡಲ ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಅಸ್ಸಾಂನ ಪ್ರದೀಪ್, ತಿಂಗಳಿಗೊಮ್ಮೆ ರೈಲಿನಲ್ಲಿ ನಗರಕ್ಕೆ ಬರುತ್ತಿದ್ದ. ಮೆಜೆಸ್ಟಿಕ್ ಹಾಗೂ ಸುತ್ತಮುತ್ತಲಿನ ವಸತಿಗೃಹದಲ್ಲಿ ಉಳಿದುಕೊಳ್ಳುತ್ತಿದ್ದ. ಶ್ರೀಮಂತರ ಮನೆಗಳನ್ನು ಗುರುತಿಸಿ ರಾತ್ರಿ ಕಳ್ಳತನ ಮಾಡುತ್ತಿದ್ದ. ಈತನಿಂದ ಚಿನ್ನಾಭರಣ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ನೆಹರೂ ವೃತ್ತ ಬಳಿಯ ಮನೆಯೊಂದರಲ್ಲಿ ಜ.17ರಂದು ಕಳ್ಳತನ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಆರೋಪಿ ಸುಳಿವು ಸಿಕ್ಕಿರಲಿಲ್ಲ. ಮನೆ ಹಾಗೂ ಸುತ್ತಮುತ್ತಲಿನ 250 ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಗಳನ್ನು ಪರಿಶೀಲಿಸಲಾಗಿತ್ತು. ವಸತಿಗೃಹದಲ್ಲಿ ಆರೋಪಿ ತಪ್ಪು ಹೆಸರು ಹಾಗೂ ವಿಳಾಸ ಬರೆದಿದ್ದ.

‘ಕೆಲ ಕ್ಯಾಮೆರಾಗಳಲ್ಲಿ ಆರೋಪಿ ಮುಖಚಹರೆ ಸೆರೆಯಾಗಿತ್ತು. ಅದನ್ನು ಆಧರಿಸಿ ತನಿಖೆ ಮುಂದುವರಿಸಿದಾಗ, ಆರೋಪಿ ಸಿಕ್ಕಿಬಿದ್ದಿದ್ದಾನೆ. ಈತನನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಲಾಗಿದೆ’ ಎಂದು ಮೂಲಗಳು ತಿಳಿಸಿವೆ.

ಐಷಾರಾಮಿ ಜೀವನ: ‘ಚಿನ್ನಾಭರಣ ಕದ್ದುಕೊಂಡು ಆರೋಪಿ ತನ್ನೂರಿಗೆ ಹೋಗುತ್ತಿದ್ದ. ಕಡಿಮೆ ಬೆಲೆಗೆ ಚಿನ್ನಾಭರಣ ಮಾರಿ, ಅದರಿಂದ ಬಂದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದ್ದ. ನಗರದಲ್ಲಿ ನಡೆದಿರುವ ಹಲವು ಕಳ್ಳತನ ಪ್ರಕರಣಗಳಲ್ಲಿ ಈತ ಭಾಗಿಯಾಗಿರುವ ಮಾಹಿತಿ ಇದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಕೊಲೆ: ಬಾಲಕರು ವಶಕ್ಕೆ

ಬೆಂಗಳೂರು: ಮದ್ಯ ಕುಡಿಯಲು ಹಣ ನೀಡಲಿಲ್ಲವೆಂಬ ಕಾರಣಕ್ಕೆ ವೃದ್ಧರೊಬ್ಬರನ್ನು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಆರೋಪದಡಿ ಇಬ್ಬರು ಬಾಲಕರನ್ನು ಬಾಣಸವಾಡಿ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ‘70 ವರ್ಷ ವಯಸ್ಸಿನ ವೃದ್ಧನನ್ನು ಗುರುವಾರ ರಾತ್ರಿ ಕೊಲೆ ಮಾಡಲಾಗಿದೆ. ಹಣಕ್ಕಾಗಿ ಕೃತ್ಯ ಎಸಗಿದ್ದ ಬಾಲಕರನ್ನು ವಶಕ್ಕೆ ಪಡೆದು, ಬಾಲ ನ್ಯಾಯ ಮಂಡಳಿ ಎದುರು ಹಾಜರುಪಡಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಮಾನವ ಕಳ್ಳಸಾಗಣೆ: ಎನ್‌ಐಎ ಅಧಿಕಾರಿಗಳಿಂದ ಇಬ್ಬರ ಬಂಧನ

ತ್ಯಾಜ್ಯ ಘಟಕ ನಡೆಸುತ್ತಿದ್ದ ಬಾಂಗ್ಲಾ ಪ್ರಜೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವ ಕಳ್ಳಸಾಗಣೆ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಬಾಂಗ್ಲಾದೇಶದ ಇಬ್ಬರು ಪ್ರಜೆಗಳನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬೆಂಗಳೂರಿನಲ್ಲಿ ಗುರುವಾರ ಬಂಧಿಸಿದ್ದಾರೆ.

‘ಮೊಹಮ್ಮದ್ ಸಾಜೀದ್ ಹಲ್ದಾರ್ ಹಾಗೂ ಇದ್ರಿಸ್ ಬಂಧಿತರು. ಬಾಂಗ್ಲಾದೇಶದ ಪ್ರಜೆಗಳನ್ನು ಅಕ್ರಮವಾಗಿ ಭಾರತದೊಳಗೆ ಕಳ್ಳ ಸಾಗಣೆ ಮಾಡುತ್ತಿದ್ದ ಆರೋಪಿಗಳು, 2023ರ ನವೆಂಬರ್‌ನಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ತಲೆಮರೆಸಿಕೊಂಡಿದ್ದರು. ಕರ್ನಾಟಕದ ಆಂತರಿಕ ಭದ್ರತಾ ವಿಭಾಗದ (ಐಎಸ್‌ಡಿ) ಸಹಾಯದಿಂದ ಇಬ್ಬರನ್ನೂ ಸೆರೆ ಹಿಡಿಯಲಾಗಿದೆ’ ಎಂದು ಎನ್‌ಐಎ ಮೂಲಗಳು ಹೇಳಿವೆ.

‘ಆರೋಪಿಗಳು ತಮ್ಮದೇ ಜಾಲ ಸೃಷ್ಟಿಸಿಕೊಂಡಿದ್ದರು. ಬಾಂಗ್ಲಾ ಪ್ರಜೆಗಳನ್ನು ಕಳ್ಳಸಾಗಣೆ ಮೂಲಕ ಕರೆತಂದು ಭಾರತದ ಹಲವು ರಾಜ್ಯಗಳಲ್ಲಿ ಇರಿಸುತ್ತಿದ್ದರು. ಇದಕ್ಕಾಗಿ ಹಣ ಪಡೆದುಕೊಳ್ಳುತ್ತಿದ್ದರು. ಈ ಬಗ್ಗೆ ಮಾಹಿತಿ ದೊರೆಯುತ್ತಿದ್ದಂತೆ ಕಾರ್ಯಾಚರಣೆ ನಡೆಸಿ, 12 ಬಾಂಗ್ಲಾ ಪ್ರಜೆಗಳನ್ನು ಬಂಧಿಸಲಾಗಿತ್ತು.’

‘ಜಾಲದ ಪ್ರಮುಖ ಆರೋಪಿಗಳಾಗಿದ್ದ ಸಾಜೀದ್ ಹಲ್ದಾರ್ ಹಾಗೂ ಇದ್ರಿಸ್, ತಲೆಮರೆಸಿಕೊಂಡಿದ್ದರು. ಇವರ ಬಂಧನಕ್ಕೆ ಹಲವು ದಿನಗಳಿಂದ ಪ್ರಯತ್ನಿಸಲಾಗುತ್ತಿತ್ತು’ ಎಂದು ಮೂಲಗಳು ತಿಳಿಸಿವೆ.

ಶೆಡ್‌ನಲ್ಲಿ ವಾಸ

‘ಸಾಜೀದ್ ಹಲ್ದಾರ್, ಬೆಂಗಳೂರು ರಾಮಮೂರ್ತಿನಗರ ಬಳಿಯ ಚನ್ನಸಂದ್ರದಲ್ಲಿ ತ್ಯಾಜ್ಯ ವಿಂಗಡಣಾ ಘಟಕ ನಡೆಸುತ್ತಿದ್ದ. ಇದ್ರಿಸ್ ಸಹ ಆನಂದಪುರದಲ್ಲಿ ಘಟಕ ಹೊಂದಿದ್ದ. ಇವರಿಬ್ಬರು ಬಾಂಗ್ಲಾ ಪ್ರಜೆಗಳನ್ನು ಕೆಲಸಕ್ಕೆ ಇರಿಸಿಕೊಂಡಿದ್ದರು’ ಎಂದು ಎನ್‌ಐಎ ಮೂಲಗಳು ಹೇಳಿವೆ.

‘ಘಟಕದ ಬಳಿಯೇ ಖಾಲಿ ಜಾಗದಲ್ಲಿ ಶೆಡ್‌ಗಳನ್ನು ಹಾಕಲಾಗಿತ್ತು. ಬಾಂಗ್ಲಾದೇಶದ 20 ಕುಟುಂಬಗಳು ಶೆಡ್‌ನಲ್ಲಿ ವಾಸವಿದ್ದವು. ಕುಟುಂಬದ ಸದಸ್ಯರನ್ನು ಕಳ್ಳ ಸಾಗಣೆ ಮೂಲಕ ಬೆಂಗಳೂರಿಗೆ ಕರೆತಂದಿದ್ದ ಸಂಗತಿ ತನಿಖೆಯಿಂದ ಗೊತ್ತಾಗಿದೆ. ಇವರೆಲ್ಲರೂ ನಕಲಿ ದಾಖಲೆ ಸೃಷ್ಟಿಸಿ ಆಧಾರ್ ಪಡೆದಿದ್ದಾರೆ’ ಎಂದು ತಿಳಿಸಿವೆ.

ಶನಿವಾರ, ಫೆಬ್ರುವರಿ 24, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪ್ರಚಾರ
ಮುಂಬೈನಲ್ಲಿ ನಡೆದ ‘ಆರ್ಟಿಕಲ್ 370’ ಚಿತ್ರದ ಪ್ರಚಾರ ಕಾರ್ಯಕ್ರಮದಲ್ಲಿ ನಟಿ ಯಾಮಿ ಗೌತಮಿ ಪಾಲ್ಗೊಂಡಿದ್ದರು



ವಿಧಾನಸಭೆಯಲ್ಲಿ ಈ ಹಿಂದೆಯೇ ಅಂಗೀಕಾರವಾಗಿದ್ದ ಮಸೂದೆ • ತಿದ್ದುಪಡಿ ಮಸೂದೆಗೆ ವಿಧಾನ ಪರಿಷತ್‌ನಲ್ಲಿ ಅಂಗೀಕಾರ

ಎಪಿಎಂಸಿ ಕಾಯ್ದೆ ಉಲ್ಲಂಘನೆಗೆ ಭಾರಿ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಉತ್ಪನ್ನಗಳ ಮಾರುಕಟ್ಟೆಗಳ ನಿಯಮ ಉಲ್ಲಂಘಿಸುವ ವ್ಯಾಪಾರಿಗಳಿಗೆ ಹಿಂದೆ ಇದ್ದುದಕ್ಕಿಂತ 10 ಪಟ್ಟು ದಂಡ ಹಾಗೂ ಮೂರು ತಿಂಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶ ಕಲ್ಪಿಸುವ ಪರಿಷ್ಕೃತ ಮಸೂದೆಗೆ ವಿಧಾನಪರಿಷತ್ ಶುಕ್ರವಾರ ಅನುಮೋದನೆ ನೀಡಿದೆ.

‘ರೈತ ವಿರೋಧಿಯಾದ ಕೃಷಿ ಉತ್ಪನ್ನಗಳ ಮಾರುಕಟ್ಟೆ ಸಮಿತಿ ಕಾಯ್ದೆಯನ್ನು ತಾವು ಅಧಿಕಾರಕ್ಕೆ ಬಂದರೆ ವಾಪಸ್ ಪಡೆಯುವುದಾಗಿ’ ಕಾಂಗ್ರೆಸ್ ಪಕ್ಷ ವಿಧಾನಸಭೆ ಚುನಾವಣೆಗೆ ಮುನ್ನ ತನ್ನ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿತ್ತು. ಅಧಿಕಾರಕ್ಕೆ ಬರುತ್ತಿದ್ದಂತೆ ತಿದ್ದುಪಡಿ ಮಸೂದೆ ಮಂಡಿಸಿದ್ದ ಸರ್ಕಾರ, ವಿಧಾನ ಸಭೆಯಲ್ಲಿ ಅಂಗೀಕಾರ ಪಡೆದಿತ್ತು. ಪರಿಷತ್‌ನಲ್ಲಿ ತಿದ್ದುಪಡಿಗೆ ವಿರೋಧ ಪಕ್ಷ ಬಿಜೆಪಿ ತೀವ್ರ ವಿರೋಧ ಪಕ್ಷ ಪಡಿಸಿತ್ತು. ವಿಪಕ್ಷ ಬೇಡಿಕೆಗೆ ಅನುಗುಣವಾಗಿ ಮಸೂದೆಯನ್ನು ಪರಿಶೀಲನಾ ಸಮಿತಿ ವಹಿಸಲಾಯಿತು. ಸಮಿತಿ ವರದಿ ಆಧರಿಸಿ, ಕೆಲವು ತಿದ್ದುಪಡಿಗಳೊಂದಿಗೆ ಮಸೂದೆ ಮಂಡಿಸಿದ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ, ಮಸೂದೆಗೆ ಒಪ್ಪಿಗೆ ಪಡೆದರು. ಈ ಮಸೂದೆಗೆ ರಾಜ್ಯಪಾಲರ ಅಂಕಿತ ದೊರೆತ ಬಳಿಕ ಕಾಯ್ದೆ ಅನುಷ್ಠಾನಕ್ಕೆ ಬರಲಿದೆ.

ಬಿಜೆಪಿ ಸರ್ಕಾರ ತಿದ್ದುಪಡಿ ತರುವ ಮುನ್ನ ಇದ್ದ ಕಾಯ್ದೆಯ ಅನುಸಾರ, ಪರವಾನಗಿ ಇಲ್ಲದೇ, ನಿಯಮಗಳನ್ನು ಉಲ್ಲಂಘಿಸಿ ವ್ಯಾಪಾರ ಮಾಡುವ ವರ್ತಕರು, ದಲಾಲರು, ದಾಸ್ತಾನುಗಾರರು, ಮಧ್ಯವರ್ತಿಗಳಿಗೆ ₹500ರಿಂದ ₹5 ಸಾವಿರದವರೆಗೆ ದಂಡ, ಆರು ತಿಂಗಳವರೆಗೆ ಜೈಲು ಶಿಕ್ಷೆ ವಿಧಿಸಲು ಅವಕಾಶವಿತ್ತು.

ರೈತರಿಗೆ ಸಂಬಂಧಿಸಿದ ಮೂರು ಪ್ರಮುಖ ಕಾಯ್ದೆಗಳಿಗೆ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ತಿದ್ದುಪಡಿ ತಂದಿತ್ತು. ಆಗ ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರ, ಇಲ್ಲಿಯೂ ತಿದ್ದುಪಡಿ ಮಾಡಿತ್ತು. ಅಂದು ಮಾಡಿದ್ದ ತಿದ್ದುಪಡಿ ಪ್ರಕಾರ ಎಪಿಎಂಸಿ ಹೊರಗೆ ಉತ್ಪನ್ನಗಳ ಮಾರಾಟ ಹಾಗೂ ಖರೀದಿಗೆ ಮುಕ್ತ ಅವಕಾಶ ನೀಡಿತ್ತು. ದಂಡ ಹಾಗೂ ಶಿಕ್ಷೆಗಳನ್ನಮು ರದ್ದು ಮಾಡಿತ್ತು.

ಪರಿಷ್ಕೃತ ತಿದ್ದುಪಡಿಯ ಪ್ರಕಾರ ₹5 ಸಾವಿರದಿಂದ ₹10 ಸಾವಿರದವರೆಗೆ ದಂಡವಿಧಿಸಲು, ಎರಡನೇ ಬಾರಿ ನಿಯಮ ಉಲ್ಲಂಘಿಸಿದರೆ ₹20 ಸಾವಿರ, ಮೂರನೇ ಬಾರಿಗೆ ₹30 ಸಾವಿರ ದಂಡ ವಿಧಿಸಲಾಗುತ್ತದೆ. ಆದರೆ, ಶಿಕ್ಷೆಯ ಪ್ರಮಾಣವನ್ನು 6 ತಿಂಗಳಿನಿಂದ 3 ತಿಂಗಳಿಗೆ ಇಳಿಸಲಾಗಿದೆ. ಮಾರುಕಟ್ಟೆ ಪ್ರಾಂಗಣ ಹೊರತುಪಡಿಸಿ ಯಾವುದೇ ಸ್ಥಳದಲ್ಲಿ ಖರೀದಿ ಮತ್ತು ಮಾರಾಟ ಮಾಡಲು ನಿರ್ಬಂಧ ವಿಧಿಸಲಾಗಿದೆ.

ಮಾರಾಟ– ಖರೀದಿಗೆ ನಿರ್ಬಂಧ

- ಮಾರುಕಟ್ಟೆ ಪ್ರಾಂಗಣ, ಉಪ ಪ್ರಾಂಗಣ, ಉಪ ಮಾರುಕಟ್ಟೆ, ಖಾಸಗಿ ಮಾರುಕಟ್ಟೆ ಪ್ರಾಂಗಣ ಅಥವಾ ಸಂದರ್ಭಾನುಸಾರ ರೈತ–ಗ್ರಾಹಕ ಮಾರುಕಟ್ಟೆ ಪ್ರಾಂಗಣಗಳನ್ನು ಬಿಟ್ಟು ಯಾವುದೇ ಸ್ಥಳವನ್ನು ಅಧಿಸೂಚಿತ ಕೃಷಿ ಉತ್ಪನ್ನಗಳ ಖರೀದಿ ಹಾಗೂ ಮಾರಾಟಕ್ಕೆ ಬಳಸಲು ಅವಕಾಶ ಇರುವುದಿಲ್ಲ. ಅಂದರೆ, ನಿರ್ದಿಷ್ಟ ಮಾರುಕಟ್ಟೆಗಳ ಹೊರಗೆ ಮಾರಾಟ–ಖರೀದಿ ಮಾಡಲು ನಿರ್ಬಂಧ ಇರುತ್ತದೆ.
- ತಾಲ್ಲೂಕು ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಸಂಘ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ರಾಜ್ಯ ಸರ್ಕಾರ ಅನುಮತಿ ನೀಡಿರುವ ಯಾವುದೇ ಇತರ ಸಹಕಾರ ಸಂಘದ ಮಾರುಕಟ್ಟೆಗಳಲ್ಲಿ ವಹಿವಾಟು ನಡೆಸಬಹುದು.
- ಚಿಲ್ಲರೆ ವ್ಯಾಪಾರಿಯ ಮೂಲಕ ಅಧಿಸೂಚಿತ ಕೃಷಿ ಉತ್ಪನ್ನಗಳ ಮಾರಾಟಕ್ಕೆ, ಕರಾರು ವ್ಯವಸಾಯದ ಒಪ್ಪಂದದಡಿ ಕರಾರು ವ್ಯವಸಾಯ ಪ್ರಾಯೋಜಕನಿಗೆ ರೈತ ಉತ್ಪಾದಕ ಮಾರಾಟ ಮಾಡಲು ನಿರ್ಬಂಧ ಇರುವುದಿಲ್ಲ.

ಮಹಾರಾಷ್ಟ್ರ ಗಡಿತಂಟೆಗೆ ತಕ್ಕ ಉತ್ತರ: ಎಚ್.ಕೆ. ಪಾಟೀಲ

ಬೆಂಗಳೂರು: ಕರ್ನಾಟಕ–ಮಹಾರಾಷ್ಟ್ರ ಗಡಿ ವಿಚಾರದಲ್ಲಿ ಮಹಾಜನ್ ವರದಿಯೇ ಅಂತಿಮ. ರಾಜ್ಯದ ತಂಟೆಗೆ ಯಾರೇ ಬಂದರೂ ಸರ್ಕಾರ ತಕ್ಕ ಉತ್ತರ ನೀಡಲಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಹೇಳಿದರು.

ವಿಧಾನ ಪರಿಷತ್‌ನ ಶೂನ್ಯವೇಳೆಯಲ್ಲಿ ಕಾಂಗ್ರೆಸ್ ಬಿ.ಕೆ. ಹರಿಪ್ರಸಾದ್ ಅವರು ಎತ್ತಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ನಾಡು, ನುಡಿ, ಗಡಿ ವಿಚಾರದಲ್ಲಿ ತಕರಾರು ಸಹಿಸುವುದಿಲ್ಲ. ಇಂತಹ ಕಿರಿಕ್ ನೋಡಿಕೊಂಡು ಕೈಕಟ್ಟಿ ಕೂರುವುದಿಲ್ಲ. ಮಹಾರಾಷ್ಟ್ರ ಸರ್ಕಾರ ಗಡಿ ಭಾಗದ ಜನರ ವಿಷಯದಲ್ಲಿ ಅನಗತ್ಯ ರಾಜಕೀಯ ಮಾಡುತ್ತಿದೆ ಎಂದು ದೂರಿದರು.

‘ಎಷ್ಟೇ ಅಡ್ಡಿಗಳು ಎದುರಾದರೂ ನಾವು ಸಮಾಧಾನದಿಂದ ಇದ್ದೇವೆ. ಅದನ್ನೇ ನೆರೆ ರಾಜ್ಯಗಳು ದೌರ್ಬಲ್ಯ ಎಂದು ಭಾವಿಸಬಾರದು. ಕಾನೂನು ಹೋರಾಟಕ್ಕೆ ರಾಜ್ಯವೂ ಸಿದ್ಧವಾಗಿದೆ’ ಎಂದರು.

ಬಿ.ಕೆ. ಹರಿಪ್ರಸಾದ್ ಮಾತನಾಡಿ, ಗಡಿ ಭಾಗದ ಮರಾಠಿ ಭಾಷಿಕರ ಬೇಡಿಕೆ ಕುರಿತು ಮಹಾರಾಷ್ಟ್ರ ಸರ್ಕಾರ ಮಹಾರಾಷ್ಟ್ರ ಏಕೀಕರಣ ಸಮಿತಿ ಹಾಗೂ ಅಧಿಕಾರಿಗಳ ಜತೆ ಚರ್ಚೆ ನಡೆಸಿದೆ. ಗಡಿ ಭಾಗದ 865 ಹಳ್ಳಿಗಳ ಮರಾಠಿ ಭಾಷಿಕರ ಬೆನ್ನಿಗೆ ದೃಢವಾಗಿ ನಿಲ್ಲುವ ಹಾಗೂ ನ್ಯಾಯಾಲಯದ ಹೋರಾಟ ಮಾಡುವುದಾಗಿ ಹೇಳಿಕೆ ನೀಡಿದೆ. ಆರೋಗ್ಯ ವಿಮೆಯಡಿ ಮುಖ್ಯಮಂತ್ರಿ ವೈದ್ಯಕೀಯ ಸಹಾಯ ನಿಧಿಯ ಸೌಲಭ್ಯ ಪಡೆಯಲು ತಹಶೀಲ್ದಾರ್ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಿದೆ. ದ್ವಿಭಾಷಾ ಅಧಿಕಾರಿಗಳನ್ನು ನೇಮಿಸುವಂತೆ ಕರ್ನಾಟಕಕ್ಕೆ ಪತ್ರ ಬರೆಯುವುದಾಗಿ ಹೇಳಿದೆ. ಇಂತಹ ಹಸ್ತಕ್ಷೇಪ ನಿಯಂತ್ರಿಸಿ, ಗಡಿ ಭಾಗದಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಕಾಂಗ್ರೆಸ್ ಶಾಸಕರು ಹಿಲ್ಟನ್ ಹೋಟೆಲ್‌ಗೆ

ಬೆಂಗಳೂರು: ವಿಧಾನಸಭೆಯಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳಿಗೆ ಇದೇ 27ರಂದು ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ ತಮ್ಮ ಶಾಸಕರನ್ನು ರೆಸಾರ್ಟ್‌ಗೆ ಸ್ಥಳಾಂತರಿಸಲು ಕಾಂಗ್ರೆಸ್ ನಾಯಕರು ಮುಂದಾಗಿದ್ದಾರೆ.

ನಾಲ್ಕು ಸ್ಥಾನಗಳಲ್ಲಿ ಶಾಸಕರ ಸಂಖ್ಯಾ ಬಲದಲ್ಲಿ ಕಾಂಗ್ರೆಸ್ ಮೂರು, ಬಿಜೆಪಿ ಒಂದು ಸ್ಥಾನ ಗೆಲ್ಲುವುದು ಬಹುತೇಕ ಖಚಿತ. ಈ ಮಧ್ಯೆ, ಐದನೇ ಅಭ್ಯರ್ಥಿಯಾಗಿ ಜೆಡಿಎಸ್‌ನ ಡಿ. ಕುಪೇಂದ್ರ ರೆಡ್ಡಿ ಕಣದಲ್ಲಿರುವುದರಿಂದ ಕಾಂಗ್ರೆಸ್ ನಾಯಕರಿಗೆ ಅಡ್ಡ ಮತದಾನ ಭೀತಿ ಎದುರಾಗಿದೆ. ಹೀಗಾಗಿ, ಶಾಸಕರನ್ನು ಹೋಟೆಲ್‌ನಲ್ಲಿ ಹಿಡಿದಿಡಲು ನಿರ್ಧರಿಸಿದ್ದಾರೆ ಎಂದು ಗೊತ್ತಾಗಿದೆ.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮಾತನಾಡಿ, ‘ವಿಧಾನ ಮಂಡಲ ಅಧಿವೇಶನ ಮುಗಿದ ಬಳಿಕ ಮಾನ್ಯತಾ ಟೆಕ್‌ಪಾರ್ಕ್ ಆವರಣದಲ್ಲಿರುವ ಹಿಲ್ಟನ್ ಹೋಟೆಲ್‌ನಲ್ಲಿ ಶಾಸಕಾಂಗ ಪಕ್ಷದ ಸಭೆ ಆಯೋಜಿಸಲಾಗಿದೆ. ಅಲ್ಲಿ ಅಣಕು ಮತದಾನ ನಡೆಸುತ್ತೇವೆ’ ಎಂದರು.

‘ನಮ್ಮ ಜೊತೆ ಒಟ್ಟು 138 ಶಾಸಕರು (ಕಾಂಗ್ರೆಸ್‌ನ 135, ಸಹಸದಸ್ಯರಾಗಿರುವ ಇಬ್ಬರು ಪಕ್ಷೇತರರು ಮತ್ತು ಸರ್ವೋದಯ ಕರ್ನಾಟಕ ಪಕ್ಷದ ದರ್ಶನ್ ಪುಟ್ಟಣ್ಣಯ್ಯ) ಇದ್ದಾರೆ. ಕೆಆರ್‌ಆರ್‌ಪಿಯ ಜನಾರ್ದನ ರೆಡ್ಡಿ ಅವರ ಬಳಿಯೂ ಮತ ಹಾಕುವಂತೆ ಮನವಿ ಮಾಡುತ್ತೇನೆ. ನಮ್ಮ ಬಳಿ ಹೆಚ್ಚುವರಿ ಮತಗಳಿವೆ’ ಎಂದರು.

ಕೇಂದ್ರದ ವಿರುದ್ಧ ನಿರ್ಣಯ: ವಾಪಸ್‌ಗೆ ಪಟ್ಟು

ವಿಧಾನಸಭೆಯಲ್ಲಿ ಬಿಜೆಪಿ– ಜೆಡಿಎಸ್ ಸದಸ್ಯರ ಧರಣಿ: ಕಲಾಪ ಸೋಮವಾರಕ್ಕೆ ಮುದೂಡಿಕೆ

ಪ್ರಜಾವಾಣಿ ವಾರ್ತೆ

ಕೇಂದ್ರ ಸರ್ಕಾರದ ವಿರುದ್ಧ ಕೈಗೊಂಡ ನಿರ್ಣಯಗಳನ್ನು ವಾಪಸ್ ಪಡೆಯುವಂತೆ ಆಗ್ರಹಿಸಿ ವಿಧಾನಸಭೆಯಲ್ಲಿ ಶುಕ್ರವಾರ ಬಿಜೆಪಿ ಸದಸ್ಯರು ಸಭಾಧ್ಯಕ್ಷರ ಪೀಠದ ಎದುರು ಪ್ರತಿಭಟನೆ ನಡೆಸಿದರು

ಬೆಂಗಳೂರು: ಕೇಂದ್ರ ಸರ್ಕಾರದ ವಿರುದ್ಧ ವಿಧಾನಸಭೆಯಲ್ಲಿ ಗುರುವಾರ ಕೈಗೊಂಡಿರುವ ನಿರ್ಣಯವನ್ನು ವಾಪಸ್ ಪಡೆಯುವಂತೆ ಪಟ್ಟುಹಿಡಿದು ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಶುಕ್ರವಾರ ಧರಣಿ ನಡೆಸಿದ್ದರಿಂದ ಕಲಾಪ ಕೆಲ ಕಾಲವಷ್ಟೇ ನಡೆಯಿತು. ಗದ್ದಲ ಹೆಚ್ಚಾದ ಕಾರಣ ಕಲಾಪವನ್ನು ಸೋಮವಾರಕ್ಕೆ ಮುಂದೂಡಲಾಯಿತು.

ತೆರಿಗೆ ಪಾಲಿನ ಸಮಾನ ಹಂಚಿಕೆ ಮತ್ತು ರೈತರ ಎಲ್ಲ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ನೀಡುವಂತೆ ಆಗ್ರಹಿಸಿ ಗುರುವಾರ ನಿರ್ಣಯ ಅಂಗೀಕರಿಸಲಾಗಿತ್ತು. ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಆಗ ಆರಂಭಿಸಿದ್ದ ಧರಣಿಯನ್ನು, ಶುಕ್ರವಾರವೂ ಕಲಾಪ ಆರಂಭವಾಗುತ್ತಿದ್ದಂತೆ ಮುಂದುವರಿಸಿದರು.

‘ಕಲಾಪ ಸಲಹಾ ಸಮಿತಿಯಲ್ಲಿ ಮಾಹಿತಿಯನ್ನೇ ಕೊಡದೆ ಕದ್ದು ಮುಚ್ಚಿ ನಿರ್ಣಯ ಮಂಡಿಸುವ ಅಗತ್ಯವೇನಿತ್ತು? ಸರ್ಕಾರದ ನಡವಳಿಕೆಯಿಂದ ಸದನಕ್ಕೆ ಅಗೌರವವಾಗಿದೆ. ನಿರ್ಣಯಗಳನ್ನು ವಾಪಸ್ ಪಡೆಯಿರಿ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

‘ರಾಜ್ಯದ ಜನರ ಹಿತ ರಕ್ಷಣೆಗಾಗಿ ನಿರ್ಣಯ ಅಂಗೀಕರಿಸಿದ್ದೇವೆ. ಎಲ್ಲವೂ ಕಾನೂನು, ನಿಯಮಗಳ ಪ್ರಕಾರವೇ ನಡೆದಿದೆ. ನಿರ್ಣಯ ಅಂಗೀಕರಿಸಲು ನಿಮ್ಮ ಅಪ್ಪಣೆ ಬೇಕಿಲ್ಲ’ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ ತಿರುಗೇಟು ನೀಡಿದರು.

ಧರಣಿ ಕೈಬಿಟ್ಟು ಸ್ವಸ್ಥಾನಕ್ಕೆ ಮರಳುವಂತೆ ಸಭಾಧ್ಯಕ್ಷ ಯು.ಟಿ. ಖಾದರ್ ವಿರೋಧ ಪಕ್ಷಗಳ ಸದಸ್ಯರಲ್ಲಿ ಮನವಿ ಮಾಡಿದರು. ಆದರೆ, ಅವರು ಮನವೊಲಿಕೆಗೆ ಮಣಿಯಲಿಲ್ಲ. ಗದ್ದಲ ಹೆಚ್ಚಾಗುತ್ತಿದ್ದಂತೆಯೇ ಹತ್ತು ನಿಮಿಷಗಳ ಕಾಲ ಕಲಾಪ ಮುಂದೂಡಿದ ಸ್ಪೀಕರ್, ತಮ್ಮ ಕಚೇರಿಯಲ್ಲಿ ಆಡಳಿತ ಮತ್ತು ವಿರೋಧ ಪಕ್ಷಗಳ ಪ್ರಮುಖರ ಜತೆ ಸಂಧಾನ ಸಭೆ ನಡೆಸಿದರು. ಸಂಧಾನ ಸಭೆಯೂ ವಿಫಲವಾಯಿತು. ಪುನಃ ಕಲಾಪ ಆರಂಭವಾಗುತ್ತಿದ್ದಂತೆ ವಿರೋಧ ಪಕ್ಷಗಳ ಸದಸ್ಯರು ಧರಣಿ ಮುಂದುವರಿಸಿದರು.

‘ತೆರಿಗೆ ಪಾಲಿನ ಹಂಚಿಕೆ ವಿಚಾರದಲ್ಲಿ ರಾಜ್ಯಗಳು ಮತ್ತು ಕೇಂದ್ರ ಸರ್ಕಾರದ ಮಧ್ಯೆ ಸಂಘರ್ಷ ಹೊಸದಲ್ಲ. ಹಿಂದೆಯೂ ಇತ್ತು. 25 ವರ್ಷಗಳ ಕಾಲ ಶೇಕಡ 20ರಷ್ಟು ಪಾಲು ಮಾತ್ರ ರಾಜ್ಯಗಳಿಗೆ ಸಿಗುತ್ತಿತ್ತು. ಶೇ 30ರಿಂದ ಶೇ 40ಕ್ಕೆ ಹೆಚ್ಚಳ ಮಾಡುವ ಪ್ರಸ್ತಾವಕ್ಕೆ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಒಪ್ಪಿರಲಿಲ್ಲ. ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ರಚನೆಯಾದ ಕೆಲವೇ ತಿಂಗಳಲ್ಲಿ ಒಪ್ಪಿಗೆ ದೊರಕಿದೆ’ ಎಂದು ಬಿಜೆಪಿಯ ಬಸವರಾಜ ಬೊಮ್ಮಾಯಿ ಹೇಳಿದರು.

ಕೇಂದ್ರ ಸರ್ಕಾರವನ್ನು ಬೆಂಬಲಿಸಿ ನಿರ್ಣಯ ಮಂಡಿಸಲು ಅವಕಾಶ ನೀಡುವಂತೆ ಅಶೋಕ ಮನವಿ ಮಾಡಿದರು. ಸ್ಪೀಕರ್ ಒಪ್ಪಲಿಲ್ಲ. ಗದ್ದಲದ ಮಧ್ಯೆಯೇ ‘ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ’ ಮತ್ತು ‘ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆಗಳಿಗೆ ಅಂಗೀಕಾರ ನೀಡಲಾಯಿತು. ಎರಡು ವರದಿಗಳ ಮಂಡನೆಯೂ ಆಯಿತು.

ಕಾನೂನು ಸಚಿವರು ಅನರ್ಹತಾ ನಿವಾರಣಾ ಮಸೂದೆ ಕುರಿತು ವಿವರಿಸುತ್ತಿರುವಾಗಲೇ ಅಶೋಕ ಅವರು ಕೇಂದ್ರದ ಪರವಾಗಿ ತಾವು ಸಿದ್ಧಪಡಿಸಿಕೊಂಡು ಬಂದಿದ್ದ ನಿರ್ಣಯದ ಕರಡನ್ನು ಓದಿದರು. ಬೆಂಬಲಿಸಿ ಬಿಜೆಪಿ ಸದಸ್ಯರು ಘೋಷಣೆ ಕೂಗಿದರು. ಗದ್ದಲ ಜೋರಾಗುತ್ತಿದ್ದಂತೆಯೇ ಸಭಾಧ್ಯಕ್ಷರು ಕಲಾಪವನ್ನು ಸೋಮವಾರ ಬೆಳಿಗ್ಗೆ 9.30ಕ್ಕೆ ಮುಂದೂಡಿದರು.

ಅಧಿವೇಶನ ಒಂದು ದಿನ ವಿಸ್ತರಣೆ

ವಿಧಾನಸಭೆಯ ಅಧಿವೇಶನವನ್ನು ಒಂದು ದಿನ ವಿಸ್ತರಿಸಲಾಗಿದೆ. ಬಜೆಟ್ ಅಧಿವೇಶನ ಸೋಮವಾರ ಮುಕ್ತಾಯ ಆಗಲಿದೆ.

ಬಜೆಟ್ ಮೇಲಿನ ಚರ್ಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಉತ್ತರ ನೀಡಬೇಕಿತ್ತು. ಬಳಿಕ 2024–25ರ ಪೂರ್ಣ ಬಜೆಟ್ ಮತ್ತು 2023–24ರ ಕೊನೆಯ ಕಂತಿನ ಪೂರಕ ಅಂದಾಜುಗಳಿಗೆ ಸದನದ ಒಪ್ಪಿಗೆ ಪಡೆಯಬೇಕಿತ್ತು. ಎರಡೂ ಬಾಕಿ ಇವೆ.

ಸುದ್ದಿ 2 ನಿಮಿಷ

ರಾಹುಲ್ ಗಾಂಧಿ, ಸಿದ್ದರಾಮಯ್ಯ, ಡಿಕೆಶಿಗೆ ಕೋರ್ಟ್‌ನಿಂದ ಸಮನ್ಸ್

ಬೆಂಗಳೂರು: ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಿರುದ್ಧ ಮಾನನಷ್ಟ ಮೊಕದ್ದಮೆಯ ವಿಶೇಷ ಕ್ರಿಮಿನಲ್ ಪ್ರಕರಣ ದಾಖಲಿಸಿಕೊಳ್ಳಲು ಜನಪ್ರತಿನಿಧಿಗಳ ನ್ಯಾಯಾಲಯ ಆದೇಶಿಸಿದೆ.

ಈ ಕುರಿತಂತೆ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ’ದ 42ನೇ ಎಸಿಎಂಎಂ ಕೋರ್ಟ್ ನ್ಯಾಯಾಧೀಶೆ ಜೆ.ಪ್ರೀತ್ ವಿಚಾರಣೆ ನಡೆಸಿ ಈ ಕುರಿತಂತೆ ಶುಕ್ರವಾರ ಆದೇಶಿಸಿದ್ದಾರೆ.

‘ದೂರಿಗೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ಸಾಕಷ್ಟು ಆಧಾರಗಳಿದ್ದು, ಈ ದೂರಿನ ವಿಚಾರಣೆಯ ಅಗತ್ಯವಿದೆ’ ಎಂಬ ಅಭಿಪ್ರಾಯದೊಂದಿಗೆ ಮೂವರೂ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಲು ಆದೇಶಿಸಿದ್ದಾರೆ. ಫಿರ್ಯಾದುದಾರರ ಪರ ವಕೀಲ ಎಂ.ವಿನೋದ್ ಕುಮಾರ್ ವಕಾಲತ್ತು ವಹಿಸಿದ್ದಾರೆ.

ಪ್ರಕರಣವೇನು?: ‘2023ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40 ಕಮಿಷನ್ ಸರ್ಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ ₹ 1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ ಎಂದು ಆರೋಪಿಸಿದ್ದರು. ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ’ ಎಂದು ಈ ಖಾಸಗಿ ದೂರು ದಾಖಲಿಸಲಾಗಿದೆ.

ಬಗರ್ ಹುಕುಂ ಸಮಿತಿ ಅಧ್ಯಕ್ಷ: ಶಾಸಕರಲ್ಲದವರಿಗೂ ಅವಕಾಶ

ಬೆಂಗಳೂರು: ಶಾಸಕ ಸ್ಥಾನ ಖಾಲಿ ಇರುವುದು, ಸಮಯಾಭಾವ ಅಥವಾ ಇತರ ಕಾರಣಗಳಿಂದ ಶಾಸಕರು ನಿರಾಕರಿಸಿದಲ್ಲಿ ಬಗರ್ ಹುಕುಂ ಸಮಿತಿ ಅಧ್ಯಕ್ಷರನ್ನಾಗಿ ಬೇರೆ ವ್ಯಕ್ತಿಯನ್ನು ನೇಮಿಸಲು ಅವಕಾಶ ಕಲ್ಪಿಸುವ ‘ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ಮಸೂದೆ–2024’ಕ್ಕೆ ವಿಧಾನಸಭೆ ಶುಕ್ರವಾರ ಅಂಗೀಕಾರ ನೀಡಿತು.

‘ಯಾವುದೇ ವಿಧಾನಸಭಾ ಕ್ಷೇತ್ರದ ಸದಸ್ಯರು ಬಗರ್ ಹುಕುಂ ಸಮಿತಿಯಲ್ಲಿರಲು ನಿರಾಕರಿಸಿ ಲಿಖಿತ ರೂಪದಲ್ಲಿ ತಿಳಿಸಿದರೆ ಅಥವಾ ಶಾಸಕ ಸ್ಥಾನ ಖಾಲಿ ಇದ್ದರೆ ಆ ಕ್ಷೇತ್ರದ ಯಾವುದೇ ವ್ಯಕ್ತಿಯನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಲು ಈ ತಿದ್ದುಪಡಿಯು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಸದನಕ್ಕೆ ಮಾಹಿತಿ ನೀಡಿದರು.

ಯಾವುದೇ ವಿಧಾನಸಭಾ ಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಸಮಿತಿಗಳನ್ನು ನೇಮಿಸುವ ಅಧಿಕಾರವನ್ನು ಜಿಲ್ಲಾಧಿಕಾರಿಯಿಂದ ರಾಜ್ಯ ಸರ್ಕಾರಕ್ಕೆ ನೀಡುವ ತಿದ್ದುಪಡಿಯು ಮಸೂದೆಯಲ್ಲಿದೆ. ಒಂದಕ್ಕಿಂತ ಹೆಚ್ಚು ತಾಲ್ಲೂಕುಗಳಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಹೆಚ್ಚು ಜನಸಂಖ್ಯೆ ಇರುವ ತಾಲ್ಲೂಕುಗಳ ತಹಶೀಲ್ದಾರರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಬೇಕೆಂಬ ತಿದ್ದುಪಡಿಯೂ ಇದೆ.

ಕೇಂದ್ರ ಸರ್ಕಾರದ ವಿರುದ್ಧ ಕೈಗೊಂಡಿರುವ ನಿರ್ಣಯ ವಾಪಸ್ ಪಡೆಯಲು ಆಗ್ರಹಿಸಿ ಬಿಜೆಪಿ, ಜೆಡಿಎಸ್ ಧರಣಿ ನಡೆಸುತ್ತಿದ್ದ ಸಂದರ್ಭದಲ್ಲೇ ಭೂ ಕಂದಾಯ ತಿದ್ದುಪಡಿ ಮಸೂದೆಯನ್ನು ಮಂಡಿಸಲಾಯಿತು. ಗದ್ದಲದ ಮಧ್ಯದಲ್ಲೇ ಮಸೂದೆಗೆ ಅಂಗೀಕಾರ ನೀಡಲಾಯಿತು.

ಗ್ರಾ.ಪಂ.: ತೆರಿಗೆ ಸಂಗ್ರಹ ಹೆಚ್ಚಳಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಳೆಯ ಗ್ರಾಮ ಠಾಣಾ ಪ್ರದೇಶಗಳನ್ನು ಮೀರಿ ಅಭಿವೃದ್ಧಿ ಹೊಂದಿರುವ ಎಲ್ಲ ಆಸ್ತಿಗಳನ್ನು ತೆರಿಗೆ ಪಟ್ಟಿಗೆ ಸೇರಿಸುವ ಮೂಲಕ ಗ್ರಾಮ ಪಂಚಾಯಿತಿಗಳಲ್ಲಿ ಸ್ವಂತ ತೆರಿಗೆ ವರಮಾನವನ್ನು ಹೆಚ್ಚಿಸಬೇಕು ಎಂದು ಐದನೇ ರಾಜ್ಯ ಹಣಕಾಸು ಆಯೋಗ ಶಿಫಾರಸು ಮಾಡಿದೆ.

ಸಿ. ನಾರಾಯಣಸ್ವಾಮಿ ಅಧ್ಯಕ್ಷತೆಯ ರಾಜ್ಯ ಹಣಕಾಸು ಆಯೋಗ ಸಲ್ಲಿಸಿರುವ ವರದಿಯನ್ನು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಲಾಯಿತು.

‘ಗ್ರಾಮ ಠಾಣಾ ಪ್ರದೇಶಗಳನ್ನು ಮೀರಿ ಅಭಿವೃದ್ಧಿ ಹೊಂದಿರುವ ಪ್ರದೇಶಗಳಿಗೆ ನೀರು, ರಸ್ತೆ, ಬೀದಿ ದೀಪ ಸೇರಿದಂತೆ ಮೂಲಸೌಕರ್ಯ ಒದಗಿಸಲಾಗುತ್ತಿದೆ. ಆದರೆ, ಅಲ್ಲಿನ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದಿಲ್ಲ. ಅಂತಹ ಎಲ್ಲ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ತಂದು ಕ್ರಮಬದ್ಧಗೊಳಿಸಬೇಕು. ಆಗ ಪಂಚಾಯಿತಿಗಳಿಗೆ ಹೆಚ್ಚಿನ ಆದಾಯ ದೊರಕುತ್ತದೆ’ ಎಂದು ಆಯೋಗ ಹೇಳಿದೆ.

2016–17ರಲ್ಲಿ ಗ್ರಾಮ ಪಂಚಾಯಿತಿಗಳ ಸ್ವಂತ ತೆರಿಗೆ ವರಮಾನ ₹ 306 ಕೋಟಿಯಷ್ಟಿತ್ತು. 2022–23ರ ವೇಳೆಗೆ ಅದು ₹ 771 ಕೋಟಿಗೆ ಏರಿಕೆಯಾಗಿದೆ. ಹಿಂದಿನ ವರ್ಷಗಳ ತೆರಿಗೆ ಬಾಕಿ ₹ 1,696 ಕೋಟಿಯಷ್ಟಿದೆ. ಅದನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಶಿಫಾರಸು ಮಾಡಿದೆ.

ಗ್ರಾಮ ಪಂಚಾಯಿತಿಗಳು ರಾಜ್ಯದ ವಿವಿಧ ವಿದ್ಯುತ್ ಸರಬರಾಜು ಕಂಪನಿಗಳಿಗೆ ಬಾಕಿ ಇರಿಸಿಕೊಂಡಿರುವ ₹ 3,766.82 ಕೋಟಿ ವಿದ್ಯುತ್ ಶುಲ್ಕ ಪಾವತಿಯನ್ನು ಆದಷ್ಟು ಬೇಗ ಇತ್ಯರ್ಥಪಡಿಸಬೇಕು. ಗ್ರಾಮ ಪಂಚಾಯಿತಿಗಳ ಎಲ್ಲ ವಿದ್ಯುತ್ ಸಂಪರ್ಕಗಳಿಗೆ ಕಡ್ಡಾಯವಾಗಿ ಮೀಟರ್ ಅಳವಡಿಸಬೇಕು. ನಿಷ್ಕ್ರಿಯವಾಗಿರುವ ಕೊಳವೆ ಬಾವಿಗಳು ಸೇರಿದಂತೆ ಬಳಕೆಯಾಗದ ಎಲ್ಲ ವಿದ್ಯುತ್ ಸಂಪರ್ಕಗಳನ್ನು ಕಡಿತಗೊಳಿಸಬೇಕು ಎಂಬ ಶಿಫಾರಸುಗಳು ವರದಿಯಲ್ಲಿವೆ.

ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳ ಗ್ರಾಮೀಣ ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ಪ್ರತಿ ವರ್ಷ ಶೇಕಡ 1ರಷ್ಟು ಹೆಚ್ಚಿನ ಅನುದಾನ ಹಂಚಿಕೆ ಮಾಡಬೇಕು. ಪಂಚಾಯತ್ ರಾಜ್ ಸಂಸ್ಥೆಗಳಲ್ಲಿಖಾಲಿ ಇರುವ ಹುದ್ದೆಗಳನ್ನು ಶೀಘ್ರವಾಗಿ ಭರ್ತಿ ಮಾಡಬೇಕು ಎಂದು ಆಯೋಗ ಶಿಫಾರಸು ಮಾಡಿದೆ.

ಕೇಂದ್ರದ ವಿರುದ್ಧ ಅಸಮಾಧಾನ

ಕೇಂದ್ರ ಸರ್ಕಾರದ ತೆರಿಗೆಗಳು ಮತ್ತು ಸೆಸ್‌ಗಳ ಹಂಚಿಕೆಯಲ್ಲಿ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ ಎಂಬ ಅಸಮಾಧಾನ ರಾಜ್ಯ ಹಣಕಾಸು ಆಯೋಗದ ವರದಿಯಲ್ಲೂ ಇದೆ.

‘14ನೇ ಹಣಕಾಸು ಆಯೋಗದ ಅವಧಿಯಲ್ಲಿ ಕರ್ನಾಟಕಕ್ಕೆ ಶೇ 4.71ರಷ್ಟು ಪಾಲು ದೊರಕಿತ್ತು. 15ನೇ ಹಣಕಾಸು ಆಯೋಗವು ಶೇ 3.64ಕ್ಕೆ ಇಳಿಕೆ ಮಾಡಿದೆ. ಇದರಿಂದ ಮೂರು ವರ್ಷಗಳಲ್ಲಿ ₹ 25,435 ಕೋಟಿ ನಷ್ಟ ಅನುಭವಿಸಿದೆ. 2025–26ರವರೆಗೆ ಇನ್ನೂ ₹ 16,000 ಕೋಟಿ ನಷ್ಟವಾಗಲಿದೆ’ ಎಂದು ಆಯೋಗ ಹೇಳಿದೆ.

ಕೇಂದ್ರ ಹಣಕಾಸು ಆಯೋಗವು ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣಗಳ ಆಧಾರದಲ್ಲಿ ಅನುದಾನ ಹಂಚಿಕೆ ಮಾಡುತ್ತಿರುವುದರಿಂದ ಕರ್ನಾಟಕದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಪ್ರಮುಖ ಶಿಫಾರಸುಗಳು

- ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರ ಅವಧಿ ಮುಕ್ತಾಯವಾದ ಆರು ತಿಂಗಳೊಳಗೆ ಚುನಾವಣೆ ನಡೆಸಬೇಕು.
- ಬಿಬಿಎಂಪಿಯಲ್ಲಿ ಬಜೆಟ್ ಜತೆಗೆ ಮಧ್ಯಮಾವಧಿ ವಿತ್ತೀಯ ಯೋಜನೆಯನ್ನೂ ಸಿದ್ಧಪಡಿಸಬೇಕು.
- ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳಿಗೆ ಶೇ 51 ಮತ್ತು ಶೇ 49ರ ಅನುಪಾತದಲ್ಲಿ ಅನುದಾನ ಹಂಚಿಕೆಯಾಗಬೇಕು.
- ಸ್ಥಳೀಯ ಸಂಸ್ಥೆಗಳಿಗೆ ಹಂಚಿಕೆಯಾಗುವ ಅನುದಾನವನ್ನು ಶೇ 35ರಷ್ಟು ಪಂಚಾಯತ್ ರಾಜ್ ಸಂಸ್ಥೆಗಳಿಗೆ, ಶೇ 13ರಷ್ಟನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಮತ್ತು ಶೇ 1ರಷ್ಟನ್ನು ಬಿಬಿಎಂಪಿಗೆ ನೀಡಬೇಕು.

ಒಂದೇ ವರ್ಷದಲ್ಲಿ 906 ಬಾಲ್ಯವಿವಾಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಲ್ಯವಿವಾಹ ಹಾಗೂ ಬಾಲ ಗರ್ಭಿಣಿ ಹಾಗೂ ತಾಯಂದಿರ ಕುರಿತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ವಿಧಾನ ಪರಿಷತ್‌ನಲ್ಲಿ ನೀಡಿದ ಅಂಕಿ–ಅಂಶಗಳಿಗೆ ಬಿಜೆಪಿ ಹಾಗೂ ಕಾಂಗ್ರೆಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿಯ ಭಾರತಿ ಶೆಟ್ಟಿ, ಕಾಂಗ್ರೆಸ್‌ನ ಉಮಾಶ್ರೀ, ಜೆಡಿಎಸ್‌ನ ಟಿ.ಎ.ಶರವಣ, ಗೋವಿಂದರಾಜು ಅವರ ಪ್ರಶ್ನೆಗೆ ಉತ್ತರಿಸಿದ ಅವರು, ಒಂದೇ ವರ್ಷದಲ್ಲಿ 906 ಬಾಲ್ಯವಿವಾಹ ಪ್ರಕರಣಗಳು ಪತ್ತೆಯಾಗಿವೆ. ಮೂರು ವರ್ಷಗಳಲ್ಲಿ 986 ಬಾಲಕಿಯರು ಗರ್ಭಿಣಿ ಹಾಗೂ ತಾಯಂದಿರಾಗಿದ್ದಾರೆ ಎಂದು ಹೆಬ್ಬಾಳ್ಕರ್ ಹೇಳಿದರು.

ಈ ಅಂಕಿ–ಅಂಶಗಳ ಬಗ್ಗೆ ಆಕ್ಷೇಪ ಎತ್ತಿದ ಕಾಂಗ್ರೆಸ್‌ನ ಉಮಾಶ್ರೀ, ಬಿಜೆಪಿಯ ಭಾರತಿಶೆಟ್ಟಿ, ಆರೋಗ್ಯ ಇಲಾಖೆ ನೀಡಿದ ಸಂಖ್ಯೆಗೂ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನೀಡಿದ ಮಾಹಿತಿಗೂ ಅಜಗಜಾಂತರ ವ್ಯತ್ಯಾಸವಿದೆ. ಇದು ಸದನವನ್ನು ತಪ್ಪು ದಾರಿಗೆ ಎಳೆಯುವ ಯತ್ನ ಎಂದು ದೂರಿದರು.

‘ಮಕ್ಕಳ ಪ್ರೀತಿ ಪ್ರೇಮ, ಆಕರ್ಷಣೆಗೆ ಒಳಗಾಗುತ್ತಿರುವುದು, ಪೋಷಕರ ನಿರ್ಲಕ್ಷ್ಯತನದಿಂದ ಓಡಿ ಹೋಗಿ ಬಾಲ್ಯ ವಿವಾಹವಾಗುತ್ತಿದ್ದಾರೆ. ನೆರೆ ರಾಜ್ಯದ ವಧು–ವರರ ಮಧ್ಯದ ವಿವಾಹಗಳಿಂದಾಗಿ ಕೋಲಾರದಂತಹ ಜಿಲ್ಲೆಗಳಲ್ಲಿ ಪ್ರಕರಣಗಳು ಹೆಚ್ಚಾಗುತ್ತಿವೆ’ ಎಂಬ ಸಚಿವೆಯ ಮಾತಿಗೂ ಬಿಜೆಪಿ–ಜೆಡಿಎಸ್ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು.

ಯಾವುದೇ ಪೋಷಕರು ಮಕ್ಕಳ ವಿಚಾರದಲ್ಲಿ ನಿರ್ಲಕ್ಷ್ಯ ಮಾಡಲು ಸಾಧ್ಯವಿಲ್ಲ. ಇಂತಹ ಉತ್ತರ ನೀಡುವ ಮೊದಲು ಜವಾಬ್ದಾರಿ ಸ್ಥಾನದಲ್ಲಿ ಇರುವವರು ಆಲೋಚಿಸಬೇಕು. ಈ ರೀತಿಯ ಉತ್ತರ ಸಿದ್ಧಪಡಿಸಿಕೊಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಬಿಜೆಪಿಯ ಭಾರತಿ ಶೆಟ್ಟಿ, ಎನ್.ರವಿಕುಮಾರ್ ಮತ್ತಿತರರು ಆಗ್ರಹಿಸಿದರು.

ಸದಸ್ಯರ ಟೀಕೆ, ಆಕ್ಷೇಪಣೆಗಳಿಗೆ ವಿಚಲಿತರಾದ ಸಚಿವೆ, ‘ನಾನು ಹೊಸದಾಗಿ ಜವಾಬ್ದಾರಿ ವಹಿಸಿಕೊಂಡಿದ್ದೇನೆ. ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದೇನೆ. ಮುಂದೆ ಎಲ್ಲದಕ್ಕೂ ಸಮರ್ಪಕ ಉತ್ತರ ನೀಡುವೆ. ಬಾಲ್ಯವಿವಾಹ ತಿದ್ದುಪಡಿ ಕಾಯ್ದೆಗೆ ರಾಷ್ಟ್ರಪತಿ ಅಂಕಿತ ದೊರೆತಿದೆ. ಜನರಲ್ಲಿ ಜಾಗೃತಿ ಮೂಡಿಸಲು, ಪ್ರಕರಣಗಳನ್ನು ತಡೆಯಲು ವ್ಯಾಪಕ ಕ್ರಮಗಳನ್ನು ಕೈಗೊಳ್ಳಲಾಗುವುದು’ ಎಂದರು.

ಪರಿಷತ್ ಸದಸ್ಯರು ಹಾಗೂ ಅಧಿಕಾರಿಗಳನ್ನು ಒಳಗೊಂಡ ಪ್ರತ್ಯೇಕ ಸಭೆ ಕರೆದು ಇನ್ನಷ್ಟು ಚರ್ಚೆ ನಡೆಸುವಂತೆ ಸಲಹೆ ನೀಡಿದ ಸಭಾಪತಿ ಬಸವರಾಜ ಹೊರಟ್ಟಿ ಚರ್ಚೆಗೆ ತೆರೆಎಳೆದರು.

ಸರ್ಕಾರಕ್ಕೆ 2ನೇ ಬಾರಿ ಮುಖಭಂಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆಯಲ್ಲಿ ಅಂಗೀಕಾರ ಪಡೆದ ‘ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮದಾಯ ದತ್ತಿಗಳ (ತಿದ್ದುಪಡಿ) ಮಸೂದೆ’ಗೆ ವಿಧಾನ ಪರಿಷತ್‌ನಲ್ಲಿ ಸೋಲುಂಟಾಗಿದೆ. ಆ ಮೂಲಕ, ವಿಧಾನ ಮಂಡಲದ ಬಜೆಟ್ ಅಧಿವೇಶನದಲ್ಲಿ ಎರಡನೇ ಬಾರಿಗೆ ರಾಜ್ಯ ಸರ್ಕಾರಕ್ಕೆ ಮುಖಭಂಗ ಉಂಟಾಗಿದೆ.

‘ಕರ್ನಾಟಕ ಸೌಹಾರ್ದ ಸಹಕಾರಿ ತಿದ್ದುಪಡಿ ಮಸೂದೆ’ಗೆ ವಿಧಾನ ಪರಿಷತ್‌ನಲ್ಲಿ ಸೋಲುಂಟಾಗಿತ್ತು. ಈ ಮಸೂದೆಯನ್ನು ಪರಿಶೀಲನಾ ಸಮಿತಿಗೆ ಒಪ್ಪಿಸುವ ಸಂಬಂಧ ನಡೆದ ಮತದಾನದಲ್ಲಿ ವಿರೋಧ ಪಕ್ಷಗಳು ಮೇಲುಗೈ ಸಾಧಿಸಿದವು.

ಮುಜರಾಯಿ ಇಲಾಖೆಯ ವ್ಯಾಪ್ತಿಯಲ್ಲಿರುವ ₹ 1 ಕೋಟಿಗೂ ಹೆಚ್ಚು ವರಮಾನ ಹೊಂದಿರುವ ದೇವಸ್ಥಾನಗಳ ಹುಂಡಿಯಿಂದ ವರ್ಷಕ್ಕೆ ಶೇ 10ರಷ್ಟು ಮತ್ತು ₹ 10 ಲಕ್ಷದಿಂದ ₹ 1 ಕೋಟಿವರೆಗಿನ ವರಮಾನ ಹೊಂದಿರುವ ದೇವಸ್ಥಾನಗಳಿಂದ ಶೇ 5ರಷ್ಟನ್ನು ‘ಸಾಮಾನ್ಯ ಸಂಗ್ರಹಣಾ ನಿಧಿ’ಗೆ ಸಂದಾಯ ಮಾಡುವುದು. ಮತ್ತು ಹೀಗೆ ಸಂಗ್ರಹವಾಗುವ ನಿಧಿಯನ್ನು ‘ಸಿ’ ವರ್ಗದ ದೇವಸ್ಥಾನಗಳಿಗೆ ಬಳಸುವುದನ್ನು ಕಡ್ಡಾಯಗೊಳಿಸುವ ಪ್ರಸ್ತಾವ ಈ ಮಸೂದೆಯಲ್ಲಿದೆ.

ಈ ತಿದ್ದುಪಡಿಗೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು, ತಿದ್ದುಪಡಿಯನ್ನು ವಾಪಸ್ ಪಡೆಯುವಂತೆ ಪಟ್ಟು ಹಿಡಿದರು. ಮಸೂದೆ ಮಂಡಿಸಿದ ಮುಜರಾಯಿ ಸಚಿವ ರಾಮಲಿಂಗಾ ರೆಡ್ಡಿ, ‘ಸಾಮಾನ್ಯ ಸಂಗ್ರಹಣಾ ನಿಧಿ ಬಳಸಿಕೊಂಡು 34 ಸಾವಿರ ಮುಜರಾಯಿ ದೇವಸ್ಥಾನಗಳ ಅರ್ಚಕರಿಗೆ ವಿಮಾ ಸೌಲಭ್ಯ ಒದಗಿಸುವ ಪ್ರಸ್ತಾವ ಇಲಾಖೆಯ ಮುಂದಿದೆ’ ಎಂದು ಸಮರ್ಥನೆ ನೀಡಿದರು.

ಆದರೆ, ಬಿಜೆಪಿ, ಜೆಡಿಎಸ್ ಸದಸ್ಯರು ಮಣಿಯದೇ ಇದ್ದಾಗ, ಈ ತಿದ್ದುಪಡಿಯ ಕುರಿತಂತೆ ಮುಖ್ಯಮಂತ್ರಿ ಜೊತೆ ಚರ್ಚಿಸಿದ ಬಳಿಕ ಸೋಮವಾರ (ಫೆ.26) ಮತ್ತೆ ಮಂಡಿಸಲು ಅವಕಾಶ ನೀಡುವಂತೆ ರಾಮಲಿಂಗಾರೆಡ್ಡಿ ಕೋರಿದರು. ಆದರೆ, ಮಸೂದೆಯನ್ನು ಚರ್ಚೆಗೆ (ಪರ್ಯಾವಲೋಚನೆ) ತೆಗೆದುಕೊಂಡ ಬಳಿಕ ಮುಂದೂಡಲು ಅವಕಾಶ ಇಲ್ಲ ಎಂದು ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್ ಹೇಳಿದರು. ಈ ಬಗ್ಗೆ ಪರಸ್ಪರ ಚರ್ಚಿಸುವಂತೆ ಆಡಳಿತ ಮತ್ತು ವಿರೋಧ ಪಕ್ಷದ ಸದಸ್ಯರಿಗೆ ಸೂಚಿಸಿ ಸದನವನ್ನು 15 ನಿಮಿಷ ಮುಂದೂಡಿದರು.

ಮತ್ತೆ ಕಲಾಪ ಆರಂಭಗೊಂಡರೂ ಬಿಜೆಪಿ– ಜೆಡಿಎಸ್ ಸದಸ್ಯರು ಪಟ್ಟು ಸಡಿಲಿಸಲಿಲ್ಲ. ಒಮ್ಮತ ಮೂಡದ ಕಾರಣ ಉಪ ಸಭಾಪತಿ ಪ್ರಸ್ತಾವವನ್ನು ಧ್ವನಿಮತದ ವಿಭಜನೆಗೆ ಹಾಕಿದರು. ಮತ ವಿಭಜನೆಯಲ್ಲಿ ವಿರೋಧ ಪಕ್ಷಗಳು ಮೇಲುಗೈ ಸಾಧಿಸಿದವು. ಮಸೂದೆಯ ಪರವಾಗಿ ಏಳು, ವಿರುದ್ಧವಾಗಿ 18 ಮತಗಳ ಚಲಾವಣೆಗೊಂಡವು.

ಮಸೂದೆ ತಿರಸ್ಕೃತಗೊಳ್ಳುತ್ತಲೇ ಸಂಭ್ರಮಿಸಿದ ಬಿಜೆಪಿ, ಜೆಡಿಎಸ್ ಸದಸ್ಯರು ‘ಜೈ ಶ್ರೀರಾಮ್’ ಘೋಷಣೆ ಕೂಗಿದರು. ಪ್ರತಿಯಾಗಿ ಕಾಂಗ್ರೆಸ್ ಸದಸ್ಯರು ‘ಭಾರತ್ ಮಾತಾಕಿ ಜೈ’, ‘ಜೈ ಭೀಮ್’ ಎಂದು ಘೋಷಣೆ ಕೂಗಿದರು.

ಈ ಕುರಿತ ಚರ್ಚೆಯಲ್ಲಿ ವಿರೋಧ ಪಕ್ಷದ ನಾಯಕ ಕೋಟ ಶ್ರೀನಿವಾಸ್ ಪೂಜಾರಿ, ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಬಿಜೆಪಿಯ ತೇಜಸ್ವಿನಿಗೌಡ, ಭಾರತಿ ಶೆಟ್ಟಿ, ಪ್ರತಾಪ್ ಸಿಂಹ ನಾಯಕ್, ಜೆಡಿಎಸ್‌ನ ಟಿ.ಎ. ಶರವಣ ಅವರು ಪಾಲ್ಗೊಂಡರು.

> **ಹಿಂದಿನ ಸರ್ಕಾರಗಳು ‘ಸಿ’ ದರ್ಜೆ ದೇವಸ್ಥಾನಗಳ ಅಭಿವೃದ್ಧಿಗೆ ಅನುದಾನ ನೀಡಲಿರಲಿಲ್ಲ. ಬರುವ ಹಣ ಆಯಾ ದೇವಾಲಯಗಳ ಬ್ಯಾಂಕ್ ಖಾತೆಯಲ್ಲೇ ಉಳಿಯಲಿದೆ. ಅರ್ಚಕರಿಗೂ ವಿಮೆ ಸೌಲಭ್ಯ ಸಿಗಲಿದೆ**
> **ರಾಮಲಿಂಗಾರೆಡ್ಡಿ,** ಮುಜರಾಯಿ ಸಚಿವ

ಬಂಧನದ ಆದೇಶ ಹೊರಡಿಸುವ ಎಚ್ಚರಿಕೆ ನೀಡಿದ ನ್ಯಾಯಪೀಠ

ಶ್ರೀರಾಮುಲು ವಿರುದ್ಧ ಕೋರ್ಟ್‌ ಕೆಂಡಾಮಂಡಲ

ಪ್ರಜಾವಾಣಿ ವಾರ್ತೆ

ಶ್ರೀರಾಮುಲು

ಬೆಂಗಳೂರು: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ದಾಖಲಾಗಿರುವ ಪ್ರಕರಣವೊಂದರಲ್ಲಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರಾಗುವುದನ್ನು ತಪ್ಪಿಸಿಕೊಳ್ಳುತ್ತಿರುವ ಮಾಜಿ ಸಚಿವ ಬಿ.ಶ್ರೀರಾಮುಲು ನಡೆಗೆ ಹೈಕೋರ್ಟ್ ಕೆಂಡಾಮಂಡಲವಾಗಿದೆ.

‘ಈ ಕೂಡಲೇ ಮುಂದಿನ ಮುದ್ದತಿನ ದಿನಾಂಕ ಯಾವತ್ತಿದೆ ಎಂಬುದನ್ನು ಅರ್ಜಿದಾರರಿಗೆ ತಿಳಿಸಿ' ಎಂದು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್-2 ಬಿ.ಎನ್. ಜಗದೀಶ್ ಅವರಿಗೆ ಸೂಚಿಸಿದ ನ್ಯಾಯ ಪೀಠ, 'ಮ್ಯಾಜಿಸ್ಟ್ರೇಟ್ ಮುಂದೆ ಹೋಗಿ ನಿಂತುಕೊಳ್ಳದಿದ್ದರೆ ಬಂಧನದ ಆದೇಶ ಹೊರಡಿಸಲಾಗುವುದು’ ಎಂದು ಶ್ರೀರಾಮುಲು ಅವರಿಗೆ ಕಠಿಣ ಎಚ್ಚರಿಕೆ ನೀಡಿದೆ.

‘ನನ್ನ ವಿರುದ್ಧ ದಾಖಲಾಗಿರುವ ಎಫ್‌ಐಆರ್ ಮತ್ತು ಜನಪ್ರತಿನಿಧಿಗಳ ವಿಚಾರಣಾ ನ್ಯಾಯಾಲಯದಲ್ಲಿನ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಬೇಕು’ ಎಂದು ಕೋರಿ ಶ್ರೀರಾಮುಲು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು; ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರ ಶ್ರೀರಾಮುಲು ಪರ ವಕೀಲರಾದ ಗೌತಮ ನೆಟ್ಟಾರು ಮತ್ತು ಕೆ.ಗಂಗಾಧರ ಅವರು ಪ್ರಕರಣವನ್ನು ನ್ಯಾಯಪೀಠಕ್ಕೆ ವಿವರಿಸಲು ಮುಂದಾದರು. ಆಗ ನ್ಯಾಯಪೀಠ, ‘ಈ ಪ್ರಕರಣ ಯಾವಾಗ ದಾಖಲಾಯಿತು ಮತ್ತು ನಿಮ್ಮ ಅರ್ಜಿದಾರರು ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಹಾಜರಾಗಿದ್ದಾರೆಯೇ‘ ಎಂದು ಪ್ರಶ್ನಿಸಿತು.

ಇದಕ್ಕೆ ಗೌತಮ್ ಅವರು, ‘2023ರ ಏಪ್ರಿಲ್ 29ರಂದು ಖಾಸಗಿ ದೂರು ದಾಖಲಾಗಿದೆ ಮತ್ತು ಈತನಕ ಹಾಜರಾಗಿಲ್ಲ’ ಎಂದು ಉತ್ತರಿಸಿದರು. ‘ಹಾಗಾದರೆ ವಿಚಾರಣಾ ನ್ಯಾಯಾಲಯ ನೋಟಿಸ್ ಅಥವಾ ಸಮನ್ಸ್ ಜಾರಿಗೊಳಿಸಲು ಆದೇಶಿಸಿಲ್ಲವೇ’ ಎಂದು ನ್ಯಾಯಪೀಠ ಮರು ಪ್ರಶ್ನಿಸಿತು. ‘ಹೌದು ಸ್ವಾಮಿ, ಜಾರಿಗೊಳಿಸಿದೆ. ಆದರೆ, ನಮಗೆ ಸಮನ್ಸ್ ಸರ್ವ್ ಆಗಿಲ್ಲ’ ಎಂದು ಗೌತಮ್ ಅರುಹಿದರು.

‘ಎಷ್ಟು ಬಾರಿ ಸಮನ್ಸ್ ಹೊರಡಿಸಲಾಗಿದೆ’ ಎಂದು ನ್ಯಾಯಪೀಠ ಬಿ.ಎನ್.ಜಗದೀಶ್ ಅವರನ್ನು ಪ್ರಶ್ನಿಸಿತು. ಇದಕ್ಕೆ ಜಗದೀಶ್, ದಾಖಲೆಗಳನ್ನು ತಿರುವಿಹಾಕಿ ‘4 ಬಾರಿ’ ಎಂದರು.

ಈ ಮಾತಿಗೆ ಕ್ರುದ್ಧಗೊಂಡ ನ್ಯಾಯಪೀಠ ಅರ್ಜಿದಾರ ಶ್ರೀರಾಮುಲು ಪರವಕೀಲರಿಗೆ, ‘ಮ್ಯಾಜಿಸ್ಟ್ರೇಟ್‌ಕೋರ್ಟ್‌ಗಳು ಎಂದರೆ ನಿಮಗೆ ಅಷ್ಟೊಂದು ಸದರವೆ? ಅಲ್ಲಿ ಹೋಗಿ ಮ್ಯಾಜಿಸ್ಟ್ರೇಟ್ ಮುಂದೆ ನಿಂತುಕೊಳ್ಳಲು ನಿಮ್ಮ ಅರ್ಜಿದಾರರಿಗೆ ಯಾವ ಅಂತಸ್ತು ಅಡ್ಡಿಯಾಗಿದೆ? ಮ್ಯಾಜಿಸ್ಟ್ರೇಟ್ ಕೋರ್ಟ್‌ಗಳು ಎಂದರೆ ಏನೆಂದುಕೊಂಡಿದ್ದೀರಿ? ವಿಚಾರಣಾ ಕೋರ್ಟ್ ನಾಲ್ಕು ಬಾರಿ ಸಮನ್ಸ್ ಹೊರಡಿಸಿದ್ದರೂ ಯಾಕೆ ಹಾಜರಾಗಿಲ್ಲ’ ಎಂದಿತು.

‘ಹುಷಾರಾಗಿರಿ. ಸಚಿವ, ಮಾಜಿ ಸಚಿವ ಅಥವಾ ಯಾರೇ ಜನಪ್ರತಿನಿಧಿ ಆಗಿರಲಿ, ಇದು ಸುಪ್ರೀಂ ಕೋರ್ಟ್ ನಿರ್ದೇಶನದ ಮೇರೆಗೆ ರೂಪುಗೊಂಡಿರುವ, ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಪೀಠ ಎಂಬುದನ್ನು ಮರೆಯಬೇಡಿ. ನಿಮ್ಮಗಳ ವರ್ತನೆಗೆ ಈ ವಿಶೇಷ ನ್ಯಾಯಪೀಠ ಸೂಕ್ತ ಮತ್ತು ಕಠಿಣ ಕಾನೂನ ಕ್ರಮ ಕೈಗೊಳ್ಳಲು ಹಿಂದೆಮುಂದೆ ನೋಡುವುದಿಲ್ಲ’ ಎಂದು ಖಡಕ್ ಎಚ್ಚರಿಕೆ ನೀಡಿತು.

ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ಖುದ್ದು ಹಾಜರಾಗುವಂತೆ ಶ್ರೀರಾಮುಲು ಅವರಿಗೆ ಖಡಕ್ ನಿರ್ದೇಶನ ನೀಡಿದ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು.

ಎಪಿಪಿ ನೇಮಕಾತಿ ಅಕ್ರಮ: ವಿಚಾರಣೆಗೆ ಅನುವು

ಬೆಂಗಳೂರು: ರಾಜ್ಯದಲ್ಲಿ 2013-14ನೇ ಸಾಲಿನಲ್ಲಿ ನಡೆದಿದ್ದ ಸುಮಾರು 180 ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಹುದ್ದೆಗಳ ನೇಮಕಾತಿಯಲ್ಲಿ ಅಕ್ರಮ ಎಸಗಿದ ಆರೋಪಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ಹಾಗೂ ಅದಕ್ಕೆ ಸಂಬಂಧಿಸಿದ ಲೋಕಾಯುಕ್ತ ವಿಶೇಷ ನ್ಯಾಯಾಲಯದ ವಿಚಾರಣೆ ರದ್ದುಪಡಿಸುವಂತೆ ಕೋರಿದ್ದ 36 ಮಂದಿ ಪ್ರಾಸಿಕ್ಯೂಟರ್‌ಗಳ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿದೆ.

ಈ ಕುರಿತಂತೆ ಕಲಬುರಗಿಯ ಛಾಯಾದೇವಿ ಸೇರಿದಂತೆ ವಿವಿಧ ಜಿಲ್ಲೆಗಳ ಕೋರ್ಟ್‌ಗಳಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್‌ಗಳಾಗಿ ನೇಮಕಗೊಂಡು ಸದ್ಯ ಅಮಾನತ್ತಿನಲ್ಲಿರುವ 36 ಎಪಿಪಿಗಳು ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಪ್ರಕಟಿಸಿದೆ. ಇದರಿಂದಾಗಿ 36 ಆರೋಪಿಗಳ ವಿರುದ್ಧ ಲೋಕಾಯುಕ್ತ ವಿಶೇಷ ನ್ಯಾಯಾಲಯದಲ್ಲಿನ ವಿಚಾರಣೆಗೆ ಹಸಿರು ನಿಶಾನೆ ದೊರೆತಂತಾಗಿದೆ.

ಶನಿವಾರ, ಫೆಬ್ರುವರಿ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 55 | ಪುಟ 22
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಕರಿಮಣಿ ಕುರಿತು ಕಣ್ಮಣಿಯರು ಹೇಳಿದ್ದೇನು?

ಆಳ-ಅಗಲ
ನೀರಿಗೆ ಬರ: ಬದುಕು ದುಸ್ತರ
'ಮೋದಿ ಕುರಿತು ತಪ್ಪು ಮಾಹಿತಿ' 12
ಸ್ಪರ್ಧೆ ಖಚಿತ: ಸುಮಲತಾ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
73,142	22,212	₹63,980 (ಬೆಂಗಳೂರು)	₹71,700 (ಬೆಂಗಳೂರು)	82.91

ಬಿಜೆಪಿ 'ಸುಲಿಗೆ': 'ಕೈ' ಆರೋಪ

ತನಿಖಾ ಸಂಸ್ಥೆಗಳ ಬಳಸಿ ₹335 ಕೋಟಿ ದೇಣಿಗೆ ವಸೂಲಿ: 'ಸುಪ್ರೀಂ' ನಿಗಾದಲ್ಲಿ ತನಿಖೆಗೆ ಒತ್ತಾಯ

ನವದೆಹಲಿ (ಪಿಟಿಐ): ಖಾಸಗಿ ಕಂಪನಿಗಳಿಂದ ಭಾರಿ ಮೊತ್ತದ ದೇಣಿಗೆಗಳನ್ನು 'ಸುಲಿಗೆ' ಮಾಡುವುದಕ್ಕಾಗಿ ತನಿಖಾ ಸಂಸ್ಥೆಗಳನ್ನು ಬಿಜೆಪಿ ದುರ್ಬಳಕೆ ಮಾಡಿಕೊಂಡಿದೆ ಎಂದು ಕಾಂಗ್ರೆಸ್ ಪಕ್ಷವು ಗಂಭೀರವಾದ ಆರೋಪ ಮಾಡಿದೆ. ಇದು ಸರ್ಕಾರವೇ ನಡೆಸಿದ 'ಹಫ್ತಾ ವಸೂಲಿ' ಎಂದಿರುವ ಕಾಂಗ್ರೆಸ್, ಸುಪ್ರೀಂ ಕೋರ್ಟ್ ನಿಗಾದಲ್ಲಿ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದೆ.

ಕನಿಷ್ಠ 30 ಕಂಪನಿಗಳಿಂದ ಹೀಗೆ ಹಣ ವಸೂಲಿ ಮಾಡಲಾಗಿದೆ. ಈ ಎಲ್ಲ ಕಂಪನಿಗಳು ಕೇಂದ್ರದ ಸಂಸ್ಥೆಗಳಿಂದ ತನಿಖೆಗೆ ಒಳಗಾಗಿದ್ದವು. 2018–19 ಮತ್ತು 2022–23 ಆರ್ಥಿಕ ವರ್ಷಗಳಲ್ಲಿ ಹೀಗೆ ₹335 ಕೋಟಿ ಮೊತ್ತವನ್ನು ವಸೂಲಿ ಮಾಡಲಾಗಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಶುಕ್ರವಾರ ಹೇಳಿದ್ದಾರೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದ್ದಾರೆ. ಬಿಜೆಪಿ ಪಡೆದುಕೊಂಡ ದೇಣಿಗೆಯ ಕುರಿತು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ಏಕೆ ನಡೆಸಬಾರದು ಎಂದು ಈ ಪತ್ರದಲ್ಲಿ ಪ್ರಶ್ನಿಸಿದ್ದಾರೆ ಎಂದು ಜೈರಾಮ್ ಹೇಳಿದ್ದಾರೆ.

'ಬಿಜೆಪಿಯ ಹಣಕಾಸಿನ ಮೂಲಗಳ ಬಗ್ಗೆ ಅಷ್ಟೇ ಅಲ್ಲ, ಕಾರ್ಪೊರೇಟ್ ಸಂಸ್ಥೆಗಳ ವಿರುದ್ಧ ತನಿಖಾ ಸಂಸ್ಥೆಗಳನ್ನು ಬಳಸಿ ದೇಣಿಗೆಗಾಗಿ ಯಾವ ರೀತಿ ಒತ್ತಡ ಹೇರಲಾಯಿತು ಎಂಬುದರ ಬಗ್ಗೆಯೂ ಕೇಂದ್ರ ಸರ್ಕಾರ ಶ್ವೇತಪತ್ರ ಹೊರಡಿಸುತ್ತದೆಯೇ' ಎಂದು ಜೈರಾಮ್ ಪ್ರಶ್ನಿಸಿದರು.

ವಿವಿಧ ಸಂಸ್ಥೆಗಳಿಂದ ತನಿಖೆಗೆ ಒಳಗಾದ 30 ಕಂಪನಿಗಳಿಂದ ತನಿಖೆಯ ಸಂದರ್ಭದಲ್ಲಿ 'ವಸೂಲಿ ಏಜೆಂಟರು' ಬಿಜೆಪಿಗೆ ₹335 ಕೋಟಿ ವಸೂಲಿ ಮಾಡಿ ಕೊಟ್ಟಿದ್ದಾರೆ ಎಂದು ರಾಹುಲ್ ಗಾಂಧಿ ಕೂಡ ಹೇಳಿದ್ದಾರೆ.

ಕಾಂಗ್ರೆಸ್ ಹೇಳಿದ್ದೇನು?

- ಬಿಜೆಪಿ ಮತ್ತು ಆ ಪಕ್ಷಕ್ಕೆ ದೇಣಿಗೆ ನೀಡಿದ ಕಂಪನಿಗಳ ನಡುವಿನ ಕೊಡುಕೊಳ್ಳುವಿಕೆಯನ್ನು ಮಾಧ್ಯಮ ವರದಿಗಳು ಬಹಿರಂಗಪಡಿಸಿವೆ. ಕಾಕತಾಳೀಯವೆನ್ನುವಂತೆ, ಸಿಬಿಐ, ಜಾರಿ ನಿರ್ದೇಶನಾಲಯ (ಇ.ಡಿ), ಆದಾಯ ತೆರಿಗೆ ಇಲಾಖೆ (ಐ.ಟಿ) ದಾಳಿ ನಡೆಸಿದ ನಂತರ ಈ ಸಂಸ್ಥೆಗಳು ಬಿಜೆಪಿಗೆ ಅಪಾರ ದೇಣಿಗೆ ನೀಡಿವೆ
- ಐ.ಟಿ, ಇ.ಡಿ, ಸಿಬಿಐಯಂತಹ ಸಂಸ್ಥೆಗಳ ಸ್ವಾತಂತ್ರ್ಯ, ಸ್ವಾಯತ್ತೆ ಮತ್ತು ವೃತ್ತಿಪರತೆಯ ಕುರಿತು ಗಂಭೀರ ಪ್ರಶ್ನೆಗಳು ಮೂಡುವಂತಾಗಿದೆ
- 2018–19 ಮತ್ತು 2022–23ರಲ್ಲಿ 23 ಕಂಪನಿಗಳು ಬಿಜೆಪಿಗೆ ₹187.58 ಕೋಟಿ ದೇಣಿಗೆ ಕೊಟ್ಟಿವೆ. 2014ರಿಂದ ದಾಳಿ ನಡೆದ ವರ್ಷದವರೆಗೆ ಈ ಕಂಪನಿಗಳು ಬಿಜೆಪಿಗೆ ಎಂದೂ ದೇಣಿಗೆ ಕೊಟ್ಟಿರಲಿಲ್ಲ
- ನಾಲ್ಕು ಕಂಪನಿಗಳು ಕೇಂದ್ರೀಯ ತನಿಖಾ ಸಂಸ್ಥೆಗಳು ಶೋಧ ನಡೆಸಿದ ನಾಲ್ಕು ತಿಂಗಳೊಳಗೆ ಬಿಜೆಪಿಗೆ ₹9.05 ಕೋಟಿ ದೇಣಿಗೆ ಕೊಟ್ಟಿವೆ
- ಬಿಜೆಪಿಗೆ ಈ ಮೊದಲೂ ದೇಣಿಗೆ ಕೊಟ್ಟಿದ್ದ ಆರು ಕಂಪನಿಗಳು ಕೇಂದ್ರೀಯ ತನಿಖಾ ಸಂಸ್ಥೆಗಳ ಶೋಧದ ಬಳಿಕ ಇನ್ನೂ ಹೆಚ್ಚಿನ ಮೊತ್ತವನ್ನು ನೀಡಿವೆ
- ತನಿಖಾ ಸಂಸ್ಥೆಗಳ ಮೂಲಕ ಒತ್ತಡ ಹೇರಿಸಿ ಆಡಳಿತ ಪಕ್ಷವು ಸುಲಿಗೆ ಮಾಡಿದ ಸ್ಪಷ್ಟ ಪ್ರಕರಣಗಳು ಇವು

'ದೇಣಿಗೆ ನೀಡಿ ಜಾಮೀನು ಪಡೆಯಿರಿ'

ಕಾಂಗ್ರೆಸ್ ಸಂಸದ ರಾಹುಲ್ ಗಾಂಧಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿ, ಪ್ರಧಾನಿ ನರೇಂದ್ರ ಮೋದಿ ಅವರ 'ದೇಣಿಗೆ ಕೊಡಿ, ಜಾಮೀನು ಪಡೆದುಕೊಳ್ಳಿ ಮತ್ತು ವ್ಯಾಪಾರ ಮುಂದುವರಿಸಿ' ಎಂಬ ಯೋಜನೆ ಕುರಿತು ನಿಮಗೆ ಗೊತ್ತೇ? ದೇಶದಲ್ಲಿ ಪ್ರಧಾನಿಯವರು ಇ.ಡಿ, ಐ.ಟಿ ಮತ್ತು ಸಿಬಿಐಯಂತಹ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ವಸೂಲಿ ನಡೆಸುತ್ತಿದ್ದಾರೆ' ಎಂದು ಹೇಳಿದ್ದಾರೆ.

ತನಿಖಾ ಸಂಸ್ಥೆಗಳಿಂದ ಒತ್ತಡ ಹೇರಿ ಸುಲಿಗೆ ಮಾಡಿದ ಪ್ರಕರಣಗಳ ಸಂಖ್ಯೆಯು ಇಲ್ಲಿಗೇ ನಿಲ್ಲುವುದಿಲ್ಲ. ಇವು ಸದ್ಯಕ್ಕೆ ಕಾಣಿಸಿದ ಪ್ರಕರಣಗಳು ಮಾತ್ರ

ಕೆ.ಸಿ.ವೇಣುಗೋಪಾಲ್
ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ನಮ್ಮ ದೇಶವು ಪ್ರಜಾಪ್ರಭುತ್ವದ ತಾಯಿ ಎಂದು ಮೋದಿಯವರು ಹೇಳುತ್ತಿರುತ್ತಾರೆ. ಸ್ವಾಯತ್ತ ತನಿಖಾ ಸಂಸ್ಥೆಗಳನ್ನು ದುರ್ಬಲಗೊಳಿಸಿ, ಅವುಗಳ ಮೂಲಕ ಒತ್ತಡ ಹೇರಿ ಆಡಳಿತ ಪಕ್ಷಕ್ಕೆ ದೇಣಿಗೆ ವಸೂಲಿ ಮಾಡುವುದು ಪ್ರಜಾಪ್ರಭುತ್ವದ ತಾಯಿಯ ಭಾಗವೇ' ಎಂದು ವೇಣುಗೋಪಾಲ್ ನಿರ್ಮಲಾ ಅವರಿಗೆ ಬರೆದ ಪತ್ರದಲ್ಲಿ ಪ್ರಶ್ನಿಸಿದ್ದಾರೆ.

ಅಯೋಧ್ಯೆ ರೈಲಿನಲ್ಲಿ ನಿಂದನೆ: ದೂರು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಇಲ್ಲಿನ ರೈಲು ನಿಲ್ದಾಣದಲ್ಲಿ ಗುರುವಾರ ರಾತ್ರಿ ಮೈಸೂರಿಗೆ ತೆರಳುತ್ತಿದ್ದ ಅಯೋಧ್ಯಾಧಾಮ್ ವಿಶೇಷ ರೈಲನ್ನು ಏರಿದ್ದ ವ್ಯಕ್ತಿ ಪ್ರಚೋದನಕಾರಿಯಾಗಿ ಮಾತನಾಡಿದ ಎಂಬ ಆರೋಪದ ಮೇಲೆ ಬಳ್ಳಾರಿಯ ರೈಲ್ವೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ರಾಮಭಕ್ತರಿದ್ದ ರೈಲನ್ನು ಹತ್ತಿದ ವ್ಯಕ್ತಿ ರಾಮಭಕ್ತರ ಕುರಿತು ಅವಾಚ್ಯ ಪದಗಳಿಂದ ನಿಂದಿಸಿ, ರಾಮ ಭಜನೆ ಮತ್ತು ಜೈಶ್ರೀರಾಮ ಎಂದು ಕೂಗಿದರೆ ರೈಲಿಗೆ ಬೆಂಕಿ ಹಚ್ಚಿ ಸುಟ್ಟು ಹಾಕುವುದಾಗಿ ಬೆದರಿಕೆಯೊಡ್ಡಿದ. ಕೂಡಲೇ ಎಚ್ಚೆತ್ತ ಭಕ್ತರು ಆತನನ್ನು ಹಿಡಿಯಲು ಪ್ರಯತ್ನಿಸಿದರು. ಆತ ಪರಾರಿಯಾದ' ಎಂದು ಹೊಸಪೇಟೆಯ ಆನಂದ ಕೃಷ್ಣ ಎಂ. ಎಂಬವರು ನೀಡಿದ ದೂರಿನ ಅನ್ವಯ ಶುಕ್ರವಾರ ನಸುಕಿನ 2 ಗಂಟೆಗೆ ಎಫ್‌ಐಆರ್ ದಾಖಲಿಸಲಾಗಿದೆ. ಆದರೆ, ಆರೋಪಿಯನ್ನು ವಶಕ್ಕೆ ಪಡೆದಿರುವುದನ್ನು ಪೊಲೀಸರು ದೃಢಪಡಿಸಿಲ್ಲ.

13 ನೇ ಪುಟ ನೋಡಿ

ಒಳ ಪುಟ

ಗಾಜಾದ ಮೇಲೆ ಇಸ್ರೇಲ್ ದಾಳಿ: 71 ಸಾವು 12

ಚಿನಕುರಳಿ

ಪ್ರಕಾಶ್ ಶೆಟ್ಟಿ

ಪೊಲೀಸರ ಜೊತೆ ಘರ್ಷಣೆ: ಲಾಠಿ ಪ್ರಹಾರ

ರೈತರ ಮೇಲೆ ಅಶ್ರುವಾಯು

ಹಿಸಾರ್/ಚಂಡೀಗಢ (ಪಿಟಿಐ): ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹರಿಯಾಣದ ಹಿಸಾರ್ ಜಿಲ್ಲೆಯ ಖೇಡಿ ಚೋಪ್ಟಾ ಗ್ರಾಮದಿಂದ ಶುಕ್ರವಾರ ಪ್ರತಿಭಟನಾ ಮೆರವಣಿಗೆ ಕೈಗೊಂಡಿದ್ದ ರೈತರ ಮೇಲೆ ಪೊಲೀಸರು ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು.

'ದೆಹಲಿ ಚಲೋ' ಪ್ರತಿಭಟನಾ ಮೆರವಣಿಗೆ ಸಲುವಾಗಿ ಖನೌರಿ ಗಡಿಯಲ್ಲಿರುವ ರೈತರಿಗೆ ಬೆಂಬಲ ಸೂಚಿಸಿ, ಅಲ್ಲಿಗೆ ಹೊರಟಿದ್ದ ರೈತರನ್ನು ಪೊಲೀಸರು ತಡೆದರು. ಇದರಿಂದ ಆಕ್ರೋಶಗೊಂಡ ರೈತರು ಪೊಲೀಸರ ಮೇಲೆ ಕಲ್ಲುಗಳನ್ನು ಎಸೆದರು. ಆಗ ಪೊಲೀಸರು ಮತ್ತು ರೈತರ ನಡುವೆ ಘರ್ಷಣೆ ಸಂಭವಿಸಿತು. ಇದೇ ವೇಳೆ ಹರಿಯಾಣ ಪೊಲೀಸರು ಪ್ರತಿಭಟನೆನಿರತರ ವಿರುದ್ಧ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿ, ಲಾಠಿ ಪ್ರಹಾರ ನಡೆಸಿದರು. ಘರ್ಷಣೆಯಲ್ಲಿ ಕೆಲ ಪೊಲೀಸರು ಮತ್ತು ರೈತರು ಗಾಯಗೊಂಡರು.

ಪೊಲೀಸರ ಕ್ರಮವನ್ನು ಖಂಡಿಸಿದ ಭಾರತೀಯ ಕಿಸಾನ್ ಯೂನಿಯನ್‌ನ (ಬಿಕೆಯು) ಹಿಸಾರ್ ಘಟಕದ ಅಧ್ಯಕ್ಷ ಗೋಲು ದತ್ತಾ, 'ಪೊಲೀಸರು ನಮ್ಮ ವಿರುದ್ಧ ಅಶ್ರುವಾಯು ಶೆಲ್‌ಗಳನ್ನು ಸಿಡಿಸಿದರು, ಲಾಠಿ ಪ್ರಹಾರ ನಡೆಸಿದರು ಮತ್ತು ಜಲಫಿರಂಗಿಯನ್ನೂ ಬಳಸಿದರು' ಎಂದರು. ಇದನ್ನು ಖಂಡಿಸಿ ರೈತರು ಧರಣಿ ಕೈಗೊಂಡಿದ್ದಾರೆ ಎಂದೂ ಅವರು ತಿಳಿಸಿದರು. ಘರ್ಷಣೆಯ ಬೆನ್ನಲ್ಲೇ ಕಾನೂನು ಸುವ್ಯವಸ್ಥೆ ಕಾಯ್ದುಕೊಳ್ಳಲು ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದಾರೆ.

ಶಂಭು ಗಡಿಯಲ್ಲಿ ಕರಾಳ ದಿನ ಆಚರಿಸಿದ ಪ್ರತಿಭಟನೆನಿರತ ರೈತರು ಬಿಜೆಪಿ ನಾಯಕರ ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು —ಪಿಟಿಐ ಚಿತ್ರ

ಮೋದಿ, ಶಾ ಪ್ರತಿಕೃತಿ ದಹನ: ಪೊಲೀಸರ ಕ್ರಮ ಮತ್ತು ಸರ್ಕಾರದ ಧೋರಣೆಯನ್ನು ಖಂಡಿಸಿ ರೈತರು ಶಂಭು ಗಡಿಯಲ್ಲಿ ಕರಾಳ ದಿನ ಆಚರಿಸಿದರು.

10ನೇ ಪುಟ ನೋಡಿ

ಪರಿಶಿಷ್ಟರ ಏಳಿಗೆ ಸಹಿಸದ 'ಇಂಡಿಯಾ': ಮೋದಿ

ವಾರಾಣಸಿ (ಪಿಟಿಐ): ವಿರೋಧ ಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ದ ನಾಯಕರು ಜಾತಿಯ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವಾಗ್ದಾಳಿ ನಡೆಸಿದರು. 13

'ಇಂಡಿಯಾ' ಮೈತ್ರಿ ಮತ್ತೆ ಹಳಿಗೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಕಾಂಗ್ರೆಸ್ ನಡುವಿನ ಮೈತ್ರಿ ಮಾತುಕತೆ ಪುನರಾರಂಭಗೊಂಡಿದೆ. 10

ಟಿಎಂಸಿ ಮುಖಂಡರ ಸ್ವತ್ತಿಗೆ ಬೆಂಕಿ 10



ಶನಿವಾರದ ಉಷ್ಣಾಂಶ 32° ಗರಿಷ್ಠ 21° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಬೆಳಿಗ್ಗೆ ಚಳಿಯ ವಾತಾವರಣ ಇರಲಿದ್ದು, ಬಳಿಕ ಶುಭ್ರ ಆಗಸ ಇರಲಿದೆ

ಮುನ್ನೋಟ: ಭಾನುವಾರ 32° 20° | ಸೋಮವಾರ 32° 20° | ಮಂಗಳವಾರ 32° 20°

‘ಗ್ಯಾರಂಟಿ’ಗೆ ₹11 ಸಾವಿರ ಕೋಟಿ ಅನುದಾನ ವಾಪಸ್‌ಗೆ ಪಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ ಅಭಿವೃದ್ಧಿಗಾಗಿ ಇರುವ ವಿಶೇಷ ಘಟಕ ಯೋಜನೆ ಅನುದಾನದಲ್ಲಿ (ಎಸ್‌ಸಿಎಸ್‌ಪಿ-ಟಿಎಸ್‌ಪಿ) ₹11 ಸಾವಿರ ಕೋಟಿಯನ್ನು ಕಳೆದ ವರ್ಷ ಐದು ಗ್ಯಾರಂಟಿಗಳ ಜಾರಿಗೆ ಬಳಕೆ ಮಾಡಿಕೊಳ್ಳಲಾಗಿದ್ದು, ಆ ಅನುದಾನವನ್ನು ವಾಪಸ್ ನೀಡುವಂತೆ ದಲಿತ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಮಾದಿಗ ದಂಡೋರ ಸಮಿತಿ ರಾಜ್ಯ ಅಧ್ಯಕ್ಷ ಪಾವಗಡ ಶ್ರೀರಾಮ್ ಅಧ್ಯಕ್ಷತೆಯಲ್ಲಿ ಶುಕ್ರವಾರ ನಡೆದ ಒಕ್ಕೂಟದ ಸಭೆಯಲ್ಲಿ ರಾಜ್ಯದಲ್ಲಿ ನಿರಂತರ ಹೋರಾಟ, ಧರಣಿ ನಡೆಸುವ ನಿರ್ಣಯವನ್ನೂ ಅಂಗೀಕರಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ರಾಜ್ಯದ ವಿವಿಧ ಭಾಗಗಳ ಹೋರಾಟಗಾರರು, ‘ತಕ್ಷಣವೇ ಅನುದಾನ ವಾಪಸ್ ನೀಡದಿದ್ದರೆ, 1 ಲಕ್ಷ ಮಂದಿ ಸೇರಿಸಿ ಬೃಹತ್ ಪ್ರತಿಭಟನೆ ನಡೆಸಲಾಗುವುದು’ ಎಂದು ಎಚ್ಚರಿಸಿದರು.

ಸಭೆ ಉದ್ಘಾಟಿಸಿದ ಶ್ರೀರಾಮ್ ಮಾತನಾಡಿ, ‘2024–25ನೇ ಸಾಲಿನ ಬಜೆಟ್ ಮಂಡಿಸಲಾಗಿದ್ದು ಈ ಬಾರಿಯೂ ಎಸ್‌.ಸಿ/ಎಸ್‌.ಟಿ ಸಮುದಾಯದ ವಿಶೇಷ ಘಟಕ ಯೋಜನೆ ಅನುದಾನವನ್ನು ಗ್ಯಾರಂಟಿ ಯೋಜನೆಗಳಿಗೆ ಬಳಸಲು ಸಂಚು ನಡೆದಿದೆಯೇ ಎಂಬ ಆತಂಕ ಮೂಡಿಸಿದೆ’ ಎಂದು ಹೇಳಿದರು.

ಆರ್‌ಪಿಐ ರಾಜ್ಯ ಮುಖಂಡ ಜಿ.ಸಿ.ವೆಂಕಟರಮಣಪ್ಪ ಮಾತನಾಡಿ, ‘ದುಂಡು ಮೇಜಿನ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳು ವಿಧಾನಸೌಧಕ್ಕೆ ತಲುಪಬೇಕು. ಸರ್ಕಾರದ ಸೌಲಭ್ಯಗಳು ಕಟ್ಟಕಡೆಯ ವ್ಯಕ್ತಿಗೆ ತಲುಪಿದರೆ ಮಾತ್ರ ಸಮುದಾಯ ಅಭಿವೃದ್ಧಿಯಾಗಲು ಸಾಧ್ಯ’ ಎಂದು ಹೇಳಿದರು.

> ಮೀಸಲು ಕ್ಷೇತ್ರದಿಂದ ಗೆದ್ದ ಶಾಸಕರು ಸಮುದಾಯದ ಹಿತವನ್ನು ರಕ್ಷಿಸಲು ಮುಂದಾಗದಿದ್ದರೆ ಅವರ ವಿರುದ್ಧ ಹೋರಾಟ ನಡೆಸುತ್ತೇವೆ
> **ಪಾವಗಡ ಶ್ರೀರಾಮ್,** ರಾಜ್ಯ ಅಧ್ಯಕ್ಷ, ಮಾದಿಗ ದಂಡೋರ ಸಮಿತಿ

ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ‘ನೀಲಗಿರಿ’ ಕುರಿತ ಕಿರುಚಿತ್ರ ಪ್ರದರ್ಶನ

ಬೆಟ್ಟದ ನಿವಾಸಿಗಳ ಬದುಕು ಅನಾವರಣ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಂತರ ರಾಷ್ಟ್ರೀಯ ಕೇಂದ್ರವು (ಬಿಐಸಿ) ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ‘ನೀಲಗಿರಿ ನೀಲಿ ಬೆಟ್ಟಗಳು’ ಕುರಿತ ಕಾರ್ಯಕ್ರಮದಲ್ಲಿ ಬುಡಕಟ್ಟು ಜನರ ಬದುಕು, ಪ್ರಕೃತಿಯ ಆರಾಧನೆ, ಜೀವವೈವಿಧ್ಯ, ಜೇನು ಸಂಗ್ರಹ, ನೆಲಮೂಲದ ಸಂಸ್ಕೃತಿ ಅನಾವರಣಗೊಂಡಿತು. ನೀಲಗಿರಿಯ ಬಗ್ಗೆ ಇದ್ದ ಕುತೂಹಲವನ್ನು ಈ ಕಾರ್ಯಕ್ರಮವು ತಣಿಸಿತು.

ಪಶ್ಚಿಮಘಟ್ಟ ಶ್ರೇಣಿಯ ನೀಲಗಿರಿಯ ಮೂಲನಿವಾಸಿಗಳು ಬಿಐಸಿಗೆ ಶುಕ್ರವಾರ ಬಂದಿದ್ದರು. ತಮ್ಮ ಸಂಸ್ಕೃತಿಯ ವಿಚಾರ ವಿನಿಮಯದ ಜೊತೆಗೆ ಜೇನು, ಬುಡಕಟ್ಟು ಸಮುದಾಯದವರು ತಯಾರಿಸಿದ ಸೋಪು ಮಾರಾಟ ಸಹ ಇತ್ತು. ಅಲ್ಲಿ ಮೂಲನಿವಾಸಿಗಳದ್ದೇ ಮಾತು. ಊಟಿಗೆ ಭೇಟಿ ನೀಡಿ, ಅಲ್ಲಿನ ಮೂಲನಿವಾಸಿಗಳ ಕುರಿತು ಅಧ್ಯಯನ ನಡೆಸಿದ್ದವರೂ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಅವರು ತೋಡರು, ಶೋಲಾ ನಾಯಕರು, ಇರುಂಬರು, ಕುರುಬ ಸೇರಿದಂತೆ ಸ್ಥಳೀಯ ಮೂಲನಿವಾಸಿಗಳ ಕುರಿತು ಮಾಹಿತಿ ಹಂಚಿಕೊಂಡರು. ಬುಡಕಟ್ಟು ಸಮುದಾಯದವರೇ ತಮ್ಮ ವಿಶಿಷ್ಟ ಆಚಾರ-ವಿಚಾರಗಳನ್ನೂ ಪ್ರೇಕ್ಷಕರ ಮುಂದೆ ತೆರೆದಿಟ್ಟಿದ್ದು ವಿಶೇಷ.

ನಗರದ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ ಶುಕ್ರವಾರ ನಡೆದ ‘ನೀಲಗಿರಿ ನೀಲಿ ಬೆಟ್ಟಗಳ’ ಕುರಿತ ಸಂವಾದದಲ್ಲಿ (ಎಡದಿಂದ) ಸಂಶೋಧಕ ಫೈಸಲ್ ರೆಹಮಾನ್, ಕುರುಬ ಸಮುದಾಯದ ಪಿ.ಚಂದ್ರನ್, ಜಾನಕಿಯಮ್ಮ ಮತ್ತು ಸಂಶೋಧಕರಾದ ರಂಜನಿ ಪ್ರಸಾದ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಸಂವಾದದಲ್ಲಿ ಕುರುಬ ಸಮುದಾಯದ ನಾಯಕ, ಜೇನು ಸಂಗ್ರಹಕ ಪಿ.ಚಂದ್ರನ್ ಮಾತನಾಡಿ, ‘ನೀಲಗಿರಿ ಬೆಟ್ಟದ ತಪ್ಪಲಿನ 47 ಗ್ರಾಮಗಳಲ್ಲಿ ಕುರುಬ ಸಮುದಾಯದವರು ನೆಲೆಸಿದ್ದಾರೆ. ಕೃಷಿ, ಅರಣ್ಯ ಉತ್ಪನ್ನಗಳ ಸಂಗ್ರಹವೇ ಮುಖ್ಯ ಕಸುಬು. ಜೇನು ಸಂಗ್ರಹಿಸಲು ಒಂದು ತಂಡವಾಗಿ ತೆರಳುತ್ತೇವೆ. ಈಗ ಹವಾಮಾನ ವೈಪರೀತ್ಯದಿಂದ ಜೇನು ನಿರೀಕ್ಷೆಯಷ್ಟು ಲಭಿಸುತ್ತಿಲ್ಲ’ ಎಂದು ಪರಿಸ್ಥಿತಿ ಬಿಚ್ಚಿಟ್ಟರು.

ಕುರುಬ ಸಮುದಾಯದ ಜಾನಕಿಯಮ್ಮ ಮೂಲನಿವಾಸಿಗಳ ಸಂಪ್ರದಾಯದ ಬಗ್ಗೆ ವಿವರಿಸಿದರು. ಸಂಶೋಧಕರಾದ ರಂಜನಿ ಪ್ರಸಾದ್ ಸಂವಾದದಲ್ಲಿ ಪಾಲ್ಗೊಂಡಿದ್ದರು.

ಇದಕ್ಕೂ ಮೊದಲು ಪರಿಸರ ಕಾರ್ಯಕರ್ತ ತರುಣ್ ಛಾಬ್ರಾ ಮಾತನಾಡಿ, ‘ಈ ಗಿರಿಧಾಮದಲ್ಲಿ ತೋಡರು ನೆಲೆಸಿದ್ದು, ಇವರದ್ದು ವಿಶೇಷ ಆಚರಣೆ. ಆಹಾರ ಪದ್ಧತಿಯೂ ವಿಭಿನ್ನ. ಜೇನು ಸಂಗ್ರಹವೇ ಮುಖ್ಯ ಕಸುಬು. ಪರಿಸರಕ್ಕೆ ಹಾನಿಯಾಗದಂತೆ ತೋಡರು ಜೇನು ಸಂಗ್ರಹಿಸುತ್ತಾರೆ. ಜೇನು ಸಂಗ್ರಹದ ವೇಳೆ ಬೆಂಕಿ ಬಳಕೆ ಮಾಡುವುದಿಲ್ಲ’ ಎಂದು ವಿವರಿಸಿದರು.

‘ಜನ್ಮದಿನಾಚರಣೆ, ಮದುವೆಗಳು ವಿಶೇಷ ರೀತಿಯಲ್ಲಿ ನಡೆಯುತ್ತವೆ. ಅರಣ್ಯದಲ್ಲಿ ಲಭಿಸುವ ಉತ್ಪನ್ನಗಳನ್ನೇ ಬಳಸಿಕೊಂಡು ಕರಕುಶಲ ವಸ್ತುಗಳನ್ನೂ ತಯಾರಿಸಿ ಮಾರಾಟ ನಡೆಸುತ್ತಾರೆ’ ಎಂದು ಹೇಳಿದರು. ಇದೇ ವೇಳೆ ತೋಡರ ಜೀವನ ವಿಧಾನದ ಕುರಿತು ಕಿರುಚಿತ್ರ ಪ್ರದರ್ಶಿಸಲಾಯಿತು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್‌ನ ಪ್ರೊ.ಶಾರದಾ ಶ್ರೀನಿವಾಸನ್, ಸ್ಥಳೀಯ ಸಂಸ್ಕೃತಿ ಹಾಗೂ 12 ವರ್ಷಕ್ಕೆ ಒಮ್ಮೆ ಅರಳುವ ನೀಲಕುರಂಜಿ ಹೂವು, ಲೋಹದ ಪಾತ್ರೆಗಳ ಬಗ್ಗೆ ಛಾಯಾಚಿತ್ರ ಸಹಿತ ವಿವರಿಸಿದರು.

> ನೀಲಗಿರಿ ಮೂಲನಿವಾಸಿಗಳು ಅರಣ್ಯ ಸಂಪತ್ತು ಉಳಿಸುವ ನಿಟ್ಟಿನಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಅರಣ್ಯ ಹಕ್ಕು ಕಾಯ್ದೆ ಸೇರಿದಂತೆ ಹಲವು ಸೌಲಭ್ಯಗಳು ಅವರಿಗೆ ಇನ್ನೂ ಲಭಿಸಿಲ್ಲ
> **ಫೈಸಲ್ ರೆಹಮಾನ್,** ಸಂಶೋಧಕ

> ನೀಲಗಿರಿ ಶ್ರೇಣಿಯೇ ಅಪರೂಪದ ಜೀವವೈವಿಧ್ಯವುಳ್ಳ ಪ್ರದೇಶ. ಬೇಸಿಗೆ, ಚಳಿ ಹಾಗೂ ಮಳೆಗಾಲದಲ್ಲಿ ಹವಾಗುಣ ವಿಭಿನ್ನವಾಗಿರುತ್ತದೆ; ವಿಶೇಷ ಎನಿಸುತ್ತದೆ
> **ತರುಣ್ ಛಾಬ್ರಾ,** ಪರಿಸರ ಕಾರ್ಯಕರ್ತ

ಆಕರ್ಷಕ ಛಾಯಾಚಿತ್ರ ಪ್ರದರ್ಶನ

ನೀಲಗಿರಿ ಬೆಟ್ಟಗಳ ಕುರಿತು ಆಯೋಜಿಸಿರುವ ಛಾಯಾಚಿತ್ರ ಪ್ರದರ್ಶನ ಆಕರ್ಷಕವಾಗಿದೆ. ನೀಲಗಿರಿ ಬೆಟ್ಟಗಳ ಚರಿತ್ರೆ, ಸಸ್ಯಸಿರಿ ಹಾಗೂ ಅಲ್ಲಿನ ಪ್ರಾಕೃತಿಕ ಸೌಂದರ್ಯವನ್ನು ಕಟ್ಟಿಕೊಡುತ್ತಿದೆ. ಸ್ಥಳೀಯವಾಗಿ ನಿರ್ಮಾಣಗೊಂಡ ಚರ್ಚ್‌ಗಳು, ಇಂಗ್ಲಿಷ್ ಮಿಷನರಿಗಳ ಕೊಡುಗೆಯನ್ನು ಈ ಪ್ರದರ್ಶನದಲ್ಲಿ ನೋಡಬಹುದಾಗಿದೆ. ಇದೇ 26ರ ತನಕ ಛಾಯಾಚಿತ್ರ ಪ್ರದರ್ಶನ ಇರಲಿದೆ.

Venues in Bangalore:
Malleswaram: The Canara Union, No.42, 8th Main, Canara Union Road - 03
Vijay Nagar: Five O Gallery, 17th Cross, M.C. Road, Near Vijay Nagar Bus Stop - 40
Infantry Road: Safina Plaza, No.84/85 - 01

25ನೇ ಸಪ್ತಸ್ವರ ಸಂಗೀತ ಸಂಜೆಯಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಭರವಸೆ

‘ನಾಗೇಂದ್ರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲು ನೆರವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಂಗೀತ ಕ್ಷೇತ್ರದ ದಿಗ್ಗಜರಾದ ನಾಗೇಂದ್ರ ಅವರ ಹೆಸರನ್ನು ಚಿರಸ್ಥಾಯಿ ಮಾಡಬೇಕು. ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪಿಸಲು ನೆರವು ನೀಡಲಾಗುವುದು’ ಎಂದು ಸಂಗೀತ ನಿರ್ದೇಶಕ ಹಂಸಲೇಖ ತಿಳಿಸಿದರು.

ವಿಜಯ ಮ್ಯೂಸಿಕ್ ಸ್ಕೂಲ್, ನಗರದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 25ನೇ ವರ್ಷದ ಸಪ್ತಸ್ವರ ಸಂಗೀತ ಸಂಜೆ ಕಾರ್ಯಕ್ರಮ ಉದ್ಘಾಟಿಸಿದ ಅವರು ಮಾತನಾಡಿದರು.

‘ಚಿತ್ರರಂಗದಲ್ಲಿ 45 ವರ್ಷಗಳ ಕಾಲ ಎಂದೆಂದೂ ಕುಗ್ಗದೆ, ಯಾರಿಗೂ ಅಪಚಾರ ಮಾಡದೆ ಬದುಕಿದವರು ರಾಜನ್–ನಾಗೇಂದ್ರ. ಇಷ್ಟು ವರ್ಷಗಳ ಕಾಲ ಚಿತ್ರೋದ್ಯಮದಲ್ಲಿ ಇರುವುದು ತಮಾಷೆಯ ವಿಷಯವಲ್ಲ. ಸುಶ್ರಾವ್ಯ ಗೀತೆಗಳು ಅಂದಾಕ್ಷಣ ರಾಜನ್–ನಾಗೇಂದ್ರ ಅವರ ಗೀತೆಗಳೇ ನಮ್ಮ ಕಣ್ಣ ಮುಂದೆ ಬರುತ್ತವೆ. ಭಾರತದ ಸಂಗೀತ ಕ್ಷೇತ್ರದಲ್ಲಿ ಲಕ್ಷ್ಮೀಕಾಂತ್-ಪ್ಯಾರೇಲಾಲ್ ಜೋಡಿ ಬಿಟ್ಟರೆ ಈ ಜೋಡಿ ಮಾತ್ರ ಸುದೀರ್ಘ ಕಾಲ ಕೊಡುಗೆ ನೀಡಿತು. ನಾಗೇಂದ್ರ ಅವರನ್ನು ಗೌರವಿಸಿದರೆ ಇಡೀ ಚಿತ್ರರಂಗವನ್ನು ಗೌರವಿಸಿದಂತೆ’ ಎಂದು ಹೇಳಿದರು.

‘ನಾಗೇಂದ್ರ ಅವರ ಹಾಡುಗಳು ಎಲ್ಲರ ಮನೆ, ಮನಸ್ಸಿನಲ್ಲಿವೆ. ನಾಗೇಂದ್ರ ಅವರ ಸೃಜನಶೀಲ ಕ್ರಿಯೆಗಳಿಂದ ಬಂದಂತಹ ಹಕ್ಕಿನ ಹಣವನ್ನು ಅವರ ಪತ್ನಿ ಜಯಲಕ್ಷ್ಮಿ ನಾಗೇಂದ್ರ ಅವರಿಗೂ ಇಂಡಿಯನ್ ಪರ್ಫಾರ್ಮಿಂಗ್ ರೈಟ್ಸ್ ಸೊಸೈಟಿ ಹಂಚಬೇಕು. ನಾಗೇಂದ್ರ ಅವರ ಹೆಸರಿನಲ್ಲಿ ಪ್ರಶಸ್ತಿ ಸ್ಥಾಪನೆಗೆ ವಿಜಯ ಮ್ಯೂಸಿಕ್ ಸ್ಕೂಲ್ ಕ್ರಮವಹಿಸಿದರೆ ಪ್ರಶಸ್ತಿಗೆ ಅಗತ್ಯ ಹಣವನ್ನು ನೀಡುತ್ತೇವೆ’ ಎಂದು ತಿಳಿಸಿದರು.

ಚಲನಚಿತ್ರ ನಟ ಶಶಿಕುಮಾರ್, ‘ಮಾನಸಿಕ ಒತ್ತಡ ನಿವಾರಣೆಗೆ ಸಂಗೀತ ಸಹಕಾರಿ. ರಾಜಕೀಯ, ಉದ್ಯಮ, ಕ್ರೀಡೆ ಸೇರಿ ಎಲ್ಲ ಕ್ಷೇತ್ರದವರೂ ಒತ್ತಡದಿಂದ ಹೊರ ಬರಲು ಸಂಗೀತದ ಮೊರೆ ಹೋಗುತ್ತಾರೆ. ರಾಜನ್–ನಾಗೇಂದ್ರ ಅವರ ಗೀತೆಗಳು ಇಂದಿಗೂ ಸೂಪರ್ ಹಿಟ್’ ಎಂದರು.

ಸಂಗೀತ ನಿರ್ದೇಶಕ ಅರ್ಜುನ್ ಜನ್ಯ, ಚಲನಚಿತ್ರ ನಟಿ ಭವ್ಯ ಅವರು ಸಂಗೀತ ಕ್ಷೇತ್ರಕ್ಕೆ ರಾಜನ್–ನಾಗೇಂದ್ರ ಅವರ ಕೊಡುಗೆ ಸ್ಮರಿಸಿದರು.

ರಾಜನ್–ನಾಗೇಂದ್ರ ಅವರ ಗೀತೆಗಳನ್ನು ವಿವಿಧ ಗಾಯಕರು ಹಾಡಿ, ರಂಜಿಸಿದರು.

ಕಾರ್ಯಕ್ರಮದಲ್ಲಿ ಅರ್ಜುನ್ ಜನ್ಯ, ಹಂಸಲೇಖ ಮತ್ತು ಶಶಿಕುಮಾರ್ ಅವರು ‘ಕವಿಗಳ ಸಿರಿಗಳ ಕನ್ನಡ ನಾಡು’ ಧ್ವನಿ ಸುರುಳಿ ಬಿಡುಗಡೆಗೊಳಿಸಿದರು. (ಎಡದಿಂದ) ಬಲಿಜ ಸಂಘದ ರಾಜ್ಯಾಧ್ಯಕ್ಷ ಮುನಿಕೃಷ್ಣಪ್ಪ ಎನ್‌.ಪಿ., ಸಮಗ್ರ ಶಿಕ್ಷಣ ಕರ್ನಾಟಕದ ರಾಜ್ಯ ಯೋಜನಾ ನಿರ್ದೇಶಕ ಕೆ.ಎನ್‌. ರಮೇಶ್, ಭವ್ಯ, ವಿಜಯ ಮ್ಯೂಸಿಕ್ ಸ್ಕೂಲ್ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ ಮತ್ತು ಎಡಿಜಿಪಿ ಅರುಣ್ ಚಕ್ರವರ್ತಿ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಅಶೋಕ ವಿರುದ್ಧ ಕ್ರಮಕ್ಕೆ ವಿಹಿಂಪ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಜರಂಗದಳ ಕಾರ್ಯಕರ್ತರ ವಿರುದ್ಧ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿದ್ದೆ’ ಎಂದು ವಿಧಾನಸಭೆಯಲ್ಲಿ ಹೇಳಿರುವ ಆರ್. ಅಶೋಕ ಅವರನ್ನು ವಿರೋಧ ಪಕ್ಷದ ನಾಯಕನ ಸ್ಥಾನದಿಂದ ಕಿತ್ತು ಹಾಕುವಂತೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರನ್ನು ವಿಶ್ವ ಹಿಂದೂ ಪರಿಷತ್ ಆಗ್ರಹಿಸಿದೆ.

ವಿಶ್ವ ಹಿಂದೂ ಪರಿಷತ್‌ನ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ನೇತೃತ್ವದ ನಿಯೋಗವು ವಿಜಯೇಂದ್ರ ಅವರನ್ನು ಗುರುವಾರ ಭೇಟಿ ಮಾಡಿ, ಮನವಿ ಸಲ್ಲಿಸಿದೆ. ಬಜರಂಗದಳದ ಪ್ರಾಂತ ಸಂಯೋಜಕ ಕೆ.ಆರ್. ಸುನಿಲ್, ವಿಭಾಗ ಸಂಯೋಜಕರಾದ ಗೋವರ್ಧನ್ ಸಿಂಗ್, ಶಿವಕುಮಾರ್ ನಿಯೋಗದಲ್ಲಿದ್ದರು.

ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರ
7ನೇ–8ನೇ ಮಹಡಿ, ಹಿಂದುಸ್ತಾನ್ ಟೈಮ್ಸ್ ಹೌಸ್, 18–20 ಕೆ.ಜಿ.ಮಾರ್ಗ, ನವದೆಹಲಿ–110001

ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರದ ದಿನಾಂಕ 22.01.2024ರ ಖಾಲಿಹುದ್ದೆಗಳ ಸುತ್ತೋಲೆಯ ನಿಬಂಧನೆಗಳ ಮೇರೆಗೆ ಅಖಿಲ ಭಾರತ ಅಥವಾ ಕೇಂದ್ರ ನಾಗರಿಕ ಸೇವೆಗಳ ಅಧಿಕಾರಿಗಳಿಂದ/ ರಾಜ್ಯ ಸರ್ಕಾರಿ ಮತ್ತು ಕೇಂದ್ರಾಡಳಿತ ಸರ್ಕಾರಗಳ ಅಧಿಕಾರಿಗಳಿಂದ/ ಆರ್‌ಬಿಐ/ ಸಾರ್ವಜನಿಕ ಕ್ಷೇತ್ರ ಬ್ಯಾಂಕ್‌ಗಳ/ಸರ್ಕಾರಿ ಹಣಕಾಸು ಸಂಸ್ಥೆಗಳ/ ನಿಯಂತ್ರಣಾ ಅಂಗಗಳ/ ಸಾರ್ವಜನಿಕ ಕ್ಷೇತ್ರ ಅಧೀನಗಳ/ ಸ್ವಾಯುತ್ತ ಮತ್ತು ಶಾಸನಬದ್ಧ ಅಂಗಗಳ/ ಇತರೆ ಸರ್ಕಾರಿ ಸಂಸ್ಥೆಗಳ/ ಸಶಸ್ತ್ರ ಪಡೆಗಳ ಅಧಿಕಾರಿಗಳಿಂದ, ರಾಷ್ಟ್ರೀಯ ಹಣಕಾಸು ವರದಿ ಪ್ರಾಧಿಕಾರದಲ್ಲಿನ ಕೆಳಕಂಡ ಹುದ್ದೆಗಳ ನೇಮಕಾತಿಗಾಗಿ ಎನ್‌ಎಫ್‌ಆರ್‌ಎ ರವರು ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

i	ಎಕ್ಸಿಕ್ಯೂಟಿವ್ ಡೈರೆಕ್ಟರ್	01 ಹುದ್ದೆ
ii	ಪರ್ಸನಲ್/ಜನರಲ್ ಅಸಿಸ್ಟಂಟ್ (ಗ್ರೇಡ್ 1)	03 ಹುದ್ದೆ
iii	ಪರ್ಸನಲ್/ಜನರಲ್ ಅಸಿಸ್ಟಂಟ್ (ಗ್ರೇಡ್ 2)	03 ಹುದ್ದೆ
iv	ಪರ್ಸನಲ್/ಜನರಲ್ ಅಸಿಸ್ಟಂಟ್ (ಗ್ರೇಡ್ 3)	04 ಹುದ್ದೆ
v	ಸೀನಿಯರ್ ಪ್ರೈವೇಟ್ ಸೆಕ್ರೆಟರಿ	02 ಹುದ್ದೆ
vi	ಪ್ರೈವೇಟ್ ಸೆಕ್ರೆಟರಿ	01 ಹುದ್ದೆ
vii	ಡ್ರೈವರ್	02 ಹುದ್ದೆ

ಈ ಹುದ್ದೆಗಳಿಗೆ ಡೆಪ್ಯುಟೇಶನ್ ಅಥವಾ ಅಲ್ಪಾವಧಿ ಗುತ್ತಿಗೆ ಆಧಾರದಲ್ಲಿ ಅಥವಾ ಡೆಪ್ಯುಟೇಶನ್/ಮರು ಉದ್ಯೋಗ ಆಧಾರದಲ್ಲಿ, ಅನ್ವಯವಾಗುವ ರೀತಿಯಲ್ಲಿ, https://nfra.gov.in ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ವಿವರಗಳ ಪ್ರಕಾರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತಿಯುಳ್ಳ ಮತ್ತು ಅರ್ಹ ಅಧಿಕಾರಿಗಳು, ಈ ಜಾಹೀರಾತು ಎಂಪ್ಲಾಯ್‌ಮೆಂಟ್ ನ್ಯೂಸ್ ದಿನಪತ್ರಿಕೆಯಲ್ಲಿ ಪ್ರಕಟಗೊಂಡ ದಿನಾಂಕದಿಂದ ಎರಡು ತಿಂಗಳೊಳಗೆ, ನಿರ್ದಿಷ್ಟ ನಮೂನೆಯಲ್ಲಿ ಸೂಕ್ತ ವಿಧಾನದ ಮೂಲಕ ಅರ್ಜಿ ಸಲ್ಲಿಸಬಹುದು.

CBC 07122/12/0003/2324

ಮದ್ಯದ ಪಾರ್ಟಿ: ಹೋಟೆಲ್ ಕೆಲಸಗಾರನ ಕೊಲೆ

ಬೆಂಗಳೂರು: ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಆನಂದ್(30) ಎಂಬುವವರನ್ನು ದೊಣ್ಣೆಯಿಂದ ಹೊಡೆದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿದ್ದ ಇಬ್ಬರು ಆರೋಪಿಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಮಂಡ್ಯದ ಆನಂದ್, ನಗರದ ಹೋಟೆಲ್‌ವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಬುಧವಾರ ರಾತ್ರಿ ಅವರ ಕೊಲೆ ನಡೆದಿದ್ದು, ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನು ವಶಕ್ಕೆ ಪಡೆದು, ವಿಚಾರಣೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಸಲಹೆಗಾರರು ಅನರ್ಹತೆಯಿಂದ ಪಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಅಥವಾ ವಿಧಾನ ಪರಿಷತ್‌ನ ಸದಸ್ಯರು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಸಲಹೆಗಾರರು, ಯಾವುದೇ ಆಯೋಗದ ಅಧ್ಯಕ್ಷರು ಹಾಗೂ ರಾಜ್ಯ ಪರಿವರ್ತನಾ ಸಂಸ್ಥೆಯ ಉಪಾಧ್ಯಕ್ಷರಾಗಿ ನೇಮಕಗೊಂಡರೆ ಲಾಭದಾಯಕ ಹುದ್ದೆ ಹೊಂದಿದ ಕಾರಣದಿಂದ ಅವರು ಅನರ್ಹರಾಗದಂತೆ ತಡೆಯುವ ‘ಕರ್ನಾಟಕ ವಿಧಾನಮಂಡಲ (ಅನರ್ಹತಾ ನಿವಾರಣಾ) (ತಿದ್ದುಪಡಿ) ಮಸೂದೆ–2024’ ಅನ್ನು ವಿಧಾನಸಭೆ ಶುಕ್ರವಾರ ಅಂಗೀಕರಿಸಿತು.

ವಿಧಾನಸಭಾ ಸದಸ್ಯರಾಗಿರುವ ಬಸವರಾಜ ರಾಯರಡ್ಡಿ ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರಾಗಿ, ಬಿ.ಆರ್. ಪಾಟೀಲ ಮುಖ್ಯಮಂತ್ರಿಯವರ ಸಲಹೆಗಾರರಾಗಿ ಮತ್ತು ಆರ್.ವಿ. ದೇಶಪಾಂಡೆ ಅವರು ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಈ ಮೂವರನ್ನೂ ಲಾಭದಾಯಕ ಹುದ್ದೆ ವ್ಯಾಪ್ತಿಯಿಂದ ಹೊರಗಿಟ್ಟು, ರಕ್ಷಿಸುವುದಕ್ಕೆ ತಿದ್ದುಪಡಿ ಮಸೂದೆ ರೂಪಿಸಲಾಗಿದೆ.

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ ಮಸೂದೆ ಮಂಡಿಸಿದರು. ಈ ಮಸೂದೆಗೂ ಗದ್ದಲದ ಮಧ್ಯದಲ್ಲೇ ಅಂಗೀಕಾರ ನೀಡಲಾಯಿತು.

ಚಿನ್ನ, ಬೆಳ್ಳಿ ವರ್ತಕರಿಗೆ ಕಿರುಕುಳ: ತಡೆಗೆ ಆಗ್ರಹ

ಬೆಂಗಳೂರು: ಚಿನ್ನ, ಬೆಳ್ಳಿ ವರ್ತಕರು ಹಾಗೂ ಗಿರವಿ ಅಂಗಡಿಗಳ ಮಾಲೀಕರಿಗೆ ಪೊಲೀಸರು ನೀಡುತ್ತಿರುವ ಕಿರುಕುಳ ತಡೆಯಬೇಕು ಎಂದು ಜೆಡಿಎಸ್‌ನ ಟಿ.ಎ. ಶರವಣ ಒತ್ತಾಯಿಸಿದರು.

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಮಾತನಾಡಿ, ಪೊಲೀಸ್ ಅಧಿಕಾರಿಗಳು ಸೂಕ್ತ ತನಿಖೆ ಮಾಡುವ ಮೊದಲೇ, ಅಂಗಡಿ ಮಾಲೀಕರನ್ನು ಅಮಾನವೀಯವಾಗಿ ನಡೆಸಿಕೊಳ್ಳುತ್ತಿದ್ದಾರೆ. ಅವರಿಗೂ ಬದುಕುವ ಹಕ್ಕಿದೆ. ಅದಕ್ಕೆ ಭಂಗ ಮಾಡಬಾರದು. ಕಿರುಕುಳ ನೀಡುತ್ತಿರುವ ಪೊಲೀಸ್ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳಬೇಕು. ನೆಮ್ಮದಿಯಾಗಿ ಕೆಲಸ ಮಾಡಲು ಅವರಿಗೆ ಅವಕಾಶ ಮಾಡಿಕೊಡಬೇಕು ಎಂದು ಕೋರಿದರು.

ಚಿನ್ನ, ಬೆಳ್ಳಿ ಆಭರಣ ಹಾಗೂ ಗಿರವಿ ಅಂಗಡಿಗಳ ಮಾಲೀಕರ ಸಂಘಟನೆಗಳು ಹಾಗೂ ಪೊಲೀಸ್ ಅಧಿಕಾರಿಗಳ ಪ್ರತ್ಯೇಕ ಸಭೆ ಕರೆದು ಸಮಸ್ಯೆಗಳ ಕುರಿತು ಚರ್ಚೆ ನಡೆಸುವುದಾಗಿ ಗೃಹ ಸಚಿವ ಜಿ.ಪರಮೇಶ್ವರ ಭರವಸೆ ನೀಡಿದರು.

‘ಗ್ಯಾರಂಟಿಗೆ ಪರಿಶಿಷ್ಟರ ಹಣ ಮತ್ತೆ ಬಳಕೆ’

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಸರ್ಕಾರ ಮತ್ತೆ ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನ ಬಳಕೆ ಮಾಡಿಕೊಳ್ಳುತ್ತಿದೆ. ಹಿಂದೆ ₹11,144 ಕೋಟಿ ಬಳಸಲಾಗಿತ್ತು. ಈಗ ಮತ್ತೆ ₹14,282 ಕೋಟಿ ಬಳಸುತ್ತಿದೆ. ಇದು ಪರಿಶಿಷ್ಟರಿಗೆ ಸರ್ಕಾರ ಮಾಡುತ್ತಿರುವ ದ್ರೋಹ ಎಂದು ಬಿಜೆಪಿಯ ಛಲವಾದಿ ನಾರಾಯಣಸ್ವಾಮಿ ವಿಧಾನ ಪರಿಷತ್‌ನಲ್ಲಿ ಆಕ್ರೋಶ ವ್ಯಕ್ತಪಡಿಸಿದರು.

ಸರ್ಕಾರದ ತೆವಲಿಗೆ ಮಾಡಿಕೊಂಡ ‘ಗ್ಯಾರಂಟಿ’ಗಳಿಗೆ ಪರಿಶಿಷ್ಟರ ಹಣ ದುರ್ಬಳಕೆ ಸಲ್ಲದು. ಸಮಾಜ ಕಲ್ಯಾಣ ಸಚಿವರು ಒಳ್ಳೆಯವರಿದ್ದಾರೆ. ಆದರೆ, ಪರಮಾತ್ಮ ಅವರನ್ನು ಆಡಿಸುತ್ತಿದ್ದಾರೆ ಎಂದರು.

‘ಯಾವ ಪರಮಾತ್ಮನೂ ಇಲ್ಲ. ಬೇಕಾದರೆ ನಾನೇ ಪರಮಾತ್ಮನನ್ನು ಆಡಿಸುವೆ. ಸರ್ಕಾರ ಹಣ ದುರ್ಬಳಕೆ ಮಾಡಿಲ್ಲ. ಪದೇಪದೆ ಬಿಜೆಪಿ ಅದೇ ವಿಚಾರ ಪ್ರಸ್ತಾಪಿಸುವ ಮೂಲಕ ಸಮಯ ವ್ಯರ್ಥ ಮಾಡುತ್ತಿದೆ’ ಎಂದು ಸಚಿವ ಮಹದೇವಪ್ಪ ಅಸಮಾಧಾನ ವ್ಯಕ್ತಪಡಿಸಿದರು.

ಸರ್ಕಾರಕ್ಕೆ ಧಿಕ್ಕಾರ ಕೂಗಿ ಸಭಾತ್ಯಾಗ

ಬೆಂಗಳೂರು: ಎಸ್ಸೆಸ್ಸೆಲ್ಸಿ ಪರೀಕ್ಷಾ ಕಾರ್ಯದಿಂದ ಪ್ರೌಢಶಾಲಾ ಸಹ ಶಿಕ್ಷಕರನ್ನು ಹೊರಗಿಟ್ಟಿರುವ ಶಿಕ್ಷಣ ಇಲಾಖೆಯ ಕ್ರಮಕ್ಕೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಮತ್ತು ಜೆಡಿಎಸ್‌ನ ಮರಿತಿಬ್ಬೇಗೌಡ, ಸರ್ಕಾರಕ್ಕೆ ಧಿಕ್ಕಾರ ಕೂಗಿ ಸಭಾತ್ಯಾಗ ಮಾಡಿದ ಪ್ರಸಂಗ ವಿಧಾನ ಪರಿಷತ್‌ನಲ್ಲಿ ಶುಕ್ರವಾರ ನಡೆಯಿತು.

ಶೂನ್ಯವೇಳೆಯಲ್ಲಿ ಈ ವಿಷಯ ಪ್ರಸ್ತಾಪಿಸಿದ ಈ ಇಬ್ಬರು ಮತ್ತು ಬಿಜೆಪಿಯ ಅ. ದೇವೇಗೌಡ, ಎಂ. ಚಿದಾನಂದ ಗೌಡ, ‘ಇಲಾಖೆಯ ಈ ನಡೆಯಿಂದ ಪ್ರೌಢಶಾಲಾ ಶಿಕ್ಷಕರಿಗೆ ಅವಮಾನ ಆಗಿದೆ. ಅವರ ಮೇಲೆ ಅನುಮಾನ ಪಡುವಂತಾಗಿದೆ. ಪಾಠ ಮಾಡಲು ಮತ್ತು ಮೌಲ್ಯಮಾಪನಕ್ಕೆ ಪ್ರೌಢಶಾಲಾ ಸಹ ಶಿಕ್ಷಕರನ್ನು ಬಳಸಿಕೊಂಡು, ಪರೀಕ್ಷಾ ಕಾರ್ಯದಿಂದ ಹೊರಗಿಡುವುದು ಎಷ್ಟು ಸರಿ. ಅವರು ಏನು ತಪ್ಪು ಮಾಡಿದ್ದಾರೆ? ಹೊರಗಿಡಲು ಕಾರಣವೇನು’ ಎಂದು ಪ್ರಶ್ನಿಸಿದರು. ಬಿಜೆಪಿ ಎಸ್.ವಿ. ಸಂಕನೂರು ಮತ್ತು ಕಾಂಗ್ರೆಸ್‌ನ ಪುಟ್ಟಣ್ಣ ಕೂಡಾ ದನಿಗೂಡಿಸಿದರು.

ಉತ್ತರ ನೀಡಿದ ಸಚಿವ ಮಧು ಬಂಗಾರಪ್ಪ, ‘ಒತ್ತಡ ರಹಿತ, ಫಲಿತಾಂಶ ಉನ್ನತೀಕರಿಸಲು ಇಲಾಖೆಯ ಅಧಿಕಾರಿಗಳ ಜೊತೆ ಚರ್ಚಿಸಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಶಿಕ್ಷಕರನ್ನು ಅವಮಾನಿಸುವ ಉದ್ದೇಶ ನಮಗಿಲ್ಲ’ ಎಂದರು.

ಸಚಿವರ ಉತ್ತರಕ್ಕೆ ಕೆರಳಿದ ವೈ.ಎ. ನಾರಾಯಣಸ್ವಾಮಿ, ಮರಿತಿಬ್ಬೇಗೌಡ ಆಕ್ರೋಶ ವ್ಯಕ್ತಪಡಿಸುತ್ತಲೇ ಸಭಾಪತಿ ಪೀಠದ ಎದುರು ಪ್ರತಿಭಟನೆ ನಡೆಸಿದರು. ಸಭಾಪತಿ ಪೀಠದಲ್ಲಿದ್ದ ಉಪ ಸಭಾಪತಿ ಎಂ.ಕೆ. ಪ್ರಾಣೇಶ್, ‘ಶೂನ್ಯ ವೇಳೆಯಲ್ಲಿನ ಪ್ರಸ್ತಾವದಲ್ಲಿ ಚರ್ಚೆಗೆ ಅವಕಾಶ ಇಲ್ಲ’ ಎಂದರು.

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
ನಂ. 1, 1ನೇ ಮುಖ್ಯ ರಸ್ತೆ, 1ನೇ ಬ್ಲಾಕ್ ಕೋರಮಂಗಲ, ಬೆಂಗಳೂರು - 560 034
ಫೋನ್ : 080-25526266 / 25526288 / 25526299

ಸ್ವಾಧೀನ ಪ್ರಕಟಣೆ (ಸ್ಥಿರ ಆಸ್ತಿಗಳಿಗೆ)

ಹಣಕಾಸು ಸ್ವತ್ತುಗಳ ಪ್ರಭೂತೀಕರಣ ಮತ್ತು ಸ್ವಾಧೀನಕರಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ 2002 (Securitisation Act 2002)ರ ಅಡಿಯಲ್ಲಿ ಪ್ರಕರಣ 13 (2) ರ ನಿಯಮದಲ್ಲಿನ ಭದ್ರತಾ ಹಿತಾಸಕ್ತಿ ಜಾರಿ ಕಾಯಿದೆ 2002 ರ ಅನುಸಾರ ನೀಡಲಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ಸಹಿ ಮಾಡಿರುವ ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ, ನಂ. 1, 1ನೇ ಮೈನ್, 1ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 34, ಇದರ ಅಧಿಕೃತ ಅಧಿಕಾರಿಯಾದ ನಾನು ದಿನಾಂಕ: 15.12.2023 ರಂದು ತಗಾದೆ ನೋಟೀಸನ್ನು **ಸಾಲಗಾರರಾದ: ಶ್ರೀ ಪ್ರಭು ಜಿ** ಬಿನ್ ಗಂಗಾರಾಂ ಸಿಂಗ್ ಮತ್ತು **ಶ್ರೀಮತಿ ಲತಾ ಬಾಯಿ** ಕೋಂ ಪ್ರಭು ಜಿ, ವಿಳಾಸ : ನಂ. 518, 7ನೇ ಬ್ಲಾಕ್, ಜೆ.ಪಿ. ನಗರ 9ನೇ ಹಂತ, ಬೆಂಗಳೂರು–560078 ಮತ್ತು **ಜಾಮೀನುದಾರರಾದ: ಶ್ರೀ ಹಿತೇಶ್ ಸಿಂಗ್ ಪಿ** ಬಿನ್ ಪ್ರಭು ಜಿ, ವಿಳಾಸ : ನಂ. 518, 7ನೇ ಬ್ಲಾಕ್, ಜೆ.ಪಿ. ನಗರ 9ನೇ ಹಂತ, –560078 ಇವರಿಗೆ ನೀಡಿ, ಅದರಲ್ಲಿ ತಿಳಿಸಲಾದ ಮೊತ್ತ ರೂ. 26,63,241/–ಗಳನ್ನು (ರೂಪಾಯಿಗಳು ಇಪ್ಪತ್ತಾರು ಲಕ್ಷದ ಅರವತ್ತಾ ಮೂರು ಸಾವಿರ ಇನ್ನೂರು ನಲವತ್ತೊಂದು ಮಾತ್ರ) ನೋಟೀಸು ತಲುಪಿದ 60 ದಿನಗಳ ಒಳಗೆ ಮರುಪಾವತಿ ಮಾಡುವಂತೆ ಹೇಳಿರುತ್ತೇವೆ.

ಸದರಿ ಪೂರ್ತಿ ಮೊಬಲಗನ್ನು ಮರು ಪಾವತಿ ಮಾಡಲು ಸಾಲಗಾರರು ವಿಫಲರಾಗಿರುವುದರಿಂದ ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ತಿಳಿಸುವುದೇನೆಂದರೆ, ಮೇಲ್ಕಂಡ ಅಧಿನಿಯಮ ಪ್ರಕರಣ 13(4) ನಿಯಮ 9ರ ಅನುಸಾರ ನೀಡಲಾಗಿರುವ ಅಧಿಕಾರವನ್ನು ಚಲಾಯಿಸಿ, ಈ ಕೆಳಗೆ ವಿವರಿಸಲಾಗಿರುವ ಸಾಲಕ್ಕೆ ಅಡಮಾನ ಮಾಡಿರುವ **ಶ್ರೀ ಪ್ರಭು. ಜಿ** ರವರ ಹೆಸರಿನಲ್ಲಿರುವ ಆಸ್ತಿಯನ್ನು ದಿನಾಂಕ: 22.02.2024 ರಂದು ಸ್ವಾಧೀನಪಡಿಸಿಕೊಂಡಿರುತ್ತೇವೆ.

ಈ ಮೂಲಕ ಸಾರ್ವಜನಿಕರಿಗೆ ಮತ್ತು ಮುಖ್ಯವಾಗಿ ಸಾಲಗಾರರಿಗೆ ಎಚ್ಚರಿಕೆ ನೀಡಿ ತಿಳಿಸುವುದೇನೆಂದರೆ ಈ ಸ್ವತ್ತಿನ ಮೇಲೆ ಯಾವುದೇ ವ್ಯವಹಾರಗಳನ್ನು ಮಾಡುವಂತಿಲ್ಲ ಮತ್ತು ಯಾವುದೇ ವ್ಯವಹಾರಗಳು ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ ಇವರಿಗೆ ದಿನಾಂಕ 22.02.2024 ರಂದು ಕೊಡಬೇಕಾದ ಮೊತ್ತ **ರೂ. 26,67,153+** ನಂತರದ ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಚುಕ್ತಾ ಮಾಡುವುದಕ್ಕೆ ಒಳಪಟ್ಟಿರುತ್ತದೆ.

ಸ್ಥಿರಾಸ್ತಿಯ ಸ್ವತ್ತಿನ ವಿವರ :
ಬೆಂಗಳೂರು ನಗರ, ಜೆ.ಪಿ.ನಗರ 9ನೇ ಫೇಸ್, 7ನೇ ಬ್ಲಾಕ್‌ರಲ್ಲಿರುವ ನಿವೇಶನ ಸಂಖ್ಯೆ 518 ಆಗಿದ್ದು ಈ ಸ್ವತ್ತಿನ ಅಳತೆ ಪೂರ್ವದಿಂದ ಪಶ್ಚಿಮಕ್ಕೆ 9.14 ಮೀಟರುಗಳು ಮತ್ತು ಉತ್ತರದಿಂದ ದಕ್ಷಿಣಕ್ಕೆ 12.20 ಮೀಟರುಗಳಾಗಿದ್ದು ಒಟ್ಟಾರೆ ಅಳತೆ 111.50 ಚದರ ಮೀಟರುಗಳು ಮತ್ತು ಈ ಸ್ವತ್ತಿನ ಮೇಲೆ ಕಟ್ಟಿರುವ ಕಟ್ಟಡವನ್ನೊಳಗೊಂಡಿರುತ್ತದೆ. ಈ ಸ್ವತ್ತಿನ ಚಕ್ಕುಬಂದಿ : ಪೂರ್ವಕ್ಕೆ : ನಿವೇಶನ ಸಂಖ್ಯೆ 517, ಪಶ್ಚಿಮಕ್ಕೆ: ನಿವೇಶನ ಸಂಖ್ಯೆ 519, ಉತ್ತರಕ್ಕೆ : ರಸ್ತೆ, ದಕ್ಷಿಣಕ್ಕೆ : ನಿವೇಶನ ಸಂಖ್ಯೆ 501

ದಿನಾಂಕ: 22–02–2024
ಸ್ಥಳ : ಬೆಂಗಳೂರು

ಸಹಿ/–
ಅಧಿಕಾರ ಹೊಂದಿದ ಅಧಿಕಾರಿ
ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ
ಕೋರಮಂಗಲ, ಬೆಂಗಳೂರು – 34

IN THE COURT OF THE XI ADDL. CITY CIVIL AND SESSIONS JUDGE AT BANGALORE (CCH-8)
O.S. No. 6165/2022

BETWEEN: Sri G. Sharath Reddy & others. S/o Late Krishna Mohan Reddy, R/at No. 260, 4th Main Road, Mahalakshmi Layout, Bangalore-86. ... ... **PLAINTIFFS**

AND: Sri Anantha Krishna Murthy & others ... **DEFENDANTS**

SUMMONS TO DEFENDANTS No.4 to 8

4. Smt. Nagamma, Wife of Late Muniswamaiah, aged Major, **5. Sri. Krishnappa,** Son of Late Muniswamaiah, aged Major, **6. Sri. Puttachandra,** Son of Late Muniswamaiah, aged Major, **7. Sri. Narayanappa,** Son of Late Muniswamaiah, aged Major, **8. Sri. Dhananjaya,** Son of Late Muniswamaiah, aged Major. Defendant No.4 to 8 are residing at Mudalapalya, Yeshwanthapura Hobli, Bangalore North Taluk.

Whereas, the Plaintiffs above named humbly submits that the above plaint filed seeking a declaration that the Compromise Decree dated 06.04.2022, passed in R.F.A. No. 618/2004 by the Hon'ble High Court of Karnataka, Bangalore, is null and void and not binding on the Plaintiffs herein and to grant permanent injunctions, restraining the Defendants, their agents, representatives, henchmen, or any body on their behalf from interfering with the peaceful possession and enjoyment of the Suit Schedule Property of the Plaintiffs herein or any portion thereof in any manner, and to grant damages, including costs of litigation. It is brought to the notice of Defendants No. 4 to 8, that if you have any right or claim you, may appear in person or through a pleader on **20.03.2024** at **11:00 A.M** before the XI Addl. City Civil and Sessions Judge, at Bangalore (CCH-8), failing which the matter will be heard and determined as exparte.

SCHEDULE PROPERTY

ITEM No.1: All that piece and parcel of the Eastern Portion of the property bearing Site No.1. Katha No.821, Assessment No.83/1, situated at Nagarbhavi, Yeshwanthapur Hobli, Bangalore North Taluk, presently Municipal No.58, Nagarbhavi Main Road, Corporation Ward No.38, Mudalapalya Bangalore-560072. measuring East to West on the Northern Side 45 feet and on the Southern Side 59 feet. North to South on the Eastern side 48 feet and on the Western Side 50 feet, totally measuring 2548 Sq.ft, bounded on: **East by :** Nagarbhavi Main Road, **West by:** Remaining portion of Municipal No.58, **North by:** Property belonging to Sri Muniswamappa, **South by:** Road.

ITEM No.2: All that piece and parcel of the Western Portion of the property bearing Site No.1, Katha No.821, Assessment No.83/1, situated at Nagarbhavi, Yeshwanthapur Hobli, Bangalore North Taluk, presently Municipal No.58, Nagarbhavi Main Road, Corporation Ward No.38, Mudalapalya Bangalore - 560072, measuring East to West on the Northern Side 46 feet and on the Southern Side 50 feet, North to South 50 feet, totally measuring 2,400Sq.ft, bounded on: **East by:** Remaining portion of Municipal No.58, **West by:** Property bearing No.4, **North by:** Property belonging to Sri Muniswamappa, **South by:** Road.

Given under my hand and seal of the court, on this 23/01/2024

By order of the Court, Assistant Registrar, City Civil Court, Bengaluru

Advocate for Plaintiffs
CHETAN .B & ASSOCIATES
Advocates and Legal Consultants
'Satya Palace', No.21, 2nd Floor, 2nd Main Road, Palace Guttahalli, Bangalore-560 003.

ನಗರದಲ್ಲಿ ಇಂದು

ಪುರಂದರದಾಸರ ಆರಾಧನಾ ಮಹೋತ್ಸವ: ಅತಿಥಿಗಳು: ಆರ್.ಕೆ. ಪದ್ಮನಾಭ, ಡಿ. ಲಕ್ಷ್ಮಣದಾಸ್, ಪುರಂದರ ಪುರಸ್ಕಾರ ಪ್ರಶಸ್ತಿ ಪುರಸ್ಕತರು: ಆರ್. ಎನ್. ಶ್ರೀಲತಾ, ಆಯೋಜನೆ: ಪುರಂದರದಾಸರ ಮೆಮೊರಿಯಲ್ ಟ್ರಸ್ಟ್, ಸ್ಥಳ: ದಾಸಶ್ರೇಷ್ಠ ಪುರಂದರದಾಸರ ಮೆಮೊರಿಯಲ್ ಕಾಂಪ್ಲೆಕ್ಸ್, ಕಲ್ಯಾಣನಗರ, ಬೆಳಿಗ್ಗೆ 9

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ನೇಹಾ ಎಚ್., ಅತಿಥಿಗಳು: ಧೀರಜ್ ಮುನಿರಾಜು, ಟಿ.ಎನ್. ಪ್ರಭುದೇವ, ಗಣಪತಿ ಭಟ್, ಶಿವಕುಮಾರ್ ಚೌಡಶೆಟ್ಟಿ, ಆಯೋಜನೆ: ಸಾಯಿ ಆರ್ಟ್ಸ್ ಇಂಟರ್‌ನ್ಯಾಷನಲ್, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಬೆಳಿಗ್ಗೆ 10

ಸಂವಿಧಾನ ಮತ್ತು ರಾಷ್ಟ್ರೀಯ ಏಕತಾ ಸಮಾವೇಶದ ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಪ್ರಲ್ಹಾದ ಜೋಶಿ, ಎಚ್.ಡಿ. ದೇವೇಗೌಡ, ಮಲ್ಲಿಕಾರ್ಜುನ ಖರ್ಗೆ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಬಸವರಾಜ ಹೊರಟ್ಟಿ, ಯು.ಟಿ. ಖಾದರ್, ಎಚ್.ಸಿ. ಮಹದೇವಪ್ಪ, ವಿ. ಗೋಪಾಲಗೌಡ, ಎಚ್.ಎನ್. ನಾಗಮೋಹನದಾಸ್, ರಣದೀಪ್ ಸಿಂಗ್ ಸುರ್ಜೇವಾಲ, ಅನಂತ್ ನಾಥ್, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸ್ಥಳ: ತ್ರಿಪುರ ವಾಸಿನಿ ಅರಮನೆ ಮೈದಾನ, ಬೆಳಿಗ್ಗೆ 10ರಿಂದ

ವಾರ್ಷಿಕೋತ್ಸವ: ಉದ್ಘಾಟನೆ: ವಸುಂಧರಾ ಭೂಪತಿ, ಅಧ್ಯಕ್ಷತೆ: ಶೂದ್ರ ಶ್ರೀನಿವಾಸ್, ಅತಿಥಿಗಳು: ವೀರಕಪುತ್ರ ಶ್ರೀನಿವಾಸ್, ಕೆ.ಆರ್. ವೆಂಕಟೇಶ್, ಲಲಿತ ಪುರಸ್ಕಾರ: ಮೈತ್ರೇಯಿ, ಹಾಜೀರ ಖಾನಂ, ಜಯಲಕ್ಷ್ಮಮ್ಮ ಶಾಮಮೂರ್ತಿ, ಕೆಂಪಮ್ಮ ಪುರಸ್ಕಾರ: ಪದ್ಮ ಟಿ. ಚಿನ್ಮಯಿ, ಲತಾ ಕೆ.ಎನ್., ಆಯೋಜನೆ: ಲಲಿತ ಸಾಹಿತ್ಯ ವೇದಿಕೆ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಬೆಂಗಳೂರು ಹಬ್ಬ: ಉದ್ಘಾಟನೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಆಯೋಜನೆ: ಸುವರ್ಣ ಕರ್ನಾಟಕ ವೇದಿಕೆ, ಜ್ಞಾನಭಾರತಿ ಶಿಕ್ಷಣ ಮತ್ತು ಅಭಿವೃದ್ಧಿ ಸಂಸ್ಥೆ, ಸ್ಥಳ: ಗಣೇಶ ಆಟದ ಮೈದಾನ, ಕೆಂಗೇರಿ ಉಪನಗರ, ಬೆಳಿಗ್ಗೆ 10.30

> **‘ನೀಲಗಿರಿ ಬೆಟ್ಟಗಳ’ ಕುರಿತು ಜಾನಿ ಪಿಂಟೊ ಅವರ ಛಾಯಾಚಿತ್ರ ಪ್ರದರ್ಶನ ಆಯೋಜನೆ ಮತ್ತು ಸ್ಥಳ:** ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಬೆಳಿಗ್ಗೆ 10ರಿಂದ

ಸನ್ಮಾನ ಮತ್ತು ಬೀಳ್ಕೊಡುಗೆ ಸಮಾರಂಭ: ಪಿ.ಬಿ. ವರಾಳೆ, ಪಿ.ಎಸ್. ದಿನೇಶ್ ಕುಮಾರ್, ಅತಿಥಿಗಳು: ಸೋಮಶೇಖರ್ ಕೆ., ಕೆ. ಶಶಿಕಿರಣ್ ಶೆಟ್ಟಿ, ಎಚ್.ಎಲ್. ವಿಶಾಲ ರಘು, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ಬೆಂಗಳೂರು ವಕೀಲರ ಸಂಘ, ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನಸೌಧ, ಮಧ್ಯಾಹ್ನ 12



ಪಿ.ಬಿ. ವರಾಳೆ

ಸನ್ಮಾನ ಕಾರ್ಯಕ್ರಮ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅತಿಥಿಗಳು: ಜಿ. ಪರಮೇಶ್ವರ, ಡಾ. ಶರಣಪ್ರಕಾಶ ಪಾಟೀಲ, ಸುಭಾಷ್ ಸರಕಾರ್, ಅಧ್ಯಕ್ಷತೆ: ರಾಯ್ ಕೆ. ಜಾರ್ಜ್, ‘ನಾಗರಿಕ ಅಭಿನಂದನೆ’: ಟಿ. ದಿಲೀಪ್ ಕುಮಾರ್, ಆಯೋಜನೆ: ಡಾ.ಟಿ. ದಿಲೀಪ್ ಕುಮಾರ್ ನಾಗರಿಕ ಅಭಿನಂದನಾ ಸಮಿತಿ, ಸ್ಥಳ: ಹೋಟೆಲ್ ಲಲಿತ್ ಅಶೋಕ, ಮಧ್ಯಾಹ್ನ 2.30

ಸಂಗೀತೋತ್ಸವ, ‘ಪುಟ್ಟಶ್ರೀ ಸಮ್ಮಾನ್’ ಪ್ರಶಸ್ತಿ ಪ್ರದಾನ: ಎನ್. ಸಂತೋಷ್ ಹೆಗ್ಡೆ, ಉದ್ಘಾಟನೆ: ಜಯಶ್ರೀ ಅರವಿಂದ್, ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸಮೂರ್ತಿ, ಅತಿಥಿ: ಪ್ರಕಾಶ್ ಹೆಬ್ಬಾರ್, ಪ್ರಶಸ್ತಿ ಪುರಸ್ಕೃತರು: ದೇವೇಂದ್ರಕುಮಾರ್ ಪತ್ತಾರ್, ಸಾತಲಿಂಗಪ್ಪ ದೇಸಾಯಿ ಕಲ್ಲೂರ್, ಆಯೋಜನೆ: ಗುರು ಗಾನಲಹರಿ ಸಂಗೀತ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಮಧ್ಯಾಹ್ನ 3.30

ಎನ್‌.ಸಂತೋಷ್ ಹೆಗ್ಡೆ

ಗಾನ ಚಂದ್ರಿಕಾ ವಾರ್ಷಿಕೋತ್ಸವ: ಉದ್ಘಾಟನೆ: ಎಸ್. ಷಡಕ್ಷರಿ, ಮಹೇಶ ಜೋಶಿ, ಡಿ. ಮಹೇಂದ್ರ, ವೈ.ಕೆ. ಮುದ್ದುಕೃಷ್ಣ, ಆರ್. ಚಂದ್ರಶೇಖರ್, ಅಧ್ಯಕ್ಷತೆ: ಮಾಲತಿ ಶರ್ಮಾ, ಆಯೋಜನೆ: ಗಾನ ಚಂದ್ರಿಕಾ ಕಲ್ಚರಲ್ ಫೌಂಡೇಷನ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4

ಸಂಭ್ರಮ ಕಾರ್ಯಕ್ರಮದ ಉದ್ಘಾಟನೆ: ಅತಿಥಿಗಳು: ಎಂ. ಜಗದೀಶ್ ಕುಮಾರ್, ಗುರುರಾಜ ಕರಜಗಿ, ಮಹಾದೇವನ್, ಆಯೋಜನೆ: ದಿಶಾ ಭಾರತ್, ಸ್ಥಳ: ಆರ್. ವಿ. ಟೀಚರ್ಸ್ ಕಾಲೇಜು, ಜಯನಗರ, ಸಂಜೆ 4

ಗುರುರಾಜ ಕರಜಗಿ

ಕೆ.ಎನ್. ಗಣೇಶಯ್ಯ ಅವರೊಂದಿಗೆ ಮಾತುಕತೆ: ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ, ಕೆಂಪೇಗೌಡನಗರ, ಸಂಜೆ 4.30

ಭಾರತ ಆಫ್ರಿಕಾ ಆರೋಗ್ಯ ಸಮಾವೇಶ: ಎಚ್.ಇ. ಲೆಬೋಹಾಂಗ್ ಮೊಚಬಾ, ಮೊಹಮ್ಮದ್ ಮೊಹಸೀನ್, ಆಯೋಜನೆ: ಇಂಡಿಯಾ ಆಫ್ರಿಕಾ ಮೆಡಿಕಲ್ ಕಮಿಷನ್, ಸ್ಥಳ: ಹೋಟೆಲ್ ತಾಜ್ ವೆಸ್ಟ್‌ಎಂಡ್, ಸಂಜೆ 5

ಹರಿದಾಸ ಉತ್ಸವ: ಪಿಟೀಲು: ಜೆ.ಕೆ.ಶ್ರೀಧರ್, ಮೃದಂಗ: ಸಾಕೇತ್, ಗಾಯನ: ಅದಿತಿ ಪ್ರಹ್ಲಾದ್, ಪಿಟೀಲು: ಎಂ.ಎಸ್. ಗೋವಿಂದಸ್ವಾಮಿ, ಮೃದಂಗ: ವಿಶಾಲ್ ಡಿ., ಆಯೋಜನೆ: ಸಂಗೀತ ಸಂಭ್ರಮ ಟ್ರಸ್ಟ್ ಕಾಡುಮಲ್ಲೇಶ್ವರ ಗೆಳೆಯರ ಬಳಗ, ಮಲ್ಲೇಶ್ವರ ಶ್ಯಾಮಲಾ ಕೃಷ್ಣ ಸಂಗೀತ ಸಭಾ, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 5

‘ಕುವೆಂಪು-ಚಿಂತನೆಗಳು ಇಂದು’ ವಿಷಯ ಮಂಡನೆ, ಸಂವಾದ: ಕೆ.ವಿ. ನಾರಾಯಣ, ಆಯೋಜನೆ ಮತ್ತು ಸ್ಥಳ: ಬೀಟಲ್ ಬುಕ್ ಶಾಪ್, ಎಲ್.ಜೆ. ಆರ್ಕೇಡ್, ವಿಜಯನಗರ, ಸಂಜೆ 5.30

ಕಲೋತ್ಸವ: ಗಾಯನ: ಧನಂಜಯ್ ಹೆಗಡೆ, ತಬಲಾ: ಯೋಗೇಶ ಭಟ್, ಹಾರ್ಮೋನಿಯಂ: ಪ್ರಸಾದ್ ಕಾಮತ್, ದ್ರುಪದ ಗಾಯನ: ಉಮಾಕಾಂತ್ ಗುಂಡೇಚ, ಅನಂತ್ ರಮಾಕಾಂತ ಗುಂಡೇಚ, ಪಖವಾಜ: ಅಖಿಲೇಶ್ ಗುಂಡೇಚ, ಆಯೋಜನೆ: ಸಪ್ತಕ್, ಆರ್ಟ್ ಮಂತ್ರಂ, ಸ್ಥಳ: ಹವ್ಯಕ ಸಭಾಭವನ, ಮಲ್ಲೇಶ್ವರ, ಸಂಜೆ 5.30

ವಾರ್ಷಿಕ ಸಂಗೀತೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಗಾಯನ: ಸಂಪಗೋಡು ಎಸ್. ವಿಘ್ನರಾಜ, ಪಿಟೀಲು: ಬಿ.ಕೆ. ರಘು, ಮೃದಂಗ: ಬಿ.ಸಿ. ಮಂಜುನಾಥ್, ಮೋರ್ಸಿಂಗ್: ಬಿ. ರಾಜಶೇಖರ್, ಆಯೋಜನೆ: ಶಾರದಾ ಸಂಗೀತ ಸಭಾ ಟ್ರಸ್ಟ್, ಸ್ಥಳ: ತ್ಯಾಗೀಶಾನಂದ ಸಭಾಂಗಣ, ಹನುಮಂತನಗರ, ಸಂಜೆ 6

ಎನ್. ನಾಗರಾಜರಾವ್ ಅವರ ‘4 ನಾಟಕಗಳು’ ಪುಸ್ತಕ ಬಿಡುಗಡೆ: ಬಿ.ವಿ. ರಾಜಾರಾಂ, ಅತಿಥಿಗಳು: ಇ.ಎಸ್. ಇಂದಿರೇಶ್, ಎನ್. ಪಾರ್ಥಸಾರಥಿ, ಪುಸ್ತಕ ಪರಿಚಯ: ಬಿ.ಎಸ್. ವಿದ್ಯಾರಣ್ಯ, ಉಪಸ್ಥಿತಿ: ಸಭಾಪತಿ ಆನಂದ್, ಎನ್.ಆರ್. ಪೃಥ್ವಿರಾಜ್, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಸುಚಿತ್ರ ನಾಣಿ ಅಂಗಳ, 9ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಸಂಜೆ 6

ಜರಗನಹಳ್ಳಿ ಸಿದ್ಧಮ್ಮ ನಂಜುಂಡಪ್ಪ ಶರಣ ದತ್ತಿ, ಸಿ. ವತ್ಸಲ ಎಂ.ನಂಜುಂಡಯ್ಯ ಶರಣ ದತ್ತಿ ಪ್ರಶಸ್ತಿ ಪ್ರದಾನ: ಸಿ. ಸೋಮಶೇಖರ್, ಉಪಸ್ಥಿತಿ: ಚಂದ್ರಶೇಖರ ಉಷಾಲ, ಪ್ರಶಸ್ತಿ ಪುರಸ್ಕೃತರು: ಸೀ.ಚ. ಯತೀಶ್ವರ, ರೂಪಾ ಕುಮಾರಸ್ವಾಮಿ, ನಿರ್ಮಲಾ ಸಿ. ಎಲಿಗಾರ್, ದಾನಿಗಳು: ಎನ್. ಬಸವರಾಜು, ಎನ್. ಚಂದ್ರಶೇಖರ್, ಶೈಲಜಾ ಶಿವಶಂಕರ್, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಎಸ್. ಎಂ. ಕಲ್ಯಾಣ ಮಂಟಪ, ಜರಗನಹಳ್ಳಿ, ಜೆ.ಪಿ. ನಗರ, ಸಂಜೆ 6.30

16 ಭಾಷೆಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ಕೃತಿಗಳು ಲಭ್ಯ • ವಿವಿಧ ಸಂಸ್ಥೆಗಳು, ಗ್ರಂಥಾಲಯಗಳ ಸಹಯೋಗ

ಕನ್ನಡದ 20 ಸಾವಿರ ಪುಸ್ತಕ ಡಿಜಿಟಲೀಕರಣ

• ವರುಣ ಹೆಗಡೆ

ಬೆಂಗಳೂರು: ಗಾಂಧಿ ಸಾಹಿತ್ಯ ಸೇರಿ ಅಪರೂಪದ ಪುಸ್ತಕಗಳ ಡಿಜಿಟಲೀಕರಣ ಪ್ರಕ್ರಿಯೆ ನಗರದಲ್ಲಿ ಭರದಿಂದ ಸಾಗಿದ್ದು, 'ಸರ್ವೆಂಟ್ಸ್ ಆಫ್ ನಾಲೆಡ್ಜ್' ವೇದಿಕೆಯು ಈಗಾಗಲೇ 20 ಸಾವಿರಕ್ಕೂ ಅಧಿಕ ಕನ್ನಡ ಪುಸ್ತಕಗಳನ್ನು ಡಿಜಿಟಲೀಕರಣ ಮಾಡಿದೆ.

ಇಲ್ಲಿನ ಗಾಂಧಿಭವನದಲ್ಲಿ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದ್ದು, ವೇದಿಕೆಯು ವಿವಿಧ ಸಂಸ್ಥೆಗಳು ಹಾಗೂ ಗ್ರಂಥಾಲಯಗಳ ಸಹಯೋಗದಲ್ಲಿ ಈ ಕಾರ್ಯ ಮಾಡುತ್ತಿದೆ. ಈಗಾಗಲೇ 16 ಭಾಷೆಗಳಲ್ಲಿ ಒಂದು ಲಕ್ಷಕ್ಕೂ ಅಧಿಕ ಪುಸ್ತಕಗಳ ಡಿಜಿಟಲೀಕರಣ ನಡೆದಿದೆ. ಇದರ ಜತೆಗೆ ಅಪರೂಪದ ಛಾಯಾಚಿತ್ರಗಳು, ನಿಯತಕಾಲಿಕೆಗಳು, ಹಸ್ತಪ್ರತಿಗಳನ್ನೂ ಸ್ಕ್ಯಾನ್ ಮಾಡಿ, ಡಿಜಿಟಲ್ ರೂಪದಲ್ಲಿ ಒದಗಿಸಲಾಗುತ್ತಿದೆ. ಇದರಿಂದಾಗಿ ಸುಲಭವಾಗಿ ನಿರ್ದಿಷ್ಟ ಪುಸ್ತಕದ ನಿಖರ ಪುಟಗಳನ್ನೂ ಹುಡುಕಲು ಸಾಧ್ಯವಾಗುತ್ತಿದೆ.



ಓಂ ಶಿವಪ್ರಕಾಶ್ ಅವರು ಪುಸ್ತಕಗಳನ್ನು ಡಿಜಿಟಲೀಕರಣ ಮಾಡುತ್ತಿರುವುದು

'ಸರ್ವೆಂಟ್ಸ್ ಆಫ್ ನಾಲೆಡ್ಜ್' ವೇದಿಕೆಯಡಿ 2018ರಿಂದ ಈ ಡಿಜಿಟಲೀಕರಣ ಪ್ರಕ್ರಿಯೆ ನಡೆಯುತ್ತಿದೆ. ಇದೊಂದು ಲಾಭ ರಹಿತ ವೇದಿಕೆಯಾಗಿದ್ದು, ಅಮೆರಿಕದ ಕಾರ್ಲ್ ಮಾಲಮಡ್ ಹಾಗೂ ಇಲ್ಲಿನ ತಂತ್ರಜ್ಞಾನ ಪರಿಣತ ಓಂ ಶಿವಪ್ರಕಾಶ್ ಈ ವೇದಿಕೆಯನ್ನು ಹುಟ್ಟು ಹಾಕಿದ್ದಾರೆ. ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ), ಬಿ.ಎಂ.ಶ್ರೀ. ಪ್ರತಿಷ್ಠಾನ, ರಾಷ್ಟ್ರೀಯ ಕಾನೂನು ಶಾಲೆ, ಕರ್ನಾಟಕ ಇತಿಹಾಸ ಅಕಾಡೆಮಿ, ಗಾಂಧಿ ಭವನ ಸೇರಿ ವಿವಿಧ ಸಂಸ್ಥೆಗಳು, ಗ್ರಂಥಾಲಯಗಳು ಹಾಗೂ ಲೇಖಕರ ಪುಸ್ತಕಗಳು ಡಿಜಿಟಲ್ ವೇದಿಕೆಯಲ್ಲಿ ಲಭ್ಯವಾಗುತ್ತಿವೆ.

15 ಲಕ್ಷ ಪುಟಗಳ ಡಿಜಿಟಲೀಕರಣ: ಪ್ರತಿ ತಿಂಗಳು 15 ಲಕ್ಷ ಪುಟಗಳನ್ನು ಡಿಜಿಟಲೀಕರಣ ಮಾಡಲಾಗುತ್ತಿದೆ. ಈ ಕಾರ್ಯಕ್ಕೆ ಸ್ಕ್ಯಾನಿಂಗ್ ಯಂತ್ರಗಳ ಜತೆಗೆ ಹೆಚ್ಚಿನ ರೆಸಲ್ಯೂಶನ್ ಇರುವ ಡಿಜಿಟಲ್ ಎಸ್‌ಎಲ್‌ಆರ್ ಕ್ಯಾಮೆರಾಗಳನ್ನು ಬಳಸಿಕೊಳ್ಳಲಾಗುತ್ತಿದೆ. ಒಟ್ಟು 12 ಮಂದಿ ಡಿಜಿಟಲೀಕರಣ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದಾರೆ. ಈಗ ಹಂಪಿ ಕನ್ನಡ ವಿಶ್ವವಿದ್ಯಾಲಯದ ಜತೆಗೂ ಡಿಜಿಟಲೀಕರಣಕ್ಕೆ ಒಪ್ಪಂದ ಮಾಡಿಕೊಂಡಿದ್ದು, ಅಲ್ಲಿನ ಪುಸ್ತಕಗಳೂ ಡಿಜಿಟಲ್ ರೂಪದಲ್ಲಿ ಶೀಘ್ರದಲ್ಲಿಯೇ ದೊರೆಯಲಿವೆ.

ಕೃತಕ ಬುದ್ಧಿಮತ್ತೆ ಬಗ್ಗೆ ಮಾತನಾಡಲಾಗುತ್ತಿದ್ದರೂ ಡಿಜಿಟಲೀಕರಣಕ್ಕೆ ಆದ್ಯತೆ ದೊರೆತಿಲ್ಲ. ಕನ್ನಡದ ಎಲ್ಲ ಸಾಹಿತ್ಯ ಮುಕ್ತವಾಗಿ ದೊರೆಯಬೇಕೆಂಬುದು ನಮ್ಮ ಉದ್ದೇಶ

ಓಂ ಶಿವಪ್ರಕಾಶ್, ತಂತ್ರಜ್ಞಾನ ಪರಿಣತ

'ಡಿಜಿಟಲೀಕರಣ ಪ್ರಕ್ರಿಯೆಗೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ. ಮಹತ್ವದ, ಮರುಪ್ರಕಟಿಸಲು ಸಾಧ್ಯವಾಗದ ಪುಸ್ತಕಗಳನ್ನು ಆದ್ಯತೆ ಮೇರೆಗೆ ಡಿಜಿಟಲೀಕರಣ ಮಾಡಲಾಗುತ್ತಿದೆ. ನವದೆಹಲಿಯ 120 ವರ್ಷ ಹಳೆಯದಾದ ಮೋತಿಲಾಲ್ ಬನಾರಸಿದಾಸ್ ಪ್ರಕಟಣೆಗಳ ಡಿಜಿಟಲೀಕರಣಕ್ಕೂ ಒಪ್ಪಂದ ಮಾಡಿಕೊಳ್ಳಲಾಗಿದೆ. ನಮ್ಮ ಕಾರ್ಯ ಕೇವಲ ಸ್ಕ್ಯಾನಿಂಗ್ ಆಗಿರದೆ, ಶ್ರೀಮಂತ ಸಾಹಿತ್ಯದ ದಾಖಲೀಕರಣವಾಗಿದೆ' ಎಂದು 'ಸರ್ವೆಂಟ್ಸ್ ಆಫ್ ನಾಲೆಡ್ಜ್' ವೇದಿಕೆಯ ಓಂ ಶಿವಪ್ರಕಾಶ್ ಮಾಹಿತಿ ನೀಡಿದರು.

ಗಾಂಧಿ ಭವನ ಪ್ರಕಟಣೆಗಳು ಲಭ್ಯ

ಗಾಂಧಿ ಭವನದಲ್ಲಿರುವ ಮೂರು ಗ್ರಂಥಾಲಯಗಳ 12 ಸಾವಿರ ಪುಸ್ತಕಗಳನ್ನು ಕಳೆದ ಅಕ್ಟೋಬರ್‌ನಲ್ಲಿ ಡಿಜಿಟಲೀಕರಣ ಮಾಡಲಾಗಿದೆ. ಅವುಗಳಲ್ಲಿ ಸಾವಿರಕ್ಕೂ ಅಧಿಕ ಪುಸ್ತಕಗಳು ಈಗಾಗಲೇ 'ಇಂಟರ್ನೆಟ್ ಆರ್ಕೈವ್'ನಲ್ಲಿ ಲಭ್ಯವಿದೆ. ಈವರೆಗೆ 60 ಸಾವಿರಕ್ಕೂ ಅಧಿಕ ಮಂದಿ ಭೇಟಿ ನೀಡಿ, ಈ ಪುಸ್ತಕಗಳನ್ನು ಓದಿದ್ದಾರೆ. ಡೌನ್‌ಲೋಡ್ ಮಾಡಿಕೊಳ್ಳುವ ಅವಕಾಶವೂ ಇದ್ದು, ಪಿಡಿಎಫ್ ಸೇರಿ ವಿವಿಧ ಮಾದರಿಯಲ್ಲಿ ಲಭ್ಯವಿದೆ.

'ಡಿಜಿಟಲೀಕರಣಗೊಂಡ ಪುಸ್ತಕಗಳಲ್ಲಿ ಈಗಾಗಲೇ ಕೆಲ ಪುಸ್ತಕಗಳು ಸಾರ್ವಜನಿಕವಾಗಿ ಲಭ್ಯವಿವೆ. ಇನ್ನುಳಿದ ಕೃತಿಗಳನ್ನು ಡಿಜಿಟಲ್ ವೇದಿಕೆಯಲ್ಲಿ ಒದಗಿಸಲಾಗುವುದು. ಗಾಂಧಿ ಸಾಹಿತ್ಯವನ್ನು ಮುಕ್ತವಾಗಿ ಒದಗಿಸಬೇಕೆಂಬ ಉದ್ದೇಶದಿಂದ ಈ ಕಾರ್ಯವನ್ನು ಪ್ರಾರಂಭಿಸಲಾಯಿತು. ಬಳಿಕ ವಿವಿಧ ಪ್ರಕಾಶಕರು ಹಾಗೂ ಲೇಖಕರ ಕುಟುಂಬದ ಸದಸ್ಯರು ಮರುಮುದ್ರಣ ಕಾಣದ ಪುಸ್ತಕಗಳನ್ನು ನೀಡಿದರು' ಎಂದು ಓಂ ಶಿವಪ್ರಕಾಶ್ ವಿವರಿಸಿದರು.

https://archive.org/details/ServantsOfKnowledge, https://vachana.sanchaya.net/ ಹಾಗೂ https://archive.org/details/JaiGyan ದಲ್ಲಿ ಡಿಜಿಟಲೀಕರಣಗೊಂಡ ಕೃತಿಗಳು ಲಭ್ಯ.

ಕ್ಯಾನ್ಸರ್: ಇಂದು, ನಾಳೆ ತಪಾಸಣೆ, ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕ್ಯಾನ್ಸರ್ ತಪಾಸಣೆ ಮತ್ತು ಜಾಗೃತಿಗೆ ಸಂಬಂಧಿಸಿದಂತೆ ಆರೋಗ್ಯ ಇಲಾಖೆಯ ಸಹಯೋಗದಲ್ಲಿ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಶನಿವಾರ (ಫೆ.24) ಮತ್ತು ಭಾನುವಾರ(ಫೆ.25) ನಗರದ ಎಂ.ಜಿ. ರಸ್ತೆಯ 'ನಮ್ಮ ಮೆಟ್ರೊ' ನಿಲ್ದಾಣದ ಆವರಣದಲ್ಲಿ 'ಕ್ಯಾನ್ಸರ್ ಎಕ್ಸ್‌ಪೊ' ಹಮ್ಮಿಕೊಂಡಿದೆ.

'ಕ್ಯಾನ್ಸರ್‌ಗೆ ವಿದಾಯ ಹೇಳಿ, ಹೊಸ ಜೀವನಕ್ಕೆ ನಾಂದಿ ಹಾಡಿ' ಎಂಬ ಶೀರ್ಷಿಕೆಯಡಿ ಬೆಳಿಗ್ಗೆ 10ರಿಂದ ಸಂಜೆ 7ರವರೆಗೆ ಕಾರ್ಯಕ್ರಮ ನಡೆಯಲಿದೆ. ಈ ಕಾರ್ಯಕ್ರಮದಲ್ಲಿ ಉಚಿತವಾಗಿ ಕ್ಯಾನ್ಸರ್ ತಪಾಸಣೆ ಮಾಡಲಾಗುತ್ತದೆ. ನಗರದ ಪ್ರಮುಖ ಆಸ್ಪತ್ರೆಗಳ ಕ್ಯಾನ್ಸರ್ ತಜ್ಞರು ಪಾಲ್ಗೊಳ್ಳಲಿದ್ದು, ಅವರೊಂದಿಗೆ ಸಮಾಲೋಚನೆ ನಡೆಸುವ ಅವಕಾಶವೂ ಇರಲಿದೆ.

ಬದಲಾದ ಜೀವನಶೈಲಿ, ಆಹಾರ ಪದ್ಧತಿ ಸೇರಿ ವಿವಿಧ ಕಾರಣಗಳಿಂದ ಕ್ಯಾನ್ಸರ್ ಪ್ರಕರಣಗಳು ನಗರದಲ್ಲಿ ಹೆಚ್ಚಳವಾಗುತ್ತಿವೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿದಲ್ಲಿ ಬೇಗ ಗುಣಮುಖ ಮಾಡಬಹುದಾಗಿದೆ. ಕ್ಯಾನ್ಸರ್ ಲಕ್ಷಣಗಳು, ಚಿಕಿತ್ಸೆ ಹಾಗೂ ಹೊಸ ಆವಿಷ್ಕಾರಗಳ ಬಗ್ಗೆ ವೈದ್ಯಕೀಯ ತಜ್ಞರು ಈ ಕಾರ್ಯಕ್ರಮದಲ್ಲಿ ತಿಳಿಸಿಕೊಡಲಿದ್ದಾರೆ.

ನಾಳೆ ಕುರುಕ್ಷೇತ್ರ ನಾಟಕ

ನೆಲಮಂಗಲ: ರಾಜ್ಯ ಸರ್ಕಾರಿ ನಿವೃತ್ತರ ಸಂಘದ ನೆಲಮಂಗಲ ಘಟಕ ಹಾಗೂ ಶ್ರೀ ಮಾರುತಿ ಕೃಪಾ ಪೋಷಿತ ನಾಟಕ ಮಂಡಳಿ ಸಹಯೋಗದಲ್ಲಿ ಪಟ್ಟಣದ ಬಸವಣ್ಣದೇವರ-ಮಠದಲ್ಲಿ ಭಾನುವಾರ ರಾತ್ರಿ 8.30 ಕ್ಕೆ ಕುರುಕ್ಷೇತ್ರ ನಾಟಕ ಪ್ರದರ್ಶನ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ಪುಟ್ಟಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

4 ತಂಡಗಳಲ್ಲಿ ಬಿಜೆಪಿ ನಾಯಕರ ಪ್ರವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಗೆ ಪಕ್ಷ ಸಂಘಟನೆಗಾಗಿ ಕೇಂದ್ರದ ನಾಯಕರ ಜತೆಗೂಡಿ ಮುಂದಿನ ವಾರದಿಂದ ನಾಲ್ಕು ತಂಡಗಳಲ್ಲಿ ರಾಜ್ಯ ಪ್ರವಾಸ ಆರಂಭಿಸಲು ಬಿಜೆಪಿ ಪ್ರಮುಖರ ಸಭೆಯಲ್ಲಿ ನಿರ್ಧರಿಸಲಾಗಿದೆ.

ಬಿಜೆಪಿ ರಾಜ್ಯ ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅಗರ್‌ವಾಲ್ ಉಪಸ್ಥಿತಿಯಲ್ಲಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅಧ್ಯಕ್ಷತೆಯಲ್ಲಿ ಶುಕ್ರವಾರ ಸಭೆ ನಡೆಯಿತು. ಪಕ್ಷಸ ಸಂಸದೀಯ ಮಂಡಳಿ ಸದಸ್ಯ ಬಿ.ಸ್. ಯಡಿಯೂರಪ್ಪ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಸೇರಿದಂತೆ ಹಲವು ಪ್ರಮುಖರು ಸಭೆಯಲ್ಲಿದ್ದರು.

ಸಭೆಯ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ. ರಾಜೀವ್, '28 ಲೋಕಸಭಾ ಕ್ಷೇತ್ರಗಳಲ್ಲೂ ಗೆಲುವಿನ ಅವಕಾಶವಿದೆ ಎಂಬ ವರದಿಗಳಿವೆ. ಪಕ್ಷದ ಮುಖಂಡರು, ಕಾರ್ಯಕರ್ತರನ್ನು ಚುನಾವಣೆಗೆ ಸಜ್ಜುಗೊಳಿಸಲು ರಾಜ್ಯ ಮತ್ತು ರಾಷ್ಟ್ರಮಟ್ಟದ ನಾಯಕರನ್ನು ಒಳಗೊಂಡ ತಂಡಗಳು ಲೋಕಸಭಾ ಕ್ಷೇತ್ರವಾರು ಪ್ರವಾಸ ಮಾಡಲಿವೆ' ಎಂದರು.

ಕೇಂದ್ರದ ನಾಯಕರು ಪ್ರತಿ ಲೋಕಸಭಾ ಕ್ಷೇತ್ರದಲ್ಲಿ ಒಂದು ದಿನ ಪ್ರವಾಸ ಮಾಡುವರು. ಅಲ್ಲಿ ಐದು ಹಂತದ ಕಾರ್ಯಕ್ರಮ ನಡೆಸಲಾಗುವುದು. ಬೂತ್ ಸಮಿತಿ ಅಧ್ಯಕ್ಷರು, ಬೂತ್ ಪ್ರಮುಖರು, ಫಲಾನುಭವಿಗಳ ಸಭೆಗಳನ್ನು ನಡೆಸಿ ಮತ ಸೆಳೆಯಲು ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

'ಕ್ಲಸ್ಟರ್' ಮಟ್ಟದಲ್ಲೂ ಪ್ರವಾಸ ಆರಂಭವಾಗಿದೆ. ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಅವರು ಕಲಬುರಗಿಯಲ್ಲಿ ಈಗಾಗಲೇ ಪ್ರವಾಸ ಮಾಡಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಶೀಘ್ರದಲ್ಲಿ ಪ್ರವಾಸ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು' ಎಂದರು.

ಸ್ಥಳೀಯ ಮಟ್ಟದ ಕಾರ್ಯತಂತ್ರಕ್ಕೆ ಸೂಚನೆ

'ಇಡೀ ರಾಜ್ಯಕ್ಕೆ ಒಂದೇ ಚುನಾವಣಾ ಕಾರ್ಯತಂತ್ರದ ಬದಲಿಗೆ ಪ್ರತಿ ವಿಧಾನಸಭಾ ಕ್ಷೇತ್ರವಾರು ಸ್ಥಳೀಯ ಕಾರ್ಯತಂತ್ರ ರೂಪಿಸುವಂತೆ ಚುನಾವಣಾ ಉಸ್ತುವಾರಿ ರಾಧಾಮೋಹನ್ ದಾಸ್ ಅವರು ಬಿಜೆಪಿ ರಾಜ್ಯ ನಾಯಕರಿಗೆ ಸೂಚಿಸಿದ್ದಾರೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ಕೇಂದ್ರ ಸಚಿವರೂ ಪ್ರವಾಸ ಕೈಗೊಳ್ಳಲಿದ್ದಾರೆ. ಕೇಂದ್ರ ಸಚಿವೆ ಮೀನಾಕ್ಷಿ ಲೇಖಿ ಅವರು ಮಾರ್ಚ್ 4ರಿಂದ 6ರವರೆಗೆ ದಕ್ಷಿಣ ಕನ್ನಡ, ಉಡುಪಿ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಆನ್‌ಲೈನ್‌ನಲ್ಲಿ 'ಒಟಿಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ತಪ್ಪಾಗಿ ಘೋಷಿಸಿಕೊಂಡಿರುವ ಆಸ್ತಿ ಮಾಲೀಕರು 'ಒಂದು ಬಾರಿ ತೀರುವಳಿ' (ಒಟಿಎಸ್) ಅನ್ನು ಆನ್‌ಲೈನ್ ಮೂಲಕ ಪಾವತಿಸಲು ಅವಕಾಶ ಕಲ್ಪಿಸಲಾಗಿದೆ.

ಸರ್ಕಾರ ಫೆ.22ರಂದು ಒಟಿಎಸ್ ಯೋಜನೆಯ ಅಧಿಸೂಚನೆ ಹೊರಡಿಸಿದೆ. ಅದರಂತೆ ಆನ್‌ಲೈನ್ ಮೂಲಕ ಆಸ್ತಿ ತೆರಿಗೆ ಪಾವತಿಸುವ ಸಾಫ್ಟ್‌ವೇರ್‌ನಲ್ಲಿ (ವೆಬ್‌ಸೈಟ್: https://bbmptax.karnataka.gov.in) ಒಟಿಎಸ್ ಪಾವತಿಸಬಹುದಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ತಂತ್ರಾಂಶ ಪರಿಶೀಲನೆ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎನ್.ಎ. ಹ್ಯಾರಿಸ್ ಅವರು ಬಿಡಿಎ ಅಧಿಕೃತ ಜಾಲತಾಣದ ನವೀಕರಣ ಮತ್ತು ಆನ್‌ಲೈನ್ ನೇಮಕಾತಿ ಬುಕಿಂಗ್ ಮಾದರಿ ತಂತ್ರಾಂಶವನ್ನು ಶುಕ್ರವಾರ ಪರಿಶೀಲಿಸಿದರು.

ಬಿಡಿಎ ಆಯುಕ್ತ ಎನ್. ಜಯರಾಮ್, ಇ-ಆಡಳಿತದ ಕಾರ್ಯದರ್ಶಿ ಉಜ್ವಲ್ ಕುಮಾರ್ ಘೋಷ್, ಸಿಎಸ್‌ಜಿ ಕಾರ್ಯ-ನಿರ್ವಾಹಕ ನಿರ್ದೇಶಕ ಯಶವಂತ ವಿ.ಗುರುಕರ್, ಇಡಿಪಿ ಸೆಲ್ ಮುಖ್ಯಸ್ಥ ಮಲ್ಲಿಕಾರ್ಜುನ ಸ್ವಾಮಿ ಮತ್ತು ಉಪ ಕಾರ್ಯದರ್ಶಿ ಉಮೇಶ್ ಇದ್ದರು.

ರಸ್ತೆ ಅವ್ಯವಸ್ಥೆ

ಚರ್ಚ್ ಸ್ಟ್ರೀಟ್‌ನಲ್ಲಿ ಕಲ್ಲುಗಳು ಮತ್ತೆ ಕಿತ್ತುಬಂದಿದ್ದು, ವಾಹನ ಸಂಚಾರ ಹಾಗೂ ನಾಗರಿಕರ ಓಡಾಟಕ್ಕೆ ತೊಂದರೆಯಾಗಿದೆ. ಬಿಬಿಎಂಪಿಯ ನಿರ್ವಹಣೆ ಕೊರತೆಯಿಂದ ಕಲ್ಲುಗಳು ಕಿತ್ತುಬಂದಿರುವ ಸ್ಥಳದಲ್ಲಿ ಅಪಘಾತ ತಪ್ಪಿಸಲು ಪೊಲೀಸರು ಬ್ಯಾರಿಕೇಡ್‌ಗಳನ್ನಿಟ್ಟಿದ್ದಾರೆ
– ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

ನಾಮಫಲಕ: ಆರೋಗ್ಯ ಪರಿವೀಕ್ಷಕ ಅಮಾನತು

ಬೆಂಗಳೂರು: ಬಿಬಿಎಂಪಿ ಮಹದೇವಪುರ ವಲಯದ ಹಿರಿಯ ಆರೋಗ್ಯ ಪರಿವೀಕ್ಷಕ ಕೆ.ಎಲ್.ವಿಶ್ವನಾಥ್ ಅವರನ್ನು ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಅಮಾನತು ಮಾಡಲಾಗಿದೆ.

ಟಿ.ಸಿ. ಪಾಳ್ಯದಲ್ಲಿ ಮಳಿಗೆಗಳ ಮೇಲಿದ್ದ ಇಂಗ್ಲಿಷ್ ನಾಮಫಲಕಗಳನ್ನು ಒಡೆದು ಹಾಕಿರುವ ಹಿನ್ನೆಲೆಯಲ್ಲಿ ವಿಶ್ವನಾಥ್ ಅವರನ್ನು ಅಮಾನತು ಮಾಡಿ ಮಹದೇವಪುರ ವಲಯ ಜಂಟಿ ಆಯುಕ್ತರು ಶುಕ್ರವಾರ ಆದೇಶ ಹೊರಡಿಸಿದ್ದಾರೆ.

'ಮಳಿಗೆಗಳ ನಾಮಫಲಕಗಳಲ್ಲಿ ಶೇ 60 ಕನ್ನಡ ಬಳಸಲು ನೋಟಿಸ್ ನೀಡಿ, ಕ್ರಮ ಕೈಗೊಳ್ಳಬೇಕು. ಯಾವುದೇ ರೀತಿಯಲ್ಲೂ ಇರುವ ಫಲಕ ಒಡೆದು ಹಾಕಲು ಆದೇಶ ನೀಡಿರುವುದಿಲ್ಲ. ಜನರಲ್ಲಿ ಪಾಲಿಕೆ ಬಗ್ಗೆ ಕೆಟ್ಟ ಅಭಿಪ್ರಾಯ ಬರುವಂತೆ ಮಾಡಿದ್ದೀರಿ. ಇಂತಹ ಬೇಜವಾಬ್ದಾರಿ ಕೆಲಸಕ್ಕಾಗಿ ನಿಮ್ಮನ್ನು ಅಮಾನತು ಮಾಡಲಾಗಿದೆ' ಎಂದು ಆದೇಶದಲ್ಲಿ ತಿಳಿಸಲಾಗಿದೆ.

29ರಿಂದ 'ನಮ್ಮ ಸರಸ್ ಮೇಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಸಬಲೀಕರಣ ಮತ್ತು ಸ್ವಾವಲಂಬನೆಯ ಉದ್ದೇಶದಿಂದ ನಗರದ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಫೆ.29ರಿಂದ ಮಾರ್ಚ್ 9ರ ವರೆಗೆ 'ನಮ್ಮ ಸರಸ್ ಮೇಳ' ಮತ್ತು ಬೃಹತ್ ರಾಷ್ಟ್ರೀಯ ವಸ್ತು ಪ್ರದರ್ಶನ ಹಾಗೂ ಮಾರಾಟ ಮೇಳ ಹಮ್ಮಿಕೊಳ್ಳಲಾಗಿದೆ.

ಸರಸ್ ಮೇಳ-2024 ಮತ್ತು 'ಅಕ್ಕ ಕೆಫೆ' ಲಾಂಛನವನ್ನು ನಗರದಲ್ಲಿ ಶುಕ್ರವಾರ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೌಶಲಾಭಿವೃದ್ಧಿ ಮತ್ತು ಜೀವನೋಪಾಯ ಸಚಿವ ಶರಣಪ್ರಕಾಶ್ ಪಾಟೀಲ, ಶಾಸಕರಾದ ಎಸ್.ಟಿ.ಸೋಮಶೇಖರ್, ಶ್ರೀನಿವಾಸ್ ಅನಾವರಣಗೊಳಿಸಿದರು.

ನಂತರ, ಸುದ್ದಿಗೋಷ್ಠಿಯಲ್ಲಿ ಶರಣಪ್ರಕಾಶ್ ಪಾಟೀಲ ಮಾತನಾಡಿ, ಕೌಶಲಾಭಿವೃದ್ಧಿ ಮತ್ತು ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆಯಿಂದ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಷ್ಟ್ರೀಯ ಜೀವನೋಪಾಯ ಅಭಿಯಾನದ ಅಡಿ ಬೃಹತ್ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳ ನಡೆಯಲಿದೆ. ದೇಶದ 250 ಸ್ವಸಹಾಯ ಗುಂಪುಗಳು ಮೇಳದಲ್ಲಿ ಭಾಗವಹಿಸಲಿವೆ ಎಂದರು.

ಡಿ.ಕೆ.ಶಿವಕುಮಾರ್ ಮಾತನಾಡಿ, 'ಕರಕುಶಲ ವಸ್ತುಪ್ರದರ್ಶನವನ್ನು ನಗರದಲ್ಲಿ ಇಡೀ ವರ್ಷ ನಡೆಯಲು ಅನುಕೂಲ ಆಗುವಂತೆ ಶಾಶ್ವತ ಪ್ರದರ್ಶನ ಕೇಂದ್ರ ಸ್ಥಾಪಿಸಲಾಗುವುದು. ಇದಕ್ಕೆ ಸ್ಥಳದ ಹುಡುಕಾಟ ನಡೆಯುತ್ತಿದೆ' ಎಂದರು.

ಐಐಎಸ್ಸಿ: ಮುಕ್ತ ದಿನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (ಐಐಎಸ್ಸಿ) ಫೆ.24ರಂದು ಮುಕ್ತ ದಿನ ಹಮ್ಮಿಕೊಳ್ಳಲಾಗಿದ್ದು, ಸಂಸ್ಥೆಯ ಕ್ಯಾಂಪಸ್ ಪ್ರವೇಶಿಸಲು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಗೆ ಅವಕಾಶ ಇರಲಿದೆ.

ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೂ ಐಐಎಸ್ಸಿ ಕ್ಯಾಂಪಸ್ ಪ್ರವೇಶಿಸಿ ಮುಕ್ತ ದಿನದಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ. ಸಂಸ್ಥೆಯಲ್ಲಿರುವ ಎಲ್ಲ ವಿಭಾಗಗಳ ಚಟುವಟಿಕೆ, ಆವಿಷ್ಕಾರ ಹಾಗೂ ಇತರೆ ಮಾಹಿತಿ ಮುಕ್ತ ದಿನದಲ್ಲಿ ಲಭ್ಯವಾಗಲಿದೆ. ವಿಜ್ಞಾನ ಪ್ರಯೋಗಗಳು, ವಿಜ್ಞಾನದ ಪಾಠಗಳು, ವೈಜ್ಞಾನಿಕ ಪ್ರಾತ್ಯಕ್ಷಿಕೆಗಳು ಹಾಗೂ ವಿಜ್ಞಾನ ಮಾದರಿಗಳ ಪ್ರದರ್ಶನವೂ ಮುಕ್ತ ದಿನದಲ್ಲಿ ಇರಲಿದೆ.

ಭಾರತೀಯ ವಿಜ್ಞಾನ ಸಂಸ್ಥೆ

'1909ರಲ್ಲಿ ಐಐಎಸ್ಸಿ ಸ್ಥಾಪನೆಯಾಗಿದೆ. ಸಂಸ್ಥೆಯ ಚಟುವಟಿಕೆ ಹಾಗೂ ಸೌಲಭ್ಯಗಳನ್ನು ತೆರೆದಿಡಲು ಮುಕ್ತ ದಿನ ಹಮ್ಮಿಕೊಳ್ಳಲಾಗಿದೆ. ವಿಜ್ಞಾನದ ಆವಿಷ್ಕಾರ ಹಾಗೂ ಸಂಶೋಧನೆಗಳ ಬಗ್ಗೆಯೂ ಮುಕ್ತ ದಿನದಲ್ಲಿ ಮಾಹಿತಿ ಇರಲಿದೆ. ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ಐಐಎಸ್ಸಿ ಕ್ಯಾಂಪಸ್‌ಗೆ ಬರಲು ಆಹ್ವಾನ ನೀಡುತ್ತಿದ್ದೇವೆ' ಎಂದು ಐಐಎಸ್ಸಿ ನಿರ್ದೇಶಕ ಪ್ರೊ. ಗೋವಿಂದನ್ ರಂಗರಾಜನ್ ತಿಳಿಸಿದ್ದಾರೆ.

ವಾಹನ ನಿಲುಗಡೆ ನಿಷೇಧ: ಮುಕ್ತ ದಿನದಲ್ಲಿ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದ್ದು, ದಟ್ಟಣೆ ಉಂಟಾಗದಂತೆ ತಡೆಯಲು ಹಲವು ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ.

'ಸರ್ ಸಿ.ವಿ.ರಾಮನ್ ರಸ್ತೆ (ಮೇಖ್ರಿ ವೃತ್ತದಿಂದ ಬಿಇಚ್‌ಇಎಲ್ ವೃತ್ತ), ನ್ಯೂ ಬಿಇಎಲ್ ರಸ್ತೆ (ಸದಾಶಿವನಗರ ಪಿ.ಎಸ್. ಜಂಕ್ಷನ್‌ನಿಂದ ರೈಲ್ವೆ ಸೇತುವೆ), ಟಿ. ಚೌಡಯ್ಯ ರಸ್ತೆ (ಸಿ.ಎನ್.ಆರ್.ರಾವ್ ಕೆಳಸೇತುವೆಯಿಂದ ಕಾವೇರಿ ಜಂಕ್ಷನ್) ಹಾಗೂ ಮಾರ್ಗೋಸಾ ರಸ್ತೆಯಲ್ಲಿ (ಮಾರಮ್ಮ ದೇವಸ್ಥಾನ ವೃತ್ತದಿಂದ ಮಲ್ಲೇಶ್ವರ 18ನೇ ಕ್ರಾಸ್‌ವರೆಗೆ) ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ' ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

'ಮಹಾರಾಣಿ ಅಮ್ಮಣಿ ಕಾಲೇಜು ಎದುರಿನ ಮೈದಾನ ಹಾಗೂ ಐಐಎಸ್ಸಿ ಜಮ್‌ಖಾನ್ ಮೈದಾನದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಲಾಗಿದೆ' ಎಂದು ಹೇಳಿದ್ದಾರೆ.

ತೋಟಗಾರಿಕೆ ಮೇಳ ಮಾ. 5ರಿಂದ

ಹೆಸರಘಟ್ಟ: ಭಾರತೀಯ ತೋಟಗಾರಿಕೆ ಸಂಶೋಧನಾ ಸಂಸ್ಥೆಯಲ್ಲಿ (ಐಐಎಚ್‌ಆರ್) ಮಾ. 5ರಿಂದ 7ರವರೆಗೆ 'ರಾಷ್ಟ್ರೀಯ ತೋಟಗಾರಿಕೆ ಮೇಳ-2024' ಆಯೋಜಿಸಲಾಗಿದೆ ಎಂದು ಭಾರತೀಯ ತೋಟಗಾರಿಕಾ ಉಪಮಹಾನಿರ್ದೇಶಕ ಸಂಜಯ್ ಕುಮಾರ್ ಸಿಂಗ್ ಮಾಹಿತಿ ನೀಡಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಬಾರಿ 'ಸುಸ್ಥಿರ ಅಭಿವೃದ್ಧಿಗಾಗಿ ನವೀನ ಪೀಳಿಗೆಯ ತೋಟಗಾರಿಕೆ ತಂತ್ರಜ್ಞಾನಗಳು' ಎಂಬ ಶೀರ್ಷಿಕೆ ಅಡಿಯಲ್ಲಿ ಮೇಳವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮೇಳದ ಸಂಘಟನಾ ಕಾರ್ಯದರ್ಶಿ ಧನಂಜಯ ಎಂ. ವಿ, 'ಇತ್ತೀಚಿನ ಆಧುನಿಕ ತಂತ್ರಜ್ಞಾನಗಳಾದ ಚತುರ ನೀರಾವರಿ ವ್ಯವಸ್ಥೆ, ನಿಯಂತ್ರಿತ ಪರಿಸರ ಕೃಷಿ, ಲಂಬ ಕೃಷಿ, ಸುಸ್ಥಿರ ಅಭಿವೃದ್ಧಿಗಾಗಿ ಪರಿಸರ ಸ್ನೇಹಿ ಪದ್ಧತಿಗಳು ಸೇರಿದಂತೆ ಮೇಳದಲ್ಲಿ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ. ಜೊತೆಗೆ, ನಗರ ತೋಟಗಾರಿಕೆ, ಮಣ್ಣು ರಹಿತ ಕೃಷಿ, ತೋಟಗಾರಿಕೆ ಬೆಳೆಗಳ ಮೌಲ್ಯವರ್ಧನೆ ಹಾಗೂ ಪ್ಯಾಕೇಜ್ ಮತ್ತು ಸಂಗ್ರಹಣ ತಂತ್ರಜ್ಞಾನಗಳ ಕುರಿತು ಕಾರ್ಯಾಗಾರಗಳನ್ನು ಸಹ ಆಯೋಜಿಸಲಾಗಿದೆ' ಎಂದು ತಿಳಿಸಿದರು.

ಮೇಳದ ಪ್ರಚಾರ ಸಮಿತಿ ಅಧ್ಯಕ್ಷ ಪಿ. ನಂದೀಶ್ ಅವರು, 'ಮೇಳದಲ್ಲಿ ಸುಮಾರ 50 ಸಾವಿರಕ್ಕೂ ಹೆಚ್ಚು ಜನ ಪಾಲ್ಗೊಳ್ಳುವ ಸಾಧ್ಯತೆ ಇದೆ' ಎಂದರು. ಮೇಳದ ಕುರಿತ ಹೆಚ್ಚಿನ ಮಾಹಿತಿಗೆ 91083 64672/9403891704 ಸಂಪರ್ಕಿಸಬಹುದು.



ಪರಸ್ಪರ ವಿಶ್ವಾಸದ ಬಾಂಧವ್ಯ, ಕರಿಮಣಿ ಎಳೆಯಿಂದ ಬಂಧನವೆಂಬಂತೆ ಬದಲಾಗಿದೆಯೇ? ಕರಿಮಣಿ ಧರಿಸಿಯೂ ನಿಷ್ಠೆಯಿರದ, ಧರಿಸದೆಯೂ ಪ್ರೀತಿಗೆ ಬದ್ಧರಾಗಿರುವ ಕತೆಗಳು ನಮ್ಮ ನಡುವೆ ಇವೆ.

ಕರಿಮಣಿ ಅಂದರೇನು ಕಣ್ಮಣಿ?

ಕೈಗೂ, ಕಾಲಿಗೂ, ಕಿವಿಗೂ...

ಸುಶೀಲಾ ಡೋಣೂರ

ಯಾವ ಕಾಲದ ಶಾಸ್ತ್ರವೇನು ಹೇಳಿದರೇನು? ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು? ಎಂದರಲ್ಲವೇ ಕುವೆಂಪು? ಹೆಣ್ಣಿನ ಮನಸನ್ನೂ, ಅವಳ ಪಾವಿತ್ರ್ಯವನ್ನು, ಗಂಡಿನ ಆಯಸ್ಸು-ಶ್ರೇಯಸ್ಸನ್ನು ಕರಿಮಣಿಗೆ ಜೋಡಿಸಿ ಅವಳ ಕತ್ತಿಗೆ ಕಟ್ಟುವವರು ಹಾಗೂ ಕತ್ತು ಒಡ್ಡುವವರು ಈ ಸಾಲುಗಳನ್ನು ಅರ್ಥ ಮಾಡಿಕೊಂಡರೆ ಕರಿಮಣಿ ಮಾಲೀಕತ್ವದ ಕಗ್ಗಂಟು ಬಿಚ್ಚಿಕೊಂಡೀತು...

ಕರಿಮಣಿ ಮಾಲೀಕ ನೀನಲ್ಲ...

ತೆರೆಯ ಮೇಲೆ ಬಂದು ಹೋದ ದಶಕಗಳ ನಂತರ ಈಗೀಗ ಗಂಡಸರ ನಿದ್ದೆ ಕಸಿದಿರುವ, ಹೆಂಗಸರ ನೆಮ್ಮದಿ ಕಸಿದ ಹಾಡಿದು. ತಾಳಿ ಇದೆಯಾ ಎನ್ನುವುದನ್ನೇ ಗಮನಿಸದ ಗಂಡ ಕೂಡ ಈಗೀಗ ‘ಏನೇ, ಕತ್ತಲ್ಲಿ ಕರಿಮಣಿನೇ ಕಾಣ್ತಾ ಇಲ್ಲ?’ ಅಂತ ತಗಾದೆ ತೆಗೆಯುವಂತಾಗಿದೆ. ಬೀರುವಿನಲ್ಲಿಟ್ಟು ಮರೆತು ಹೋದವರು ಹುಡುಕುವಷ್ಟು ಈ ಹಾಡು ಸಂಸಾರದಲ್ಲಿ ತಲೆಹಾಕುತ್ತಿದೆ.

ಅಷ್ಟಕ್ಕೂ ಕತ್ತಿನಲ್ಲಿರುವ ಕರಿಮಣಿಗೂ, ಮನಸಿನಲ್ಲಿರುವ ಭಾವತೇರಿಗೂ ಎಲ್ಲಿದೆ ಸಂಬಂಧ? ಕರಿಮಣಿ ಧರಿಸಿದ ಮಾತ್ರಕ್ಕೆ ಮನಸಿನಲ್ಲಿ ಯಾರೂ ಸುಳಿಯುವುದಿಲ್ಲ ಅಂತರ್ಥವೇ? ಅಥವಾ ಕರಿಮಣಿಯ ಕಾವಲಿಲ್ಲದ ಮನಸು ಕಂಡಕಂಡವರ ಚಿತ್ರಕ್ಕೆ ಕ್ಯಾನ್ವಾಸಾಗುತ್ತದೆಯೇ? ಕರಿಮಣಿ ಬಿದ್ದ ಮೇಲೆ ಆ ಮನಸಿನಲ್ಲಿ ಅಂದದ್ದೊಂದು ಸ್ನೇಹ ಮೂಡಬಾರದೆ? ಹೆಣ್ಣಿಗೊಂದು ಗಂಡು ಗಂಡಿಗೊಂದು ಹೆಣ್ಣಿನ ಸ್ನೇಹ ಒಡಮೂಡಿದಲ್ಲಿ ದಾಂಪತ್ಯ ಸೋಲುವುದೆ? ಅನುಬಂಧ ಗಟ್ಟಿಯಿದ್ದಲ್ಲಿ ಕರಿಮಣಿಗೇನು ಕೆಲಸ? ಒಲವು ಬತ್ತಿದ ಗಳಿಗೆ ಕರಿಮಣಿ ಹೇಗೆ ತಾನೆ ಆ ಸಂಬಂಧ ಉಳಿಸೀತು? ಇಂತಹ ಹಲವು ಪ್ರಶ್ನೆಗಳನ್ನಿಟ್ಟುಕೊಂಡು ಕರಿಮಣಿ ಹಾಡು ಮತ್ತೆ ಚರ್ಚೆಗೆ ಬಂದಿದೆ.

ಹೆಣ್ಣನ್ನು ತನ್ನ ಅಧೀನದಲ್ಲಿಟ್ಟುಕೊಳ್ಳುವ, ಆ ಹೆಣ್ಣು ತನಗೇ ಸಂಬಂಧಿಸಿದವಳು ಎನ್ನುವ ಹಕ್ಕು ಸಾಧಿಸುವ ಪುರುಷಾಕಾರದ ಸಂಕೇತವಾಗಿ, ದಾಸ್ಯತ್ವದ ಒಂದು ತಂತುವಾಗಿ ರೂಪತಳೆದ ಕರಿಮಣಿ, ಅನಂತರದ ದಿನಗಳಲ್ಲಿ ಒಂದು ನಂಬಿಕೆಯಾಗಿ, ಸಂಪ್ರದಾಯವಾಗಿ, ಆಚಾರವಾಗಿ, ಆಡಂಬರವಾಗಿ, ಆಭರಣವಾಗಿ ಕಾಲಕಾಲಕ್ಕೆ ರೂಪಾಂತರಗೊಳ್ಳುತ್ತ ತನ್ನ ಅರ್ಥ, ಮೌಲ್ಯಗಳನ್ನೂ ಬದಲಿಸಿಕೊಳ್ಳುತ್ತ ಬಂದಿದೆ. ಇದೀಗ ಇದು ಹೆಣ್ಣಿನ ಬದ್ಧತೆ, ಬಾಧ್ಯತೆ, ಘನತೆಗಳನ್ನು ನಿರ್ಧರಿಸುವ ಘನ-ಗಂಭೀರ ಧಾತುವಾಗಿ ಹೊರಹೊಮ್ಮುತ್ತಿರುವ ಬಗೆ ಸೋಜಿಗ ಹುಟ್ಟಿಸುತ್ತಿದೆ.

ಅನಾದಿಕಾಲದಿಂದ ಕರಿಮಣಿಗೂ, ಹೆಣ್ಣಿನ ಮನಸಿಗೂ-ಘನತೆಗೂ ಹಾಗೂ ಗಂಡನ ಆಯಸ್ಸು-ಶ್ರೇಯಸ್ಸು-ಆರೋಗ್ಯಕ್ಕೂ ಸಂಬಂಧ ಬೆಸೆಯುತ್ತ ಬರಲಾಗಿದೆ. ವಿವಾಹಿತೆಯರು ಮಾಂಗಲ್ಯ ಧರಿಸಲೇಬೇಕು. ಅದೇ ಶುಭ-ಶೋಭೆ, ಸೌಭಾಗ್ಯ. ಮಾಂಗಲ್ಯ-ಕಾಲುಂಗರ ಧರಿಸದವರು ಗಂಡನನ್ನು ಗೌರವಿಸುವುದಿಲ್ಲ ಎಂದು ಗ್ರಹಿಸುವವರ ದೊಡ್ಡ ಸಾಲೇ ಇದೆ. ಬೆಳಿಗ್ಗೆದ್ದು ಕರಿಮಣಿಯನ್ನು ಕಣ್ಣಿಗೊತ್ತಿಕೊಂಡೇ ಮೇಲೇಳಬೇಕು ಎನ್ನುವವರು ಸಿಕ್ಕೇ ಸಿಗುತ್ತಾರೆ. ಮಾಂಗಲ್ಯವನ್ನು ಧರಿಸುವುದರ ಹಿಂದೆ ವಿಜ್ಞಾನವೂ ಅಡಗಿದೆ ಎನ್ನುತ್ತ ಈ ನಂಬಿಕೆಯನ್ನು ಪೊರೆಯುವವರದು ಮತ್ತೊಂದು ವರ್ಗ. ಪರಸ್ಪರ ಪ್ರೀತಿಯಿಂದ ಬದುಕುವ ವಾಗ್ದಾನಕ್ಕೆ ಕರಿಮಣಿಯ ಅಂಕೆ ಬೇಕಿಲ್ಲ ಎನ್ನುವವರು, ತಾಳಿ ಧರಿಸದೇ ವಿವಾಹವಾಗಿ ಅರ್ಧ ಶತಕ ಕಳೆದರೂ ಅನ್ಯೋನ್ಯವಾಗಿರುವವರೂ ಇದ್ದಾರೆ. ಸಂಪ್ರದಾಯಸ್ಥರ ಕಣ್ಣಿಗೆ ಕಾಣುವಂತೆ, ಪ್ರಗತಿಪರರ ಕಣ್ಣಿಗೆ ಕಾಣದಂತೆ ರೂಪಾಂತರವಾಗಿದೆ.

ಸಾಮಾಜಿಕ ಜಾಲತಾಣಗಳಲ್ಲಿ, ವಾಟ್ಸ್ ಆ್ಯಪ್ ಗುಂಪುಗಳಲ್ಲಿ, ಟೀ ಟೇಬಲ್‌ಗಳಲ್ಲಿ, ಅಷ್ಟೇ ಏಕೆ, ಕಾನ್ಫರನ್ಸ್ ಹಾಲ್‌ಗಳತನಕ ಎಲ್ಲಾ ಕಡೆ ಕರಿಮಣಿ ಮಾಲೀಕತ್ವದ ಕಗ್ಗಂಟು ಛಾಪು ಮೂಡಿಸುತ್ತಿರುವ ಈ ಸಮಯದಲ್ಲಿ ಕರಿಮಣಿಯನ್ನು ಹೆಣ್ಮಕ್ಕಳು ಗ್ರಹಿಸಿರುವ ಪರಿ ಎಂಥದ್ದು? ಯಾರಿಗೆಲ್ಲಾ ಇದು ಈಗಲೂ ಸೌಭಾಗ್ಯದ ಸಂಕೇತವಾಗಿದೆ? ಯಾರಿಗೆ ದಾಸ್ಯದ ಸಂಕೇತ? ಯಾರಿಗೆಲ್ಲಾ ದಿರಿಸಿಗೆ ತಕ್ಕಂತೆ ಧರಿಸುವ ಅಂದದ ಆಭರಣ? ಅವರವರ ಕಣ್ನೋಟದಲ್ಲಿ ಕರಿಮಣಿಗಿರುವ ಜಾಗ ಯಾವುದು? ಕೇಳಿದರೆ ಒಬ್ಬೊಬ್ಬರದು ಒಂದೊಂದು ನಂಬುಗೆ.

ಅವನು- ಅವಳು... ಮಾಲೀಕತ್ವ!



ಅವನು ಜೋಕ್ ಹೇಳುತ್ತಾನೆ ಅವಳು ಝುರಿಯಂತೆ ನಗುತ್ತಾಳೆ. ಅವಳು ನೋವು ಹೇಳಿಕೊಳ್ಳುತ್ತಾಳೆ. ಅವನು ಅವಳ ಕಣ್ಣೀರನ ಜೊತೆ ಒಂದಾಗಿ ಹರಿಯುತ್ತಾನೆ. ಅವಳು ಅವನ ಕೈಮೇಲೆ ಕೈ ಇಡುತ್ತಾಳೆ. ಅವನು ಸಮಾಧಾನಿಸುತ್ತಾನೆ. ಆ ಸ್ಪರ್ಶ ಮತ್ತು ಸಮಾಧಾನ ಒಂದು ಬಿಡುಗಡೆ. ಅವರೇನೂ ಪಡೆಯುವುದಿಲ್ಲ. ಮನಸು ಹಗುರಾಗುತ್ತದೆ. ಅವಳಿಗೆ ಗಂಡನಿದ್ದಾನೆ. ಅವನಿಗೂ ಹೆಂಡತಿಯಿದ್ದಾಳೆ.

ಝುರಿಯ ನಗು, ಹೊಳೆಯ ಅಳು, ಸ್ಪರ್ಶ, ಸಮಾಧಾನ... ಕಣ್ಣಗಲಿಸಿ ನೋಡುವ ಲೋಕ 'ಅದು ಆ ತರಹನಾ?' ಅಂತ ಕೇಳಬಹುದು. ಆ ತರಹ ಅಂದರೆ? ಪತಿ, ಪತ್ನಿ, ಔರ್... ಅಂತ ಅಲ್ಲವಾ? ಕ್ಷಮಿಸಿ ಇದು ನೀವು ಅಂದುಕೊಂಡಂತೆ ಅಲ್ಲ. ಮದುವೆಯ ಆಚೆಯೂ ಒಂದು ಗೆಳೆತನ ಇರುತ್ತದೆ. ಆ ಗೆಳೆತನ ಒಲವಲ್ಲ, ಸಂಬಂಧವೂ ಅಲ್ಲ. ದಾಂಪತ್ಯ ಇನ್ನಷ್ಟು ಲವಲವಿಕೆಯದ್ದಾಗಲು ಇದು ತನ್ನ ಕಾಣಿಕೆ ಸಲ್ಲಿಸುತ್ತದೆ.

ಬಾಂಧವ್ಯಕ್ಕೆ ಅವರಿಬ್ಬರೂ ನಿಷ್ಠರು. ಕರಿಮಣಿ ನೆರಳಲ್ಲಿ ಎಲ್ಲವೂ ದಕ್ಕಿಬಿಡುವುದಿಲ್ಲ. ಕಟ್ಟಿಸಿಕೊಂಡ ಕರಿಮಣಿಯೇ ಕಣ್ಣೀರು ತರಿಸಿದರೆ ನೋವು ತೊಡೆಯುವ ಒಂದು ಬೆರಳಿಗಾಗಿ ಹುಡುಕುತ್ತದೆ; ಎಲ್ಲಾ ಸಮಾಧಾನಗಳು ಕರಿಮಣಿಯ ನೆರಳಲ್ಲಿ ಸಿಗುತ್ತವೆ ಅಂತಲ್ಲ.

ಒಂದು ಬಂಧವನ್ನು ‘ಮಾಲೀಕತ್ವ’ ಹೊಂದಿ ಪೊರೆಯುವುದು ಬೇರೆ. ಮಾಲೀಕತ್ವ ಇಲ್ಲದೆ ತುಡಿಯುವುದು ಬೇರೆ. ಕರಿಮಣಿ ಹಂಗಿಲ್ಲದ ಒಂದು ಶುದ್ಧ ಗೆಳೆತನ ಅವನಿಗೂ ಅವಳಿಗೂ ಅವಶ್ಯಕ. ಅದನ್ನು ಕರಿಮಣಿ ಮಾಲಿಕನಿಗೆ/ ಕರಿಮಣಿ ಕಟ್ಟಿದವಳಿಗೆ ಹೇಳಿಕೊಳ್ಳಬೇಕಾ? ಅದು ನಿಮಗೆ ಬಿಟ್ಟದ್ದು. ದಾಂಪತ್ಯದಲ್ಲಿ ಆಗುವ, ಅಲ್ಲಿ ಹೇಳಿಕೊಳ್ಳಲಾಗದ ಅನೇಕ ಭಾವಗಳಿಗೆ ಅದು ಹೆಗಲಾಗಬೇಕು. ಗೆಲುವಾಗಬೇಕು.

ಗಂಡ ಹೆಂಡತಿರಿಬ್ಬರಿಗೂ ಸಣ್ಣ ಸ್ಪೇಸ್ ಬೇಕು. ಸಣ್ಣ ಖುಷಿ, ನಲಿವು, ಗೆಳೆತನ- ಆತ್ಮೀಯತೆ ಇಂತವೆಲ್ಲಾ ಇರಬೇಕು. ಆಗ ನೀವು ಸುಖಿ. ಇದು ಎಂದೂ ನಿಮ್ಮ ‘ಕರಿಮಣಿ’ಬಂಧಕ್ಕೆ ತೊಡಕಾಗಬಾರದು. ಪೂರಕವಾಗಿರಬೇಕು.

- ಸದಾಶಿವ ಸೊರಟೂರು.

ಘನತೆ ಇರುವುದು ಕರಿಮಣಿಯಲ್ಲಲ್ಲ...

ನಮ್ಮ ತಂದೆ ಬಾಬುರಾವ್ ಹಾಗೂ ತಾಯಿ ರತ್ನಮ್ಮ ದೇಶ ಮಾನ್ಯ ತಮ್ಮ ಕಷ್ಟಕಾಲದಲ್ಲಿ ನಮಗೆಲ್ಲಾ ಉನ್ನತ ಶಿಕ್ಷಣ ಕೊಡಿಸಿರುವುದು ದಾಸ್ಯವನ್ನು, ಅಧೀನತೆಯನ್ನು ಸ್ವೀಕರಿಸಲು ಅಲ್ಲ. ಬೌದ್ಧಿಕ, ಸೈದ್ಧಾಂತಿಕ, ವೈಚಾರಿಕ ನೆಲೆಗಟ್ಟಿನ ಮೇಲೆ ಬದುಕು ಕಟ್ಟಿಕೊಳ್ಳಲಿ ಅಂತ. ನನ್ನ ಪತಿ ಚಾಂದ ರಾಮ್ ಗ್ರೋವರ್ ಹರಿಯಾಣದವರು, ರಾಷ್ಟ್ರೀಯ ಹೈನು ಸಂಶೋಧನಾ ಸಂಸ್ಥೆಯಲ್ಲಿ ಹಿರಿಯ ವಿಜ್ಞಾನಿಯಾಗಿದ್ದಾರೆ. ಅವರೂ ಕೂಡ ಆಳವಾದ ವಿವೇಚನೆ, ಉದಾತ್ತ ಚಿಂತನೆ, ವಿಶಾಲ ದೃಷ್ಟಿಕೋನವುಳ್ಳವರು. ಹೀಗಾಗಿ, ನಮ್ಮ ನಡುವೆ ಎಂದೂ ಕರಿಮಣಿಯ ಮಾಲೀಕತ್ವದ ಪ್ರಶ್ನೆ ಉದ್ಭವಿಸಲೇ ಇಲ್ಲ. ಮದುವೆಯಾದ ದಿನದಿಂದ ಇಲ್ಲಿವರೆಗೆ ನಾನು ಮಾಂಗಲ್ಯ, ಕಾಲುಂಗರ ತೊಟ್ಟಿಲ್ಲ. ಹೆಣ್ಣಿನ ಘನತೆ, ಸ್ಥಾನಮಾನ, ಗೌರವ ನಿರ್ಧಾರವಾಗುವುದು ಅವಳು ಧರಿಸುವ ಕರಿಮಣಿಯಿಂದಲ್ಲ, ಅವಳ ಆಚಾರ-ವಿಚಾರ, ತತ್ವ-ಸಿದ್ಧಾಂತಗಳಿಂದ ಎನ್ನುವುದನ್ನು ನನ್ನ ತಂದೆತಾಯಿ ಕೊಟ್ಟ ಸಂಸ್ಕಾರ ಹಾಗೂ ನಾನು ಪಡೆದ ವಿದ್ಯೆ ನನಗೆ ಕಲಿಸಿಕೊಟ್ಟಿದೆ.

ಡಾ. ಸಮತಾ ದೇಶಮಾನೆ, ಪ್ರಾಧ್ಯಾಪಕರು, ಬೆಂ.ವಿ.ವಿ

ಅವನು ಮಾಲೀಕನಲ್ಲ; ನಾನವನ ಗುಲಾಮಳಲ್ಲ.

ನನ್ನ ಮಟ್ಟಿಗೆ ತಾಳಿ ಎಂದರೆ ಅವನು-ನಾನು ಗೌರವ-ಬದ್ಧತೆ-ಪ್ರಾಮಾಣಿಕತೆಯೊಂದಿಗೆ ಬದುಕಲು ನಿರ್ಧರಿಸಿದ ದಿನ ಅವನು ಕೊಟ್ಟ ಉಡುಗೊರೆ. ನಾನು ಅದನ್ನೊಂದು ಆಭರಣದ ರೂಪದಲ್ಲಿ ಧರಿಸುತ್ತೇನೆ. ಆಫೀಸಿಗೊಂದು, ಕಾರ್ಯಕ್ರಮಗಳಿಗೊಂದು ಅಂತ ಇಟ್ಟುಕೊಂಡಿದ್ದೇನೆ. ಮದುವೆಯಾಗುವ ಮೊದಲು ಕತ್ತಿಗೆ ಚೈನ್ ಧರಿಸುತ್ತಿದ್ದೆ. ಈಗ ಮಾಂಗಲ್ಯ. ಒಮ್ಮೊಮ್ಮೆ ತಾಳಿಯನ್ನು ಮರೆತು ಹೊರಗೆ ಹೋಗುವುದಿದೆ. ಆಗೆಲ್ಲಾ ಸೌಭಾಗ್ಯವನ್ನು ಮನೆಯಲ್ಲೇ ಮರೆತುಬಂದೆ ಎನ್ನುವ ಗಿಲ್ಟ್ ಕಾಡಿದ್ದಿಲ್ಲ. ಅಷ್ಟಕ್ಕೂ ನಮ್ಮ ಸಂಬಂಧ ತಾಳಿ ಮತ್ತು ಉಂಗುರದ ಮಾಲೀಕತ್ವದ ಮೇಲೆ ನಿಲ್ಲುವಷ್ಟು ಟೊಳ್ಳಲ್ಲ.

ಚೈತ್ರಿಕಾ ನಾಯ್ಕ ಹರ್ಗಿ, ಲೇಖಕಿ

ಅಂದದ ಆಭರಣ

ಕಾಲೇಜು ದಿನಗಳಲ್ಲಿ ಕರಿಮಣಿ ವೆರೈಟಿ ಚೈನ್ ಧರಿಸಿ ಮೆರೆದದ್ದು ನಿಜ. ಹಾಗೆ ಆಸೆಪಟ್ಟ ಕರಿಮಣಿಗೆ ಮಾಂಗಲ್ಯ ಸೇರಿಸಿ ಕೊರಳು ಸೇರಿದಾಗ ಏನ್ನೋ ಹೆಮ್ಮೆ. ಕಾರ್ಪೋರೇಟ್ ಲೈಫ್ ಮತ್ತು ಬದಲಾಗುತ್ತಿರುವ ಟ್ರೆಂಡ್... ಕರಿಮಣಿ ಧರಿಸಿದರೆ ಮಧ್ಯವಯ್ಯಸ್ಸಿನವಳು, ಓಲ್ಡ್ ಲೇಡಿ ಎಂದು ಗುಂಪಿನಿಂದ ದೂರವಾಗುವ ಸಂದರ್ಭ ಎದುರಾದಾಗ ಕರಿಮಣಿ ಸರ ತೆಗೆದಿಟ್ಟು ದಾಪುಗಾಲು ಹಾಕಿದ್ದಿದೆ. ಬೇಕೆನಿಸಿದಾಗ ಧರಿಸುವ, ಬೇಡವೆನಿಸಿದಾಗ ಬಿಚ್ಚಿಡುವ ಆಭರಣವದು. ಮಾಂಗಲ್ಯವಾಗಲಿ, ಅದನ್ನು ಧರಿಸುವವಳೇ ಆಗಲಿ... ಆಸ್ತಿ ಅಲ್ಲ; ಅಲ್ಲಿ ಮಾಲೀಕತ್ವದ ಪ್ರಶ್ನೆಯೂ ಬರುವುದಿಲ್ಲ.

ಕಾವ್ಯ ಭಾರದ್ವಾಜ್, ವಕೀಲೆ

ಭದ್ರತೆಗೆ-ಭಾವನೆಗೆ

ಕರಿಮಣಿ ಅಂದರೆ... ಮಂತ್ರ ಘೋಷಗಳ ನಡುವೆ ಗುರುಹಿರಿಯರ ಅಕ್ಷತೆಯ ಆಶೀರ್ವಾದದೊಂದಿಗೆ ಕೊರಳಿಗೆ ಬೀಳುವಾಗಿನ ರೋಮಾಂಚನ; ಅದು ಬಿದ್ದ ನಂತರದ ಸ್ಥಾನಮಾನ; ಕನ್ಯೆಯಿಂದ ಗೃಹಿಣಿಯ ಪಟ್ಟಕ್ಕೆ ಪಡೆದ ಪದೋನ್ನತಿ... ಶುಭ ಸಮಾರಂಭಗಳಲ್ಲಿ ಸುಮಂಗಲಿ ಎಂಬ ವಿಶೇಷ ಮರ್ಯಾದೆ, ಸನ್ಮಾನ ಏನೆಲ್ಲಾ...

ಮಾಂಗಲ್ಯ ನನ್ನ ಪಾಲಿಗೆ ಬರೀ ಸರವಲ್ಲ ಅದೊಂದು ಸಮಾಧಾನ, ಆತ್ಮಸ್ಥೈರ್ಯ, ಮನ್ನಣೆಯನ್ನು ತಂದುಕೊಟ್ಟ ಮಮಬಂಧು. ಮನೆಮಂದಿಯನ್ನು ಬಿಟ್ಟು ಒಬ್ಬಳೇ ಹೊರಊರುಗಳಲ್ಲಿ ನೌಕರಿ ಮಾಡುವಾಗ, ಕೆಲಸದ ಮೇಲೆ ಬೇರೆ ಬೇರೆ ತಾಲೂಕುಗಳಲ್ಲಿ ಕೋರ್ಟು, ಕಚೇರಿ ಅಂತ ಏಕಾಂಗಿಯಾಗಿ ಅಡ್ಡಾಡುವಾಗ ಮನಸ್ಸಿನಲ್ಲೊಂದು ಧೈರ್ಯ ಮೂಡಿಸಿದ್ದು ಕರಿಮಣಿಯೇ. ವೈಜ್ಞಾನಿಕವಾಗಿ ನೋಡುವುದಾದರೆ ಎದೆಯ ಮಧ್ಯ ಭಾಗಕ್ಕೆ ಕೂರುವಷ್ಟು ಮಾಂಗಲ್ಯ, ಕಾಲಿನ ಎರಡನೇ ಬೆರಳಲ್ಲಿ ಧರಿಸುವ ಬೆಳ್ಳಿಯ ಕಾಲುಂಗುರ ದೇಹದ ಉಷ್ಣಾಂಶವನ್ನು ನಿಯಂತ್ರಿಸಿ, ಋತುಚಕ್ರವನ್ನು ಸುಗಮಗೊಳಿಸುವುದು.

ಕೆ.ವಿ.ರಾಜಲಕ್ಷ್ಮಿ, ನಿವೃತ್ತ ಲೆಕ್ಕಾಧಿಕಾರಿ

ಫ್ಯಾಷನ್

ರೂಪಾ ಕೆ.ಎಂ.

ಕರಿಮಣಿ ಮಾಲೀಕನ ಬಗ್ಗೆ ಚರ್ಚೆಯಾಗುತ್ತಿರುವ ಈ ಹೊತ್ತಿನಲ್ಲಿ ಕರಿಮಣಿಯನ್ನು ಪ್ರಧಾನವಾಗಿಟ್ಟುಕೊಂಡು ಆಭರಣಗಳ ಲೋಕದಲ್ಲಿ ಹಲವು ಬಗೆಯ ಪ್ರಯೋಗಗಳು ನಡೆದಿವೆ ಎನ್ನುವುದನ್ನು ಮರೆಯುವಂತಿಲ್ಲ. ಹಲವು ಚೌಕಟ್ಟುಗಳನ್ನು ಮೀರಿಯೂ ಕಪ್ಪುಮಣಿ ಹೊಸತನಕ್ಕೆ ಹಾಗೂ ಹೊಸ ವಿನ್ಯಾಸಗಳಿಗೆ ತನ್ನನ್ನು ಒಗ್ಗಿಸಿಕೊಂಡಿದೆ. ಬಗೆ ಬಗೆಯ ಗಾತ್ರ, ವಿನ್ಯಾಸಗಳಿಂದ ಈ ಕರಿಮಣಿಯು ಹೆಂಗಳೆಯರ ಆಕ್ಸೆಸರಿಗಳಲ್ಲಿ ವಿಶಿಷ್ಟ ಸ್ಥಾನ ಪಡೆದುಕೊಂಡಿದ್ದು, ತೊಟ್ಟವರ ಅಂದ ಹೆಚ್ಚಿಸಿದೆ. ಕರಿಮಣಿಯನ್ನು ಬಳಸಿ ಮಾಡಿದ ಅಂಥ ಕೆಲವು ಆಭರಣಗಳು ಇಲ್ಲಿವೆ...

ಕರಿಮಣಿ ಬ್ರೇಸ್ಲೆಟ್

ಎರಡು, ಮೂರೆಳೆಯ ಸಣ್ಣ ಸಣ್ಣ ಕರಿಮಣಿ ಇರುವ ಬ್ರೇಸ್ಲೆಟ್‌ಗಳು ಈಗಿನ ಟ್ರೆಂಡ್. ದಪ್ಪ ಕರಿಮಣಿ ಬಳಸಿ ಮಾಡಿದ ಒಂದು ಎಳೆಯ ಬ್ಲೇಸ್ಲೆಟ್‌ಗಳು ಸಂದರ್ಭಕ್ಕೆ ಅನುಸಾರವಾಗಿ ಬಳಕೆಯಾಗುತ್ತದೆ. ಬೆಳ್ಳಿ ಬಳಸಿ ಒಂದೇ ಎಳೆಯಲ್ಲಿ ಮಾಡಿದ ಕರಿಮಣಿಯ ಬ್ರೇಸ್ಲೆಟ್‌ಗಳ ಬಳಕೆ ಹೆಚ್ಚಿದೆ. ಕರಿಮಣಿಯ ಜತೆಗೆ ಕುಸುರಿ ಇರುವ ಬೆಳ್ಳಿ ಪೆಂಡೆಂಟ್‌ಗಳನ್ನು ಬಳಸಿ ಮಾಡಿದ ಬ್ಲೇಸ್ಲೆಟ್‌ಗಳು ಎಲ್ಲ ಸಮಾರಂಭಗಳಿಗೂ ಒಪ್ಪುತ್ತದೆ.

ಕರಿಮಣಿ ಆ್ಯಂಕ್ಲೆಟ್

ಸಣ್ಣ ಸಣ್ಣ ಕರಿಮಣಿ ಬಳಸಿ ಜತೆಗೆ ಹೂವಿನ ಕುಸುರಿ ಇರುವ ಕರಿಮಣಿ ಆ್ಯಂಕ್ಲೆಟ್‌ಗಳು ಕಾಲೇಜು ಯುವತಿಯರ ಮನ ಗೆದ್ದಿದೆ. ಹಾಗೆಯೇ ಕಪ್ಪು ಮಣಿಯ ಜತೆಗೆ ಇತರೆ ಬಣ್ಣದ ಮಣಿ ಸೇರಿಸಿ ಮಾಡಿದ ಆ್ಯಂಕ್ಲೆಟ್‌ಗಳು ಸದ್ಯದ ಟ್ರೆಂಡ್.

ಕರಿಮಣಿ ಬಳೆ

ತಾಳಿ ಬೊಟ್ಟು ಇರುವ ಕರಿಮಣಿ ಸರದಷ್ಟೆ ಕರಿಮಣಿ ಬಳೆಗೂ ಹಲವು ಸಮುದಾಯಗಳಲ್ಲಿ ಪ್ರಾಮುಖ್ಯತೆ ಇದೆ. ಸೀಮಂತದ ಸಮಯದಲ್ಲಿ ಗಂಡನಾದವನು ಕರಿಮಣಿ ಇರುವ ಬಂಗಾರದ ಬಳೆಗಳನ್ನು ಉಡುಗೊರೆಯಾಗಿ ನೀಡುವ ಸಂಪ್ರದಾಯ ಕೆಲವು ಕಡೆಗಳಲ್ಲಿದೆ.

ತಾಳಿ ಬೊಟ್ಟಿರುವ ಕರಿಮಣಿ ಸರದೊಂದಿಗೆ ಈ ಕರಿಮಣಿ ಬಳೆ ತೊಟ್ಟರೆ ಬೇರೆ ಯಾವ ಆಭರಣವೂ ಬೇಕೆನಿಸದು. ಅಷ್ಟರಮಟ್ಟಿಗೆ ಈ ಬಳೆ ಅದ್ದೂರಿತನದ ದ್ಯೋತಕ.

ಕರಿಮಣಿಯ ಓಲೆ

ಕರಿಮಣಿ ಇರುವ ಸ್ಟಡ್‌ಗಳು, ಲೋಲಾಕುಗಳು ಎಲಿಗೆಂಟ್ ಲುಕ್ ನೀಡುತ್ತವೆ. ಉದ್ದ ಆಕಾರದ ಕರಿಮಣಿಯ ಚಾಂಡೇಲಿಯರ್‌ಗಳು ಮದುವೆ, ಮುಂಜಿಯಂಥ ಸಮಾರಂಭಗಳಿಗೆ ಒಪ್ಪುತ್ತದೆ. ಸಣ್ಣ ಸಣ್ಣ ಕರಿಮಣಿ ಬಳಸಿ ಮಾಡಿದ ಜುಮ್ಕಾಗಳು ಎಲ್ಲ ಸಮಾರಂಭಗಳಿಗೂ ಹೇಳಿ ಮಾಡಿಸಿದ ಕಿವಿಯೋಲೆ. ಪುಟ್ಟ ಪುಟ್ಟ ಹೂಗೊಂಚಲಿನಂತೆ ಕಾಣುವ ಈ ಕರಿಮಣಿಯ ಜುಮ್ಕಾಗಳಿಗೆ ಈಗಲೂ ಬೇಡಿಕೆ ಕುಂದಿಲ್ಲ.

ಟ್ವಿನ್ಡ್ ಕರಿಮಣಿ ಕಡಗ

ತಿಪ್ಪಿದ ಹಾಗೆ ಕಾಣುವ ಟ್ವಿನ್ಡ್ ಕರಿಮಣಿ ಕಡಗವೊಂದನ್ನು ತೊಟ್ಟರೆ ಸಾಕು ಕೈಗೆ ಬೇರೆ ಆಭರಣವೇ ಬೇಡ. ಈ ಆಭರಣವು ಹಲವು ಕುಸುರಿಗಳಲ್ಲಿ ಲಭ್ಯ. ಸಾಮಾನ್ಯವಾಗಿ ಚಿನ್ನ ಹಾಗೂ ಬೆಳ್ಳಿಯ ಕರಿಮಣಿ ಕಡಗಗಳ ಬಳಕೆ ಹೆಚ್ಚಿದ್ದು, ಆನೆ, ಲಕ್ಷ್ಮಿಯ ಕುಸುರಿ ಇರುವ ಟ್ವಿನ್ಡ್ ಕರಿಮಣಿ ಕಡಗ ಹಲವು ವಿನ್ಯಾಸಗಳಲ್ಲಿ ಲಭ್ಯವಿದೆ.

ಕೆಟ್ಟದೃಷ್ಟಿ ತಾಕದಂತೆ ಕಾಯಲೆಂದು ತುಸು ದುಂಡನೆಯ ಕಪ್ಪು ಮಣಿ ಇರುವ ಸರ ಹಾಗೂ ಬಳೆಯನ್ನು ಮಕ್ಕಳಿಗೆ ತೊಡಿಸಲಾಗುತ್ತದೆ. ಚಿನ್ನ ,ಬೆಳ್ಳಿಯಲ್ಲಿ ಮಾಡಿಸಲು ಅನುಕೂಲವಿಲ್ಲದವರು ಬರೀ ಕರಿಮಣಿಯನ್ನು ದಾರದಲ್ಲಿ ಪೋಣಿಸಿ ತೊಡುವುದೂ ಇದೆ. ಇದು ನೋಡಲು ಸರಳವಾಗಿದ್ದರೂ ಸುಂದರವಾಗಿ ಕಾಣುತ್ತದೆ. ಮೊದಲೆಲ್ಲ ಕರಿಮಣಿ ಚಿನ್ನದ ಜತೆಗೆ ಹೆಚ್ಚು ಬಳಕೆಯಾಗುತ್ತಿತ್ತು. ಆದರೆ, ಈಗೀಗ ಬೆಳ್ಳಿಯಲ್ಲಿಯೂ ತಾಳಿ ಬೊಟ್ಟಿರುವ ತರಹೇವಾರಿ ಕರಿಮಣಿ ಸರಗಳನ್ನು ನೋಡಬಹುದು. ಚಂದಕ್ಕಷ್ಟೆ ಅಲ್ಲದೇ ಭದ್ರತೆಯ ದೃಷ್ಟಿಯಿಂದಲೂ ಬೆಳ್ಳಿಯ ಕರಿಮಣಿ ಸರ, ಬಳೆ, ಓಲೆಗಳು ಟ್ರೆಂಡ್ ಆಗಿವೆ. ವಯೋಭೇದವಿಲ್ಲದೇ ಎಲ್ಲರ ಗಮನ ಸೆಳೆಯುತ್ತಿವೆ.

ಬಿರು ಬಿಸಿಲಿಗೆ ಐಸ್‌ಕ್ರೀಂ

ರಸಸ್ವಾದ

ಬಿಸಿಲಿನ ಧಗೆಗೆ ಮನೆಯಲ್ಲಿಯೇ ಸುಲಭವಾಗಿ ತಯಾರಿಸಿ ಸವಿಯಬಹುದಾದ ಐಸ್ ಕ್ರೀಮ್‌ಗಳ ರೆಸಿಪಿಯನ್ನು ವೇದಾವತಿ ಎಚ್.ಎಸ್. ನೀಡಿದ್ದಾರೆ.

ಚಾಕೊಲೇಟ್ ಐಸ್ ಕ್ರೀಮ್

ಸಾಮಗ್ರಿ: 1/2 ಲೀಟರ್ ಫ್ರೆಶ್ ಕ್ರೀಮ್, 400 ಗ್ರಾಂ ಕಂಡೆನ್ಸ್ಡ್ ಮಿಲ್ಕ್, ಸಿಹಿ ಇಲ್ಲದ ಕೊಕೊ ಪೌಡರ್ 4 ಟೇಬಲ್ ಚಮಚ.

ವಿಧಾನ: ಫ್ರೆಶ್ ಕ್ರೀಮ್ ಅನ್ನು ಒಂದು ಗಂಟೆ ಫ್ರೀಜರ್‌ನಲ್ಲಿಡಿ. ಬಳಿಕ ಬೌಲಿಗೆ ಹಾಕಿ 10 ರಿಂದ 15 ನಿಮಿಷ ಚೆನ್ನಾಗಿ ಬೀಟರ್ ನಲ್ಲಿ ಬೀಟ್ ಮಾಡಿ. ಈಗ ಕಂಡೆನ್ಸ್ಡ್ ಮಿಲ್ಕ್ ಮತ್ತು ಕೊಕೊ ಪೌಡರ್ ಸೇರಿಸಿ. 8 ರಿಂದ 10 ನಿಮಿಷ ಕಡಿಮೆ ಸ್ಪೀಡ್ ನಲ್ಲಿ ಬೀಟ್ ಮಾಡಿ. ಈ ಮಿಶ್ರಣವನ್ನು ಒಂದು ಬಾಕ್ಸಿಗೆ ಹಾಕಿ ಗಟ್ಟಿಯಾಗಿ ಮುಚ್ಚಳದಿಂದ ಮುಚ್ಚಿ. ಇದನ್ನು 6 ರಿಂದ 8 ಗಂಟೆಗಳ ಕಾಲ ಫೀಜರ್ ನಲ್ಲಿಡಿ. ಬಳಿಕ ಸ್ಕೂಪ್ ನಲ್ಲಿ ತೆಗೆದು ಸವಿಯಿರಿ.

ವೆನಿಲ್ಲಾ ಕಸ್ಟರ್ಡ್ ಐಸ್ ಕ್ರೀಮ್

ಸಾಮಗ್ರಿ: ಹಾಲು 1 ಲೀಟರ್, ಕಸ್ಟರ್ಡ್ ಪೌಡರ್ 2 ಟೇಬಲ್ ಚಮಚ, ಸಕ್ಕರೆ 1/2 ಕಪ್, ವೆನಿಲ್ಲಾ ಎಸೆನ್ಸ್ 1 ಟೀ ಚಮಚ, 200 ಎಂ.ಎಲ್ ಫ್ರೆಶ್ ಕ್ರೀಮ್.

ವಿಧಾನ: ಬಾಣಲೆಗೆ ಹಾಲನ್ನು ಹಾಕಿ ಅದು ಮುಕ್ಕಾಲು ಲೀಟರ್ ಬರುವರೆಗೆ ಕುದಿಸಿ. ಬೌಲಿಗೆ ಕಸ್ಟರ್ಡ್ ಪೌಡರ್ ಹಾಕಿ ಅದಕ್ಕೆ 6 ಟೇಬಲ್ ಚಮಚ ಬೆಚ್ಚಗಿನ ಹಾಲನ್ನು ಸೇರಿಸಿ ಗಂಟಾಗದ ರೀತಿಯಲ್ಲಿ ಮಿಶ್ರಣ ಮಾಡಿ ಕುದಿಯುತ್ತಿರುವ ಹಾಲಿಗೆ ಸೇರಿಸಿ. ಬಳಿಕ ಸಕ್ಕರೆಯನ್ನು ಸೇರಿಸಿ ಕರಗುವರೆಗೂ ಮಿಶ್ರಣ ಮಾಡಿ. ಹಾಲು ದಪ್ಪವಾಗುತ್ತಾ ಬಂದಾಗ ಒಲೆಯನ್ನು ಆರಿಸಿ ವೆನಿಲ್ಲಾ ಎಸೆನ್ಸ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ ಆರಲು ಬಿಡಿ. ಪೂರ್ತಿ ಆರಿದ ಬಳಿಕ ಫ್ರೆಶ್ ಕ್ರೀಮ್ ಸೇರಿಸಿ ಮಿಶ್ರಣ ಮಾಡಿ. ಈ ಮಿಶ್ರಣವನ್ನು ಯಾವುದಾದರೂ ಗ್ಲಾಸ್ ಅಥವಾ ಪ್ಲಾಸ್ಟಿಕ್ ಬಾಕ್ಸಿಗೆ ಹಾಕಿ ಅದರ ಮೇಲೆ ಬಟರ್ ಪೇಪರ್ ಮುಚ್ಚಿ. ಇದನ್ನು 3 ರಿಂದ 4 ಗಂಟೆ ಕಾಲ ಫ್ರೀಜರ್ ನಲ್ಲಿಡಿ. ಬಳಿಕ ಫೀಜರಿನಿಂದ ತೆಗೆದು ಮಿಶ್ರಣ ಮಾಡಿ ಮಿಕ್ಸಿ ಜಾರಿಗೆ ಹಾಕಿ 2 ರಿಂದ 3 ನಿಮಿಷ ತಿರುಗಿಸಿ. ನಂತರ ಅದೇ ಬಾಕ್ಸಿಗೆ ಹಾಕಿ ಮುಚ್ಚಳ ಮುಚ್ಚಿ 8 ರಿಂದ 10 ಗಂಟೆ ಕಾಲ ಫ್ರೀಜರ್ ನಲ್ಲಿಡಿ. ಈಗ ರುಚಿಕರವಾದ ಮನೆಯಲ್ಲೇ ಸುಲಭವಾಗಿ ತಯಾರಿಸಬಹುದು.

ಎಳೆನೀರು ಗಂಜಿಯ ಐಸ್ ಕ್ರೀಮ್

ಬೇಕಾಗುವ ಸಾಮಗ್ರಿಗಳು: ಎಳೆನೀರು ತಿರುಳು 3/4 ಕಪ್ (75 ಗ್ರಾಂ), 500 ಗ್ರಾಂ (2 ಕಪ್) ಫ್ರೆಶ್ ಕ್ರೀಮ್, ಕಂಡೆನ್ಸ್ಡ್ ಮಿಲ್ಕ್ 400 ಎಂ. ಎಲ್.

ತಯಾರಿಸುವ ವಿಧಾನ: ಎಳೆನೀರು ತಿರುಳನ್ನು ಮಿಕ್ಸಿ ಜಾರಿಗೆ ಹಾಕಿ ನುಣ್ಣಗೆ ರುಬ್ಬಿಕೊಳ್ಳಿ. ಬೌಲಿಗೆ ಫ್ರೆಶ್ ಕ್ರೀಮ್ ಹಾಕಿ ಹತ್ತು ನಿಮಿಷ ಬೀಟ್ ಮಾಡಿ. ಬಳಿಕ ರುಬ್ಬಿಕೊಂಡ ಎಳೆನೀರು ಮಿಶ್ರಣ ಮತ್ತು ಕಂಡೆನ್ಸ್ಡ್ ಮಿಲ್ಕ್ ಸೇರಿಸಿ ಐದು ನಿಮಿಷ ಬೀಟ್ ಮಾಡಿ. ಈ ಮಿಶ್ರಣವನ್ನು ಒಂದು ಬಾಕ್ಸಿಗೆ ಹಾಕಿ ಮುಚ್ಚಳ ಮುಚ್ಚಿ 8 ರಿಂದ 10 ಗಂಟೆ ಫ್ರೀಜರ್ ನಲ್ಲಿಡಿ. ಬಳಿಕ ಫ್ರೀಜರ್ ನಿಂದ ತೆಗೆದು ಸವಿಯಿರಿ.

ಕಾಫಿ ಐಸ್ ಕ್ರೀಮ್

ಬೇಕಾಗುವ ಸಾಮಗ್ರಿ: ಬಿಸಿ ನೀರು 2 ಟೇಬಲ್ ಚಮಚ, 1 ಟೀ ಚಮಚ ಇನ್‌ಸ್ಟೆಂಟ್ ಕಾಫಿ ಪುಡಿ, ಫ್ರೆಶ್ ಕ್ರೀಮ್ 1 ಕಪ್, ಕೋಕೋ ಪೌಡರ್ 1 ಟೀ ಚಮಚ, ಕಂಡೆನ್ಸ್ಡ್ ಮಿಲ್ಕ್ 1/2 ಕಪ್.

ತಯಾರಿಸುವ ವಿಧಾನ: ಬಿಸಿನೀರಿಗೆ ಕಾಫಿ ಪುಡಿಯನ್ನು ಹಾಕಿ ಕರಗಿಸಿಕೊಳ್ಳಿ. ಬೌಲಿಗೆ ಕ್ರೀಮ್ ಹಾಕಿ 5 ನಿಮಿಷ ಚೆನ್ನಾಗಿ ಬೀಟ್ ಮಾಡಿ. ಬಳಿಕ ಕೋಕೋ ಪೌಡರ್, ಕಂಡೆನ್ಸ್ಡ್ ಮಿಲ್ಕ್ ಮತ್ತು ನೀರಿನಲ್ಲಿ ಕರಗಿಸಿದ ಕಾಫಿ ಪುಡಿಯನ್ನು ಸೇರಿಸಿ 5 ನಿಮಿಷ ಚೆನ್ನಾಗಿ ಬೀಟ್ ಮಾಡಿ. ಈ ಮಿಶ್ರಣವನ್ನು ಒಂದು ಬಾಕ್ಸಿಗೆ ಹಾಕಿ ಮುಚ್ಚಳ ಮುಚ್ಚಿ ಫ್ರೀಜರ್ ನಲ್ಲಿ 8 ಗಂಟೆ ಇಡಿ. ಬಳಿಕ ಸವಿಯಿರಿ.

ಮಾವಿನ ಹಣ್ಣಿನ ಐಸ್ ಕ್ರೀಮ್

ಸಾಮಗ್ರಿ: ಫ್ರೆಶ್ ಕ್ರೀಮ್ 1/2 ಲೀಟರ್, 300 ಗ್ರಾಂ ಕಂಡೆನ್ಸ್ಡ್ ಮಿಲ್ಕ್, ಸಿಹಿ ಮಾವಿನ ಹಣ್ಣಿನ ರಸ 1/2 ಕೆಜಿ.

ವಿಧಾನ: ಫ್ರೆಶ್ ಕ್ರೀಮ್ ಅನ್ನು 1 ಗಂಟೆ ಫ್ರೀಜರ್‌ನಲ್ಲಿಡಿ. ಬಳಿಕ ಅದನ್ನು ಬೌಲಿಗೆ ಹಾಕಿ ಹತ್ತು ನಿಮಿಷ ಚೆನ್ನಾಗಿ ಬೀಟರ್ ನಿಂದ ಬೀಟ್ ಮಾಡಿ. ನಂತರ ಸಿಹಿಯಾದ ಕಂಡೆನ್ಸ್ಡ್ ಮಿಲ್ಕ್, ಮಾವಿನ ಹಣ್ಣಿನ ರಸವನ್ನು ಸೇರಿಸಿ ಹತ್ತು ನಿಮಿಷ ಬೀಟ್ ಮಾಡಿ. ನಂತರ ಒಂದು ಮಾವಿನ ಹಣ್ಣನ್ನು ಚಿಕ್ಕದಾಗಿ ಕತ್ತರಿಸಿ ಮಿಶ್ರಣಕ್ಕೆ ಹಾಕಿ. ತಯಾರಿಸಿದ ಮಿಶ್ರಣವನ್ನು ಒಂದು ಬಾಕ್ಸಿಗೆ ಹಾಕಿ ಮುಚ್ಚಳ ಮುಚ್ಚಿ 6 ರಿಂದ 8 ಗಂಟೆಗಳ ಫ್ರೀಜರ್ ನಲ್ಲಿಡಿ. ಬಳಿಕ ಐಸ್ ಕ್ರೀಮ್ ಮುಚ್ಚಳ ತೆಗೆದು ಐಸ್ ಕ್ರೀಮ್ ಸ್ಕೂಪ್ ನಲ್ಲಿ ನಿಧಾನವಾಗಿ ತೆಗೆದು ಸರ್ವಿಂಗ್ ಬೌಲಿಗೆ ಹಾಕಿ. ರುಚಿಕರವಾದ ಮಾವಿನಹಣ್ಣಿನ ಐಸ್ ಕ್ರೀಮ್ ಸಿದ್ಧ.

ಮೈಸೂರು ವಿಶ್ವವಿದ್ಯಾನಿಲಯ

(ನ್ಯಾಕ್ ಸಂಸ್ಥೆಯ ಮರು ಮಾನ್ಯತೆಯಲ್ಲಿ 'ಎ' ಗ್ರೇಡ್ ಪಡೆದಿದೆ)
(ಎನ್‌ಐಆರ್‌ಎಫ್-2022: ವಿಶ್ವವಿದ್ಯಾನಿಲಯ ವರ್ಗದಲ್ಲಿ 33ನೇ ಸ್ಥಾನ ಮತ್ತು ಒಟ್ಟಾರೆ ವರ್ಗದಲ್ಲಿ 54ನೇ ಸ್ಥಾನ)
Estd 1916
ಕುಲಸಚಿವ (ಪರೀಕ್ಷಾಂಗ)ರವರ ಕಛೇರಿ, ವಿಶ್ವವಿದ್ಯಾನಿಲಯ ಕಾರ್ಯಸೌಧ, ಕ್ರಾಫರ್ಡ್ ಭವನ, ಮೈಸೂರು-570 005

ಸಂಖ್ಯೆ: ಪ.ವಿ.1.7/ಸ್ಟೇಷನರಿ/2022-23 ದಿನಾಂಕ 20-02-2024

ಟೆಂಡರ್ ಪ್ರಕಟಣೆ E-Procurement Portal ಮುಖಾಂತರ ಮಾತ್ರ

ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗಕ್ಕೆ ಅವಶ್ಯಕವಾಗಿರುವ ಓ.ಎಂ.ಆರ್. ಹಾಗೂ ಬಾರ್‌ಕೋಡೆಡ್ ಉತ್ತರ ಪತ್ರಿಕೆಗಳು ಹಾಗೂ ಲೇಖನ ಸಾಮಗ್ರಿಗಳನ್ನು ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಸರಬರಾಜು ಮಾಡಲು ಟೆಂಡರನ್ನು ಕರೆಯಲಾಗಿದೆ. **ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ:20-03-2024 ಸಂಜೆ 5.30 ಗಂಟೆಯವರೆಗೆ,** ಮತ್ತು ಸ್ವೀಕರಿಸಲಾದ ಟೆಂಡರ್‌ಗಳನ್ನು ತೆರೆಯುವ **ದಿನಾಂಕ:22-03-2024** ರಂದು ಬೆಳಿಗ್ಗೆ **11.00 ಗಂಟೆಗೆ (ರಜಾ ದಿನಗಳನ್ನು ಹೊರತುಪಡಿಸಿ)** ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಇವರ ಸಮಕ್ಷಮದಲ್ಲಿ ಟೆಂಡರ್‌ನ್ನು ತೆರೆಯಲಾಗುವುದು.

Tender Indent Number is: UOM/2023-24/IND0019, dated: 20-02-2024

ಹೆಚ್ಚಿನ ವಿವರಗಳಿಗೆ **Web site: https://kppp.karnataka.gov.in**ನ್ನು ವೀಕ್ಷಿಸುವುದು ಅಥವಾ ದೂರವಾಣಿ ಸಂಖ್ಯೆ: 0821-2419293, 2419287, 2419214, 2419204, ಅನ್ನು ಸಂಪರ್ಕಿಸುವುದು.

ಸಹಿ/-
ಕುಲಸಚಿವರು (ಪರೀಕ್ಷಾಂಗ)

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ನಗರಾಭಿವೃದ್ಧಿ ಭವನ, ನಂ. 22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿ.ಎಂ.ಟಿ.ಸಿ. ಬಸ್ ಡಿಪೋ ಹತ್ತಿರ, ಬೆಂಗಳೂರು-560 038. ಅಂತರ್ಜಾಲ ವಿಳಾಸ: www.kuidfc.com, ಇ-ಮೇಲ್ ವಿಳಾಸ: info@kuidfc.com
ದೂರವಾಣಿ: 91-80-25196100/ 124 ಫ್ಯಾಕ್ಸ್: 080-25196110
ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/Haveri/17/2023-24 ದಿನಾಂಕ: 23.02.2024

ಅಲ್ಪಾವಧಿ ಇ-ಟೆಂಡರ್ ಪ್ರಕಟಣೆ

ಕೆಯುಐಡಿಎಫ್‌ಸಿ ಸಂಸ್ಥೆಯು SBM (U) 2.0 & N.G.T ಪರಿಹಾರ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ **"Construction of 6.02 MLD Capacity SBR type Sewage Treatment Plant at Haveri City with 5 years Operational and Maintenance (Including one year Defect Liability Period)"** on DBOT model ಯೋಜನೆಗಾಗಿ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಅಹ್ವಾನಿಸಿದೆ. ಟೆಂಡರ್ ವಿವರಗಳು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(https://kppp.karnataka.gov.in)** ಲಭ್ಯವಿರುತ್ತದೆ. (1) ಟೆಂಡರ್ ಮೊತ್ತ (ಜಿ.ಎಸ್.ಟಿ ಹೊರತುಪಡಿಸಿ): **ರೂ.19.00 ಕೋಟಿ.** (2) ಮುಂಗಡ ಭದ್ರತಾ ಠೇವಣಿ: **ರೂ.19.00 ಲಕ್ಷ.** (3) ಇ-ಪ್ರೊಕ್ಯೂರ್‌ಮೆಂಟ್ ಅಂತರ್ಜಾಲದಲ್ಲಿ ಟೆಂಡರ್ ದಸ್ತಾವೇಜು ಲಭ್ಯವಿರುವ ದಿನಾಂಕ: **23.02.2024.** (4) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ **14.03.2024.** ಆಸಕ್ತ ಟೆಂಡರ್‌ದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆಯುಐಡಿಎಫ್‌ಸಿ

ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿರವರ ಕಛೇರಿ.
ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್,
ಕಮಲಾಪುರ ಹೊಸಪೇಟೆ ತಾಲ್ಲೂಕು ವಿಜಯನಗರಜಿಲ್ಲೆ
(ಕರ್ನಾಟಕ ಮೃಗಾಲಯ ಪ್ರಾಧಿಕಾರದಒಂದುಘಟಕ)
ಸಂಖ್ಯೆ: ಅಬಿವಾಮೃಕ/ಟೆಂಡರ್/ಮಾಂಸಹಾರ/04/2023-24 ದಿನಾಂಕ: 22.02.2024

ಸವಿವರಟೆಂಡರ್ ಪ್ರಕಟಣೆ

ಶ್ರೀ ಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್, ಕಮಲಾಪುರ ಮೃಗಾಲಯಕ್ಕೆ, ಒಂದು ವರ್ಷದ ಅವಧಿಗೆ ಅಗತ್ಯವಿರುವ ಈ ಕೆಳಕಂಡ 1 ಘಟಕವಾರು ಆಹಾರ/ಸಂಕೀರ್ಣ ಪದಾರ್ಥಗಳನ್ನು ಸರಬರಾಜು ಮಾಡಲು ಕರ್ನಾಟಕ ಮೃಗಾಲಯ ಪ್ರಾಧಿಕಾರದ ನಿಯಮಾವಳಿಗಳ ಪ್ರಕಾರ ಈ ಮೃಗಾಲಯದಲ್ಲಿ ನೋಂದಾಯಿಸಿರುವ ಗುತ್ತಿಗೆದಾರರುಗಳಿಂದಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಕೆಟಿಪಿಪಿ ಕಾಯ್ದೆಇ-ಪೋರ್ಟಲ್‌ಮೂಲಕ ಘಟಕವಾರು ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಇಂಡೆಂಟ್ ಸಂಖ್ಯೆ:ZAK/2023-24/IND0024. ವಾರ್ಷಿಕ ಅಂದಾಜು ಮೊತ್ತ ರೂ.ಲಕ್ಷಗಳಲ್ಲಿ: 86,27,203.00 ಇ.ಎಂ.ಡಿ. ಮೊತ್ತ ರೂ.ಗಳಲ್ಲಿ (10% ಜಿ.ಸಿ. ನಿರ್ಣಯ): 8,62,720.00**

ಈ ಟೆಂಡರ್ ಪ್ರಕಟಣೆ ಪ್ರತಿಯು **https://kppp.karnataka.gov.in** ಇಲ್ಲಿ ಲಭ್ಯವಿರುತ್ತದೆ. ಟೆಂಡರ್ ವಿವರಗಳು ಇ-ಪ್ರಕ್ಯೂರಮೆಂಟ್‌ನಲ್ಲಿ ಲಭ್ಯವಾಗುವ **ದಿನಾಂಕ: 21.02.2024,** ಪೂರ್ವಬಾವಿ ಸಭೆ **ದಿನಾಂಕ: 28.02.2024** ಬೆಳಿಗ್ಗೆ 11.35 ಗಂಟೆಗೆಕೊನೆಯ **ದಿನಾಂಕ: 11.03.2024** ಸಾಯಂಕಾಲ 4.30 ಗಂಟೆವರೆಗೆತಾಂತ್ರಿಕ ಬಿಡ್‌ಟೆಂಡರ್‌ತೆರೆಯುವ **ದಿನಾಂಕ: 12.03.2024** ಸಾಯಂಕಾಲ 4.35 ಗಂಟೆಗೆ ಮತ್ತುಆರ್ಥಿಕ ಬಿಡ್‌ಟೆಂಡರ್‌ತೆರೆಯುವ **ದಿನಾಂಕ: 14.03.2024** ಬೆಳಿಗ್ಗೆ 11.30 ಗಂಟೆಯ ನಂತರ ಹೆಚ್ಚಿನ ವಿವರಗಳನ್ನು ಇ-ಪೋರ್ಟಲ್‌ನಲ್ಲಿ ಹಾಕಿರುವ ಸವಿವರಟೆಂಡರ್ ಪ್ರಕಟಣೆಯಿಂದ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ನಿರ್ದೇಶಕರು, ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಶ್ರೀ ಅಟಲ್‌ಬಿಹಾರಿ ವಾಜಪೇಯಿಜೂಲಾಜಿಕಲ್ ಪಾರ್ಕ್, ಕಮಲಾಪುರ. ಹೊಸಪೇಟೆತಾ॥. ವಿಜಯನಗರಜಿಲ್ಲೆ.
ಡಿಐಪಿಆರ್/ವಿಜಯನಗರ/431/ಕೆಎಸ್‌ಎಂಸಿಎ/2023-24

ಕರ್ನಾಟಕ ಸರ್ಕಾರ
ಕರ್ನಾಟಕ ಅರಣ್ಯ ಇಲಾಖೆ
ಶಿರಸಿ ವಿಭಾಗ, ಶಿರಸಿ
ಶಿರಸಿ ವಿಭಾಗ, ಶಿರಸಿಯ ಜಿಟಿಡಿ, ಮನ್‌ಮನೆ ಮತ್ತು ಜಿಟಿಡಿ, ಚಿಪ್‌ಗಿ ಯಲ್ಲಿ ಟಿಂಬರ್‌ನ ಇ-ಟೆಂಡರ್‌ನ ವಿವರವಾದ ಪ್ರಕಟಣೆ
ಕರ್ನಾಟಕ ಅರಣ್ಯ ಕೋಡ್, 1978
ಅನುಬಂಧ -XVIII A (ನಿಯಮ 64)

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ಅರಣ್ಯ ಸಂಪನ್ಮೂಲ ನಿರ್ವಹಣೆ) ಬೆಂಗಳೂರು ರವರ ಕಚೇರಿ ಪತ್ರ ಕ್ರ.ಸಂ.ಅಸಂನಿಅ/ಅಸಂಸ(ಅ.ಸಂ.ನಿ) ಬೆಂಗಳೂರು ರವರ ಕ.ಪ.ಸಂ.ಅಸಂನಿಅ(ಅಸಂನಿ) "ಬಿನಿಕ್‌ಗ/ಟಿಆರ್-6:2022-23 ದಿ: 05-02-2024"
ಸಂಖ್ಯೆ: A4/DTS/April Sale/CR-5/2023-24 ದಿನಾಂಕ: 07-02-2024
ಸಾರ್ವಜನಿಕರ ಸಮಾಚಾರಕ್ಕಾಗಿ ಈ ಮೂಲಕ ಪ್ರಕಟಪಡಿಸುವುದೇನೆಂದರೆ, ಶಿರಸಿ ವಿಭಾಗ, ಶಿರಸಿಯ ಸಿದ್ದಾಪುರ ವಲಯದ ಮನ್‌ಮನೆ ಯಲ್ಲಿನ ಸರ್ಕಾರಿ ಟಿಂಬರ್ ಡಿಪೋ ಮತ್ತು ಜಿಟಿಡಿ, ಚಿಪ್‌ಗಿಯಲ್ಲಿ ದಾಸ್ತಾನು ಮಾಡಿರುವ ಮಾರಾಟದ ಟಿಂಬರ್ ಮತ್ತು ಇತರೆ ಅರಣ್ಯ ಉತ್ಪನ್ನಗಳನ್ನು ದಿನಾಂಕ: **05-04-2024, 08-04-2024 (ಎಲ್ಲಾ ನಾಲ್ಕು ಸೆಷನ್) ಮತ್ತು 10-04-2024 (1 ಮತ್ತು 2 ಸೆಷನ್)** ಬೆಳಿಗ್ಗೆ 10.00 ಗಂಟೆಯಿಂದ ಎಲ್ಲಾ ಲಾಟುಗಳಿಗೆ ಬಿಡ್ಡಿಂಗ್ ಪೂರ್ಣವಾಗುವವರೆಗೆ ಒಂದು ಅಥವಾ ಹೆಚ್ಚು ಸೆಷನ್‌ಗಳಲ್ಲಿ ಏರ್ಪಡಿಸಿ ಇ-ಟೆಂಡರ್ ಹಾಗೂ ಹರಾಜಿನ ವಿಧಾನದ ಮೂಲಕ ಮಾರಾಟ ಮಾಡಲಾಗುವುದು. ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ ಇವರು ಮಾರಾಟ ನಡೆಸುವ ಅಧಿಕಾರ ಹೊಂದಿರುತ್ತಾರೆ.

ಯಾವುದೇ ಸ್ಪಷ್ಟೀಕರಣಕ್ಕಾಗಿ, ನೀವು ಸಂಪರ್ಕಿಸಬಹುದು:
Range Forest Officer, GTD.Chipgi
gtdchipgi.srs@gmail.com Ph: 08384-236285
Range Forest Officer, Siddapur
rfosdp@gmail.com Ph: 08389-230202
Deputy Conservator of Forests, Sirsi Division, Sirsi
dcfsirsi@gmail.com Ph: 08384-226445

ಸಹಿ/- (ಡಾ. ಅಜ್ಜಯ್ಯ ಜಿ.ಆರ್) ಭಾ.ಅ.ಸೇ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಶಿರಸಿ ವಿಭಾಗ, ಶಿರಸಿ
DIPR/KWR/KSMCA/737/23-24 Dt.22.02.2024

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ,ಹೊಲಾಲುವೆ ವಿಭಾಗ-4,ಆಲಮೇಲ, ಜಿ॥ ವಿಜಯಪುರ
ದೂರವಾಣಿ ಸಂ:08488-232016.ಇ-ಮೇಲ್:eefic4@gmail.com
ಸಂ:ಕೃಭಾಜನಿನಿ/ಹೊವಿ-4/ತಾಂತ್ರಿಕ/ಟೆನ್ಡರ್-1/2023-24/413 ದಿನಾಂಕ:22.02.2024

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
ಶೇಕಡಾವಾರು ಟೆಂಡರ್ ಆಹ್ವಾನ (ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಮಾನ್ಯ ಆಡಳಿತಾಧಿಕಾರಿಗಳು ಕೃಷ್ಣಾ-ಕಾಡಾ, ಭೀಮರಾಯನಗುಡಿ ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಹೊಲಾಲುವೆ ವಿಭಾಗ-4, ಆಲಮೇಲ ಇವರಿಂದ 2024-25 ನೇ ಸಾಲಿಗೆ ಸಂಬಂಧಿಸಿದಂತೆ ಕೃಷ್ಣಾ ಕಾಡಾ ಭೀಮರಾಯನಗುಡಿ ಅಧೀನದಲ್ಲಿಯ ವಿವಿಧ ಕಛೇರಿಗಳಿಗೆ ಕಂಪ್ಯೂಟರ್ ಆಪರೇಟರ್/ಬೆರಳಚ್ಚುಗಾರರು-01, ವಾಹನ ಚಾಲಕರು-04, ಸಿಪಾಯಿ/ಕಾವಲುಗಾರರು-02, ಗ್ರೂಪ್-ಸಿ ಮತ್ತು ಗ್ರೂಪ್-ಡಿ ಹುದ್ದೆಗಳಿಗೆ ನೌಕರರನ್ನು ದಿನಾಂಕ: 01.04.2024 ರಿಂದ 31.03.2025 ರ ವರೆಗೆ (1 ವರ್ಷದ ಅವಧಿಗೆ) ಹೊರಗುತ್ತಿಗೆ ಆಧಾರದ ಮೇಲೆ ಒದಗಿಸುವ ಕಾರ್ಯವನ್ನು ಹೊರಗುತ್ತಿಗೆ ಆಧಾರದ ಮೇರೆಗೆ ಸೇವೆ ನಿರ್ವಹಿಸಲು ಇಚ್ಛಿಸುವ ಅರ್ಹ ನೋಂದಾಯಿತ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಏಕ ಲಕೋಟೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಕೆಳಗೆ ಸಹಿ ಮಾಡಿದವರ ಕಛೇರಿ ಸಮಯದಲ್ಲಿ/ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ.

ಟೆಂಡರ್ ಪ್ರಕ್ರಿಯ ದಿನಾಂಕಗಳು:- 1) ಟೆಂಡರ್ ಪ್ರಕಟಣೆ ಸಂಖ್ಯೆ: 413 ದಿನಾಂಕ: 22.02.2024 2) ಈ-ಟೆಂಡರ್ ಲಭ್ಯವಾಗುವ ದಿನಾಂಕ: 27.02.2024 ಮುಂಜಾನೆ 11.00 ಗಂಟೆ. 3) ಟೆಂಡರ್ ವಿಚಾರಣೆಗೆ ಕೊನೆಯ ದಿನಾಂಕ: 06.03.2024 ಸಂಜೆ 4.00 ಗಂಟೆ 4) ಈ-ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 07.03.2024 ಸಂಜೆ 5.00 ಗಂಟೆ ವರೆಗೆ 5) ಆರ್ಥಿಕ ಲಕೋಟೆ ತೆರೆಯುವ ದಿನಾಂಕ: 11.03.2024 ಮುಂಜಾನೆ 11.00 ಗಂಟೆಗೆ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಹೊಲಾಲುವೆ ವಿಭಾಗ-4, ಆಲಮೇಲ.
ವಾ.ಸಾಂಸಂ/ವಿಜಯಪುರ/500/ಕೆಎಸ್‌ಎಂಸಿಎ/2023-24

भारतीय रिज़र्व बैंक
RESERVE BANK OF INDIA
www.rbi.org.in

दिनांक 31 जनवरी 2024 और 16 फरवरी 2024 की प्रेस विज्ञप्ति के माध्यम से पेटीएम पेमेंट्स बैंक लिमिटेड पर लगाए गए कारोबारी प्रतिबंध
अक्सर पूछे जाने वाले प्रश्न (एफ़एक्यू)

पेटीएम पेमेंट्स बैंक में बैंक खाते

1. **मेरा बचत/चालू खाता पेटीएम पेमेंट्स बैंक में है। क्या मैं 15 मार्च 2024 के बाद भी इस खाते से आहरण (पैसे निकालना) जारी रख सकता हूँ? क्या मैं पेटीएम पेमेंट्स बैंक द्वारा जारी अपने डेबिट कार्ड का उपयोग जारी रख सकता हूं?**
हाँ। आप अपने खाते में उपलब्ध शेष राशि तक धनराशि का उपयोग, आहरण या अंतरण जारी रख सकते हैं।
इसी प्रकार, आप अपने खाते में उपलब्ध शेष राशि तक धनराशि निकालने या अंतरित करने के लिए अपने डेबिट कार्ड का उपयोग जारी रख सकते हैं।
2. **मेरा बचत/चालू खाता पेटीएम पेमेंट्स बैंक में है। क्या मैं 15 मार्च 2024 के बाद इस खाते में धनराशि जमा या अंतरित कर सकता हूँ?**
नहीं। 15 मार्च 2024 के बाद आप पेटीएम पेमेंट्स बैंक के अपने खाते में धनराशि जमा नहीं कर पाएंगे। ब्याज, कैशबैक, साझेदार बैंकों से स्वीप-इन या रिफंड के अलावा किसी भी क्रेडिट या जमाराशि को जमा करने की अनुमति नहीं।
3. **मुझे 15 मार्च 2024 के बाद पेटीएम पेमेंट्स बैंक के अपने खाते में एक रिफंड प्राप्त होना है। क्या यह रिफंड मेरे खाते में जमा किया जाएगा?**
हाँ। 15 मार्च, 2024 के बाद भी आपके खाते में रिफंड, कैशबैक, साझेदार बैंकों से स्वीप-इन या ब्याज जमा करने की अनुमति होगी।
4. **'स्वीप इन/आउट' व्यवस्था के माध्यम से साझेदार बैंकों के पास रखी गई जमा राशि का 15 मार्च, 2024 के बाद क्या होगा?**
साझेदार बैंकों में रखी पेटीएम पेमेंट्स बैंक के ग्राहकों की मौजूदा जमाराशि को पेटीएम पेमेंट्स बैंक के खातों में वापस (स्वीप-इन) किया जा सकता है, जो कि पेमेंट्स बैंक के लिए निर्धारित शेष राशि की अधिकतम सीमा (अर्थात प्रति ग्राहक ₹2 लाख प्रतिदिन) के अधीन है। ग्राहक द्वारा उपयोग या आहरण के लिए शेष राशि उपलब्ध कराने के उद्देश्य से ऐसे स्वीप-इन की अनुमति जारी रहेगी। हालाँकि, 15 मार्च 2024 के बाद पेटीएम पेमेंट्स बैंक के माध्यम से साझेदार बैंकों के साथ किसी नई जमा की अनुमति नहीं दी जाएगी।
5. **मेरा वेतन पेटीएम पेमेंट्स बैंक के मेरे खाते में जमा किया जाता है। क्या मैं इस खाते में अपना वेतन प्राप्त करना जारी रख सकता हूँ?**
नहीं। 15 मार्च 2024 के बाद, आप पेटीएम पेमेंट्स बैंक के साथ अपने खाते में ऐसी कोई राशि प्राप्त नहीं कर पाएंगे। यह सलाह दी जाती है कि असुविधा से बचने के लिए आप 15 मार्च 2024 से पहले किसी अन्य बैंक के साथ वैकल्पिक व्यवस्था कर लें।
6. **मुझे सरकार से पेटीएम पेमेंट्स बैंक के अपने खाते में आधार से जुड़ी सब्सिडी/प्रत्यक्ष लाभ के अंतरण (डाइरैक्ट बेनिफिट ट्रांसफर) प्राप्त होते हैं। क्या मैं इसे इस खाते में प्राप्त करना जारी रख सकता हूँ?**
नहीं। 15 मार्च 2024 के बाद, आप पेटीएम पेमेंट्स बैंक के अपने खाते में ऐसी कोई राशि प्राप्त नहीं कर पाएंगे। किसी भी असुविधा या व्यवधान से बचने के लिए कृपया अपने लिंक किए गए खाते को 15 मार्च 2024 से पहले बदलकर अन्य बैंक में करने की व्यवस्था करें।
7. **मेरा मासिक बिजली बिल पेटीएम बैंक लिमिटेड के मेरे बैंक खाते से स्वचालित रूप से भुगतान किया जाता है। क्या यह जारी रह सकता है?**
आहरण/डेबिट संबंधी अधिदेश (जैसे नेशनल ऑटोमेटेड क्लियरिंग हाउस (एनएसीएच) अधिदेश) आपके खाते में उपलब्ध शेष राशि तक जारी रहेंगे। हालाँकि, 15 मार्च 2024 के बाद आपके खातों में क्रेडिट या जमा की अनुमति नहीं होगी। इसलिए, असुविधा से बचने के लिए, यह सलाह दी जाती है कि आप 15 मार्च 2024 से पहले किसी अन्य बैंक के माध्यम से वैकल्पिक व्यवस्था कर लें।
8. **मेरी मासिक ओटीटी सदस्यता का भुगतान पेटीएम पेमेंट्स बैंक के मेरे बैंक खाते से यूपीआई के माध्यम से स्वचालित रूप से किया जाता है। क्या यह जारी रह सकता है?**
स्वचालित यूपीआई अधिदेशों के माध्यम से आहरण/डेबिट संबंधी अधिदेश आपके खाते में उपलब्ध शेष राशि तक जारी रहेंगे। हालाँकि, 15 मार्च 2024 के बाद आपके खातों में क्रेडिट या जमा की अनुमति नहीं होगी। इसलिए, असुविधा या व्यवधान से बचने के लिए यह सलाह दी जाती है कि आप 15 मार्च 2024 से पहले किसी अन्य बैंक के माध्यम से वैकल्पिक व्यवस्था कर लें।
9. **मेरे ऋण की किस्त (ईएमआई) का भुगतान पेटीएम पेमेंट्स बैंक में मेरे खाते के माध्यम से स्वचालित रूप से किया जाता है। क्या यह जारी रह सकता है?**
आपके खाते में उपलब्ध शेषराशि तक ऑटो डेबिट अधिदेश जारी रहेंगे। हालाँकि, 15 मार्च 2024 के बाद आपके खातों में क्रेडिट या जमा की अनुमति नहीं होगी। इसलिए, असुविधा से बचने के लिए, यह सुझाव दिया जाता है कि आप 15 मार्च 2024 से पहले किसी अन्य बैंक के माध्यम से ईएमआई भुगतान शुरू करने की वैकल्पिक व्यवस्था कर लें।
10. **मेरे ऋण की किस्त (ईएमआई) का भुगतान पेटीएम पेमेंट्स बैंक के अलावा अन्य बैंक में मेरे खाते के माध्यम से स्वचालित रूप से किया जाता है। क्या यह जारी रह सकता है?**
हां, पेटीएम पेमेंट्स बैंक के अलावा किसी भी बैंक में पंजीकृत ईएमआई जारी रह सकती है।

पेटीएम पेमेंट्स बैंक वॉलेट

11. **मेरे पास पेटीएम पेमेंट्स बैंक का वॉलेट है। क्या मैं 15 मार्च 2024 के बाद भी इस वॉलेट से पैसे का उपयोग करना जारी रख सकता हूँ?**
हाँ। आप वॉलेट में उपलब्ध शेष राशि का उपयोग, निकासी या किसी अन्य वॉलेट अथवा बैंक खाते में ट्रान्सफर के लिए जारी रख सकते हैं। हालाँकि, न्यूनतम केवाईसी वॉलेट केवल व्यापारी भुगतान के लिए वॉलेट का उपयोग कर सकते हैं।
12. **मेरे पास पेटीएम पेमेंट्स बैंक का वॉलेट है। क्या मैं 15 मार्च 2024 के बाद इस वॉलेट में टॉप-अप या पैसे ट्रांसफर कर सकता हूँ? क्या मैं 15 मार्च 2024 के बाद किसी अन्य व्यक्ति से इस वॉलेट में पैसे प्राप्त कर सकता हूँ?**
नहीं। 15 मार्च 2024 के बाद आप वॉलेट में टॉप-अप या पैसे ट्रांसफर नहीं कर पाएंगे अथवा इस वॉलेट में कैशबैक या रिफंड के अलावा कोई क्रेडिट प्राप्त नहीं कर पाएंगे।
13. **मेरे वॉलेट में पेटीएम पेमेंट्स बैंक से कैशबैक बकाया है। क्या मुझे यह कैशबैक 15 मार्च 2024 के बाद प्राप्त हो सकता है?**
हाँ। रिफंड और कैशबैक जमा करने की अनुमति है।
14. **मेरे पास पेटीएम पेमेंट्स बैंक का वॉलेट है। क्या मैं इस वॉलेट को बंद कर सकता हूं और शेष राशि किसी अन्य बैंक के अपने बैंक खाते में ट्रान्सफर कर सकता हूं?**
हाँ। आप अपने वॉलेट को बंद करने और पूर्ण केवाईसी वॉलेट के मामले में शेष राशि को किसी अन्य बैंक में रखे गए खाते में अंतरित करने के लिए पेटीएम पेमेंट्स बैंक से संपर्क करें या इसके बैंकिंग ऐप का उपयोग करें। न्यूनतम केवाईसी वॉलेट[1] के मामले में, आप उपलब्ध शेष राशि का उपयोग कर सकते हैं या रिफ़ंड के लिए अनुरोध कर सकते हैं।

[1]मौजूदा निदेशों के अनुसार, पीपीआई धारक का न्यूनतम विवरण प्राप्त करने के बाद बैंकों और गैर-बैंकों द्वारा छोटे प्री-पेड इंस्ट्रूमेंट्स (पीपीआई) जारी किए जाते हैं। इनका उपयोग केवल वस्तुओं और सेवाओं की खरीद के लिए किया जा सकता है। ऐसे पीपीआई से फंड ट्रांसफर या नकद निकासी की अनुमति नहीं है।

पेटीएम पेमेंट्स बैंक द्वारा जारी फास्टैग

(फास्टैग के बारे में अधिक जानकारी के लिए आप IHMCL की वेबसाइट https://ihmcl.co.in विजिट करें)

15. **मेरे पास पेटीएम पेमेंट्स बैंक द्वारा जारी फास्टैग है। क्या मैं 15 मार्च 2024 के बाद टोल भुगतान के लिए इसका उपयोग जारी रख सकता हूं?**
ಪರೀಕ್ಷೆಗಳಲ್ಲಿ ನಕಲು, ಅಕ್ರಮ ನಡೆದ ವರದಿಗಳು ದೇಶದ ಎಲ್ಲ ಕಡೆಗಳಿಂದಲೂ ಮತ್ತೆ ಮತ್ತೆ ಬರುತ್ತಲೇ ಇರುತ್ತವೆ. ಇಂತಹ ಕೃತ್ಯಗಳ ಹಿಂದೆ ರಾಜಕೀಯ ಆಯಾಮಗಳೂ ಇರುತ್ತವೆ. ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರ ಪರೀಕ್ಷಾ ಅಕ್ರಮಗಳ ವರದಿಯಾದಾಗ ಆಡಳಿತಾರೂಢ ಪಕ್ಷವು ಅದಕ್ಕೆ ಕಾರಣ ಎಂದು ವಿರೋಧ ಪಕ್ಷಗಳು ಆರೋಪಿಸುತ್ತವೆ. ಕಳೆದ ಐದು ವರ್ಷಗಳಲ್ಲಿ, ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದ ಕನಿಷ್ಠ 41 ಪ್ರಕರಣಗಳು 15 ರಾಜ್ಯಗಳಲ್ಲಿ ಸರ್ಕಾರಿ ಹುದ್ದೆಗಳಿಗೆ ನಡೆದ ನೇಮಕಾತಿ ಪ್ರಕ್ರಿಯೆಗಳಿಗೆ ಅಡ್ಡಿಯಾಗಿ ಪರಿಣಮಿಸಿವೆ. ಇದರಿಂದಾಗಿ ಅಂದಾಜು ಒಂದು ಲಕ್ಷ ಹುದ್ದೆಗಳಿಗೆ ಅರ್ಜಿ ಸಲ್ಲಿಸಿದ್ದ 1.4 ಕೋಟಿ ಅಭ್ಯರ್ಥಿಗಳಿಗೆ ತೊಂದರೆ ಆಗಿದೆ. ಕೆಲವು ಪ್ರಕರಣಗಳಲ್ಲಿ, ಅಕ್ರಮಗಳ ಕಾರಣದಿಂದಾಗಿ ರದ್ದಾದ ಪರೀಕ್ಷೆಗಳು ತಿಂಗಳುಗಳು ಕಳೆದರೂ ಮತ್ತೆ ನಡೆದಿಲ್ಲ. ಅಂಗೀಕಾರ ಪಡೆದಿರುವ ಮಸೂದೆಯು ಒಟ್ಟು 15 ಬಗೆಯ ಕೃತ್ಯಗಳನ್ನು 'ಅಕ್ರಮ' ಎಂದು ಗುರುತಿಸಿದೆ. ಇವುಗಳಲ್ಲಿ ಪ್ರಶ್ನೆಪತ್ರಿಕೆಗಳ ಹಾಗೂ ಉತ್ತರ ಪತ್ರಿಕೆಗಳ ಸೋರಿಕೆ ಕೂಡ ಸೇರಿವೆ. ತಪ್ಪು ಎಸಗಿದವರಿಗೆ ಗರಿಷ್ಠ 10 ವರ್ಷಗಳ ಜೈಲುಶಿಕ್ಷೆ ಮತ್ತು ₹ 1 ಕೋಟಿ ದಂಡ ವಿಧಿಸಲು ಅವಕಾಶ ಇದೆ. ಪ್ರಶ್ನೆಪತ್ರಿಕೆ ಸೋರಿಕೆ ಹಿಂದೆ ಸಂಘಟಿತ ಯತ್ನವೊಂದು ನಡೆದಿದ್ದರೆ ಅದಕ್ಕೆ ಕಠಿಣ ಶಿಕ್ಷೆ ವಿಧಿಸುವ ಪ್ರಸ್ತಾವ ಮಸೂದೆಯಲ್ಲಿ ಇದೆ. ಮಸೂದೆಯು ವ್ಯಾಖ್ಯಾನಿಸಿರುವ ಅಪರಾಧಗಳು ಜಾಮೀನುರಹಿತವಾಗಿರುತ್ತವೆ, ಗಂಭೀರ ಸ್ವರೂಪದ್ದು ಎಂದು ಪರಿಗಣಿಸಲಾಗುತ್ತವೆ. ವಾರಂಟ್ ಇಲ್ಲದೆಯೇ ಪೊಲೀಸರು ಕ್ರಮಕ್ಕೆ ಮುಂದಾಗಬಹುದು, ಅಪರಾಧ ಎಸಗಿದವರು ಮಾತುಕತೆಯ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಳ್ಳಲು ಅವಕಾಶ ಇರುವುದಿಲ್ಲ.

ಇವು ಕಠಿಣ ಕ್ರಮಗಳು ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ಪರೀಕ್ಷೆಗಳಲ್ಲಿ ನಡೆಯುವ ಅಕ್ರಮಗಳನ್ನು ಅಪರಾಧ ಮತ್ತು ಶಿಕ್ಷೆ ಎಂಬ ಎರಡೇ ಆಯಾಮಗಳಿಂದ ನೋಡಬೇಕಿಲ್ಲ. ಸಮಾಜದ ನೈತಿಕತೆಯಲ್ಲಿ ಕಂಡುಬಂದಿರುವ ಕುಸಿತದ ಲಕ್ಷಣಗಳಲ್ಲಿ ಇದು ಕೂಡ ಒಂದು ಎಂದು ಕಾಣಬೇಕು. ತಮ್ಮ ಗುರಿಯನ್ನು ಸಾಧಿಸಿಕೊಳ್ಳಲು ಕೆಲವರು ಯಾವ ಹಾದಿಯನ್ನೂ ತುಳಿಯಲು ಸಿದ್ಧರಾಗುವ ಕಾರಣದಿಂದಾಗಿ ಇಂತಹ ಅಕ್ರಮಗಳು ನಡೆಯುತ್ತವೆ. ವ್ಯಾಪಕವಾಗಿರುವ ನಿರುದ್ಯೋಗ ಮತ್ತು ಎಲ್ಲ ಕ್ಷೇತ್ರಗಳಲ್ಲಿ ಅವಕಾಶಗಳನ್ನು ಬಾಚಿಕೊಳ್ಳಲು ನಡೆಯುವ ಸ್ಪರ್ಧೆಯನ್ನು ಈ ಅಕ್ರಮಗಳು ತೋರಿಸುತ್ತವೆ. ದೇಶದ ಆರ್ಥಿಕ ವ್ಯವಸ್ಥೆ ಮತ್ತು ಸಮಾಜವು ಎಲ್ಲರಿಗೂ ಬೇಕಿರುವಷ್ಟು ಅವಕಾಶಗಳನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ. ಇಂತಹ ಪರಿಸ್ಥಿತಿಯು ಕ್ರಿಮಿನಲ್ ಅಪರಾಧಗಳನ್ನು ಎಸಗುವುದಕ್ಕೆ ಮತ್ತು ಅನೈತಿಕ ಹಾದಿ ತುಳಿಯುವುದಕ್ಕೆ ದಾರಿ ಮಾಡಿಕೊಡುವಂತೆ ಇದೆ. ಪರೀಕ್ಷೆಗಳಲ್ಲಿ ಅಕ್ರಮಗಳು ದೇಶದ ಯುವಕರನ್ನು ಹೆಚ್ಚಾಗಿ ಬಾಧಿಸುತ್ತವೆ. ಹೀಗಾಗಿಯೇ ಸರ್ಕಾರಗಳು ಈ ವಿಚಾರದಲ್ಲಿ ಅವರ ಬಗ್ಗೆ ಹೆಚ್ಚು ಕಳಕಳಿ ಹೊಂದಿರಬೇಕು. ಈ ಕಳಕಳಿಯ ಪರಿಣಾಮವಾಗಿ ಈ ಮಸೂದೆ ರೂಪುಗೊಂಡಿದೆ.

ದಿನದ ಟ್ವೀಟ್

ವಿರೋಧಿಗಳಿಗೆ ಕಿರುಕುಳ...

ಆಡಳಿತಾರೂಢ ಪಕ್ಷಗಳಿಂದ ರಾಜಕೀಯ ವಿರೋಧಿಗಳಿಗೆ ಕಿರುಕುಳ ನೀಡುವ ಆರೋಪಗಳು ಕೇಳಿಬಂದಾಗ, ನಮ್ಮ ನ್ಯಾಯಾಂಗ ವ್ಯವಸ್ಥೆಯು ಹೆಚ್ಚು ಕ್ರಿಯಾಶೀಲವಾಗಿ ಇರಬೇಕು. ಇದು, ಕೇಂದ್ರ ಮತ್ತು ರಾಜ್ಯ ಸರ್ಕಾರ ಎರಡಕ್ಕೂ ಅನ್ವಯಿಸುತ್ತದೆ.

ಜಸ್ವಂತ್ ಸಿಂಗ್ ಕುಮಾರ್, ನಿವೃತ್ತ ನ್ಯಾಯಾಧೀಶ

ಕಿಡಿನುಡಿ

ಸರ್ಕಾರಿ ನೌಕರರಿಗೆ ಭ್ರಷ್ಟಾಚಾರ ಮಾಡಲು ಅಗತ್ಯವೇ ಇಲ್ಲದಷ್ಟು ಉತ್ತಮ ಸಂಬಳವನ್ನು ಸರ್ಕಾರ ನೀಡುತ್ತಿದೆ. ಆದರೂ ಅತಿಯಾದ ದುರಾಸೆಗೆ ಬೀಳುವ ನೌಕರರು ಭ್ರಷ್ಟಾಚಾರಕ್ಕೆ ಇಳಿಯುತ್ತಾರೆ.

ನ್ಯಾಯಮೂರ್ತಿ ಬಿ.ಎಸ್.ಪಾಟೀಲ, ಕರ್ನಾಟಕ ಲೋಕಾಯುಕ್ತ

25 ವರ್ಷಗಳ ಹಿಂದೆ

ಬುಧವಾರ, 24-2-1999

● ಬಿಹಾರ ಪ್ರತಿಧ್ವನಿ: ಸಂಸತ್ ಉಭಯ ಸದನ ಕಲಾಪ ಮುಂದಕ್ಕೆ

ನವದೆಹಲಿ, ಫೆ. 23– ಬಿಹಾರದ ರಾಬ್ಡಿದೇವಿ ನೇತೃತ್ವದ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಜಾರಿಗೆ ತಂದುದನ್ನು ರಾಷ್ಟ್ರೀಯ ಜನತಾದಳ ಮತ್ತು ಸಮಾಜವಾದಿ ಪಕ್ಷದ ಸದಸ್ಯರು ಇಂದು ತೀವ್ರವಾಗಿ ಪ್ರತಿಭಟಿಸಿ, ಗದ್ದಲ ಮತ್ತು ಕೋಲಾಹಲ ಉಂಟು ಮಾಡಿದ್ದರಿಂದ, ಸಂಸತ್‌ನ ಉಭಯ ಸದನಗಳು ಕಲಾಪವಿಲ್ಲದೆ ಮುಂದಕ್ಕೆ ಹೋದವು.

ರಾಜ್ಯಸಭೆಯು ಯಾವುದೇ ಕಲಾಪವಿಲ್ಲದೆ ನಾಳೆಗೆ ಮುಂದಕ್ಕೆ ಹೋಯಿತು. ಆದರೆ ಲೋಕಸಭೆಯು ಪ್ರಶ್ನೋತ್ತರ ವೇಳೆಯನ್ನು ಮುಗಿಸಿತಾದರೂ ಮಧ್ಯಪ್ರದೇಶ, ಗುಜರಾತ್ ಮತ್ತು ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ನಡೆದ ಹಿಂಸಾಚಾರದ ಘಟನೆಗಳು ಪ್ರತಿಧ್ವನಿಸಿದವು. ಪ್ರಶ್ನೋತ್ತರ ಅವಧಿ ಮುಗಿದ ಕೂಡಲೇ ಇಲ್ಲಿಯೂ ಕೋಲಾಹಲ ಉಂಟಾಗಿ ಎರಡು ಬಾರಿ ಮುಂದೂಡಬೇಕಾಯಿತು.

● ಕೆ.ಎಸ್.ನ. ಸಹಿತ ಆರು ಮಂದಿಗೆ ಸಾಹಿತ್ಯ ಅಕಾಡೆಮಿ ಫೆಲೋಶಿಪ್

ನವದೆಹಲಿ, ಫೆ. 23 (ಯುಎನ್‌ಐ)– 'ಮೈಸೂರು ಮಲ್ಲಿಗೆ'ಯ ಕವಿ ಕೆ.ಎಸ್. ನರಸಿಂಹಸ್ವಾಮಿ ಸಹಿತ ವಿವಿಧ ಭಾಷೆಗಳ ಆರು ಮಂದಿ ಹೆಸರಾಂತ ಸಾಹಿತಿಗಳು ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್‌ಗೆ ಪಾತ್ರರಾಗಿದ್ದಾರೆ.

ಅಕಾಡೆಮಿ ನೀಡುವ ಅತ್ಯಂತ ದೊಡ್ಡ ಗೌರವ ಇದು. ಕೆ.ಎಸ್. ನರಸಿಂಹಸ್ವಾಮಿ ಅವರೊಂದಿಗೆ ತೆಲುಗು ಕವಿ– ವಿಮರ್ಶಕ ಗುಂಟೂರು ಶೇಷೇಂದ್ರ ಶರ್ಮ, ಅಸ್ಸಾಮಿ ಸಾಹಿತಿ ಸೈಯದ್ ಅಬ್ದುಲ್ ಮಲಿಕ್, ಮಣಿಪುರಿ ಸಾಹಿತಿ ನಿಂಗ್‌ಥಂಖಾಂಗ್‌ಜಂಖೈ-ಚಂದ್ರ ಸಿಂಗ್, ಹಿಂದಿ ಕವಿ ರಾಮ್ ವಿಲಾಸ್ ಶರ್ಮ ಮತ್ತು ಗುಜರಾತಿ ಕವಿ ರಾಜೇಂದ್ರ ಷಾ ಅವರು ಈ ಗೌರವಕ್ಕೆ ಪಾತ್ರರಾಗಿದ್ದಾರೆ.

ಸಾಹಿತ್ಯ ಕ್ಷೇತ್ರದಲ್ಲಿ ಅನುಪಮ ಸಾಧನೆ ಮಾಡಿದ ವ್ಯಕ್ತಿಗಳಿಗೆ ಮಾತ್ರ ಸಾಮಾನ್ಯವಾಗಿ ಈ ಪುರಸ್ಕಾರ ಕೊಡಲಾಗುತ್ತದೆ.

50 ವರ್ಷಗಳ ಹಿಂದೆ

ಭಾನುವಾರ, 24-2-1974

● ರಾಜ್ಯ ಭೂಸುಧಾರಣೆ ವಿಧೇಯಕಕ್ಕೆ ರಾಷ್ಟ್ರಪತಿ ಸಮ್ಮತಿ

ನವದೆಹಲಿ, ಫೆ. 23– ಕರ್ನಾಟಕ ಭೂಸುಧಾರಣೆ ವಿಧೇಯಕಕ್ಕೆ ರಾಷ್ಟ್ರಪತಿ ಅವರು ಸಮ್ಮತಿ ನೀಡಿರುವರೆಂದು ಕರ್ನಾಟಕದ ಕಂದಾಯ ಸಚಿವ ಎನ್. ಹುಚ್ಚಮಾಸ್ತಿಗೌಡ ಅವರು ಇಂದು ಸಂಜೆ ಇಲ್ಲಿ ಪತ್ರಕರ್ತರಿಗೆ ತಿಳಿಸಿದರು.

ವಿಧೇಯಕ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದ ಜಾರಿಗೆ ಬರುತ್ತದೆ. ಇದರಿಂದ ಈಗ ಭಾರಿ ಜಮೀನ್ದಾರರ ಗೇಣಿದಾರರಾಗಿರುವ ಐದು ಲಕ್ಷಕ್ಕೂ ಹೆಚ್ಚು ಜನ ರೈತರಿಗೆ ಅನುಕೂಲವಾಗುತ್ತದೆ. ವಿಧೇಯಕದಲ್ಲಿ ನಿಗದಿಪಡಿಸಿರುವ ಮಿತಿಗಿಂತ ಹೆಚ್ಚು ಜಮೀನನ್ನು ಹೊಂದಿರುವ ಧಾರ್ಮಿಕ ಸಂಸ್ಥೆಗಳು ಸಹ ತಮ್ಮ ಹೆಚ್ಚುವರಿ ಜಮೀನನ್ನು ಸರ್ಕಾರಕ್ಕೆ ಒಪ್ಪಿಸಬೇಕು. ಆ ಹೆಚ್ಚುವರಿ ಜಮೀನನ್ನು ಭೂಹೀನರಿಗೆ ಹಂಚಲಾಗುವುದು ಎಂದು ಶ್ರೀ ಗೌಡ ಅವರು ತಿಳಿಸಿದರು.

● ಉಪಖಂಡದಲ್ಲಿ ಶಾಂತಿ ಸ್ಥಾಪನೆಗೆ ಭಾರತ – ಬಾಂಗ್ಲಾ ಯತ್ನ: ಮುಜೀಬ್

ನವದೆಹಲಿ, ಫೆ. 23– ರಾಷ್ಟ್ರಗಳ ನಡುವೆ ಅದರಲ್ಲೂ ಮುಖ್ಯವಾಗಿ ಉಪಖಂಡದಲ್ಲಿಯ ದೇಶಗಳ ನಡುವೆ ಶಾಂತಿ ಮತ್ತು ಸಹಕಾರ-ವನ್ನುಂಟು ಮಾಡುವುದಕ್ಕಾಗಿ ಬಾಂಗ್ಲಾದೇಶ ಮತ್ತು ಭಾರತದ ಜನರು ಅವಿಶ್ರಾಂತ ಪ್ರಯತ್ನ ನಡೆಸುವರು ಎಂದು ಬಾಂಗ್ಲಾದೇಶದ ಪ್ರಧಾನಿ ಮುಜೀಬ್ ರೆಹಮಾನ್ ಅವರು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಲಾಹೋರ್‌ನಲ್ಲಿ ನಡೆಯುತ್ತಿರುವ ಇಸ್ಲಾಮಿ ಶೃಂಗಸಭೆಯಲ್ಲಿ ಭಾಗವಹಿಸಲು ಈ ಬೆಳಿಗ್ಗೆ ದೆಹಲಿಯ ವಿಮಾನದಲ್ಲಿ ಹೋಗುತ್ತಿದ್ದಾಗ ಪ್ರಧಾನಿ ಇಂದಿರಾ ಗಾಂಧಿಯವರಿಗೆ ನೀಡಿದ ಸಂದೇಶದಲ್ಲಿ ಬಾಂಗ್ಲಾದೇಶದ ಪ್ರಧಾನಿ ಅವರು 'ಭಾರತದ ಸ್ನೇಹಪರ ಜನತೆಗೆ ಹಾಗೂ ಪ್ರಧಾನಿ ಇಂದಿರಾ ಗಾಂಧಿ ಅವರಿಗೆ ಶುಭಾಶಯ' ಕೋರಿದ್ದಾರೆ.

ಭರವಸೆಗಳಿಂದ ಮತ ಸಿಗಬಹುದು, ಆರ್ಥಿಕ ಪ್ರಗತಿ ಸಾಧ್ಯವಾಗದು

ಘೋಷಣೆ, ಚುನಾವಣೆ ಮತ್ತು ವಾಸ್ತವ

ವಿಶ್ಲೇಷಣೆ

ಟಿ.ಎಸ್.ವೇಣುಗೋಪಾಲ್

ಭಾರತದ ಆರ್ಥಿಕತೆಯ ಏಳುಬೀಳುಗಳ ಕುರಿತ ಚರ್ಚೆ ಬಿರುಸಾಗಿ ನಡೆಯುತ್ತಿದೆ. ಆರ್ಥಿಕ ಸಮೀಕ್ಷೆಯ ಬದಲು 'ಆರ್ಥಿಕ ಅವಲೋಕನ– 2024' (ಎಕನಾಮಿಕ್ ರಿವ್ಯೂ-2024) ಎಂಬ ವರದಿಯನ್ನು ಸರ್ಕಾರ ಬಿಡುಗಡೆ ಮಾಡಿದೆ. ಮಧ್ಯಂತರ ಬಜೆಟ್ ಮಂಡಿಸಿಯಾಗಿದೆ. ಶ್ವೇತಪತ್ರವೂ ಪ್ರಕಟವಾಗಿದೆ. ಇವೆಲ್ಲವುಗಳಲ್ಲಿ ಒಂದು ಸಮಾನ ಅಂಶ ಇದೆ. ಭಾರತದ ಆರ್ಥಿಕತೆಯು ನರೇಂದ್ರ ಮೋದಿ ಅವರು ಪ್ರಧಾನಿಯಾಗುವ ಮೊದಲು ಸಂಪೂರ್ಣ ಹಾಳಾಗಿತ್ತು, ಮೋದಿ ನೇತೃತ್ವದ ಸರ್ಕಾರ ಅದನ್ನು ಸುಧಾರಿಸಿ, ಸರಿದಾರಿಗೆ ತರುತ್ತಿದೆ; ಭಾರತವನ್ನು ಜಗತ್ತಿನ ಮೂರನೆಯ ಶ್ರೀಮಂತ ರಾಷ್ಟ್ರವಾಗಿ ರೂಪುಗೊಳಿಸುತ್ತದೆ ಎಂದು ಹೇಳಲಾಗುತ್ತಿದೆ. ಚುನಾವಣೆ ಹತ್ತಿರದಲ್ಲಿರುವಾಗ ಇಂತಹ ಪ್ರಚಾರಗಳು ನಿರೀಕ್ಷಿತವೇ.

ಆದರೆ ವಾಸ್ತವ ಅಷ್ಟೊಂದು ಆಶಾದಾಯಕವಾಗಿಲ್ಲ. ಆರ್ಥಿಕತೆಯ ಸ್ವರೂಪವನ್ನು ಕರಾರುವಾಕ್ಕಾಗಿ ಹೇಳುವ ಅಂಕಿಅಂಶಗಳು ಲಭ್ಯವಿಲ್ಲ. ದೇಶದ ಜನಸಂಖ್ಯೆಗೆ ಸಂಬಂಧಿಸಿದ ಮಾಹಿತಿಯೂ ಸೇರಿದಂತೆ ಲಭ್ಯವಿರುವ ಹೆಚ್ಚಿನ ಮಾಹಿತಿಗಳು ಬರೀ ಅಂದಾಜುಗಳು. ಪರೋಕ್ಷ ಮಾಹಿತಿಗಳನ್ನು ಆಧರಿಸಿಯೇ ನಾವು ಇಂದು ನಿರ್ಧಾರಕ್ಕೆ ಬರಬೇಕಾಗುತ್ತದೆ.

ಆರ್ಥಿಕ ಸಮೀಕ್ಷೆಯ ಬದಲು ಸರ್ಕಾರ ಹತ್ತು ವರ್ಷಗಳ ಸಾಧನೆಯ ವರದಿಯನ್ನು ಪ್ರಕಟಿಸಿದೆ. ಚುನಾವಣಾ ವರ್ಷವಾದ್ದರಿಂದ ಪೂರ್ಣ ಪ್ರಮಾಣದ ಬಜೆಟ್ಟಿನ ಬದಲು ಮಧ್ಯಂತರ ಬಜೆಟ್ಟನ್ನು ಮಂಡಿಸಲಾಗಿದೆ. ತನ್ನ ಆಡಳಿತ ಅವಧಿಯಲ್ಲಿ ಜಾರಿಗೆ ತಂದ ಯೋಜನೆಗಳನ್ನು ಬಣ್ಣಿಸಲು ಬಜೆಟ್ಟನ್ನು ಬಳಸಿಕೊಳ್ಳಲಾಗಿದೆ. ಹೂಡಿಕೆ ಬಲವಾಗಿದೆ. ಜನರ ಬದುಕು ಸುಧಾರಿಸಿದೆ. ಜನರ ಸರಾಸರಿ ನೈಜ ವರಮಾನ ಶೇ 50ರಷ್ಟು ಹೆಚ್ಚಿದೆ. ಈ ಹತ್ತು ವರ್ಷಗಳಲ್ಲಿ ಮಹಿಳೆಯರು ಹೆಚ್ಚು ಸಬಲೀಕರಣಗೊಂಡಿದ್ದಾರೆ... ಈ ಪಟ್ಟಿ ಹೀಗೇ ಮುಂದುವರಿಯುತ್ತದೆ. ಎಷ್ಟೋ ಹೇಳಿಕೆಗಳು ಉತ್ಪ್ರೇಕ್ಷಿತ ಎನಿಸುತ್ತವೆ.

ಜನರ ಸರಾಸರಿ ನೈಜ ವರಮಾನ ಶೇ 50ರಷ್ಟು ಹೆಚ್ಚಿದೆ ಅನ್ನುವ ಹೇಳಿಕೆಯನ್ನೇ ಗಮನಿಸಿ. ಸರ್ಕಾರದ ಮಾಹಿತಿಯ ಪ್ರಕಾರವೇ 2014–15ರಲ್ಲಿ ನೈಜ ರಾಷ್ಟ್ರೀಯ ತಲಾ ವರಮಾನವು ₹ 72,805 ಇದ್ದುದು 2022–23ರಲ್ಲಿ ₹ 98,374 ಆಗಿದೆ. ಅಂದರೆ ಆಗಿರುವುದು ಶೇ 35ರಷ್ಟು ಹೆಚ್ಚಳ, ಶೇ 50ರಷ್ಟು ಅಲ್ಲ. ಜೊತೆಗೆ ವರಮಾನದ ಹೆಚ್ಚಳವು ಬಹುಮಟ್ಟಿಗೆ ಅನ್ವಯಿಸುವುದು ಮೇಲಿನ ಸ್ತರದ ಶೇ 20ರಷ್ಟು ಜನರಿಗೆ ಮಾತ್ರ ಅನ್ನುವುದೂ ವಾಸ್ತವ. ಹಾಗೆಯೇ ಒಟ್ಟಾರೆ ಉದ್ಯೋಗದಲ್ಲಿ ಹೆಚ್ಚಳವಾಗಿದೆ ಅನ್ನುವುದೂ ವಾಸ್ತವವಲ್ಲ. ಸ್ವ-ಉದ್ಯೋಗಸ್ಥರ ಹಾಗೂ ವೇತನರಹಿತ ಕೆಲಸಗಾರರ ಸಂಖ್ಯೆಯಷ್ಟೇ ಹೆಚ್ಚಿರುವುದು. ಬಹುಸಂಖ್ಯಾತರ ಅದರಲ್ಲೂ ವಿಶೇಷವಾಗಿ ಗ್ರಾಮೀಣ ಜನರ ಆದಾಯ, ಅವರ ಕೊಳ್ಳುವ ಶಕ್ತಿ ಕಡಿಮೆಯಾಗುತ್ತಿದೆ. ಪರಿಣಾಮವಾಗಿ, ಮಾರುಕಟ್ಟೆಯಲ್ಲಿ ಬೇಡಿಕೆ ಕಡಿಮೆಯಾಗುತ್ತಿದೆ. ಬೇಡಿಕೆ ಇಲ್ಲ ಅನ್ನುವ ಕಾರಣಕ್ಕೆ ಜನ ಬಂಡವಾಳ ಹೂಡಲು ಮುಂದೆ ಬರುತ್ತಿಲ್ಲ. ಹೂಡಿಕೆ ಹೆಚ್ಚಬೇಕಾದರೆ ಸ್ಥಳೀಯ ಬೇಡಿಕೆ ಹೆಚ್ಚಬೇಕು. ಆಗಷ್ಟೇ ಪ್ರಗತಿ ಸಾಧ್ಯ. ವಿತ್ತೀಯ ಕೊರತೆಯ ನಿಯಂತ್ರಣ ಸಾಧ್ಯ.

ವರಮಾನಕ್ಕಿಂತ ಖರ್ಚು ಹೆಚ್ಚಿಗಾದರೆ ವಿತ್ತೀಯ ಕೊರತೆ ಉಂಟಾಗುತ್ತದೆ. ಹಣವನ್ನು ಹೊಂದಿಸಿಕೊಳ್ಳು-ವುದಕ್ಕೆ ಸರ್ಕಾರ ಸಾಲ ಮಾಡುತ್ತದೆ. ಸಾಲ ಹೆಚ್ಚಿದಷ್ಟೂ ಬಡ್ಡಿ ಏರುತ್ತಾ ಹೋಗುತ್ತದೆ. ವಿತ್ತೀಯ ಕೊರತೆ ಜಿಡಿಪಿಯ ಶೇ 3ರಷ್ಟನ್ನು ಮೀರಬಾರದು ಅನ್ನುವ ನಿಯಮವನ್ನು ಸರ್ಕಾರ ಒಪ್ಪಿಕೊಂಡಿದೆ. ಆದರೆ ಬಹುತೇಕ ವರ್ಷಗಳಲ್ಲಿ ಇದು ಸಾಧ್ಯವಾಗಿಲ್ಲ. ಕೋವಿಡ್ ಸಮಯದಲ್ಲಿ ಅದು ಶೇ 9.2ರಷ್ಟು ಇತ್ತು. ಈಗ ಅದು ಶೇ 5.8ರಷ್ಟು ಇದೆ. 2026ರಲ್ಲಿ ಅದನ್ನು ಶೇ 4.5ಕ್ಕೆ ಇಳಿಸುವ ಉದ್ದೇಶವಿದೆ.

ವಿತ್ತೀಯ ಕೊರತೆ ಇಳಿಯಬೇಕಾದರೆ ವರಮಾನ ಹೆಚ್ಚಬೇಕು ಇಲ್ಲವೇ ಖರ್ಚು ಕಡಿಮೆಯಾಗಬೇಕು. ಸರ್ಕಾರಕ್ಕೆ ಹೆಚ್ಚಿನ ವರಮಾನ ಬರುವುದು ತೆರಿಗೆಯಿಂದ. ಹಿಂದಿನ ವರ್ಷ ಸೇವಾ ಕ್ಷೇತ್ರದಲ್ಲಿ ರಫ್ತು ಹೆಚ್ಚಿದ್ದರಿಂದ ಅಂದಾಜಿಗಿಂತ ಹೆಚ್ಚಿನ ವರಮಾನ ತೆರಿಗೆ ಸಂಗ್ರಹವಾ-ಗಿತ್ತು. ಈ ಬಾರಿಯೂ ಹೆಚ್ಚಿನ ತೆರಿಗೆ ಸಂಗ್ರಹವಾಗುವ ನಿರೀಕ್ಷೆಯಿದೆ. ಒಟ್ಟಾರೆ ತೆರಿಗೆಯಲ್ಲಿ ಪರೋಕ್ಷ ತೆರಿಗೆಯ ಪಾಲು ನಿರಂತರವಾಗಿ ಹೆಚ್ಚುತ್ತಿದೆ. ಈಗ ಅದು ಶೇ 50ಕ್ಕೂ ಹೆಚ್ಚಿದೆ. ಕಾರ್ಪೊರೇಟ್ ತೆರಿಗೆಯು 2013–14ರಲ್ಲಿ ಒಟ್ಟು ತೆರಿಗೆಯಲ್ಲಿ ಶೇ 35ರಷ್ಟು ಇದ್ದುದು ಈಗ ಶೇ 24ಕ್ಕೆ ಇಳಿದಿದೆ. ಅದರಲ್ಲೂ ದೊಡ್ಡ ಕಾರ್ಪೊರೇಟ್ ಉದ್ದಿಮೆಗಳು ಕಟ್ಟುತ್ತಿರುವ ತೆರಿಗೆಯಂತೂ ತುಂಬಾ ಕಡಿಮೆ.

ಸರ್ಕಾರದ ಸ್ವತ್ತನ್ನು ಮಾರಿ ಒಂದಿಷ್ಟು ಸಂಗ್ರಹಿಸಲಾ-ಗುತ್ತದೆ. ಉಳಿದ ಹಣಕ್ಕೆ ಸಾಲ ಮಾಡಲಾಗುತ್ತದೆ. ಈ ವರ್ಷ ಬಜೆಟ್ಟಿನ ಖರ್ಚು ಸರಿದೂಗಿಸಲು ಶೇ 28ರಷ್ಟು ಮೊತ್ತವನ್ನು ಸಾಲದ ಮೂಲಕ ಸಂಗ್ರಹಿಸುವ ಅಂದಾಜಿದೆ. ಸಾಲಕ್ಕೆ ಹಿಂದಿನ ಸರ್ಕಾರವನ್ನೇ ಪೂರ್ಣ ಹೊಣೆ ಮಾಡುವುದು ಸರಿಯಲ್ಲ. ಒಟ್ಟಾರೆ ಸಾಲದ ಹೊರೆಯನ್ನು 2013ರ ವೇಳೆಗೆ ಜಿಡಿಪಿಯ ಶೇ 52.13ಕ್ಕೆ ಇಳಿಸಲಾಗಿತ್ತು. ನಂತರದ ದಿನಗಳಲ್ಲಿ ಅದು ಏರುತ್ತಾ ಈಗ 2023ರಲ್ಲಿ ಜಿಡಿಪಿಯ ಶೇ 82ರಷ್ಟು ಆಗಿದೆ.

ಇನ್ನು ಖರ್ಚಿನ ವಿಷಯಕ್ಕೆ ಬಂದರೆ, ಸರ್ಕಾರ ಎರಡು ಬಗೆಯ ಖರ್ಚನ್ನು ಮಾಡುತ್ತದೆ. ಒಂದು, ರೆವಿನ್ಯೂ ಅಂದರೆ ಸಂಬಳ, ಪಿಂಚಣಿಯಂತಹ ದಿನನಿತ್ಯದ ಖರ್ಚುಗಳು. ಎರಡನೆಯದು, ಬಂಡವಾಳ ಅಂದರೆ ರಸ್ತೆ, ಶಾಲೆ, ಸೇತುವೆಗಳಂತಹ ಉತ್ಪಾದಕ ಸ್ವತ್ತುಗಳ ನಿರ್ಮಾಣಕ್ಕೆ ಮಾಡುವ ಖರ್ಚು (ಕ್ಯಾಪೆಕ್ಸ್). ಸರ್ಕಾರವು ಬಂಡವಾಳದ ವೆಚ್ಚದ ಕಡೆ ಹೆಚ್ಚು ಗಮನಕೊಡುತ್ತಿದೆ. ಅದರಿಂದ ದೀರ್ಘಕಾಲೀನ ಆರ್ಥಿಕ ಬೆಳವಣಿಗೆ ಸಾಧ್ಯವಾಗುತ್ತದೆ ಎನ್ನಲಾಗಿದೆ. 2023–24ರಲ್ಲಿ ಕ್ಯಾಪೆಕ್ಸ್ ಜಿಡಿಪಿಯ ಶೇ 2.7ರಿಂದ ಶೇ 3.2ಕ್ಕೆ ಏರಿದೆ. 2024–25ರಲ್ಲಿ ಅದು ಶೇ 3.4ರಷ್ಟು ಆಗಬಹುದೆಂದು ನಿರೀಕ್ಷಿಸಲಾಗಿದೆ. ಆದರೆ ಖಾಸಗಿಯವರು ಮಾತ್ರ ಬಂಡವಾಳ ಹೂಡುವುದರಲ್ಲಿ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ. ಹಾಗಾಗಿ, ಒಟ್ಟಾರೆ ಹೂಡಿಕೆ ದರ 2010ರಿಂದಲೇ ಕುಸಿಯುತ್ತಿದೆ. ಯುಪಿಎ ಸರ್ಕಾರದ ಆಳ್ವಿಕೆಯಲ್ಲಿ ಹೂಡಿಕೆ ಹೆಚ್ಚು ಉತ್ತಮವಾಗಿತ್ತು. ಎನ್‌ಡಿಎ ಆಡಳಿತದಲ್ಲಿ ಅದು ಯಾವ ವರ್ಷವೂ ಶೇ 30ರಷ್ಟನ್ನು ದಾಟಿಲ್ಲ ಅನ್ನುವುದು ವಾಸ್ತವ.

ಬಂಡವಾಳ ವೆಚ್ಚವನ್ನು ಸರಿದೂಗಿಸುವುದಕ್ಕೆ ಸಾಮಾಜಿಕ ವೆಚ್ಚದಲ್ಲಿ ಕಡಿತ ಮಾಡಲಾಗುತ್ತಿದೆ. 2023–24ರಲ್ಲಿ ಶಿಕ್ಷಣಕ್ಕೆ ₹ 1,16,417 ಕೋಟಿ ಹಾಗೂ ಆರೋಗ್ಯಕ್ಕೆ ₹ 88,956 ಕೋಟಿ ಇಡಲಾಗಿತ್ತು. ಆದರೆ ಖರ್ಚು ಮಾಡಿದ್ದು ಕ್ರಮವಾಗಿ ₹ 1,08,878 ಕೋಟಿ ಹಾಗೂ ₹ 79,221 ಕೋಟಿ. ಹಾಗೆಯೇ ಪರಿಶಿಷ್ಟ ಜಾತಿ, ಪಂಗಡ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿಗೆ ಮೀಸಲಿಟ್ಟಿದ್ದ ₹ 9,409 ಕೋಟಿಯಲ್ಲಿ ಖರ್ಚು ಮಾಡಿದ್ದು ₹ 6,780 ಕೋಟಿ. ಅಂದರೆ ಸಾಮಾಜಿಕ ಖರ್ಚುಗಳಿಗಾಗಿ ತೆಗೆದಿರಿಸಿರುವ ಹಣವನ್ನೂ ಸರ್ಕಾರ ಪೂರ್ಣಪ್ರಮಾಣದಲ್ಲಿ ಖರ್ಚು ಮಾಡುತ್ತಿಲ್ಲ. ಜೊತೆಗೆ ರಾಜ್ಯ ಸರ್ಕಾರಗಳಿಗೆ ಕೇಂದ್ರದಿಂದ ವರ್ಗಾಯಿಸುತ್ತಿ-ರುವ ಹಣವೂ ಕಡಿಮೆಯಾಗುತ್ತಿದೆ. 2021–22ರಲ್ಲಿ ರಾಜ್ಯಗಳಿಗೆ ₹ 4,60,575 ಕೋಟಿಯಷ್ಟು ವರ್ಗಾಯಿಸ-ಲಾಗಿತ್ತು. ಅದು 2022–23ರಲ್ಲಿ ₹ 3,07,204 ಕೋಟಿಗೆ ಇಳಿಯಿತು. ಬಜೆಟ್ ಅಂದಾಜಿನ ಪ್ರಕಾರ, 2024–25ರಲ್ಲಿ ಅದು ಇನ್ನೂ ಕಡಿಮೆಯಾಗಲಿದೆ. ಹಾಗಾಗಿ, ರಾಜ್ಯಗಳಲ್ಲಿಯೂ ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ ಪೆಟ್ಟು ಬೀಳುತ್ತದೆ.



ಬಂಡವಾಳ ವೆಚ್ಚವನ್ನು ಹೆಚ್ಚಿಸಿದರೆ, ಅಂದರೆ ವೇಗದ ರೈಲು ಯೋಜನೆ, ವಿಮಾನ ನಿಲ್ದಾಣ, ರಸ್ತೆ ನಿರ್ಮಾಣದಂತಹವುಗಳಲ್ಲಿ ಬಂಡವಾಳ ಹೂಡಿದರೆ ಅವು ಅಷ್ಟಾಗಿ ಉದ್ಯೋಗವನ್ನು ಸೃಷ್ಟಿಸುವುದಿಲ್ಲ. ಆಸ್ಪತ್ರೆಗಳನ್ನು ನಿರ್ಮಿಸಿದರೆ ಆರೋಗ್ಯದ ಸುಧಾರಣೆಯ ಜೊತೆಗೆ ಉದ್ಯೋಗ ಸೃಷ್ಟಿಯೂ ಆಗುತ್ತದೆ. ಸಾಮಾಜಿಕ ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ಬೆಳವಣಿಗೆಯ ಫಲ ಎಲ್ಲರಿಗೂ ಸಿಗುವುದು. ಆಗಷ್ಟೇ ಬಹುಸಂಖ್ಯಾತರ ಆರ್ಥಿಕ ಸ್ಥಿತಿ ಸುಧಾರಿಸುವುದು. ಈಗಿನ ಬಹುತೇಕ ಆರ್ಥಿಕ ಕಾರ್ಯಕ್ರಮಗಳು ಮೇಲಿನ ಸ್ತರದ ಶೇ 10–15ರಷ್ಟು ಜನರ ಹಿತಾಸಕ್ತಿಯನ್ನು ಗಮನದಲ್ಲಿಟ್ಟಿವೆ. ಮೇಲಿನ ಸ್ತರದ 15 ಕೋಟಿ ಅಥವಾ 20 ಕೋಟಿ ಜನರ ಆರ್ಥಿಕ ಸ್ಥಿತಿ ಸುಧಾರಿಸಿದರೆ ಬೇಡಿಕೆ ಹೆಚ್ಚುವುದಿಲ್ಲ. ಕೆಳಸ್ತರದ ಜನರ ಸ್ಥಿತಿ ಸುಧಾರಿಸಬೇಕು, ಅವರ ಕೊಳ್ಳುವ ಶಕ್ತಿ ಹೆಚ್ಚಬೇಕು. ಆಗಷ್ಟೇ ಸ್ಥಳೀಯ ಬೇಡಿಕೆ ಗಣನೀಯವಾಗಿ ಹೆಚ್ಚುವುದು, ಖಾಸಗಿ ಹೂಡಿಕೆ ಹೆಚ್ಚುವುದು, ವಿದೇಶಿ ಬಂಡವಾಳವೂ ಹರಿದುಬರುವುದು. ಅದು ಸಾಧ್ಯವಾಗ-ಬೇಕಾದರೆ ಪ್ರತಿವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವ, ಗ್ರಾಮೀಣ ಜನರ ಆದಾಯವನ್ನು ದ್ವಿಗುಣಗೊಳಿಸುವ, ಜನರನ್ನು ಸಬಲೀಕರಿಸುವ ಭರವಸೆ ಕಾರ್ಯಗತಗೊಳ್ಳಬೇಕು. ಇಲ್ಲದಿದ್ದರೆ ಅಂತಹ ಭರವಸೆಗಳಿಂದ ಮತ ಸಿಗಬಹುದು, ಆರ್ಥಿಕ ಪ್ರಗತಿ ಸಾಧ್ಯವಾಗುವುದಿಲ್ಲ.

ಚುರುಮುರಿ

ಧೈರ್ಯದ ಪ್ರಶ್ನೆಗಳು!

● ತುರುವೇಕೆರೆ ಪ್ರಸಾದ್

'**ಅಂತೂ** ಧೈರ್ಯವಾಗಿ ಪ್ರಶ್ನಿಸಿ ಅನ್ನೋದನ್ನ ಉಳಿಸ್ಕಳಕ್ಕೇ ಧೈರ್ಯ ಇಲ್ದಂಗಾಗೋಯ್ತು' ಹರಟೆಕಟ್ಟೇಲಿ ಈರಭದ್ರ ಮಾತು ತೆಗೆದ.

'ಒಂದ್‌ವೇಳೆ ಅದು ಅಂಗೇ ಇದ್ದಿದ್ರೆ ಏನೆಲ್ಲಾ ಆಯ್ತಿತ್ತು ಅಂತ ನೆನೆಸ್ಕೊಂಡ್ರೇ ಫಜೀತಿ ಅನುಸ್ತದೆ. ಧೈರ್ಯವಾಗಿ ಪ್ರಶ್ನಿಸಿ ಅಂದ್ರ ಔಟ್ ಆಫ್ ಸಿಲಬಸ್ ಕೊಶ್ಚನ್ನೂ ಮಕ್ಕಳು ಕ್ಯೋಳ್ತಿದ್ವು ಅಲ್ವಾ?' ಎಂದ ತಮ್ಮಣ್ಣ.

'ಮತ್ತೆ ಬಿಟ್ಟಾವಾ? ಉತ್ರ ಕೊಡಕ್ಕೆ ಸರ್ಕಸ್ ಮಾಡ್ಬೇಕು, ಅಂಥ ಪ್ರಚಂಡ ಪ್ರಶ್ನೆಗಳನ್ನ ಎಸೀತಿದ್ವು. ರಾಕೆಟ್ ಬುಟ್ರೂ ಪರವಾಗಿಲ್ಲ, ಈ ಥರ ಪ್ರಶ್ನೆ ಕ್ಷಿಪಣಿ ಯಾಕಾರಾ ಬಿಡ್ತಾವೋ ಬಡ್ಡೆತ್ತೋವು ಅಂತ ಮೇಷ್ಟ್ರು, ಮೇಡಮ್ಗಳು ಪದರಗುಟ್ಟೋಯ್ತಿದ್ರು' ಎಂದ ಚಿಕ್ಕೀರ.

'ಊ ಮತ್ತೆ, ನಿಮ್ಗೆ ಪಿಯುಸಿಲಿ ಕಡಿಮೆ ಮಾರ್ಕ್ಸು ಬಂದಿರ್ಬೇಕು, ಇಲ್ಲ ಅಂದಿದ್ರೆ ಎಂಜಿನಿಯರ್ರೋ ಡಾಕ್ಟರ್ರೋ ಆಗೋದ್ ಬಿಟ್ಟು ನಮ್ ತಲೆ ತಿನ್ನಕ್ಕೆ ಯಾಕ್ ಬತ್ತಿದ್ರಿ ಅಂತ ಕೇಳ್ತಿದ್ರು'.

'ಹೆಣ್ಣುಮಕ್ಕಳು, ನಿಮ್ಮ ವಯಸ್ಸು ಅಲ್ಲೇ ನಿಂತಿರೋದ್ರ ಗುಟ್ಟೇನು ಮೇಡಂ? ಯಾವ ಸೋಪು, ಶಾಂಪು ಹಾಕ್ತೀರಿ? ನಿಮ್ಮನೇಲಿ ಟಿ.ವಿ ರಿಮೋಟ್ ಯಾರ ಕೈಲಿರುತ್ತೆ? ಯಾವ ಸೀರಿಯಲ್ ನೋಡ್ತೀರಿ? ಅಂತ ಕೇಳ್ತಿದ್ರು'.

'ಆಮೇಲೆ ಮೇಷ್ಟ್ರುಗಳಿಗೆ, ಹೊಸ್ದಾಗ್ ರಿಲೀಸ್ ಆದ ಪಿಕ್ಚರ್ 'ಅಯ್ಯಯ್ಯಪ್ಪಾ' ಎಂಗೈತೆ? ದಿನಾ ಯಾಕ್ ಮನೆಗೆ ಲೇಟಾಗ್ ಓಯ್ತೀರ? ಮಕ್ಕಳ ಹೋಂವರ್ಕ್, ಹೆಂಡ್ರ ಹೋಂವರ್ಕ್ ಯಾವುದು ಮೊದ್ಲು ಮಾಡ್ತೀರ? ನೀವು ಮಾಡೋದೆಲ್ಲಾ ನಮಗ್ಯಾಕ್ ಮಾಡಬ್ಯಾಡಿ ಅಂತ ಯೋಳ್ತೀರಿ? ಕೊನೆಗೆ, ಕೊಶ್ಚನ್ ಪೇಪರ್ ಯಾವ ಪ್ರೆಸ್ನಲ್ಲಿ ಪ್ರಿಂಟಾಗೈತೆ ಅಂತ ಕೇಳ್ತಿದ್ರೋ ಎಂಗೋ?'

'ಅದಿರ್ಲಪ್ಪ, ನಮಗ್ಯಾಕ್ ದನದ್ ಬೂಸಾ ತರ ಊಟ ಹಾಕ್ತೀರ? ಸರ್ಕಾರ ಕೊಡೋ ಅಕ್ಕಿ ಎಲ್ ಓಯ್ತದೆ ಅಂತ ಕೇಳಿದ್ರೆ, ನ್ಯೂಕ್ಲಿಯರ್ ಚೈನ್ ತರ ಮೇಷ್ಟ್ರು ಕಮಿಶನ್ ಚೈನೇ ಯೋಳ್ಬೇಕಾಯ್ತಿತ್ತಲ್ಲ'.

'ಸದ್ಯ ಮೇಷ್ಟ್ರುಗಳು ಬಚಾವಾದ್ರು! ಇಲ್ಲ ಅಂದ್ರೆ ಇಸ್ಕೂಲಾಗೆ ಮಕ್ಕಳ ಪ್ರಶ್ನೆಗೂ ಉತ್ರ ಯೋಳಿ, ಮನೆಗೋದ್ಮೇಲೆ ಎಂಡ್ರು ಪ್ರಶ್ನೆಗೂ ಉತ್ರ ಯೋಳಿ ಅವರ ಲೈಫೇ ಕೊಶ್ಚನ್ ಮಾರ್ಕ್ ಆಗೋಯ್ತಿತ್ತು' ಎಂದ ಈರಭದ್ರ.

ಎಲ್ಲ 'ಅಯ್ಯೋ ಪಾಪ' ಎಂದು ಲೊಚಗುಟ್ಟಿದರು.

ಸಂಗತ

ನೈತಿಕ ನೆಲೆಗಟ್ಟು: ಶಿಕ್ಷಕರದೂ ಪಾಲಿದೆ

ಶಿಕ್ಷಕರು ಮತ್ತು ಪಾಲಕರು ಜೊತೆಗೂಡಿ ಶಿಕ್ಷಣದ ನೈತಿಕ ನೆಲೆಗಟ್ಟನ್ನು ಗಟ್ಟಿಗೊಳಿಸಬೇಕಾದದ್ದು ಇಂದಿನ ತುರ್ತು ಅಗತ್ಯ

● ರಾಜಕುಮಾರ ಕುಲಕರ್ಣಿ

ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯವೊಂದರ ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ರೋಗಿಗಳ ಎದುರು ವಿವಿಧ ಭಾಷೆಗಳ ಸಿನಿಮಾ ಹಾಡುಗಳಿಗೆ ರೀಲ್ಸ್ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿದ್ದು ಸುದ್ದಿಯಾಗಿತ್ತು. ಈ ಪ್ರಕರಣದ ಹಿಂದೆಯೇ, ಸರ್ಕಾರಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರೊಬ್ಬರು ತಮ್ಮೊಂದಿಗೆ ಮದುವೆ ನಿಶ್ಚಯವಾದ ವೈದ್ಯೆ ಜೊತೆಗೆ ಶಸ್ತ್ರಚಿಕಿತ್ಸಾ ಕೊಠಡಿಯಲ್ಲಿ ಪ್ರೀ ವೆಡ್ಡಿಂಗ್ ಚಿತ್ರೀಕರಣ ಮಾಡಿದ್ದು ಪತ್ರಿಕೆಯಲ್ಲಿ ಪ್ರಕಟವಾಗಿ ಸಾರ್ವಜನಿಕ-ರಿಂದ ಟೀಕೆಗಳು ವ್ಯಕ್ತವಾದವು. ಶಾಲೆಯೊಂದರಲ್ಲಿ ತನಗೆ ಮಧ್ಯಾಹ್ನದ ಊಟ ತಂದುಕೊಡಲಿಲ್ಲವೆಂದು ಕೋಪಗೊಂಡ ಶಿಕ್ಷಕಿ, ವಿದ್ಯಾರ್ಥಿಗಳನ್ನು ತರಗತಿಯ ಕೋಣೆಯಲ್ಲಿ ಕೂಡಿಹಾಕಿ ಥಳಿಸಿದ ಅಮಾನವೀಯ ಕೃತ್ಯ ಪಾಲಕರನ್ನು ಆತಂಕಕ್ಕೆ ಒಳಗಾಗಿಸಿದೆ.

ಈ ಮೇಲಿನ ಪ್ರಕರಣಗಳು ಇಂದಿನ ಯುವ ವಿದ್ಯಾವಂತರ ಅನಾರೋಗ್ಯಕರ ಮನಃಸ್ಥಿತಿಗೆ ಕನ್ನಡಿ ಹಿಡಿಯುವಂತಿವೆ. ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಕೀಯ ವಿದ್ಯಾರ್ಥಿಗಳ ಅನುಚಿತ ವರ್ತನೆ, ಯುವ ವೈದ್ಯರ ಸಂವೇದನಾರಹಿತ ನಡೆ ಮತ್ತು ಶಾಲೆಯಲ್ಲಿ ಶಿಕ್ಷಕಿಯ ದುರ್ನಡತೆಗೆ ಯಾರನ್ನು ಹೊಣೆಯಾಗಿಸಬೇಕು ಎನ್ನುವ ಪ್ರಶ್ನೆ ಮೂಡುತ್ತದೆ. ಸಹಜವಾಗಿಯೇ ಸಮಾಜವು ವಿದ್ಯಾವಂತರ ಆಕ್ಷೇಪಾರ್ಹ ವರ್ತನೆಗೆ ಇಂದಿನ ಶಿಕ್ಷಣ ವ್ಯವಸ್ಥೆಯನ್ನು ಹೊಣೆಯಾಗಿಸುತ್ತದೆ. ವಿದ್ಯಾಕೇಂದ್ರಗಳಾದ ಶಾಲೆ, ಕಾಲೇಜುಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರ ಅನುಚಿತ ವರ್ತನೆ ಹಾಗೂ ಹಿಂಸಾಪ್ರವೃತ್ತಿಯು ಆಗಿಂದಾಗ್ಗೆ ವ್ಯಕ್ತವಾಗುತ್ತಲೇ ಇರುತ್ತವೆ.

ಇಂತಹ ಅನುಚಿತ ವರ್ತನೆಗಳಿಗೆ ಶಿಕ್ಷಣ ವ್ಯವಸ್ಥೆಯನ್ನು ಗುರಿಯಾಗಿಸುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸುವ ಶಿಕ್ಷಕರ ಸಂಖ್ಯೆ ಬಹಳಷ್ಟಿದೆ. ವ್ಯಕ್ತಿಯ ನಡೆ–ನುಡಿಯನ್ನು ರೂಪಿಸುವಲ್ಲಿ ಶಿಕ್ಷಣವೇ ನೆಲೆಗಟ್ಟು. ಪ್ರತಿಯೊಬ್ಬ ಮನುಷ್ಯ ತನ್ನ ವಿದ್ಯಾರ್ಥಿ ಬದುಕಿನಲ್ಲಿ ದಿನದ ಬಹುಪಾಲು ಸಮಯವನ್ನು ಕಳೆಯುವುದು ಶಾಲೆ, ಕಾಲೇಜುಗಳ ವಾತಾವರಣದಲ್ಲಿ ಎನ್ನುವುದು ಸತ್ಯಕ್ಕೆ ಹತ್ತಿರವಾದ ಮಾತು. ಹೀಗಾಗಿ, ಶಿಕ್ಷಕರು ತಮ್ಮ ಕರ್ತವ್ಯವು ಪಾಠ ಬೋಧಿಸುವುದಕ್ಕೆ ಮಾತ್ರ ಸೀಮಿತ ಎಂದು ನುಣುಚಿಕೊಳ್ಳುವಂತಿಲ್ಲ. ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆ ಶಿಕ್ಷಣದ ಉದ್ದೇಶವಾಗಿ-ರುವುದರಿಂದ, ಪಾಠ ಬೋಧನೆಯ ಜೊತೆಗೆ ಮಕ್ಕಳ ನಡೆ– ನುಡಿಯನ್ನು ತಿದ್ದುವ ಕೆಲಸವನ್ನೂ ಶಿಕ್ಷಕರು ಮಾಡಬೇಕಾಗುತ್ತದೆ.

ಶಿಕ್ಷಕ ವೃತ್ತಿಯಲ್ಲಿ ಬದ್ಧತೆಯಿಂದ ತೊಡಗಿಕೊಂಡವರ ನಡುವೆ ಅಪ್ರಾಮಾಣಿಕರು, ಅನೀತಿವಂತರೂ ಸೇರಿಕೊಂಡಿರುವುದರಿಂದ ಶಿಕ್ಷಕ ವೃತ್ತಿಗೆ ಸಮಾಜದಲ್ಲಿ ತನ್ನ ಮೊದಲಿನ ಗೌರವವನ್ನು ಉಳಿಸಿಕೊಳ್ಳಲು ಆಗಿಲ್ಲ. ಶಿಕ್ಷಕರು ಪಡೆಯುತ್ತಿರುವ ಆಕರ್ಷಕ ಸಂಬಳದ ಹೊರತಾಗಿಯೂ ಹಣ ಗಳಿಸುವ ಬೇರೆ ಬೇರೆ ಕೆಲಸಗಳಲ್ಲಿ ತೊಡಗಿಕೊಳ್ಳುತ್ತಿದ್ದಾರೆ. ಆದರ್ಶ ಶಿಕ್ಷಕರ ಸಂಖ್ಯೆ ಗಣನೀಯವಾಗಿ ಇಳಿ-ಮುಖವಾಗುತ್ತಿರುವುದು ಶಿಕ್ಷಣ ಕ್ಷೇತ್ರದ ಇಂದಿನ ಬಹುಮುಖ್ಯ ಸಮಸ್ಯೆಯಾಗಿದೆ. ಹಿಂದಿನ ದಿನಗಳಲ್ಲಿ ಶಾಲಾ ಅವಧಿಯ ನಂತರವೂ ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸಮಯ ಕಳೆಯುತ್ತಿದ್ದರು. ಪಠ್ಯಕ್ರಮದಾಚೆ ಬದುಕಿನ ಮೌಲ್ಯಗಳನ್ನು ಬೋಧಿ-ಸುತ್ತಿದ್ದರು. ಆದರೆ ಅಂಥ ಮನೋಭಾವದ ಶಿಕ್ಷಕರು ಇಂದು ನೋಡಲು ಸಿಗುತ್ತಿಲ್ಲ. ಇರುವೆಯೊಂದು ಪಾರಿವಾಳದ ಜೀವ ಉಳಿಸಿದ್ದು, ಶಿಬಿ ಚಕ್ರವರ್ತಿಯ ತ್ಯಾಗ, ಪುಣ್ಯಕೋಟಿಯ ಪ್ರಾಮಾಣಿಕತೆ, ಗಾಂಧೀಜಿಯ ಸತ್ಯಸಂಧತೆ... ಇಂತಹ ಕಥೆಗಳನ್ನೆಲ್ಲ ಆಗ ನೀತಿ ಶಿಕ್ಷಣದ ಮೂಲಕ ಬೋಧಿಸಲಾಗುತ್ತಿತ್ತು. ನೀತಿ ಶಿಕ್ಷಣಕ್ಕೆ ವೇಳಾಪಟ್ಟಿಯಲ್ಲಿ ಆದ್ಯತೆ ನೀಡಲಾಗುತ್ತಿತ್ತು. ಒಟ್ಟಾರೆ, ಮಕ್ಕಳಲ್ಲಿ ನೈತಿಕ ಮತ್ತು ವೈಚಾರಿಕ ಪ್ರಜ್ಞೆಯನ್ನು ಬೆಳೆಸಲು ಪೂರಕವಾದ ಶೈಕ್ಷಣಿಕ ವಾತಾವರಣ ಇರುತ್ತಿತ್ತು. ಆದರೆ ಇಂದು ನೀತಿ ಶಿಕ್ಷಣ ಶಾಲಾ ಕಾಲೇಜುಗಳ ವೇಳಾಪಟ್ಟಿ-ಯಲ್ಲಿ ಸ್ಥಾನ ಕಳೆದುಕೊಂಡಿದೆ.

ಶಾಲಾ ಕಾಲೇಜುಗಳಲ್ಲಿನ ಶೈಕ್ಷಣಿಕ ವಾತಾವರಣ ಹದಗೆಡುತ್ತಿರುವುದರಲ್ಲಿ ಸಿನಿಮಾ ಮಾಧ್ಯಮದ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. 'ಸ್ವಾಮಿದೇವನೆ ಲೋಕಪಾಲನೆ' ಎನ್ನುವ ಸಿನಿಮಾ ಹಾಡು ಒಂದು ಕಾಲದಲ್ಲಿ ಶಾಲೆಗಳಲ್ಲಿ ಪ್ರಾರ್ಥನಾ ಗೀತೆಯಾಗಿತ್ತು. ಮುಂದೊಂದು ದಿನ ಇದೇ ಸಿನಿಮಾ ಮಾಧ್ಯಮ 'ಒಓಔಅಂ...ಅಃ...' ಎಂದು ಶಿಕ್ಷಕಿ ಪಾತ್ರದ ನಟಿಯ ಮೂಲಕ ಮಾದಕವಾಗಿ ಹಾಡಿಸಿ ಹೆಜ್ಜೆ ಹಾಕಿಸಿದ್ದನ್ನು ಮರೆಯುವಂತಿಲ್ಲ. ಇಂದು ಶಾಲೆ ಮತ್ತು ಕಾಲೇಜುಗಳ ಆವರಣಗಳಲ್ಲಿ ಲೀಲಾಜಾಲವಾಗಿ ಹರಿದಾಡುತ್ತಿರುವ ಮತ್ತು ಶಬ್ದಕೋಶದಲ್ಲೂ ನೋಡಲು ಸಿಗದ ಪದಗಳು ಸಿನಿಮಾ ಮಾಧ್ಯಮದ ಕೊಡುಗೆಗಳಾಗಿವೆ.

ಗಾಂಧೀಜಿ ಅವರು ಸಪ್ತ ಸಾಮಾಜಿಕ ಪಾಪಗಳಲ್ಲಿ ಶಿಕ್ಷಣದ ಕುರಿತು ಪ್ರಸ್ತಾಪಿಸಿದ್ದಾರೆ. ಶಿಕ್ಷಣದಲ್ಲಿ ಮೌಲ್ಯದ ಅವಶ್ಯಕತೆಗೆ ಮಹತ್ವ ನೀಡಿದ್ದಾರೆ. ಎಸ್.ಎಲ್.ಭೈರಪ್ಪ ಅವರ 'ತಂತು' ಕಾದಂಬರಿಯಲ್ಲಿ ಹೀಗೊಂದು ಮಾತಿದೆ- 'ಜನರು ಮೂಲತಃ ಒಳ್ಳೆಯವರು, ಕೆಟ್ಟೋರು ಅನ್ನೂ ವಿಂಗಡಣೆ ಸರಿಯಲ್ಲ. ಅವರು ಗೊಬ್ಬರದ ಥರ ಇದ್ದಾರೆ. ಗೊಬ್ಬರ ಒಯ್ದು ತೆಂಗಿನ ಮರಕ್ಕೆ ಹಾಕಿದರೆ ಅದೂ ಫಲ ಕೊಡುತ್ತೆ. ಪಾಪಾಸುಕಳ್ಳಿಗೆ ಹಾಕಿದರೆ ಅದೂ ಹೊರವಾಗಿ ಬೆಳೆಯುತ್ತೆ. ಗೊಬ್ಬರದ ಹಂಗಿರೊ ಅವರನ್ನು ನಿಜವಾದ ಜನರ ಹಂಗೆ ಮನುಷ್ಯರ ಹಂಗೆ ಮಾಡೂದೇ ಮೂಲಪ್ರಶ್ನೆ'. ವಿದ್ಯಾರ್ಥಿಗಳನ್ನು ಪಾಪಾಸುಕಳ್ಳಿಗಳನ್ನಾಗಿಸದೆ ಅವರನ್ನು ತೆಂಗಿನ ಮರದಂತೆ ಮಾಡುವುದು ಇಂದಿನ ಶಿಕ್ಷಣ ವ್ಯವಸ್ಥೆ, ಶಿಕ್ಷಕರು ಮತ್ತು ಪಾಲಕರ ಜವಾಬ್ದಾರಿಯಾಗಿದೆ. ಪರಿಣಾಮವಾಗಿ, ಶಿಕ್ಷಕರು ಮತ್ತು ಪಾಲಕರು ಜೊತೆಗೂಡಿ ಶಿಕ್ಷಣದ ನೈತಿಕ ನೆಲೆಗಟ್ಟನ್ನು ಗಟ್ಟಿಗೊಳಿಸಬೇಕಾದದ್ದು ಇಂದಿನ ತುರ್ತು ಅಗತ್ಯವಾಗಿದೆ.

ವಾಚಕರ ವಾಣಿ

ಮಕ್ಕಳಲ್ಲಿ ದುಶ್ಚಟ: ಕಾನೂನೊಂದೇ ಸಾಲದು

ಸಿಗರೇಟು ನಿಷೇಧದ ವಯೋಮಿತಿಯನ್ನು 18ರಿಂದ 21ಕ್ಕೆ ಹೆಚ್ಚಿಸಿ, ವಿಧಾನಸಭೆಯಲ್ಲಿ ಮಸೂದೆಯನ್ನು ಅಂಗೀಕರಿಸಲಾಗಿದೆ. ಆದರೆ ಬೀಡಿ, ಸಿಗರೇಟು ಸೇದುವವರ ವಯಸ್ಸನ್ನು ಯಾವ ಆಧಾರದ ಮೇಲೆ ಅಳತೆಗೋಲಾಗಿ ಪರಿಗಣಿಸಲು ಸಾಧ್ಯ? ನಗರಗಳ ಕೆಲವು ಟೀ ಅಂಗಡಿಗಳ ಹಿಂದೆ, ಹದಿವಯಸ್ಸಿನ ಶಾಲಾ ಹುಡುಗರೇ ಸಿಗರೇಟು ಸೇದುತ್ತಾ ಇರುತ್ತಾರೆ. ಮಕ್ಕಳು ದುಶ್ಚಟಗಳಿಗೆ ಬಲಿಯಾಗುವುದನ್ನು ಬರೀ ಕಾನೂನಿನಿಂದ ತಡೆಗಟ್ಟಲು ಸಾಧ್ಯವಿಲ್ಲ. ಮನೆಯಲ್ಲಿ ಪೋಷಕರು, ಶಾಲೆಗಳಲ್ಲಿ ಶಿಕ್ಷಕರು ಬುದ್ಧಿ ಹೇಳದೇ ಇಂತಹ ಸಾಮಾಜಿಕ ಪಿಡುಗುಗಳು ನಿಯಂತ್ರಣಕ್ಕೆ ಬರುವುದಿಲ್ಲ. ಅದಿಲ್ಲವಾದರೆ, ಈ ಬಗೆಯ ಕಾನೂನುಗಳು ಸಾರ್ವಜನಿಕರ ಮುಂದೆ ಹಾಸ್ಯಾಸ್ಪದವಾಗಿ ಕಾಣುತ್ತವೆ.

ಬೂಕನಕೆರೆ ವಿಜೇಂದ್ರ, ಮೈಸೂರು

ಮನೆ ನಿರ್ಮಾಣ: ಅನುದಾನ ಹೆಚ್ಚಲಿ

ಕಡುಬಡವರು ಮನೆ ಕಟ್ಟಿಕೊಳ್ಳಲು ಸರ್ಕಾರ ₹ 1.80 ಲಕ್ಷ ಮಂಜೂರು ಮಾಡುತ್ತದೆ. ಆದರೆ ಈ ಹಣ ಅವರಿಗೆ ಏನೇನೂ ಸಾಲದು. ಏಕೆಂದರೆ, ಮನೆ ನಿರ್ಮಾಣಕ್ಕೆ ಬೇಕಾಗುವ ಪ್ರಮುಖ ಸಲಕರಣೆಗಳಾದ ಇಟ್ಟಿಗೆ, ಮರಳು, ಸಿಮೆಂಟ್ ಬೆಲೆ ಬಹಳ ತುಟ್ಟಿಯಾಗಿದೆ. ನಮ್ಮ ಹಿರಿಯರು ಹೇಳಿಕೊಂಡು ಬಂದ ಮಾತು 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎಂಬುದು ಕಡು ಬಡವರಿಗಷ್ಟೇ ಅಲ್ಲ, ಕೆಳ ಮಧ್ಯಮ, ಮಧ್ಯಮ ವರ್ಗದವರಿಗೂ ಅನ್ವಯಿಸುವಂತಾಗಿರುವ ಸಂದರ್ಭ ಇದು. ಹೀಗಿರುವಾಗ, ಕಡು ಬಡವರು ಸರ್ಕಾರ ಕೊಡುವ ಹಣಕ್ಕೆ ತಮ್ಮ ಬಳಿ ಇರುವ ಅಲ್ಪ ಸ್ವಲ್ಪ ಹಣವನ್ನು ಸೇರಿಸಿದರೂ ಮನೆ ನಿರ್ಮಿಸಿಕೊಳ್ಳಲು ಅಸಮರ್ಥರಾಗಿರುತ್ತಾರೆ.

ಸರ್ಕಾರ ಈಗಿರುವ ಅನುದಾನದ ಮೊತ್ತವನ್ನು ಈ ಕಾಲಘಟ್ಟಕ್ಕೆ ಹೊಂದಿಕೆಯಾಗುವಂತೆ ಸೂಕ್ತವಾಗಿ ಪರಿಷ್ಕ-ರಿಸಬೇಕು. ಈ ಮೂಲಕ, ಮನೆ ನಿರ್ಮಾಣಕ್ಕೆ ಬೇಕಾಗುವ ಮೂಲ ಸಲಕರಣೆಗಳನ್ನು ಬಡವರು ಸಹ ಖರೀದಿಸಲು ಸಾಧ್ಯವಾಗುವಂತೆ ಸರ್ಕಾರ ಕಾಳಜಿ ವಹಿಸಬೇಕು.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ಕೃಷಿ ಹವಾಮಾನ ಘಟಕ: ಮುಚ್ಚುವುದು ಸಲ್ಲ

ಜಿಲ್ಲಾ ಕೃಷಿ ಹವಾಮಾನ ಘಟಕಗಳನ್ನು ಮುಚ್ಚುವ ಕೇಂದ್ರ ಸರ್ಕಾರದ ನಿರ್ಧಾರ (ಪ್ರ.ವಾ., ಫೆ. 23) ರೈತರಿಗೆ ತುಂಬಾ ಹಾನಿಕಾರಕವಾದದ್ದು. ಪ್ರತಿಯೊಂದು ತಾಲ್ಲೂಕು, ಗ್ರಾಮ ಮಟ್ಟದಲ್ಲಿ ಈ ಯೋಜನೆ ವಿಸ್ತರಣೆಯಾಗಬೇಕಿತ್ತು. ಹವಾಮಾನ ಪ್ರತಿ ತಾಲ್ಲೂಕು, ಗ್ರಾಮಗಳಿಗೂ ಬೇರೆ ಬೇರೆ ರೀತಿಯಲ್ಲಿ ಇರುತ್ತದೆ. ಕೆಲವು ಜಿಲ್ಲೆಗಳು ಮಲೆನಾಡು ಮತ್ತು ಬಯಲುನಾಡು ತಾಲ್ಲೂಕುಗಳೆರಡನ್ನೂ ಹೊಂದಿರುತ್ತವೆ. ಉದಾಹರಣೆಗೆ, ಚಿಕ್ಕಮಗಳೂರು, ಶಿವಮೊಗ್ಗದಂತಹ ಜಿಲ್ಲೆಗಳು ಮಲೆನಾಡು, ಬಯಲುಸೀಮೆ ಎರಡೂ ಪ್ರದೇಶಗಳನ್ನು ಒಳಗೊಂಡಿವೆ. ಈ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯ ಹವಾಮಾನ ಪದ್ಧತಿ ಇರುತ್ತದೆ.

ಜಿಲ್ಲೆಗೆ ಒಂದೇ ರೀತಿಯ ಹವಾಮಾನ ಮುನ್ಸೂಚನೆ ನೀಡುವುದರಿಂದ ರೈತರು ನಿಖರ ಹವಾಮಾನ ಮಾಹಿತಿಗಳಿಂದ ವಂಚಿತರಾಗಿ ತುಂಬಾ ತೊಂದರೆಗೀಡಾಗುತ್ತಾರೆ. ಆದ್ದರಿಂದ ಸರ್ಕಾರ ಜಿಲ್ಲಾ ಕೃಷಿ ಹವಾಮಾನ ಘಟಕಗಳನ್ನು ಮುಚ್ಚುವ ನಿರ್ಧಾರ ಕೈಬಿಟ್ಟು ಅವುಗಳನ್ನು ಗ್ರಾಮ ಮಟ್ಟಕ್ಕೂ ವಿಸ್ತರಿಸುವಂತಹ ಯೋಜನೆಯನ್ನು ರೂಪಿಸಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರು, ಕೊಪ್ಪ

ಮೌಖಿಕ ಸಾಹಿತ್ಯ: ಸಿಗಲಿ ಆದ್ಯತೆ

ಲಿಖಿತ ಭಾಷೆಗೂ ಮೀರಿದ ಸಂವಹನವು ಅಲಿಖಿತ ಅರ್ಥಾತ್ ಮೌಖಿಕ ಭಾಷೆಗಿದೆ ಎನ್ನುವುದು ಸರ್ವರಿಗೂ ಗೊತ್ತಿದೆ. ಕನ್ನಡದ ಸಂದರ್ಭದಲ್ಲಿ ಬಾಯಿಂದ ಬಾಯಿಗೆ ಸಾಗಿ ಬಂದ ಅಪಾರವಾದ ಮೌಖಿಕ ವಾಙ್ಮಯವಿದೆ. ಇಂದಿಗೂ ಅಕ್ಷರದ ಹಂಗಿಲ್ಲದೆ, ದಿನಗಟ್ಟಲೆ ತತ್ವಪದ, ಕಥೆ, ಆಟ, ಹಾಡು, ಒಗಟು, ಗಾದೆಗಳನ್ನು ಸಾದರಪಡಿಸುವ ವಲಯಗಳಿವೆ. ಹಾಗಾಗಿ, ಈ ಬಾರಿ ಮಂಡ್ಯದಲ್ಲಿ ನೆರವೇರಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಗೆ ಮೌಖಿಕ ಕನ್ನಡ ಸಾಹಿತ್ಯ ಪರಿಚಾರಕರೊಬ್ಬರು ಆಯ್ಕೆಯಾಗಲಿ. ಆ ಮೂಲಕ ಲೇಖನಿಯಿಂದ ರಚಿಸಿದ್ದೇ ಸಾಹಿತ್ಯ ಎನ್ನುವ ಭ್ರಮೆಯಿಂದ ಜನಮಾನಸ ಪೂರ್ಣವಾಗಿ ಮುಕ್ತವಾಗಲಿ.

ಬಿಂಡಿಗನವಿಲೆ ಭಗವಾನ್, ಬೆಂಗಳೂರು

ಜಾತಿಗೊಂದು ಹುಂಡಿ ಮೀಸಲಿಡಿ!

'ಹಿಂದೂ ದೇವಾಲಯಗಳ ಹಣ ಹಿಂದೂಗಳಿಗೇ ಮೀಸಲಾಗಬೇಕು' ಎಂದು ಪ್ರಬಲವಾಗಿ ವಾದಿಸುವವರ ಮಾತಿನ ಮರ್ಮವೇನು? ದೇವಾಲಯ ಎಂದರೆ ಅರ್ಥವಾಗದೇ? 'ಹಿಂದೂ' ದೇವಾಲಯ ಎಂದೇ ಪ್ರತಿ ಬಾರಿ ಒತ್ತಿ ಹೇಳುವುದೇಕೆ? ಅಷ್ಟಕ್ಕೂ ಇಲ್ಲಿ 'ಹಿಂದೂ'ಗಳು ಎಂಬುದು ವಾಸ್ತವಿಕ ಅರ್ಥದಲ್ಲಿ ಯಾರನ್ನು ಕುರಿತದ್ದಾಗಿದೆ? ಈ ಮರ್ಮವನ್ನು ಅರ್ಥ ಮಾಡಿಕೊಂಡರೆ 'ಹಿಂದುತ್ವ' ವಾದಕ್ಕೆ ಇನ್ನಷ್ಟು ಮಹತ್ವ ಬರುತ್ತದೆ.

ರಾಜ್ಯದಲ್ಲಿ 35 ಸಾವಿರ ಮುಜರಾಯಿ ದೇವಾಲಯಗಳಿವೆಯಂತೆ. ಅಂದರೆ, 35 ಸಾವಿರ, ಕೆಲವೆಡೆ ಅದಕ್ಕೂ ಹೆಚ್ಚು ಅರ್ಚಕರು, ಅಂದರೆ ಸುಮಾರು ಒಂದು ಲಕ್ಷ ಅರ್ಚಕರು ಎಂದಾಯಿತು. ಇವರೆಲ್ಲಾ ಬಹುಪಾಲು ಒಂದೇ 'ಪ್ರಧಾನ' ಸಮುದಾಯದವರು ಅಥವಾ ಮೇಲ್ವರ್ಗದವರು. ದೇವಸ್ಥಾನದ ಆದಾಯದ-ತಟ್ಟೆಕಾಸು, ವೇತನದಂತಹ ಆದಾಯದ ಹೊರತಾಗಿ- ನೇರ ಫಲಾನುಭವಿಗಳು ಇವರೇ. ಮುಜರಾಯಿ ಕಾಯ್ದೆಯಲ್ಲಿ '...ಕೆಲವೆಡೆ ವೇದಪಾಠಶಾಲೆ-ಗಳಿಗೆ, ಹಿಂದೂ ಧಾರ್ಮಿಕ ತರಗತಿ, ವೃದ್ಧಾಶ್ರಮ'ಗಳಿಗೆ ಈ ಆದಾಯ ಬಳಕೆಯಾಗಬಹುದು ಎಂದಿದೆ. ಅಂದರೆ, ಈ 'ಧಾರ್ಮಿಕ ತರಗತಿ'ಗಳಲ್ಲಿ ಓದುವವರೆಲ್ಲಾ ಅದೇ ಸಮುದಾಯಕ್ಕೆ ಸಂಬಂಧಿಸಿದವರಲ್ಲವೇ? ಅನ್ಯರಿಗೆ ಪ್ರವೇಶವೆಲ್ಲಿದೆ? ಅಂದರೆ, ಆ ಹಣ ಉದಾರವಾಗಿ ಕಾಣಿಕೆ ನೀಡುವ ಅನ್ಯ ಜಾತಿಯವರಿಗೆ ಹೋಗುವ ಅವಕಾಶವೇ ಇಲ್ಲವಲ್ಲ!

'ಹಿಂದೂ ದೇವಾಲಯದ ಹಣ ಹಿಂದೂಗಳಿಗೇ' ಮೀಸಲಿನ ನೆವದಲ್ಲಿ ಕೆಲವರೇ ಅದನ್ನು ಪಡೆದುಕೊಳ್ಳುವವರಾದರೆ, ಸಾಮಾಜಿಕ ನ್ಯಾಯಕ್ಕಾಗಿ ಮತ್ತೊಂದು ವ್ಯವಸ್ಥೆ ಮಾಡಬಹುದು- ಒಂದೊಂದು ಜಾತಿಯವರಿಗೆ ಒಂದೊಂದು ಪ್ರತ್ಯೇಕ ಹುಂಡಿ ಇಟ್ಟು, ಅವುಗಳಲ್ಲಿ ಸಂಗ್ರಹವಾದ ಹಣವನ್ನು ಆಯಾ ಜಾತಿಯ ಅಭಿವೃದ್ಧಿ ನಿಗಮಗಳಿಗೇ ಕೊಡಬಹುದು. ಆಗ ನಿಜವಾದ ಅರ್ಥದಲ್ಲಿ 'ಹಿಂದೂಗಳ ಹಣ ಹಿಂದೂಗಳಿಗೇ' ಎಂಬುದಕ್ಕೆ ಅರ್ಥ ಬರುತ್ತದೆ. ಅದನ್ನು 'ಹಿಂದುತ್ವ'ವಾದಿಗಳೂ ಮುಕ್ತವಾಗಿ ಒಪ್ಪಬಹುದು, ವಿವಾದ ಬಗೆಹರಿಯಬಹುದು.

ಟಿ.ಗೋವಿಂದರಾಜು, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ನೀರಿಗೆ ಬರ ಬದುಕು ದುಸ್ತರ

ಕೊಪ್ಪಳ ಸಮೀಪದ ಬಹದ್ದೂರ್ ಬಂಡಿ ಗ್ರಾಮದಲ್ಲಿ ಕೊಳಚೆ ತುಂಬಿರುವ ಚರಂಡಿ ಬಳಿಯೇ ಕುಡಿಯುವ ನೀರು ತುಂಬುತ್ತಿರುವ ಮಹಿಳೆಯರು – ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

ಮುಂಗಾರು ಈ ಬಾರಿ ದೊಡ್ಡ ಪ್ರಮಾಣದಲ್ಲಿಯೇ ಕೈಕೊಟ್ಟಿದೆ. ಮಳೆಯ ಕೊರತೆಯಿಂದಾಗಿ ನದಿ, ಕೆರೆ, ಕೊಳ್ಳಗಳೆಲ್ಲ ಬತ್ತಿವೆ. ಅಂತರ್ಜಲ ಪಾತಾಳ ಸೇರಿದೆ. ರಾಜ್ಯ ಸರ್ಕಾರವು 223 ತಾಲ್ಲೂಕುಗಳಲ್ಲಿ ಬರ ಘೋಷಣೆ ಮಾಡಿದೆ. ನೀರು, ಮೇವು ಇಲ್ಲದ ಕಾರಣಕ್ಕೆ ರೈತರು ಜಾನುವಾರುಗಳನ್ನು ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡುತ್ತಿದ್ದಾರೆ. ನೀರಿನ ಬರ ಜನರ ಬದುಕನ್ನು ದುಸ್ತರಗೊಳಿಸಿದೆ

‘ಕಲ್ಯಾಣ’ದಲ್ಲಿ ಕುಡಿಯುವ ನೀರಿಗಾಗಿ ಪರದಾಟ

ಕಲ್ಯಾಣ ಕರ್ನಾಟಕದಲ್ಲಿ ಬೇಸಿಗೆಯ ಆರಂಭದಲ್ಲೇ ಬಿಸಿಲಿನ ತಾಪ ಏರಿದಂತೆ ಕುಡಿಯುವ ನೀರಿನ ಸಮಸ್ಯೆ ಎದುರಿಸಲಿರುವ ಸಂಭವನೀಯ ಗ್ರಾಮಗಳ ಪಟ್ಟಿಯೂ ಉದ್ದವಾಗುತ್ತಿದೆ. ಮಳೆ ಕೈಕೊಟ್ಟ ನಂತರ ಕೃಷ್ಣಾ, ತುಂಗಭದ್ರಾ, ಭೀಮಾ, ಕಾಗಿಣಾ ನದಿಗಳು ಬತ್ತುತ್ತಿವೆ. ಕೊಳವೆಬಾವಿ ಕೊರೆದರೂ ನೀರು ಬರುತ್ತಿಲ್ಲ. ತೆರೆದ ಬಾವಿ, ಕೆರೆಗಳಲ್ಲಿನ ನೀರು ಸಹ ಕ್ಷೀಣಿಸುತ್ತಿದೆ. ಯಾದಗಿರಿಯ 26 ಹಾಗೂ ಕಲಬುರಗಿಯ ನಾಲ್ಕು ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಈಗಾಗಲೇ ತೀವ್ರವಾಗಿ ಕಾಣಿಸಿಕೊಂಡಿದೆ. ಕುಡಿಯುವ ನೀರಿಗಾಗಿ ಬ್ಯಾರೇಜ್‌ಗಳಲ್ಲಿ ಸಂಗ್ರಹಿಸಿಟ್ಟ ನೀರು ಕೆಲವು ವಾರಗಳವರೆಗೆ ಸಾಕಾಗಬಹುದು. ಆನಂತರ ಸಮಸ್ಯೆ ಇನ್ನಷ್ಟು ಬಿಗಡಾಯಿಸಲಿದೆ. ಬಹುತೇಕರು ಕುಡಿಯುವ ನೀರಿಗೆ ತೆರೆದ ಬಾವಿ, ಕೆರೆ ಹಾಗೂ ಬೋರ್‌ವೆಲ್‌ಗಳನ್ನೇ ಆಶ್ರಯಿಸಿದ್ದಾರೆ. ಆದರೆ, ಅಂತರ್ಜಲದ ಮಟ್ಟ ಪಾತಾಳ ಕಂಡಿದೆ. ಯಾದಗಿರಿಯ ಶೆಟ್ಟಿಗೇರಾ ಗ್ರಾಮದಲ್ಲಿನ ನೀರಿನ ಸಮಸ್ಯೆ ಅರಿತು ಗ್ರಾಮ ಪಂಚಾಯಿತಿ ಸದಸ್ಯರೇ ತಮ್ಮ ಜೇಬಿಂದ ಹಣ ಖರ್ಚು ಮಾಡಿ ಟ್ಯಾಂಕರ್ ಮೂಲಕ ನೀರು ಪೂರೈಸುತ್ತಿದ್ದಾರೆ. ರಾಯಚೂರಿನ ಪಟ್ಟಣ ಪ್ರದೇಶಗಳಲ್ಲಿ ಮೂರು ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದೆ. ಬೀದರ್‌ನಲ್ಲಿ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಸಮಸ್ಯೆ ಉಂಟಾಗಬಹುದು ಎಂದು ಜಿಲ್ಲಾಡಳಿತ ತಿಳಿಸಿದೆ. ಕುಷ್ಟಗಿ ತಾಲ್ಲೂಕಿನ ಬಹಳಷ್ಟು ಹಳ್ಳಿಗಳಲ್ಲಿನ ಶೇ 80ರಷ್ಟು ಶುದ್ಧ ನೀರಿನ ಘಟಕಗಳು ದುರಸ್ತಿಗಾಗಿ ಕಾದಿವೆ.

ಬರ ಪಟ್ಟಿಗೆ ಸೇರದ ತಾಲ್ಲೂಕಿನಲ್ಲೂ ಹಾಹಾಕಾರ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಯಲು ಸೀಮೆ ಮತ್ತು ಅರೆಮಲೆನಾಡು ನೀರಿನ ಕೊರತೆಯಿಂದ ತತ್ತರಿಸಿ ಹೋಗಿದೆ. ಬರಪಟ್ಟಿಯಲ್ಲಿ ಸೇರದ ಚಿಕ್ಕಮಗಳೂರು ತಾಲ್ಲೂಕಿನಲ್ಲೇ ಹೆಚ್ಚಿನ ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ತಾಲ್ಲೂಕಿನಲ್ಲಿಯೇ ಅತೀ ಹೆಚ್ಚು 9 ಹಳ್ಳಿ ಮತ್ತು 10 ಜನವಸತಿ ಪ್ರದೇಶಗಳನ್ನು ಜಿಲ್ಲಾ ಪಂಚಾಯಿತಿ ಗುರುತಿಸಿದೆ. ಐದು ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಪೂರೈಕೆ ಮಾಡಲಾಗುತ್ತಿದ್ದು, ಐದು ಹಳ್ಳಿಗಳಿಗೆ ಖಾಸಗಿ ಕೊಳವೆ ಬಾವಿಗಳಿಂದ ನೀರು ಪೂರೈಸಲಾಗುತ್ತಿದೆ. ಜಿಲ್ಲೆಯಲ್ಲಿ ಒಟ್ಟು 319 ಹಳ್ಳಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತಲೆದೋರಬಹುದು ಎಂದು ಅಧಿಕಾರಿಗಳು ಅಂದಾಜಿಸಿದ್ದಾರೆ. ಮಲೆನಾಡು ಹಾಗೂ ಕರಾವಳಿ ಪ್ರದೇಶದಲ್ಲೂ ಈ ಬಾರಿ ಜಲಕ್ಷಾಮದ ಭೀತಿ ಮೂಡಿದೆ. ಕೆಲವು ಗ್ರಾಮಗಳಲ್ಲಿ ನೀರಿಗಾಗಿ ಹಾಹಾಕಾರ ಈಗಾಗಲೇ ಆರಂಭವಾಗಿದ್ದರೆ, ಇನ್ನೂ ಕೆಲವು ಪ್ರದೇಶಗಳಲ್ಲಿ ಶೀಘ್ರದಲ್ಲೇ ನೀರಿನ ಸಮಸ್ಯೆ ತೀವ್ರಗೊಳ್ಳುವ ಸೂಚನೆಗಳಿವೆ.

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಗ್ರಾಮೀಣ ಭಾಗಗಳಲ್ಲಿ ಹಾಗೂ ಉಳ್ಳಾಲ ನಗರಸಭೆ ಮತ್ತು ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕೆಲವು ವಾರ್ಡ್‌ಗಳಲ್ಲಿ ಈಗಾಗಲೇ ಕುಡಿಯುವ ನೀರಿನ ಅಭಾವ ಕಾಣಿಸಿಕೊಂಡಿದೆ. ಇಂತಹ ಕಡೆ ಟ್ಯಾಂಕರ್‌ಗಳಲ್ಲಿ ನೀರು ಪೂರೈಸಲು ಕ್ರಮವಹಿಸಲಾಗಿದೆ. ಉಡುಪಿ ಜಿಲ್ಲೆಯ ಬೈಂದೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಪಡುವರಿ ಗ್ರಾಮದಲ್ಲಿ 1,308 ಕುಟುಂಬ, ಯಡ್ತರೆ ಗ್ರಾಮದಲ್ಲಿ 1,463 ಕುಟುಂಬ, ಬೈಂದೂರು ಹಾಗೂ ತಗ್ಗರ್ಸೆ ಗ್ರಾಮಗಳಲ್ಲಿ 1,070 ಕುಟುಂಬಗಳಿಗೆ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ.

ನೀರಿನ ಸಮಸ್ಯೆ ಎದುರಾಗಬಹುದಾದ ಗ್ರಾಮಗಳನ್ನು ಗುರುತಿಸಿದ ಜಿಲ್ಲಾಡಳಿತ

330	151	310	309
ಬೆಳಗಾವಿ	ಧಾರವಾಡ	ಉತ್ತರ ಕನ್ನಡ	ಹಾವೇರಿ

ಉತ್ತರ ಕರ್ನಾಟಕದಲ್ಲಿ ‘ಜಲಸಂಕಟ’

ಏಳು ನದಿಗಳು ಹರಿಯುವ ಬೆಳಗಾವಿ ಜಿಲ್ಲೆಯಲ್ಲಿ ಬೇಸಿಗೆಗೂ ಮುನ್ನವೇ ಕುಡಿಯುವ ನೀರಿನ ಬವಣೆ ತಲೆದೋರಿದೆ. ಗದಗ ಜಿಲ್ಲೆಯಲ್ಲಿ ಪರಿಸ್ಥಿತಿ ತೀವ್ರ ಹದಗೆಟ್ಟಿದೆ. ವಿಜಯನಗರ ಜಿಲ್ಲೆಯಲ್ಲಿ 60 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನು ಬಾಡಿಗೆಗೆ ಪಡೆದು ನೀರು ಪೂರೈಸಲಾಗುತ್ತಿದೆ. ಬಳ್ಳಾರಿ ಜಿಲ್ಲೆಯಲ್ಲಿ 10 ದಿನಕ್ಕೊಮ್ಮೆ ನೀರು ಸಿಗುತ್ತಿದೆ. ತೀವ್ರ ಸಮಸ್ಯೆಯಿರುವ ಚಿಕ್ಕೋಡಿ, ಬೆಳಗಾವಿ ಮತ್ತು ಮೂಡಲಗಿ ತಾಲ್ಲೂಕಿನ 6 ಗ್ರಾಮಗಳಿಗೆ ಈಗಾಗಲೇ ಟ್ಯಾಂಕರ್ ಮೂಲಕ ನೀರು ಪೂರೈಸಲಾಗುತ್ತಿದೆ.

‘ಗದಗ ಜಿಲ್ಲೆಯಲ್ಲಿ ಮಾರ್ಚ್ 10ರವರೆಗೆ ಕುಡಿಯುವ ನೀರಿಗೆ ಸಮಸ್ಯೆ ಎದುರಾಗಲ್ಲ’ ಎಂದು ಜಿಲ್ಲಾಡಳಿತ ತಿಳಿಸಿದೆ. ಆದರೆ, ಪರಿಸ್ಥಿತಿ ತೀವ್ರ ಹದಗೆಟ್ಟಿದೆ. ಗದಗ-ಬೆಟಗೇರಿ ಅವಳಿ ನಗರದ ವಿವಿಧೆಡೆ 7 ದಿನ, 12 ದಿನಗಳಿಗೊಮ್ಮೆ ನೀರು ಪೂರೈಕೆ ಆಗುತ್ತಿದೆ. ಇದೇ ಪರಿಸ್ಥಿತಿ ಜಿಲ್ಲೆಯ 7 ತಾಲ್ಲೂಕುಗಳಲ್ಲಿದೆ.

ವಾರಕ್ಕೆರಡು ಎರಡು ಬಾರಿ ಬಾಗಲಕೋಟೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಇಳಕಲ್ ತಾಲ್ಲೂಕಿನ ನಂದವಾಡಗಿಯಲ್ಲಿ ಕೊಳವೆಬಾವಿ ನೀರು ಕುಡಿಯಲು ಯೋಗ್ಯವಾಗಿಲ್ಲದೇ ಇರುವುದರಿಂದ ಜನರು ಗ್ರಾಮದಿಂದ 1 ಕಿ.ಮೀ ದೂರದಲ್ಲಿರುವ ಕೆರೆಯಿಂದ ಕೈಗಾಡಿಗಳಲ್ಲಿ ನೀರು ತರುತ್ತಾರೆ.

‘ಬಳ್ಳಾರಿ ನಗರ ಪ್ರದೇಶದಲ್ಲಿ ಐದು ದಿನಗಳಿಗೊಮ್ಮೆ ನೀರು ಪೂರೈಸುತ್ತಿರುವುದಾಗಿ ಜಿಲ್ಲಾಡಳಿತ ಹೇಳುತ್ತಿದೆ. ಆದರೆ, 10 ದಿನಗಳಿಗೊಮ್ಮೆ ನೀರು ಸಿಗುತ್ತಿದೆ’ ಎಂದು ಜನ ಹೇಳುತ್ತಾರೆ.

ಹಾವೇರಿ ಜಿಲ್ಲೆಯಲ್ಲಿ ಬೇಸಿಗೆ ಆರಂಭವಾಗುತ್ತಿದ್ದಂತೆ 48 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿದೆ. 34.34 ಟಿಎಂಸಿ ಅಡಿ ಸಂಗ್ರಹ ಸಾಮರ್ಥ್ಯದ ನವಿಲುತೀರ್ಥ ಜಲಾಶಯದಲ್ಲಿ 8.58 ಟಿಎಂಸಿ ಅಡಿಯಷ್ಟೇ ನೀರು ಸಂಗ್ರಹವಿದೆ. ಇದರಿಂದ ಸವದತ್ತಿ, ಬೈಲಹೊಂಗಲ ತಾಲ್ಲೂಕಿನ ಜನರೊಂದಿಗೆ ಅವಳಿ ನಗರ ಹುಬ್ಬಳ್ಳಿ-ಧಾರವಾಡಕ್ಕೂ ಈ ಬೇಸಿಗೆಯಲ್ಲಿ ಜಲಸಂಕಟದ ಬಿಸಿ ತಟ್ಟುವ ಸಾಧ್ಯತೆಯಿದೆ.



ಒಂದು ಮನೆಗೆ 4 ಬಿಂದಿಗೆ ನೀರು

ಚಿತ್ರದುರ್ಗ ಜಿಲ್ಲೆಯಲ್ಲಿ ಬೇಸಿಗೆ ಹೊಸ್ತಿಲಲ್ಲೇ ಜಲಕ್ಷಾಮದ ಆತಂಕ ಎದುರಾಗಿದೆ. ಜಿಲ್ಲೆಯ 367 ಹಳ್ಳಿಗಳಲ್ಲಿ ನೀರಿನ ಸಮಸ್ಯೆ ಇರುವುದನ್ನು ಜಿಲ್ಲಾಡಳಿತ ಗುರುತಿಸಿದೆ. ಈ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೊಳಲ್ಕೆರೆ ತಾಲ್ಲೂಕಿನ ಕುಮ್ಮಿನಘಟ್ಟ ಗ್ರಾಮದ ಎರಡು ಕೊಳವೆ ಬಾವಿಗಳಲ್ಲಿ ಅಂತರ್ಜಲ ಕುಸಿದಿದೆ. ಒಂದು ಮನೆಗೆ ದಿನಕ್ಕೆ 4 ಬಿಂದಿಗೆ ನೀರು ನೀಡಲಾಗುತ್ತಿದೆ. ನೀರಿಲ್ಲದೆ ಜಾನುವಾರು ಉಳಿಸಿಕೊಳ್ಳುವುದೇ ಸವಾಲಾಗಿದೆ ಎನ್ನುತ್ತಾರೆ ಗ್ರಾಮಸ್ಥರು. ತಾಲ್ಲೂಕಿನ ಹಲವೆಡೆ ಕೊಳವೆಬಾವಿಗಳಲ್ಲಿ ಅಂತರ್ಜಲವು ಪಾತಾಳ ತಲುಪಿದೆ.

ಈ ವರ್ಷ ಮಳೆ ಕೈಕೊಟ್ಟಿದ್ದರಿಂದ ದಾವಣಗೆರೆ ಜಿಲ್ಲೆಯ ಕೆಲವೆಡೆ ನೀರಿಗೆ ಹಾಹಾಕಾರ ಸೃಷ್ಟಿಯಾಗಿದೆ. 19 ಗ್ರಾಮಗಳಲ್ಲಿ ಅಂತರ್ಜಲ ಮಟ್ಟ ಕುಸಿದಿದೆ. ನೀರಿನ ಸಮಸ್ಯೆ ತಲೆದೋರುವಂಥ ಪರಿಸ್ಥಿತಿ ಇರುವ 126 ಗ್ರಾಮಗಳ ಪಟ್ಟಿಯನ್ನು ಜಿಲ್ಲಾಡಳಿತ ಸಿದ್ಧಪಡಿಸಿದೆ. ‘ಭದ್ರಾ ನಾಲೆಗೆ ಅಕ್ರಮವಾಗಿ ಅಳವಡಿಸಲಾಗಿದ್ದ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಲು ತಂಡಗಳನ್ನು ರಚಿಸಲಾಗಿದೆ. ಸಮಸ್ಯೆ ಎದುರಾಗುವ ಭಾಗಗಳಲ್ಲಿ ನಿಷೇಧಾಜ್ಞೆ ಜಾರಿಗೊಳಿಸುವಂತೆ ಸೂಚಿಸಲಾಗಿದೆ’ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ಒಳಹರಿವು ಕ್ಷೀಣ; ಬರಿದಾದ ಜಲಾಶಯ



ತುಂಗಭದ್ರಾ ಜಲಾಶಯ

• ಶಿವರಾಯ ಪೂಜಾರಿ

ಹುಬ್ಬಳ್ಳಿ: ಅಂತರ್ಜಲ ಮಟ್ಟ ಕುಸಿತ, ತಾಪಮಾನ ಏರಿಕೆ, ಕ್ಷೀಣಿಸುತ್ತಿರುವ ನೀರಿನ ಒಳಹರಿವು ಮುಂತಾದ ಕಾರಣಗಳಿಂದ ಜಲಾಶಯಗಳು ಬರಿದಾಗುತ್ತಿವೆ. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರ ಸ್ವರೂಪ ಪಡೆಯುವ ಸಾಧ್ಯತೆ ಇದೆ. ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಸದ್ಯ ಶೇ 36 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಈ ಜಲಾಶಯಗಳು ಒಟ್ಟು 895.62 ಟಿಎಂಸಿ ಅಡಿ ನೀರು ಸಂಗ್ರಹದ ಸಾಮರ್ಥ್ಯ ಹೊಂದಿವೆ. ಆದರೆ, ಪ್ರಸ್ತುತ ಸಂಗ್ರಹವಿರುವ ನೀರಿನ ಪ್ರಮಾಣ 324.17 ಟಿಎಂಸಿ ಅಡಿ ಮಾತ್ರ. ಕಳೆದ ವರ್ಷ ಈ ವೇಳೆಗೆ 467.34 ಟಿಎಂಸಿ ಅಡಿ ನೀರಿನ ಸಂಗ್ರಹವಿತ್ತು.

ಜಲಾಶಯಗಳಲ್ಲಿ ಪ್ರಸ್ತುತ 217 ಕ್ಯೂಸೆಕ್ ಒಳಹರಿವು, 19,629 ಕ್ಯೂಸೆಕ್ ಹೊರಹರಿವು ಇದೆ. ವಾರಾಹಿ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ, ಆಲಮಟ್ಟಿ, ನಾರಾಯಣಪುರ ಜಲಾಶಯಗಳಲ್ಲಿ ಒಳಹರಿವು ಸಂಪೂರ್ಣ ನಿಂತಿದೆ. ತುಂಗಭದ್ರಾ, ವಾರಾಹಿ, ಲಿಂಗನಮಕ್ಕಿ ಜಲಾಶಯಗಳಲ್ಲಿ ಸಂಗ್ರಹಣಾ ಸಾಮರ್ಥ್ಯದ ಶೇ 30ಕ್ಕಿಂತ ಕಡಿಮೆ ನೀರಿದೆ.

ಜಲಾಶಯಗಳ ನೀರನ್ನು ಸದ್ಯ ಕುಡಿಯಲು ಮಾತ್ರ ಪೂರೈಸಲಾಗುತ್ತಿದೆ. ಮುಂದಿನ 3 ತಿಂಗಳು ನೀರಿನ ಸಮಸ್ಯೆ ತೀವ್ರ ಕಾಡಲಿದೆ

ಜಿ.ಎಸ್. ಶ್ರೀನಿವಾಸ ರೆಡ್ಡಿ, ನಿವೃತ್ತ ನಿರ್ದೇಶಕ, ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ

ಕೆರೆ ಖಾಲಿ: ನೀರು, ಮೇವಿಗೆ ಬರ

ತುಮಕೂರು ಜಿಲ್ಲೆಯ ಪಾವಗಡ, ಮಧುಗಿರಿ, ಶಿರಾ, ಚಿಕ್ಕನಾಯಕನಹಳ್ಳಿ ತಾಲ್ಲೂಕಿಗಳಲ್ಲಿ ಕುಡಿಯುವ ನೀರಿಗೆ ಈಗಾಗಲೇ ಸಮಸ್ಯೆ ಆರಂಭವಾಗಿದೆ. ಹಸುಗಳಿಗೆ ಮೇವಿನ ಕೊರತೆಯಾಗಿದ್ದು, ದನಕರುಗಳನ್ನು ಸಿಕ್ಕಷ್ಟು ಬೆಲೆಗೆ ಮಾರಾಟ ಮಾಡಲು ರೈತರು ಮುಂದಾಗಿದ್ದಾರೆ. ತುಮಕೂರು ನಗರಕ್ಕೆ ನೀರು ಪೂರೈಸುವ ಬುಗುಡನಹಳ್ಳಿ ಕೆರೆ ಬರಿದಾಗುತ್ತಾ ಬಂದಿದೆ. ಆದರೂ ಜಿಲ್ಲಾ ಆಡಳಿತವು ಪರ್ಯಾಯವಾಗಿ ಯಾವುದೇ ಸಿದ್ಧತೆ ಮಾಡಿಕೊಂಡಿಲ್ಲ. ಜಲಮೂಲಗಳು ಬರಿದಾಗಿದ್ದು, ಕೊಳವೆ ಬಾವಿಗಳಲ್ಲಿ ನೀರು ಬತ್ತುತ್ತಿದೆ.

ರಾಮನಗರ ಜಿಲ್ಲೆಯ ರಾಮನಗರ, ಹಾರೋಹಳ್ಳಿ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ಹೆಚ್ಚಾಗಿದೆ. ಇಲ್ಲೆಲ್ಲಾ ಕುಡಿಯುವ ನೀರಿಗಾಗಿ ಟ್ಯಾಂಕರ್‌ಗಳ ಮೊರೆ ಹೋಗಲಾಗಿದೆ. ರಾಮನಗರದ ಕೆಲ ವಾರ್ಡ್‌ಗಳಲ್ಲಿ 5–10 ದಿನಗಳಿಗೊಮ್ಮೆ ನೀರು ಪೂರೈಕೆಯಾಗುತ್ತಿದೆ. ಅರ್ಕಾವತಿ ನದಿಯಲ್ಲಿ ನೀರು ಪ್ರಪಾತಕ್ಕೆ ತಲುಪಿದೆ. ಆದ್ದರಿಂದ, ಮಾಗಡಿಯ ಮಂಚನಬೆಲೆಯಿಂದ ನೀರನ್ನು ಪೂರೈಕೆ ಮಾಡಲಾಗುತ್ತಿದೆ. ಕೋಲಾರ ಜಿಲ್ಲೆಯಲ್ಲಿ 3–4 ಗ್ರಾಮ ಹೊರತುಪಡಿಸಿ ಉಳಿದೆಡೆ ಕುಡಿಯುವ ನೀರಿಗೆ ಸದ್ಯಕ್ಕೆ ಯಾವುದೇ ಸಮಸ್ಯೆ ಇಲ್ಲ. ಶ್ರೀನಿವಾಸಪುರ ಹಾಗೂ ಮುಳಬಾಗಿಲು ತಾಲ್ಲೂಕಿನಲ್ಲಿ ಮಾರ್ಚ್ ಮತ್ತು ಏಪ್ರಿಲ್ ಅಂತ್ಯದ ವೇಳೆಗೆ ತುಸು ಸಮಸ್ಯೆ ಕಾಣಿಸಬಹುದು.

ಕಾವೇರಿ ನದಿ ತೀರದ ಜನರಿಗೂ ಸಮಸ್ಯೆ

ಮೈಸೂರು ಭಾಗದ ಹಲವು ಜಿಲ್ಲೆಗಳಿಗೆ ಜೀವನದಿಯಾದ ಕಾವೇರಿಯ ಉಗಮ ಸ್ಥಾನವಾದ ಕೊಡಗಿನಲ್ಲಿಯೂ ಕುಡಿಯುವ ನೀರಿನ ಸಮಸ್ಯೆ ತಲೆದೋರಲಿದೆ. ‘15 ದಿನಗಳಲ್ಲಿ ಮಳೆಯಾಗದಿದ್ದರೆ ಕಾವೇರಿ ನದಿ ತೀರದ ಗ್ರಾಮಗಳಲ್ಲಿ ತೀವ್ರ ಸಮಸ್ಯೆಯಾಗಬಹುದು’ ಎನ್ನುತ್ತಾರೆ ಅಧಿಕಾರಿಗಳು. ಜೊತೆಗೆ, ಇತರೆ ಜಿಲ್ಲೆಗಳಲ್ಲಿ ಏಪ್ರಿಲ್–ಮೇ ತಿಂಗಳಲ್ಲಿ ಕುಡಿಯುವ ನೀರಿನ ಕೊರತೆ ಉಂಟಾಗುವ ಸಾಧ್ಯತೆ ಇದೆ.

‘ಪ್ರಸ್ತುತ ಮೈಸೂರು ನಗರಕ್ಕೆ 2 ದಿನಕ್ಕೊಮ್ಮೆ ನೀರು ಪೂರೈಕೆಯಾಗುತ್ತಿದ್ದು, ಏಪ್ರಿಲ್ ಅಂತ್ಯದವರೆಗೆ ತೊಂದರೆ ಇಲ್ಲ. ಮೇನಲ್ಲಿ ಮಳೆಯಾಗದಿದ್ದರೆ ಸಮಸ್ಯೆ ಹೆಚ್ಚಾಗಲಿದೆ’ ಎನ್ನುತ್ತಾರೆ ಅಧಿಕಾರಿಗಳು. ಚಾಮರಾಜನಗರ ಜಿಲ್ಲೆಯಲ್ಲಿ ಬಿಸಿಲು ಮುಂದುವರಿದರೆ ಮಾರ್ಚ್ ಕೊನೆಗೆ ಸಮಸ್ಯೆ ಕಾಡಬಹುದು. ಹನೂರು ತಾಲ್ಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಸಮಸ್ಯೆ ಇದೆ. ಮಂಡ್ಯ ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಖಾಸಗಿ ಕೊಳವೆಬಾವಿಗಳನ್ನೇ ಅವಲಂಬಿಸಲಾಗುತ್ತಿದೆ.

ಹೇಮಾವತಿ ಜಲಾಶಯ ಕಳೆದ ವರ್ಷ ಭರ್ತಿಯಾಗದಿರುವುದು ಸಮಸ್ಯೆಗೆ ಕಾರಣ. ಮಳೆ ಕೊರತೆಯಿಂದ ನದಿಯ ಒಳಹರಿವು ಕಡಿಮೆಯಾಗಿತ್ತು. ಕಾಲುವೆಯ ಮೂಲಕ ಕೆರೆಗಳನ್ನು ತುಂಬಿಸಲು ನೀರು ಹರಿಸಲಾಗಿದ್ದು, ಸದ್ಯಕ್ಕೆ 9.380 ಟಿಎಂಸಿ ಅಡಿ ನೀರು ಮಾತ್ರ ಬಳಕೆಗೆ ಲಭ್ಯವಾಗಿದೆ.

ಕೇಸರಿ ಶಾಲಿನಂಚಿನ ಕೊಳೆಯ ಕಥನ

ಮತ್ಸ್ಯಗಂಧ ಚಿತ್ರದ ದೃಶ್ಯ

ಹೊನ್ನಾವರದ ಟೊಂಕ ಪೊಲೀಸ್ ಠಾಣೆಯಿಂದ ಚಿತ್ರ ಪ್ರಾರಂಭವಾಗುತ್ತದೆ. ಕೇಸುಗಳೇ ಸಿಗದ ಕಡಲತೀರದ ಊರಿನಿಂದ ವರ್ಗಾವಣೆಗೊಂಡು ಹೋದರೆ ಸಾಕು ಎನ್ನುತ್ತಿರುತ್ತಾರೆ ಅಧಿಕಾರಿಗಳು. ಅಂತಹ ಹೊತ್ತಿನಲ್ಲಿ ಅದೇ ಠಾಣೆಯಲ್ಲಿರುವ ಚಿತ್ರದ ನಾಯಕ ಪರಂ, ಇನ್ಸ್‌ಪೆಕ್ಟರ್ ಆಗಿ ಬಡ್ತಿ ಪಡೆಯುತ್ತಾನೆ. ಮೀನುಗಾರರು ಮತ್ತು ಕೊಂಕಣಿಗರೇ ಪ್ರಾಬಲ್ಯ ಹೊಂದಿರುವ ಊರದು. ಎಲ್ಲರ ಹೆಗಲಿನಲ್ಲಿಯೂ ಕೇಸರಿ ಶಾಲು, ಬೈಕಲ್ಲಿ ಕೇಸರಿ ಬಾವುಟ. ಈ ಪಾಳಯಕ್ಕೆ ನಾಯಕ ಸ್ಥಳೀಯ ರಾಜಕಾರಣಿ ಸುಧೀರ್ ಪ್ರಭು. ಈ ಹುಡುಗರಿಗೆ ಕಿರಿಕ್ ಮಾಡಿ ಪರಂ ಊರವರ ಕೆಂಗಣ್ಣಿಗೆ ಗುರಿಯಾಗುತ್ತಾನೆ. ಇದು ಪೊಲೀಸ್ ಮತ್ತು ಊರಿನ ನಡುವಿನ ಕಿತ್ತಾಟದ ಕಥೆ ಎನ್ನಿಸುವ ಹೊತ್ತಿಗೆ ನಿರ್ದೇಶಕರು ಕಥೆಗೊಂದು ಒಳ್ಳೆ ಟ್ವಿಸ್ಟ್ ನೀಡುತ್ತಾರೆ.

ಚಿತ್ರದ ಪ್ರಾರಂಭದಲ್ಲಿಯೇ ಅಘನಾಶಿನಿ ತೀರದ ಬೆಸ್ತರ ಕೇರಿಯನ್ನು, ಊರನ್ನು ಬಹಳ ಚೆಂದವಾಗಿ ಕಟ್ಟಿಕೊಡುವಲ್ಲಿ ನಿರ್ದೇಶಕರು ಯಶಸ್ವಿಯಾಗಿದ್ದಾರೆ. ಆದರೆ ನಂತರ ಚಿತ್ರದಲ್ಲಿ ಈ ಸೊಗಡು ಉಳಿದುಕೊಳ್ಳುವುದಿಲ್ಲ. ಇದೊಂದು ಮಾಸ್ ಕಥೆಯಾಗಿ ಬದಲಾಗಿ ಬಿಡುತ್ತದೆ. ಪೊಲೀಸ್ ಅಧಿಕಾರಿ ಪರಂ ಆಗಿ ಪೃಥ್ವಿ ಅಂಬಾರ್‌ಗೆ ವಿಭಿನ್ನ ಮತ್ತು ಸವಾಲಿನ ಪಾತ್ರ. ಈ ಪಾತ್ರದ ಪೋಷಣೆಯಲ್ಲಿ ಇನ್ನಷ್ಟು ಪಕ್ವ ಬೇಕಿತ್ತು. ಇನ್ಸ್‌ಪೆಕ್ಟರ್ ಜೊತೆಗೇ ಇರುವ ಪೇದೆ ದಿನೇಶ್ ನಾಯಕನಾಗಿ ರಂಗಭೂಮಿ ಕಲಾವಿದ ಪ್ರಶಾಂತ್ ವರದಾಮೂಲ ಅಲ್ಲಲ್ಲಿ ನಗಿಸುತ್ತಾರೆ. ಈ ಪಾತ್ರ ಆಡುವ ಮಾತುಗಳೂ ಉತ್ತರ ಕನ್ನಡದ ಸೊಗಡಿಗೆ ಹಿಡಿದ ಕನ್ನಡಿಯಂತಿವೆ.

ವ್ಯವಸ್ಥೆ ಬೆಂಬಲಿತ ದೊಡ್ಡ ಗ್ಯಾಂಗೊಂದು ಗಾಂಜಾ ಸಾಗಾಣಿಕೆಗೆ ಊರಲ್ಲಿ ಕೇಸರಿ ಶಾಲು ಹೊದ್ದುಕೊಂಡು, ಪುಂಡಾಟಿಕೆ ಮಾಡಿಕೊಂಡಿರುವ ಈ ಮೀನುಗಾರ ಹುಡುಗರನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದೇ ಮುಖ್ಯ ಕಥೆ. ಖಳನಟರಾಗಿ ಸೌರವ್ ಲೋಕೇಶ್, ಶರತ್ ಲೋಹಿತಾಶ್ವ ಇದ್ದಾರೆ. ಇಲ್ಲಿತನಕ ಹಾಸ್ಯ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಪ್ರಶಾಂತ್ ಸಿದ್ದಿ ಖಳನಟನಾಗಿ ಜಿದ್ದಿಗೆ ಬಿದ್ದವರಂತೆ ನಟಿಸಿದ್ದಾರೆ. ಚಿತ್ರದ ಸಂಗೀತ ನಿರ್ದೇಶಕರು ಇವರೇ. ಹಾಡುಗಳು ಕಾಡುವುದಿಲ್ಲ. ಆದರೆ ಹಿನ್ನೆಲೆ ಸಂಗೀತ ಚಿತ್ರಕ್ಕೊಂದು ದೊಡ್ಡ ಬಲ. ಸ್ಥಳೀಯ ವಾದ್ಯಗಳನ್ನೇ ಹೆಚ್ಚಾಗಿ ಬಳಸಿರುವ ಹಿನ್ನೆಲೆ ಸಂಗೀತ ಚಿತ್ರಮಂದಿರದಿಂದ ಆಚೆ ಬಂದ ನಂತರವೂ ಮನಸ್ಸಿನಲ್ಲಿ ಉಳಿಯುತ್ತದೆ. ಛಾಯಾಚಿತ್ರಗ್ರಾಹಕ ಪ್ರವೀಣ್ ಪ್ರಭು ಉತ್ತರ ಕನ್ನಡವನ್ನು ಇನ್ನಷ್ಟು ಚೆಂದವಾಗಿ ತೋರಿಸುವ ಅವಕಾಶವಿತ್ತು.

ಕಡಲೂರಿನ ಇಂದಿನ ರಾಜಕೀಯ, ವಾಸ್ತವ ತೆರೆದಿಡುವ ಚೆಂದದ ಕಥೆ. ಆದರೆ ಕಥೆಯ ವಿಸ್ತರಣೆಯಲ್ಲಿ, ಪಾತ್ರ ಪೋಷಣೆಯಲ್ಲಿ ನಿರ್ದೇಶಕರು ಸ್ವಲ್ಪ ಎಡವಿದಂತಿದೆ.

ವಿನಾಯಕ ಕೆ.ಎಸ್

ನಾವು ನೋಡಿದ ಸಿನಿಮಾ

ಮತ್ಸ್ಯಗಂಧ (ಕನ್ನಡ)

- ನಿರ್ದೇಶನ: ದೇವರಾಜ್ ಪೂಜಾರಿ
- ನಿರ್ಮಾಣ: ಬಿ.ಎಸ್. ವಿಶ್ವನಾಥ್
- ತಾರಾಗಣ: ಪೃಥ್ವಿ ಅಂಬಾರ್, ಭಜರಂಗಿ ಲೋಕಿ, ಶರತ್ ಲೋಹಿತಾಶ್ವ, ಪ್ರಶಾಂತ್ ವರದಾಮೂಲ ಮತ್ತಿತರರು

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪದಬಂಧ 5601

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ರತ್ನದಂಥ ಚುಂಬನ! (2)
2. ವಾಯಸ ಮತ್ತು ಚಿನ್ನ ಸೇರಿದರೆ ಅಭ್ರಕ ಸಿಗುತ್ತದೆ! (5)
4. ಕಣದಲ್ಲಿರುವ ಹತೋಟಿ (4)
6. ಇದು ವೀರಶೈವರ ಸ್ಮಶಾನ (4)
8. ಮರದ ಮೆಟ್ಟು (3)
9. ತಿಳಿಯದವನು ಇಲ್ಲಿದ್ದಾನೆ (3)
11. ಮಂಜ ನಡುವೆ ತೂರಿಕೊಂಡರೆ ಇದು ಸೂಕ್ತ! (4)
13. ಮರದೊಳಗೆ ಸುತ್ತುತ್ತಿರುವ ದುಂಬಿ (4)
15. ಎಲ್ಲರೂ ಒಟ್ಟಾಗಿ ಹಾಡುವುದು (5)
16. ಖನಿಜಗಳ ನೆಲೆ (2)

ಮೇಲಿಂದ ಕೆಳಕ್ಕೆ

1. ದುಮುಗುಟ್ಟುತ್ತಿರುವ ಅಜ್ಜ (3)
2. ಕಾಯಿಯ ಹೂರಣ ತಂದಿರುವ ಉದ್ದೇಶ! (3)
3. ಪಾಳು ಭೂಮಿ ಇಲ್ಲಿದೆ (3)
5. ಕಾವು ಬಡಿದರೂ ತೋರಿಸಿದ ಡೌಲು! (3)
7. ಬಂಗಾರವನ್ನು ಹೀಗೂ ಹೇಳುವರು (3)
8. ಸಹಾಯವಿಲ್ಲಿ ಅಸ್ತವ್ಯಸ್ತವಾಗಿಬಿಟ್ಟಿದೆ (3)
10. ಪಕ ಪಕ ನಕ್ಕಾಗ ಬಂದಿರುವ ನೆನಪು (3)
12. ಸಹನೀಯವೆನಿಸಿದ್ದಕ್ಕೇ ಇಷ್ಟು ಹತ್ತಿರ! (3)
13. ಮನದೊಳಗೇ ಚಿಂತನೆ! (3)
14. ಮಣಿ ಧರಿಸಿದ ಚಲುವೆ (3)



5600ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಕ್ಷುಃಪ್ರೀತಿ 3.ಲವಾಜಮೆ
5.ವಿಧುರ 6.ಪದವಿ
7.ದನುಜ
9.ದಮನ 11.ಲಲಾಟ
12.ಅಪಾತ್ರ 13.ಅಂಗಾರಕ
15.ವಿನಿಯೋಗ

ಮೇಲಿಂದ ಕೆಳಕ್ಕೆ:
1.ಚಮ್ಮಾರ 2.ತಿಲ
4.ವಾಕ್ಕೋವಿದ
5.ವಿಷಾದ 6.ಪಲ್ಲಟ
8.ಜಲಚರ 10.ನಕ್ಷತ್ರ
12.ಅಪಾಂಗ 14.ಕವಿ

ಸುಡೊಕು 5986

	2			6	7	4		
3							7	2
	7	1		4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

5985 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಫೆಬ್ರುವರಿ 24, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪೂರ್ಣಿಮಾ ಗಂ. 18-00 ನಕ್ಷತ್ರ: ಮಘಾ ಗಂ. 22-21 ಯೋಗ: ಅತಿಗಂಡ ಗಂ. 13-34 ಕರಣ: ಬವ ಗಂ. 18-00, ಕುಂಭ ಮಾಸದ 11 ನೇ ದಿನ, ಮಳೆನಕ್ಷತ್ರ: ಶತಭಿಷ 2.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-53 ಸೂರ್ಯಾಸ್ತ : 06-35
ಮುಸ್ಲಿಂ ದಿನಾಂಕ : 13 ಶಬನ್
ದಿನ ವಿಶೇಷ : ಮಾಘಿ ಪೂರ್ಣಿಮಾ, ಅದೃಷ್ಟ ಸಂಖ್ಯೆ : 7, 2

ಮೇಷ: ಕಾರ್ಯದೊತ್ತಡ ಜತೆಯಲ್ಲಿ ಮನೆಯ ವಿಚಾರಗಳತ್ತಲೂ ಗಮನಹರಿಸುವುದು ಮುಖ್ಯ. ಅಗ್ನಿಯಿಂದ ಅವಘಡ ಸಂಭವಿಸಬಹುದು ಎಚ್ಚರ ವಹಿಸಿ. ಹೊಸ ಜವಾಬ್ದಾರಿಗಳು ಅರಸಿ ಬರಲಿದೆ.

ವೃಷಭ: ಕೋರ್ಟ್ ಕೆಲಸಗಳಿಗಾಗಿ ಹಿರಿಯ ಅಧಿಕಾರಿಗಳ ಸಲಹೆ ಪಡೆಯುವುದು ಅವಶ್ಯಕ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ಮಂಗಳ ಕಾರ್ಯಗಳ ಶುಭ ಸೂಚನೆಗಳು ಕಂಡುಬರುತ್ತದೆ.

ಮಿಥುನ: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ದೃಢ ನಿರ್ಧಾರದಿಂದ ಕೆಲಸಕಾರ್ಯಗಳೆಲ್ಲವು ಪೂರ್ಣಗೊಳ್ಳಲಿದೆ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ.

ಕರ್ಕಾಟಕ: ಜವಾಬ್ದಾರಿಯುತ ಸ್ಥಾನವನ್ನು ನಿಭಾಯಿಸಲು ತೀರ್ಮಾನಿಸುವುದು ಸರಿಯಲ್ಲ. ಮಾತೃ ಸಂಬಂಧಿಗಳ ಸಹಾಯದಿಂದ ಉತ್ತಮ ನೌಕರಿ ದೊರೆಯುವುದು. ಮನೆ ದೇವರಿಗೆ ಹರಕೆ ಸಲ್ಲಿಸುವ ಬಗ್ಗೆ ಯೋಚಿಸಿ.

ಸಿಂಹ: ಬರುವ ಅವಕಾಶಗಳನ್ನು ನಿಮ್ಮತ್ತ ತಿರುಗಿಸಿಕೊಂಡು ಸದುಪಯೋಗ ಪಡೆದುಕೊಳ್ಳಿ. ದೇಹದಲ್ಲಿ ಉಂಟಾಗಿದ್ದಂಥ ಪಿತ್ತ, ಉಷ್ಣಪ್ರಕೋಪ ದೂರಾಗುವವು.

ಕನ್ಯಾ: ಕರ್ತವ್ಯ ನಿಷ್ಠೆಯಿಂದ ಉತ್ತಮ ಹೆಸರು ಸಂಪಾದನೆಯಾಗುವುದು. ಪ್ರಯತ್ನಿಸಿದ ಕಾರ್ಯಗಳು ಆಪ್ತರ ಸಕಾಲಿಕ ನೆರವಿನಿಂದ ಕೈಗೂಡುವುದು. ಜನಬಲದ ಕೊರತೆಯು ಯಶಸ್ಸಿಗೆ ಅಡ್ಡಿಯನ್ನು ಉಂಟುಮಾಡಲಿದೆ.

ತುಲಾ: ವಾಹನಚಾಲನಾ ವೃತ್ತಿಯವರಿಗೆ ಶುಭವಿದೆ. ರಾಸಾಯನಿಕ ವಸ್ತುಗಳಲ್ಲಿ ಕೆಲಸ ಮಾಡುವವರು ಜಾಗ್ರತರಾಗಿರಿ. ಸ್ವಪ್ರತಿಷ್ಠೆಯನ್ನು ಕಾಪಾಡಲು ವಾದ ಮಾಡಬೇಕಾಗಬಹುದು.

ವೃಶ್ಚಿಕ: ವಿವಾಹ ವಯಸ್ಕ ಯೋಗ್ಯರಿಗೆ ನೂತನ ಸಂಬಂಧಗಳು ಕಂಡು ಬರಲಿವೆ. ವರ್ಗಾವಣೆಯಿಂದ ದೂರ ವಾಸಿಸುವ ಸಂದರ್ಭ ಬರಲಿದೆ. ಹೆಚ್ಚಿನ ವಿದ್ಯಾಭ್ಯಾಸದ ಬಗ್ಗೆ ಚಿಂತನೆ ನಡೆಯುವುದು.

ಧನು: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಆಸ್ತಿ ಕೊಳ್ಳುವ ನಿರ್ಧಾರದಲ್ಲಿ ಲಾಭ-ನಷ್ಟವನ್ನು ಪುನಃ ಇನ್ನೊಮ್ಮೆ ಯೋಚಿಸುವುದು ಉತ್ತಮ.

ಮಕರ: ಹೊಸ ಪುಸ್ತಕಗಳ ಪ್ರಕಾಶನ ಮಾಡುವವರಿಗೆ ಶುಭದಿನ. ಪತ್ರಕರ್ತರಿಗೆ ರಹಸ್ಯ ವಿಷಯ ತಿಳಿಯುವುದು. ಆಸೆ ಆಕಾಂಕ್ಷೆಗಳು ಈಡೇರಿ ಎಲ್ಲವೂ ನಿಮ್ಮ ಇಚ್ಛೆಯಂತೆ ನಡೆಯುವುದು.

ಕುಂಭ: ಎದುರಾಗಿರುವ ಸಮಸ್ಯೆಗೆ ಸಂಬಂಧಿಸಿದ ವ್ಯಕ್ತಿಯಲ್ಲಿ ಮಾತನಾಡುವುದರಿಂದ ಸಂಪೂರ್ಣವಾಗಿ ಉತ್ತರ ಸಿಗುವುದು. ಬರಬೇಕಾಗಿದ್ದ ಹಣಕ್ಕಾಗಿ ಹೆಚ್ಚು ಓಡಾಡಬೇಕಾಗುವುದು. ಕಾರ್ಮಿಕ ವರ್ಗದವರ ಬಗ್ಗೆ ಗಮನವಿರಲಿ.

ಮೀನ: ಜಾಣ್ಮೆಯಿಂದ ಅವಕಾಶ ಬಳಸಿಕೊಂಡಲ್ಲಿ ಅಧಿಕಾರ ಪಡೆದು ಕೊಳ್ಳುವುದು ಕಷ್ಟದ ಕೆಲಸವೇನಲ್ಲ. ಹಣಕಾಸಿನ ಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸೂಕ್ತ ಕಾಲವಾಗಿದೆ. ಉಷ್ಣ ವ್ಯಾಧಿ ಉಪಶಮನಕ್ಕೆ ಔಷಧಿಯನ್ನು ಸ್ವೀಕರಿಸಿ.

ಮಮತಾ ಮುನಿಸು ಶಮನಕ್ಕೆ ಕಾಂಗ್ರೆಸ್ ಪ್ರಯತ್ನ • ಬಿಕ್ಕಟ್ಟು ಬಗೆಹರಿಸಲು ಸೌಹಾರ್ದ ಸೂತ್ರ

‘ಇಂಡಿಯಾ’ ಮೈತ್ರಿ ಮತ್ತೆ ಹಳಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗಾಗಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಹಾಗೂ ಕಾಂಗ್ರೆಸ್ ನಡುವಿನ ಮೈತ್ರಿ ಮಾತುಕತೆ ಪುನರಾರಂಭಗೊಂಡಿದೆ.

ಉತ್ತರ ಪ್ರದೇಶದಲ್ಲಿ ಸಮಾಜವಾದಿ ಪಕ್ಷ ಹಾಗೂ ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಂಡ ಬೆನ್ನಲ್ಲೇ, ಪಶ್ಚಿಮ ಬಂಗಾಳದ ಮೈತ್ರಿ ಬಿಕ್ಕಟ್ಟನ್ನು ಬಗೆಹರಿಸಲು ಕಾಂಗ್ರೆಸ್ ಹೆಜ್ಜೆ ಇಟ್ಟಿದೆ. ಕಾಂಗ್ರೆಸ್‌ನ ಪ್ರಸ್ತಾವಕ್ಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ. ಆದರೆ, ‘ಈ ಮೈತ್ರಿ ವ್ಯಾಪ್ತಿ ರಾಜ್ಯಕ್ಕೆ ಮಾತ್ರ ಸೀಮಿತವಾಗಬಾರದು. ಅಸ್ಸಾಂ ಹಾಗೂ ಮೇಘಾಲಯದಲ್ಲೂ ಸೀಟು ಹಂಚಿಕೆ ಆಗಬೇಕು. ಈ ವಿಷಯದಲ್ಲಿ ಕಾಂಗ್ರೆಸ್ ನಾಯಕರು ಉದಾರವಾಗಿರಬೇಕು’ ಎಂಬ ಷರತ್ತನ್ನೂ ಒಡ್ಡಿದ್ದಾರೆ.

ಪಶ್ಚಿಮ ಬಂಗಾಳದಲ್ಲಿ ಪಕ್ಷ ಏಕಾಂಗಿಯಾಗಿ ಸ್ಪರ್ಧಿಸಲಿದ್ದು, ಕಾಂಗ್ರೆಸ್ ಪಕ್ಷದ ಜತೆಗೆ ಯಾವುದೇ ಮೈತ್ರಿ ಇಲ್ಲ ಎಂದು ಮಮತಾ ಬ್ಯಾನರ್ಜಿ ಕಳೆದ ತಿಂಗಳು ಪ್ರಕಟಿಸಿದ್ದರು. ಟಿಎಂಸಿ ವಿರುದ್ಧ ಲೋಕಸಭೆಯ ಕಾಂಗ್ರೆಸ್ ಪಕ್ಷದ ನಾಯಕ ಅಧೀರ್ ರಂಜನ್ ಚೌಧರಿ ಅವರ ಕಟು ಟೀಕೆ, ರಾಜ್ಯದಲ್ಲಿ ಕನಿಷ್ಠ 10 ಸೀಟುಗಳನ್ನು ಬಿಟ್ಟುಕೊಡಬೇಕು ಎಂದು ‘ಕೈ’ ಪಾಳಯದ ನಾಯಕರು ಬೇಡಿಕೆ ಮುಂದಿಟ್ಟ ಕಾರಣಕ್ಕೆ ರಾಜ್ಯದಲ್ಲಿ ಮೈತ್ರಿ ಇಲ್ಲ ಎಂದು ಮಮತಾ ಹೇಳಿದ್ದರು. ರಾಜ್ಯದಲ್ಲಿ ಟಿಎಂಸಿ ಪ್ರಾಬಲ್ಯದ ಕ್ಷೇತ್ರಗಳಲ್ಲೇ ರಾಹುಲ್ ಗಾಂಧಿ ಅವರ ಭಾರತ ಜೋಡೊ ನ್ಯಾಯ್ ಯಾತ್ರೆ ಸಾಗಿದ್ದು ಅವರ ಅಸಮಾಧಾನಕ್ಕೆ ಕಾರಣವಾಗಿತ್ತು.

ರಾಜ್ಯದಲ್ಲಿ ಕಾಂಗ್ರೆಸ್‌ಗೆ ಎರಡಕ್ಕಿಂತ ಹೆಚ್ಚು ಕ್ಷೇತ್ರ ಬಿಟ್ಟುಕೊಡಲು ಸಾಧ್ಯವಿಲ್ಲ ಎಂದು ಟಿಎಂಸಿ ಪಟ್ಟು ಹಿಡಿದಿದೆ. ಅದರ ನಡುವೆಯೂ, ಸೌಹಾರ್ದಯುತ ಪರಿಹಾರ ಕಂಡುಕೊಳ್ಳಲು ಮಾತುಕತೆ ಮುಂದುವರಿದಿದೆ. ಮೈತ್ರಿಕೂಟದಲ್ಲಿ ಗೌರವಾನ್ವಿತ ಸಂಖ್ಯೆಯ ಸ್ಥಾನಗಳನ್ನು ಕೈಪಾಳಯ ಬಯಸುತ್ತಿದೆ. ಐದು ಕ್ಷೇತ್ರಗಳಿಗೆ ಸಮಾಧಾನ ಪಡಬಹುದು. ಬೆಹ್ರಾಂಪುರ, ಮಾಲ್ಡಾ ದಕ್ಷಿಣ, ಮಾಲ್ಡಾ ಉತ್ತರ, ರಾಯ್‌ಗಂಜ್ ಮತ್ತು ಡಾರ್ಜಿಲಿಂಗ್ ಕ್ಷೇತ್ರಗಳು ಕಾಂಗ್ರೆಸ್ ಪಾಲಾಗಬಹುದು ಎಂದು ಮೂಲಗಳು ತಿಳಿಸಿವೆ.

ಮೇಘಾಲಯದ ತುರಾ ಹಾಗೂ ಅಸ್ಸಾಂನ ಎರಡು ಕ್ಷೇತ್ರಗಳನ್ನು ಪಕ್ಷಕ್ಕೆ ಬಿಟ್ಟುಕೊಡಬೇಕು ಎಂದು ಟಿಎಂಸಿ ಬೇಡಿಕೆ ಮುಂದಿರಿಸಿದೆ. 2019ರ ಚುನಾವಣೆಯಲ್ಲಿ ತುರಾದಲ್ಲಿ ಪಕ್ಷವು ಶೇ 28ರಷ್ಟು ಮತಗಳನ್ನು ಪಡೆದಿತ್ತು. ಕಾಂಗ್ರೆಸ್‌ಗೆ ಸಿಕ್ಕಿದ್ದು ಶೇ 9 ಮತಗಳಷ್ಟೇ. ಇಲ್ಲಿ ಪಕ್ಷದ ಅಭ್ಯರ್ಥಿ ಸ್ಪರ್ಧಿಸಿದರೆ ಗೆಲುವಿನ ಸಾಧ್ಯತೆ ಹೆಚ್ಚು ಎಂಬುದು ಟಿಎಂಸಿ ವಾದ.

ಕಳೆದ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್‌ನ ಹಲವು ನಾಯಕರು ಟಿಎಂಸಿಗೆ ಪಕ್ಷಾಂತರಗೊಂಡಿದ್ದರು. ಹಾಗಾಗಿ, ಟಿಎಂಸಿ ಮತ ಪ್ರಮಾಣ ಹೆಚ್ಚಾಯಿತು. ಪಶ್ಚಿಮ ಬಂಗಾಳದಲ್ಲಿ ಸೀಟು ಹಂಚಿಕೆ ಸೌಹಾರ್ದಯುತವಾಗಿ ಪೂರ್ಣಗೊಳ್ಳಲು ತುರಾ ಕ್ಷೇತ್ರವನ್ನು ಬಿಟ್ಟುಕೊಡಲು ಸಿದ್ಧರಿದ್ದೇವೆ ಎಂದು ಕಾಂಗ್ರೆಸ್‌ನ ಕೆಲವು ನಾಯಕರು ಹೇಳುತ್ತಾರೆ.

2019ರ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದಲ್ಲಿ ಟಿಎಂಸಿ 22, ಬಿಜೆಪಿ 18 ಹಾಗೂ ಕಾಂಗ್ರೆಸ್ 2 ಕ್ಷೇತ್ರಗಳಲ್ಲಿ ಜಯ ಗಳಿಸಿದ್ದವು.

ಪ್ರಜಾ ಮತ
ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

ಗುಜರಾತ್: ಭರೂಚ್ ಕಗ್ಗಂಟು

ದೆಹಲಿಯಲ್ಲಿ ಎಎಪಿ– ಕಾಂಗ್ರೆಸ್ ನಡುವಿನ ಸೀಟು ಹಂಚಿಕೆ ಪ್ರಕ್ರಿಯೆ ಅಂತಿಮಗೊಂಡಿದೆ. ಅಧಿಕೃತ ಘೋಷಣೆಯಷ್ಟೇ ಬಾಕಿ ಉಳಿದಿದೆ. ಗುಜರಾತ್‌ನ ಭರೂಚ್ ಕ್ಷೇತ್ರಕ್ಕೆ ಸಂಬಂಧಿಸಿದ ಹಗ್ಗಜಗ್ಗಾಟದಿಂದ ಘೋಷಣೆ ವಿಳಂಬವಾಗಿದೆ.

ದೆಹಲಿಯಲ್ಲಿ ಎಎಪಿ ನಾಲ್ಕರಲ್ಲಿ ಹಾಗೂ ಕಾಂಗ್ರೆಸ್ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಬಗ್ಗೆ ಉಭಯ ಪಕ್ಷಗಳ ನಾಯಕರು ಸಹಮತಕ್ಕೆ ಬಂದಿದ್ದಾರೆ. ಹರಿಯಾಣದಲ್ಲಿ ಎಎಪಿಗೆ ಒಂದು ಕ್ಷೇತ್ರವನ್ನು ಬಿಡಲು ಕೈ ಪಾಳಯ ಒಪ್ಪಿದೆ. ಚಂಡೀಗಢ ಕ್ಷೇತ್ರವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಡಲು ಎಎಪಿ ಒಪ್ಪಿದೆ.

ತಾತ್ವಿಕವಾಗಿ, ಗುಜರಾತ್‌ನಲ್ಲಿ ಎಎಪಿಗೆ ಭರೂಚ್ ಮತ್ತು ಭವಾನಗರ ಎರಡನ್ನೂ ಬಿಟ್ಟುಕೊಡಲು ಕಾಂಗ್ರೆಸ್ ಸಿದ್ಧವಾಗಿದೆ. ಆದರೆ, ಭರೂಚ್ ಜತೆಗೆ ಕಾಂಗ್ರೆಸ್‌ನ ಅಹ್ಮದ್ ಪಟೇಲ್ ಕುಟುಂಬಕ್ಕೆ ಭಾವನಾತ್ಮಕ ಸಂಬಂಧ ಇದೆ. ಹಾಗಾಗಿ, ಈ ಕ್ಷೇತ್ರದ ಮೇಲಿನ ಹಕ್ಕು ಸಡಿಲಿಸಿದರೆ ತಪ್ಪು ಸಂದೇಶ ರವಾನೆಯಾಗಬಹುದು ಎಂದು ಕೈ ಪಾಳಯದ ಒಂದು ವರ್ಗ ವಾದಿಸಿದೆ.

ಎಎಪಿ ಜತೆಗಿನ ಮೈತ್ರಿಯನ್ನು ಶೀಘ್ರದಲ್ಲಿ ಘೋಷಿಸಲಾಗುವುದು ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ತಿರುವನಂತಪುರ ಕ್ಷೇತ್ರದಿಂದ ಕಣಕ್ಕೆ?

ತಿರುವನಂತಪುರ: ಲೋಕಸಭಾ ಚುನಾವಣೆಯಲ್ಲಿ ಕೇರಳದ ತಿರುವಂನತಪುರ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗುವರ ಪಟ್ಟಿಯಲ್ಲಿ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಹೆಸರು ಮುಂಚೂಣಿಯಲ್ಲಿದೆ. ಸದ್ಯ, ಇವರು ರಾಜ್ಯಸಭೆ ಸದಸ್ಯ.

ಈ ಕ್ಷೇತ್ರದ ಸಂಸದ, ಕಾಂಗ್ರೆಸ್‌ನ ಶಶಿ ತರೂರ್, ಪುನರಾಯ್ಕೆ ಬಯಸಿ ಮತ್ತೆ ಕಣಕ್ಕಿಳಿಯುವ ಸಾಧ್ಯತೆಗಳಿವೆ.

ಕೇರಳದಲ್ಲಿ ಖಾತೆ ತೆರೆಯುವ ಹೆಜ್ಜೆಯಾಗಿ ತಿರುವನಂತಪುರ ಕ್ಷೇತ್ರದ ಮೇಲೆ ಬಿಜೆಪಿ ರಾಷ್ಟ್ರೀಯ ನಾಯಕರು ಹೆಚ್ಚು ಗಮನಹರಿಸಿದ್ದಾರೆ. ಇಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರೇ ಬಿಜೆಪಿ ಅಭ್ಯರ್ಥಿಯಾಗಬಹುದು ಎಂಬ ವದಂತಿಗಳಿವೆ.

ಆದರೆ, ಬಿಜೆಪಿಯು ಈ ವದಂತಿಯನ್ನು ಸ್ಪಷ್ಟವಾಗಿ ತಳ್ಳಿಹಾಕಿದೆ. ಉಳಿದಂತೆ, ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಎಸ್. ಜೈಶಂಕರ್, ನಟಿ ಹಾಗೂ ನೃತ್ಯಪಟು ಶೋಭನಾ ಅವರ ಹೆಸರುಗಳು ಕೇಳಿಬರುತ್ತಿವೆ.

ಬಿಜೆಪಿ ಮೂಲಗಳ ಪ್ರಕಾರ, ಸದ್ಯ ರಾಜೀವ್ ಚಂದ್ರಶೇಖರ್ ಅವರ ಹೆಸರು ಮುಂಚೂಣಿಯಲ್ಲಿದೆ. ಸಚಿವರು ಬೆಂಗಳೂರಿನಿಂದ ಸ್ಪರ್ಧಿಸಲು ಬಯಸಿದ್ದರೂ, ಆ ಸಾಧ್ಯತೆ ಕಡಿಮೆ. ತಿರುವನಂತಪುರ ಕ್ಷೇತ್ರವು 2ನೇ ಆಯ್ಕೆಯಾಗಬಹುದು.

ರಾಜೀವ್ ಚಂದ್ರಶೇಖರ್ ಅವರ ತಂದೆ–ತಾಯಿ ಮಲೆಯಾಳಿಗರು. 59 ವರ್ಷ ವಯಸ್ಸಿನ ಸಚಿವರು ಅಹಮದಾಬಾದ್‌ನಲ್ಲಿ ಜನಿಸಿದ್ದು, ಸದ್ಯ ಬೆಂಗಳೂರಿನಲ್ಲಿ ವಾಸವಿದ್ದಾರೆ.

ಸ್ಪರ್ಧೆ ಖಚಿತ ಸುಮಲತಾ

ಪ್ರಜಾವಾಣಿ ವಾರ್ತೆ

ಸುಮಲತಾ

ಮಂಡ್ಯ: ‘ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರವನ್ನು ಬಿಜೆಪಿಗೇ ಉಳಿಸಿಕೊಳ್ಳಲು ಕಡೇ ಕ್ಷಣದವರೆಗೂ ಹೋರಾಡುತ್ತೇನೆ. ಈಗ ಹರಿದಾಡುತ್ತಿರುವ ಅಂತೆಕಂತೆಗಳು ಅಂತಿಮವಲ್ಲ; ನಾನು ಸ್ಪರ್ಧಿಸುವುದು ಖಚಿತ’ ಎಂದು ಸಂಸದೆ ಸುಮಲತಾ ಹೇಳಿದರು.

ಇಲ್ಲಿ ಸುದ್ದಿಗಾರರ ಜೊತೆ ಶುಕ್ರವಾರ ಮಾತನಾಡಿದ ಅವರು, ‘ಜಿಲ್ಲೆಯಲ್ಲಿ ಬಿಜೆಪಿ ಸಂಘಟಿಸಲು ಸಾಕಷ್ಟು ಹೋರಾಟ ಮಾಡಿದ್ದೇನೆ. ಟಿಕೆಟ್ ಅಂತಿಮವಾಗುವವರೆಗೂ ಕಾದು ನೋಡುತ್ತೇನೆ. ನಂತರವಷ್ಟೇ ಆ ಬಗ್ಗೆ ಮಾತನಾಡುತ್ತೇನೆ. ಕ್ಷೇತ್ರವು ಬಿಜೆಪಿಗೇ ದೊರೆಯಲಿದೆ ಎಂಬ ವಿಶ್ವಾಸ ನನಗಿದೆ. ನನಗಾಗಿ ಟಿಕೆಟ್ ಕೇಳುತ್ತಿಲ್ಲ, ನನ್ನ ಮಂಡ್ಯ ಜನರಿಗಾಗಿ ಹೋರಾಡುತ್ತಿದ್ದೇನೆ’ ಎಂದರು.

‘ನಾನು ಟಿಕೆಟ್ ಪಡೆಯಲೇಬೇಕು ಎಂಬ ಉದ್ದೇಶವಿದ್ದರೆ ಎಲ್ಲಾದರೂ ಅವಕಾಶ ಸಿಗುತ್ತಿತ್ತು. ಆದರೆ ಮಂಡ್ಯ ಲೋಕಸಭಾ ಕ್ಷೇತ್ರದ ಜನರು ನನಗೆ ಮುಖ್ಯ. ಜೆಡಿಎಸ್‌ನವರು ಏನಾದರೂ ಹೇಳಿಕೊಳ್ಳಲಿ, ಟಿಕೆಟ್ ಅಧಿಕೃತವಾಗಿ ಘೋಷಣೆಯಾಗುವವರೆಗೂ ಕಾಯುತ್ತೇನೆ, ಬಳಿಕ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ’ ಎಂದು ಸುಮಲತಾ ಪ್ರತಿಕ್ರಿಯಿಸಿದರು.

ಸುದ್ದಿ 2 ನಿಮಿಷ

‘ನಿರ್ದಿಷ್ಟ ಯೋಜನೆ ಜಾರಿಗೆ ನಿರ್ದೇಶನ ನೀಡಲಾಗದು’

ನವದೆಹಲಿ (ಪಿಟಿಐ): ಸರ್ಕಾರದ ನೀತಿಗೆ ಸಂಬಂಧಿಸಿರುವ ವಿಚಾರವನ್ನು ಪರಿಶೀಲಿಸುವಲ್ಲಿ ನ್ಯಾಯಾಂಗದ ವ್ಯಾಪ್ತಿಗೆ ಮಿತಿ ಇದೆ ಮತ್ತು ನಿರ್ದಿಷ್ಟ ಯೋಜನೆ ಅಥವಾ ನೀತಿಯನ್ನು ಜಾರಿಗೊಳಿಸುವಂತೆ ನ್ಯಾಯಾಲಯಗಳು ರಾಜ್ಯ ಸರ್ಕಾರಗಳಿಗೆ ನಿರ್ದೇಶಿಸಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಹೇಳಿದೆ.

ಅಪೌಷ್ಟಿಕತೆ ನಿವಾರಣೆಗಾಗಿ ಸಮುದಾಯ ಅಡುಗೆ ಮನೆಗಳನ್ನು ಸ್ಥಾಪಿಸುವ ಯೋಜನೆಯನ್ನು ರೂಪಿಸುವಂತೆ ರಾಜ್ಯಗಳಿಗೆ ನಿರ್ದೇಶನ ನೀಡಬೇಕೆಂದು ಕೋರಿ ಸಲ್ಲಿಕೆ ಆಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ವಿಲೇವಾರಿ ಮಾಡುವ ವೇಳೆ ನ್ಯಾಯಾಲಯವು ಈ ಹೇಳಿಕೆ ನೀಡಿದೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (ಎನ್‌ಎಫ್‌ಎಸ್‌ಎ) ಮತ್ತು ಇತರ ಕಲ್ಯಾಣ ಯೋಜನೆಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾರಿಗೊಳಿಸುತ್ತಿರುವುದರಿಂದ ಈ ವಿಚಾರವಾಗಿ ಯಾವುದೇ ನಿರ್ದೇಶನಗಳನ್ನು ನೀಡಲು ಸಾಧ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಪಂಕಜ್ ಮಿತ್ತಲ್ ಅವರ ನ್ಯಾಯಪೀಠ ತಿಳಿಸಿದೆ.

ಸರ್ಕಾರಗಳ ನೀತಿಯ ಕಾನೂನುಬದ್ಧತೆ ಮಾತ್ರ ನ್ಯಾಯಾಂಗದ ಪರಿಶೀಲನೆಯ ವಿಷಯವಾಗಿದೆ ಎಂದೂ ಪ್ರತಿಪಾದಿಸಿದೆ.

ವೇಶ್ಯಾವಾಟಿಕೆ ಜಾಲ: ಬಿಜೆಪಿ ಮುಖಂಡನ ಬಂಧನ

ಹೌರಾ/ ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಹೌರಾ ಜಿಲ್ಲೆಯ ಹೋಟೆಲ್‌ವೊಂದರಲ್ಲಿ ವೇಶ್ಯಾವಾಟಿಕೆ ಜಾಲ ನಡೆಸುತ್ತಿದ್ದ ಆರೋಪದಲ್ಲಿ ಬಿಜೆಪಿ ಮುಖಂಡ ಸೇರಿದಂತೆ ಹತ್ತು ಮಂದಿಯನ್ನು ಬಂಧಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ಶುಕ್ರವಾರ ತಿಳಿಸಿದರು.

ಈ ಘಟನೆಯು ರಾಜಕೀಯ ಬಣ್ಣ ಪಡೆದುಕೊಂಡಿದ್ದು, ವೇಶ್ಯಾವಾಟಿಕೆ ಜಾಲದಲ್ಲಿ ತೊಡಗಿರುವ ತನ್ನ ಮುಖಂಡನನ್ನು ರಕ್ಷಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ತೃಣಮೂಲ ಕಾಂಗ್ರೆಸ್ ಆರೋಪಿಸಿದೆ. ಸಂದೇಶ್‌ಖಾಲಿ ಪ್ರಕರಣದಿಂದ ಜನರ ಗಮನ ಬೇರೆಡೆ ಸೆಳೆಯಲು ಟಿಎಂಸಿ ನಡೆಸಿದ ಹುನ್ನಾರವಿದು ಎಂದು ಬಿಜೆಪಿ ತಿರುಗೇಟು ನೀಡಿದೆ.

ಗುರುವಾರ ಸಂಜೆ ಹೌರಾದ ಸಂಕ್ರೇಲ್ ಪ್ರದೇಶದಲ್ಲಿರುವ ಹೋಟೆಲ್ ಮೇಲೆ ದಾಳಿ ನಡೆಸಿದ ಪೊಲೀಸರು ಸ್ಥಳೀಯ ಬಿಜೆಪಿ ಮುಖಂಡ ಸವ್ಯಸಾಚಿ ಘೋಷ್ ಮತ್ತು ಇತರ 10 ಮಂದಿಯನ್ನು ಬಂಧಿಸಿದ್ದಾರೆ. ಬಿಜೆಪಿ ಮುಖಂಡನ ಒಡೆತನದಲ್ಲಿರುವ ಹೋಟೆಲ್‌ನಲ್ಲಿದ್ದ ಹಲವು ಯುವತಿಯರು ಮತ್ತು ಮಹಿಳೆಯರನ್ನು ರಕ್ಷಿಸಲಾಗಿದೆ ಎಂದು ಅಧಿಕಾರಿ ಹೇಳಿದರು.

‘ಚೀನಾ ಸಂಚಿನ ಬಗ್ಗೆ ಎಚ್ಚರ’

ನವದೆಹಲಿ (ಪಿಟಿಐ): ಭಾರತ–ಚೀನಾ ನಡುವಣ ವಿವಾದಗಳನ್ನು ದ್ವಿಪಕ್ಷೀಯ ಚೌಕಟ್ಟಿನೊಳಗೆ ನಿರ್ಬಂಧಿಸುವ ಚೀನಾದ ‘ಸಂಚಿ’ನ ಬಗ್ಗೆ ಭಾರತವು ಎಚ್ಚರದಿಂದಿರಬೇಕು ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಉಭಯ ದೇಶಗಳ ಸಂಬಂಧವನ್ನು ‘ಸಮತೋಲನ’ ಸ್ಥಿತಿಗೆ ತರಲು ಜಾಗತಿಕವಾಗಿ ಲಭ್ಯವಿರುವ ಇತರ ಅವಕಾಶಗಳನ್ನು ಭಾರತವು ಬಿಟ್ಟುಕೊಡಬಾರದು ಎಂದು ಸಂವಾದ ಕಾರ್ಯಕ್ರಮವೊಂದರಲ್ಲಿ ಅವರು ಅಭಿಪ್ರಾಯಪಟ್ಟರು.

ಸಂಬಂಧದಲ್ಲಿ ‘ಸಮತೋಲನದ ಸ್ಥಿತಿ’ ಕಂಡುಕೊಳ್ಳುವುದು ಮತ್ತು ಅದನ್ನು ಕಾಪಾಡಿಕೊಂಡು ಹೋಗುವುದು ಉಭಯ ದೇಶಗಳ ಮುಂದಿರುವ ‘ಅತಿದೊಡ್ಡ ಸವಾಲು’ ಎಂದು ಹೇಳಿದರು.

ಪೂರ್ವ ಲಡಾಖ್ ಗಡಿಯಲ್ಲಿ ಶಾಂತಿ ಕಾಪಾಡುವ ಸಂಬಂಧ ಇದ್ದ ಒಪ್ಪಂದದಿಂದ ಚೀನಾ ದೂರ ಸರಿದಿರುವುದರಿಂದ ಗಡಿ ವಿವಾದ ಉಲ್ಬಣಿಸಿರುವುದು, ತಕ್ಷಣದಲ್ಲೇ ಬಗೆಹರಿಯಬೇಕಾದ ಪ್ರಮುಖ ಸಮಸ್ಯೆಯಾಗಿದೆ ಎಂದು ಪ್ರತಿಪಾದಿಸಿದರು.

‘1980ರ ದಶಕದ ಕೊನೆಯಿಂದಲೂ ಪೂರ್ವ ಲಡಾಖ್ ಗಡಿಗೆ ಸಂಬಂಧಿಸಿದಂತೆ ನಮ್ಮ ನಡುವೆ ಸ್ಪಷ್ಟ ತಿಳಿವಳಿಕೆಯಿತ್ತು. ಅದರಿಂದಾಗಿ ಗಡಿಯಲ್ಲಿ ಶಾಂತಿ ನೆಲೆಸಿತ್ತು. ಇದೀಗ ಸುಮಾರು 30 ವರ್ಷಗಳ ಬಳಿಕ ಚೀನಾ ಆ ಒಪ್ಪಂದದಿಂದ ದೂರ ಸರಿದಿರುವುದರಿಂದ ಗಡಿಯಲ್ಲಿ ಸಂಘರ್ಷದ ಸ್ಥಿತಿ ನೆಲೆಸಿದೆ’ ಎಂದು ಜೈಶಂಕರ್ ಅವರು ಹೇಳಿದರು.

ಸಂದೇಶ್‌ಖಾಲಿಯಲ್ಲಿ ಮುಂದುವರಿದ ಪ್ರತಿಭಟನೆ: ಹೆಚ್ಚಿದ ಆಕ್ರೋಶ

ಟಿಎಂಸಿ ಮುಖಂಡರ ಸ್ವತ್ತಿಗೆ ಬೆಂಕಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ನಡೆಯುತ್ತಿರುವ ಪ್ರತಿಭಟನೆಯು ಶುಕ್ರವಾರ ಹಿಂಸಾಚಾರ ತೀವ್ರ ಸ್ವರೂಪಕ್ಕೆ ತಿರುಗಿದ್ದು, ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಮತ್ತು ಅವರ ಸಹೋದರ ಸಿರಾಜ್ ಅವರಿಗೆ ಸೇರಿದ ಸ್ವತ್ತುಗಳಿಗೆ ಪ್ರತಿಭಟನಕಾರರು ಬೆಂಕಿ ಹಚ್ಚಿದ್ದಾರೆ.

ಅದಲ್ಲದೇ, ಟಿಎಂಸಿಯ ಸ್ಥಳೀಯ ಮುಖಂಡರ ಸ್ವತ್ತುಗಳ ಮೇಲೆ ದಾಳಿ ನಡೆಸಿ, ಅಲ್ಲಿದ್ದ ವಸ್ತುಗಳನ್ನು ಲೂಟಿ ಮಾಡಿದ್ದಾರೆ.

ಶಹಜಹಾನ್ ಶೇಖ್ ಮತ್ತು ಸಿರಾಜ್ ವಿರುದ್ಧ ಲೈಂಗಿಕ ಕಿರುಕುಳ ಮತ್ತು ಭೂಕಬಳಿಕೆ ಆರೋಪ ಮಾಡಿರುವ ಸ್ಥಳೀಯರು, ಪೊಲೀಸರು ಅವರಿಬ್ಬರ ವಿರುದ್ಧ ಕ್ರಮ ಕೈಗೊಳ್ಳದ ಕುರಿತಾಗಿಯೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರತಿಭಟನೆ ವೇಳೆ, ಸ್ಥಳೀಯರು ಮರದ ದಿಮ್ಮಿಗಳನ್ನು ರಸ್ತೆಗಳಿಗೆ ಅಡ್ಡಲಾಗಿ ಇರಿಸಿ, ಅವುಗಳಿಗೆ ಬೆಂಕಿ ಹಚ್ಚುವ ಮೂಲಕ ಪೊಲೀಸ್ ವಾಹನಗಳು ಝುಪ್‌ಖಾಲಿ ಮತ್ತು ಸಂದೇಶ್‌ಖಾಲಿ ಪ್ರದೇಶಗಳಿಗೆ ಪ್ರವೇಶಿಸದಂತೆ ತಡೆದಿದ್ದಾರೆ.

ರಾಜ್ಯದ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ರಾಜೀವ್ ಕುಮಾರ್ ಶುಕ್ರವಾರ ಮಧ್ಯಾಹ್ನ ಸ್ಥಳಕ್ಕೆ ಧಾವಿಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪ್ರತಿಭಟನಕಾರರಿಗೆ ಭರವಸೆ ನೀಡಿದರು.

‘ನೀವು ದೂರು ದಾಖಲಿಸಿ, ನಾವು ಕ್ರಮ ಕೈಗೊಳ್ಳುತ್ತೇವೆ. ಪೊಲೀಸ್ ಪಡೆಯನ್ನು ಇಲ್ಲಿ ನಿಯೋಜಿಸುತ್ತೇವೆ’ ಎಂದಿದ್ದಾರೆ. ಜೊತೆಗೆ, ಕಾನೂನನ್ನು ಕೈಗೆತ್ತಿಕೊಳ್ಳಬೇಡಿ ಎಂದು ಮನವಿ ಮಾಡಿದ್ದಾರೆ.

ಟಿಎಂಸಿ ಆರೋಪ: ಸಂದೇಶ್‌ಖಾಲಿಯಲ್ಲಿ ಶಾಂತಿ ನೆಲೆಸುವಂತೆ ಮಾಡಲು ರಾಜ್ಯ ಸರ್ಕಾರ ನಡೆಸುತ್ತಿರುವ ಎಲ್ಲಾ ಪ್ರಯತ್ನಗಳನ್ನೂ ಬಿಜೆಪಿ ಹಾಳುಗೆಡವುತ್ತಿದೆ. ಪರಿಸ್ಥಿತಿಯನ್ನು ಉಲ್ಬಣಗೊಳಿಸಲು ಬಿಜೆಪಿ ಯತ್ನಿಸುತ್ತಿದೆ ಟಿಎಂಸಿ ಆರೋಪಿಸಿದೆ.

ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಗೆ ಶುಕ್ರವಾರ ತೆರಳುತ್ತಿದ್ದ ಬಿಜೆಪಿ ಸಂಸದೆ ಲಾಕೆಟ್ ಚಟರ್ಜಿ ಅವರು ಸುದ್ದಿಗಾರರನ್ನು ಎದುರುಗೊಂಡರು —ಪಿಟಿಐ ಚಿತ್ರ

ಹೇಳಿಕೆ ದಾಖಲು

ಟಿಎಂಸಿ ಮುಖಂಡ ಶಹಜಹಾನ್ ಶೇಖ್ ಮತ್ತು ಬೆಂಬಲಿಗರಿಂದ ಉಂಟಾಗಿರುವ ಕಿರುಕುಳದ ಬಗ್ಗೆ ಸ್ಥಳೀಯರು ಮಾಡಿರುವ ಆರೋಪಗಳ ಕುರಿತ ಸತ್ಯಾಸತ್ಯತೆ ಪರಿಶೀಲಿಸುವ ನಿಟ್ಟನಲ್ಲಿ ಮಾನವ ಹಕ್ಕುಗಳ ರಾಷ್ಟ್ರೀಯ ಆಯೋಗದ (ಎನ್‌ಎಚ್‌ಆರ್‌ಸಿ) ತಂಡವು ಸಂದೇಶ್‌ಖಾಲಿಗೆ ಬುಧವಾರ ಭೇಟಿ ನೀಡಿತ್ತು.

ಭೇಟಿ ವೇಳೆ ಆರು ಸದಸ್ಯರ ಎನ್‌ಎಚ್‌ಆರ್‌ಸಿ ತಂಡವು ಸ್ಥಳೀಯರ ಹೇಳಿಕೆಗಳನ್ನು ದಾಖಲಿಸಿಕೊಂಡಿದೆ.

ಸಂದೇಶ್‌ಖಾಲಿ ಬಿಕ್ಕಟ್ಟಿನ ಕುರಿತು ಎನ್‌ಎಚ್‌ಆರ್‌ಸಿ ಕಳೆದ ವಾರ ಸ್ವಯಂಪ್ರೇರಿತವಾಗಿ ದೂರು ದಾಖಲಿಸಿಕೊಂಡಿತ್ತು. ಅಲ್ಲಿ ನಡೆಯುತ್ತಿರುವ ಹಿಂಸಾಚಾರ ಕುರಿತು ನಾಲ್ಕು ವಾರಗಳಲ್ಲಿ ವರದಿ ನೀಡುವಂತೆ ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಸೂಚಿಸಿತ್ತು.

ರೈತರ ಮೇಲೆ ಅಶ್ರುವಾಯು

ಒಂದನೇ ಪುಟದಿಂದ...

ಟ್ರ್ಯಾಕ್ಟರ್, ಟ್ರಾಲಿಗಳ ಮೇಲೆ ಕಪ್ಪು ಬಾವುಟ ಹಾರಿಸಿದರು. ಪ್ರತಿಭಟನಕಾರರು ತಮ್ಮ ಟರ್ಬನ್‌ಗಳ ಮೇಲೆ ಕಪ್ಪು ಬಟ್ಟೆ ಧರಿಸಿ ಸರ್ಕಾರದ ಧೋರಣೆಯನ್ನು ಖಂಡಿಸಿದರು. ಅಲ್ಲದೆ ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ, ಹರಿಯಾಣದ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಪ್ರತಿಕೃತಿಗಳನ್ನು ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಹೃದಯಾಘಾತ–ರೈತ ಸಾವು: ಖನೌರಿ ಗಡಿಯಲ್ಲಿ ‘ದೆಹಲಿ ಚಲೋ’ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ 62 ವರ್ಷದ ರೈತರೊಬ್ಬರು ಹೃದಯಾಘಾತದಿಂದ ಮೃತಪಟ್ಟಿದ್ದಾರೆ ಎಂದು ರೈತ ಮುಖಂಡ ಸರವಣ ಸಿಂಗ್ ಪಂಢೇರ್ ಶುಕ್ರವಾರ ತಿಳಿಸಿದ್ದಾರೆ. ಪಂಜಾಬಿನ ಬಠಿಂಡಾ ಜಿಲ್ಲೆಯ ಅಮರ್‌ಗಢ ಗ್ರಾಮದ ದರ್ಶನ್ ಸಿಂಗ್ ಮೃತ ರೈತರಾಗಿದ್ದಾರೆ ಎಂದು ಅವರು ಹೇಳಿದ್ದಾರೆ.

ಖನೌರಿ ಗಡಿಯಲ್ಲಿ ಬುಧವಾರ ಪೊಲೀಸರು ಮತ್ತು ರೈತರ ನಡುವೆ ನಡೆದ ಘರ್ಷಣೆಯಲ್ಲಿ 21 ವರ್ಷದ ಶುಭಕರನ್ ಸಿಂಗ್ ಮೃತಪಟ್ಟಿದ್ದರು. ಆಗಲೂ ಪೊಲೀಸರು ಅಶ್ರುವಾಯು ಶೆಲ್‌ಗಳ ದಾಳಿ ನಡೆಸಿದ್ದರು. ಫೆಬ್ರುವರಿ 14ರಂದು ಶಂಭು ಗಡಿಯಲ್ಲಿ ರೈತರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್‌ಗಳ ದಾಳಿ ಮತ್ತು ಲಾಠಿ ಪ್ರಹಾರ ನಡೆಸಿದ್ದರು.

₹ 1 ಕೋಟಿ ಪರಿಹಾರ, ಉದ್ಯೋಗ

ಚಂಡೀಗಢ (ಪಿಟಿಐ): ಖನೌರಿ ಗಡಿಯಲ್ಲಿ ಮೃತಪಟ್ಟ ರೈತ ಶುಭಕರನ್ ಸಿಂಗ್ ಅವರ ಕುಟುಂಬಕ್ಕೆ ₹1 ಕೋಟಿ ಪರಿಹಾರ ಮತ್ತು ಅವರ ತಂಗಿಗೆ ಸರ್ಕಾರಿ ಉದ್ಯೋಗ ನೀಡಲಾಗುವುದು ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಶುಕ್ರವಾರ ಘೋಷಿಸಿದ್ದಾರೆ.

‘ಸಿಂಗ್ ಸಾವಿಗೆ ಕಾರಣರಾದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು. ಮರಣೋತ್ತರ ಪರೀಕ್ಷೆಯ ಬಳಿಕ ಪ್ರಕರಣ ದಾಖಲಿಸಲಾಗುವುದು. ಸಾವಿಗೆ ಕಾರಣರಾದ ಅಧಿಕಾರಿಗಳು ಕಠಿಣ ಕ್ರಮ ಎದುರಿಸಬೇಕಾಗುತ್ತದೆ’ ಎಂದೂ ಮಾನ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಎಫ್‌ಐಆರ್‌ಗೆ ಪಟ್ಟು: ‘ಎಫ್‌ಐಆರ್ ದಾಖಲಿಸಿದ ಬಳಿಕವೇ ಅಂತ್ಯಕ್ರಿಯೆ. ನಮಗೆ ಹಣ ಮುಖ್ಯವಲ್ಲ. ಅದು ಎರಡು ದಿನ ಅಥವಾ 10 ದಿನವೇ ಆಗಲಿ. ಈ ಕುರಿತು ನಾವು ಶುಭಕರನ್ ಕುಟುಂಬಕ್ಕೆ ಹೇಳಿದ್ದೇವೆ’ ಎಂದು ರೈತ ಮುಖಂಡ ಸರವಣ ಸಿಂಗ್ ಪಂಢೇರ್ ಸುದ್ದಿಗಾರರಿಗೆ ತಿಳಿಸಿದರು. ಈ ಕಾರಣದಿಂದ ಸಿಂಗ್ ಅವರ ಮರಣೋತ್ತರ ಪರೀಕ್ಷೆ ಇನ್ನೂ ನಡೆದಿಲ್ಲ.

ಹರಿಯಾಣ ಭದ್ರತಾ ಸಿಬ್ಬಂದಿ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಲು ಸಾಧ್ಯವಿಲ್ಲ ಎಂದು ಬಠಿಂಡಾದ ಪೊಲೀಸ್ ವರಿಷ್ಠಾಧಿಕಾರಿಯೊಬ್ಬರು ನೀಡಿರುವ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಎಸ್‌ಕೆಎಂ (ರಾಜಕೀಯೇತರ) ನಾಯಕ ಜಗಜೀತ್ ಸಿಂಗ್ ಡಲ್ಲೆವಾಲ್, ‘ಹಾಗಾದರೆ ನೀವು ನಿಮ್ಮನ್ನು ಹೇಗೆ ಪಂಜಾಬಿನ ರಕ್ಷಕರು ಎಂದು ಕರೆದುಕೊಳ್ಳುತ್ತೀರಿ’ ಎಂದು ಪ್ರಶ್ನಿಸಿದರು.

ದಿನದ ಪ್ರಮುಖ ಬೆಳವಣಿಗೆಗಳು

- ರೈತ ಮುಖಂಡರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ (ಎನ್‌ಎಸ್‌ಎ) ಅಡಿಯಲ್ಲಿ ಪ್ರಕರಣ ದಾಖಲಿಸುವ ನಿರ್ಧಾರವನ್ನು ಗುರುವಾರವಷ್ಟೇ ಪ್ರಕಟಿಸಿದ್ದ ಹರಿಯಾಣ ಪೊಲೀಸ್, ಶುಕ್ರವಾರ ಈ ನಿರ್ಧಾರದಿಂದ ಹಿಂದೆ ಸರಿದಿದೆ.
- ಕರಾಳ ದಿನ ಆಚರಣೆ ಪ್ರಯುಕ್ತ ಪಂಜಾಬ್‌ನ 17 ಜಿಲ್ಲೆಗಳ 47 ಕಡೆಗಳಲ್ಲಿ ಭಾರತೀಯ ಕಿಸಾನ್ ಯೂನಿಯನ್ ನೇತೃತ್ವದಲ್ಲಿ ಪ್ರತಿಭಟನೆಗಳು ನಡೆದವು. ಹಲವೆಡೆ ಬಿಜೆಪಿ ಮುಖಂಡರ ಪ್ರತಿಕೃತಿಗಳನ್ನು ದಹಿಸಲಾಯಿತು.

ರೈತರ ಹೆಸರಿನಲ್ಲಿ ಖಾಲಿಸ್ತಾನಿಗಳ ಗಲಾಟೆ: ಹೆಗಡೆ

ಮುಂಡಗೋಡ (ಉತ್ತರ ಕನ್ನಡ ಜಿಲ್ಲೆ): ‘ಪಂಜಾಬ್ ಗಡಿಯಲ್ಲಿ ಖಾಲಿಸ್ತಾನಿಗಳು ರೈತರ ಹೆಸರಿನಲ್ಲಿ ಗಲಾಟೆ ನಡೆಸಿದ್ದಾರೆ. ಇಡೀ ದೇಶದಲ್ಲಿ ಇಲ್ಲದ ಗಲಾಟೆ, ಅನ್ಯಾಯ ಅವರಿಗೇನಾಗಿದೆ’ ಎಂದು ಸಂಸದ ಅನಂತಕುಮಾರ ಹೆಗಡೆ ಪ್ರಶ್ನಿಸಿದರು.

ತಾಲ್ಲೂಕಿನ ಇಂದೂರಿನಲ್ಲಿ ಶುಕ್ರವಾರ ನಡೆದ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ‘ದೊಡ್ಡ ಗಾಡಿ, ಬೆಂಜ್ ಕಾರಿನಲ್ಲಿ ಬಂದು ಗಲಾಟೆ ಮಾಡುತ್ತಾರೆ. ರೈತರ ಕೈಯಲ್ಲಿ ಅಷ್ಟೆಲ್ಲಾ ಹಣ ಇದೆಯಾ? ಹೋರಾಟ ಮಾಡುತ್ತಿರುವವರು ನಿಜವಾದ ರೈತರಲ್ಲ. ಅದು ದೇಶ ದ್ರೋಹಿಗಳ ಹೋರಾಟ. ಅವರಿಗೆ ವಿದೇಶದಿಂದ ಹಣ ಬರುತ್ತಿದೆ’ ಎಂದು ಆರೋಪಿಸಿದರು.

ಸಂಕ್ಷಿಪ್ತ ಸುದ್ದಿ

ಬಾಡಿಗೆ ತಾಯ್ತನ ನಿಯಮಕ್ಕೆ ತಿದ್ದುಪಡಿ

ನವದೆಹಲಿ (ಪಿಟಿಐ): ಬಾಡಿಗೆ ತಾಯ್ತನ ನಿಯಮ 2022ಕ್ಕೆ ತಿದ್ದುಪಡಿ ತಂದಿರುವ ಕೇಂದ್ರ ಸರ್ಕಾರವು, ಪತಿ–ಪತ್ನಿ ಪೈಕಿ ಯಾರಾದರೂ ಒಬ್ಬರು ವೈದ್ಯಕೀಯ ಸಮಸ್ಯೆ ಹೊಂದಿದ್ದಲ್ಲಿ ದಾನಿಗಳಿಂದ ಸಿಗುವ ವೀರ್ಯ ಅಥವಾ ಅಂಡಾಣುವನ್ನು ಬಳಸಲು ಅವಕಾಶ ಕಲ್ಪಿಸಿದೆ.

ಪತಿ ಅಥವಾ ಪತ್ನಿ ವೈದ್ಯಕೀಯ ಸಮಸ್ಯೆಯನ್ನು ಎದುರಿಸುತ್ತಿದ್ದರೆ, ಅವರು ದಾನಿಯಿಂದ ಪಡೆಯುವ ವೀರ್ಯ ಅಥವಾ ಅಂಡಾಣುವನ್ನು ಬಳಸಬೇಕಾದ ಅಗತ್ಯ ಇದೆ ಎಂಬ ಬಗ್ಗೆ ಜಿಲ್ಲಾ ವೈದ್ಯಕೀಯ ಮಂಡಳಿಯು ಪ್ರಮಾಣೀಕರಿಸಬೇಕು.

ಇಂತಹ ಪ್ರಮಾಣಪತ್ರವನ್ನು ಜಿಲ್ಲಾ ವೈದ್ಯಕೀಯ ಮಂಡಳಿಯು ನೀಡಿದಲ್ಲಿ, ದಾನಿಯಿಂದ ವೀರ್ಯ ಅಥವಾ ಅಂಡಾಣು ಪಡೆದು ಬಾಡಿಗೆ ತಾಯ್ತನದ ಮೂಲಕ ಸಂತಾನ ಪಡೆಯಲು ಅವಕಾಶ ನೀಡಲಾಗುತ್ತದೆ ಎಂದು ಬುಧವಾರ ಹೊರಡಿಸಿರುವ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ಪತಿ ಹಾಗೂ ಪತ್ನಿ ಪೈಕಿ ಇಬ್ಬರಿಗೂ ವೈದ್ಯಕೀಯ ಸಮಸ್ಯೆ ಇದ್ದಲ್ಲಿ, ವೀರ್ಯ ನೀಡಲು ಪತಿಗೆ, ಅಂಡಾಣುವನ್ನು ನೀಡಲು ಪತ್ನಿಗೆ ಆಗದಿದ್ದಲ್ಲಿ, ಅಂತಹ ದಂಪತಿ ಬಾಡಿಗೆ ತಾಯ್ತನದ ಮೂಲಕ ಸಂತಾನ ಪಡೆಯಲು ಅವಕಾಶ ಇಲ್ಲ.

‘ಒಂಟಿ ಮಹಿಳೆಯು (ವಿಧವೆ ಅಥವಾ ವಿಚ್ಛೇದಿತೆ) ಬಾಡಿಗೆ ತಾಯ್ತನದ ಮೂಲಕ ಸಂತಾನ ಪಡೆಯಲು ಬಯಸಿದಲ್ಲಿ, ತನ್ನ ಅಂಡಾಣುವನ್ನು ಹಾಗೂ ದಾನಿಯ ವೀರ್ಯವನ್ನು ಬಳಸಬೇಕು’ ಎಂದು ಅಧಿಸೂಚನೆಯಲ್ಲಿ ಹೇಳಲಾಗಿದೆ.

ಜನ್ಮಜಾತ ಕಾಯಿಲೆಯೊಂದನ್ನು ಹೊಂದಿದ್ದ ಮಹಿಳೆಗೆ ದಾನಿಯಿಂದ ಪಡೆದ ಅಂಡಾಣು ಬಳಸಿ ಬಾಡಿಗೆ ತಾಯ್ತನದ ಮೂಲಕ ಸಂತಾನ ಪಡೆಯಲು ಸುಪ್ರೀಂ ಕೋರ್ಟ್ ಕಳೆದ ವರ್ಷ ಅವಕಾಶ ಕಲ್ಪಿಸಿತ್ತು. ಇದಾದ ನಂತರದಲ್ಲಿ ಹಲವಾರು ಮಹಿಳೆಯರು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಬಾಡಿಗೆ ತಾಯ್ತನವನ್ನು ಆಯ್ಕೆ ಮಾಡಿಕೊಳ್ಳಲು ಬಯಸುವ ದಂಪತಿ, ದಾನಿಗಳಿಂದ ವೀರ್ಯ ಅಥವಾ ಅಂಡಾಣು ಬಳಸಲು ಅವಕಾಶ ನಿಷೇಧಿಸಿ ಕೇಂದ್ರವು 2023ರ ಮಾರ್ಚ್‌ನಲ್ಲಿ ಅಧಿಸೂಚನೆ ಹೊರಡಿಸಿತ್ತು.

ಖಾಸಗಿ ನಿರ್ಣಯ: ಮತದಾನ!

ಗುವಾಹಟಿ (ಪಿಟಿಐ): ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಸ್ಸಾಂ ವಿಧಾನಸಭೆಯಲ್ಲಿ ಶುಕ್ರವಾರ, ಸದಸ್ಯರೊಬ್ಬರು ಮಂಡಿಸಿದ್ದ ಖಾಸಗಿ ನಿರ್ಣಯ ಕುರಿತು ಮತಪತ್ರದ ಮೂಲಕ ತೀರ್ಮಾನಿಸಲಾಯಿತು.

ನೀರಾವರಿ ಸೌಲಭ್ಯ ಕುರಿತ ನಿರ್ಣಯವನ್ನು ಪಕ್ಷೇತರ ಸದಸ್ಯ ಅಖಿಲ್ ಗೊಗೊಯಿ ಮಂಡಿಸಿದ್ದರು. ಈ ಕುರಿತು ಮತದಾನ ನಡೆದಿದ್ದು, ಒಂಬತ್ತು ಮತಗಳಿಂದ ನಿರ್ಣಯ ತಿರಸ್ಕೃತಗೊಂಡಿತು.

77 ಸದಸ್ಯ ಬಲದ ವಿಧಾನ ಸಭೆಯಲ್ಲಿ ನಿರ್ಣಯದ ಪರವಾಗಿ 30 ಮತಗಳು ಬಿದ್ದರೆ, ವಿರುದ್ಧವಾಗಿ 39 ಮತಗಳು ಚಲಾವಣೆಯಾದವು.

ಇದಕ್ಕೂ ಮೊದಲು ನಿರ್ಣಯವನ್ನು ಸ್ಪೀಕರ್ ಬಿಸ್ವಜಿತ್ ಡೈಮರಿ ಧ್ವನಿಮತಕ್ಕೆ ಹಾಕಿದಾಗಲೂ ತಿರಸ್ಕೃತವಾಯಿತು.

ಆಡಳಿತ ಪಕ್ಷದಲ್ಲಿ ಧ್ವನಿಮತಕ್ಕೆ ಹಾಕುವಷ್ಟು ಸದಸ್ಯಬಲ ಈಗ ಸದನದಲ್ಲಿಲ್ಲ. ಹೀಗಾಗಿ, ಮತಕ್ಕೆ ಹಾಕಬೇಕು ಎಂದು ವಿರೋಧಪಕ್ಷದ ನಾಯಕ ದೇಬಬ್ರತಾ ಸೈಕಿಯಾ ಒತ್ತಾಯಿಸಿದರು.

ಬಳಿಕ ನಿರ್ಣಯ ಕುರಿತು ಮತದಾನ ನಡೆಯಿತು.

ಹರಿಯಾಣ: ಬೆಳೆ ಸಾಲದ ಬಡ್ಡಿ ಮನ್ನಾ

ಚಂಡೀಗಢ (ಪಿಟಿಐ): ಕೆಲವು ಬೆಳೆ ಸಾಲಗಳ ಮೇಲಿನ ಬಡ್ಡಿ ಮತ್ತು ದಂಡವನ್ನು ಮನ್ನಾ ಮಾಡುವುದಾಗಿ ಹರಿಯಾಣ ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಅವರು ಶುಕ್ರವಾರ ಮಂಡಿಸಿದ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತರು ಪ್ರತಿಭಟನೆ ನಡೆ ಸುತ್ತಿರುವ ಸಮಯದಲ್ಲೇ ಈ ಘೋಷಣೆ ಮಾಡಿದ್ದಾರೆ. ಹಣಕಾಸು ಖಾತೆಯನ್ನೂ ಹೊಂದಿರುವ ಖಟ್ಟರ್ ಅವರು ₹ 1.89 ಲಕ್ಷ ಕೋಟಿ ಗಾತ್ರದ ಬಜೆಟ್‌ಅನ್ನು ಮಂಡಿಸಿದರು.

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಸಾಲ ಪಡೆದ ರೈತರ ಬೆಳೆ ಸಾಲ ಮತ್ತು ದಂಡವನ್ನು ಮನ್ನಾ ಮಾಡಲಾಗುವುದು ಎಂದು ಅವರು ಪ್ರಕಟಿಸಿದರು.

ಅಪಘಾತ: ತೆಲಂಗಾಣ ಶಾಸಕಿ ಲಾಸ್ಯ ನಿಧನ

ಹೈದರಾಬಾದ್ (ಪಿಟಿಐ): ತೆಲಂಗಾಣದ ಬಿಆರ್‌ಎಸ್ ಪಕ್ಷದ ಶಾಸಕಿ ಜಿ. ಲಾಸ್ಯ ನಂದಿತಾ ಅವರು ಶುಕ್ರವಾರ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾರೆ.

‘ಲಾಸ್ಯ ಪ್ರಯಾಣಿಸುತ್ತಿದ್ದ ಕಾರು ಬೆಳಿಗ್ಗೆ 5.30ರ ಸುಮಾರಿಗೆ ಸಂಗಾರೆಡ್ಡಿ ಜಿಲ್ಲೆಯ ಪಟಾನ್‌ಚೆರುವಿನ ಹೊರ ವರ್ತುಲ ರಸ್ತೆಯಲ್ಲಿ ಲೋಹದ ತಡೆಗೋಡೆಗೆ ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದೆ. ಲಾಸ್ಯ ಅವರು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ’ ಎಂದು ಜಿಲ್ಲಾ ಎಸ್‌ಪಿ ಸಿ.ಎಚ್.ರೂಪೇಶ್ ಹೇಳಿದ್ದಾರೆ.

‘ಘಟನೆಯಲ್ಲಿ ಕಾರು ಚಾಲಕನ ಎರಡೂ ಕಾಲುಗಳು ಮುರಿದಿವೆ. ಚಾಲಕ ತೂಕಡಿಸಿದ್ದು ಹಾಗೂ ಅತಿವೇಗದಿಂದ ಕಾರು ಚಾಲನೆ ಮಾಡಿದ್ದರಿಂದ ಅಪಘಾತ ಸಂಭವಿಸಿರಬಹುದೆಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

36 ವರ್ಷದ ಲಾಸ್ಯ ಅವರು ಸಿಕಂದರಾಬಾದ್ ಕಂಟೋನ್ಮೆಂಟ್ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿ ಆಯ್ಕೆಯಾಗಿದ್ದರು.

ಮನೋಹರ್ ಜೋಶಿ ನಿಧನ



ಮುಂಬೈ (ಪಿಟಿಐ): ಮಹಾರಾಷ್ಟ್ರದ ಮಾಜಿ ಮುಖ್ಯ ಮಂತ್ರಿ ಮನೋಹರ್ ಜೋಶಿ (86) ಮುಂಬೈನ ಆಸ್ಪತ್ರೆಯಲ್ಲಿ ಶುಕ್ರವಾರ ನಿಧನರಾದರು.

ಹೃದಯಾಘಾತಕ್ಕೆ ಒಳಗಾಗಿದ್ದ ಅವರನ್ನು ಬುಧವಾರ ಪಿ.ಡಿ.ಹಿಂದುಜಾ ಆಸ್ಪತ್ರೆಗೆ ದಾಖಲಿಸಿ, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಜೋಶಿ ಅವರಿಗೆ ಒಬ್ಬ ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಪತ್ನಿ, ಅನಘಾ ಜೋಶಿ 2020ರಲ್ಲಿ ನಿಧನರಾಗಿದ್ದರು.

1995ರಿಂದ 1999ರ ವರೆಗೆ ಮಹಾರಾಷ್ಟ್ರ ಮುಖ್ಯಮಂತ್ರಿಯಾಗಿದ್ದ ಅವರು ಸಿ.ಎಂ ಹುದ್ದೆಗೇರಿದ ‘ಅವಿಭಜಿತ’ ಶಿವಸೇನಾದ ಮೊದಲ ನಾಯಕರೂ ಹೌದು. ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ 2002ರಿಂದ 2004ರ ವರೆಗೆ ಲೋಕಸಭೆಯ ಸ್ಪೀಕರ್ ಆಗಿದ್ದರು. ಶಿವಸೇನಾ ಸಂಸ್ಥಾಪಕ ಬಾಳಾ ಠಾಕ್ರೆ ಮೇಲೆ ಅಚಲ ನಿಷ್ಠೆ ಹೊಂದಿದ್ದರು.

1937ರ ಡಿಸೆಂಬರ್ 2 ರಂದು ಜನಿಸಿದ್ದ ಅವರು ಮುಂಬೈನ ಪ್ರತಿಷ್ಠಿತ ವೀರಮಾತಾ ಜೀಜಾಬಾಯಿ ತಾಂತ್ರಿಕ ಸಂಸ್ಥೆಯಲ್ಲಿ (ವಿಜೆಟಿಐ) ಸಿವಿಲ್ ಎಂಜಿನಿಯರಿಂಗ್‌ನಲ್ಲಿ ಪದವಿ ಪಡೆದಿದ್ದರು.

ಆರ್‌ಎಸ್‌ಎಸ್ ಜತೆಗಿನ ನಂಟಿನಿಂದ ರಾಜಕೀಯ ಪ್ರವೇಶಿಸಿದರೂ, ಆ ಬಳಿಕ ಶಿವಸೇನಾ ಸೇರಿದರು. 1967 ರಲ್ಲಿ ಮುಂಬೈನಲ್ಲಿ ಕೌನ್ಸಿಲರ್ ಆಗಿ ರಾಜಕೀಯ ಜೀವನ ಆರಂಭಿಸಿದ್ದಲ್ಲದೆ, 1976–77ರ ಅವಧಿಯಲ್ಲಿ ಮುಂಬೈನ ಮೇಯರ್ ಆಗಿದ್ದರು.

1990ರಲ್ಲಿ ಮಹಾರಾಷ್ಟ್ರ ವಿಧಾನ ಸಭೆಗೆ ಆಯ್ಕೆಯಾಗಿದ್ದರು. 1990–91 ರಲ್ಲಿ ವಿಪಕ್ಷದ ನಾಯಕರಾಗಿದ್ದರು.

ಇ–ಆಡಳಿತ ಕೇಂದ್ರ

(ಇ–ಆಡಳಿತ ಇಲಾಖೆ, DPAR(AR) ಯ ಅಧೀನದಲ್ಲಿ ಕರ್ನಾಟಕ ರಾಜ್ಯ ಸರ್ಕಾರ ಸ್ಥಾಪಿಸಿರುವ ಮತ್ತು ಕರ್ನಾಟಕ ಸಂಘ ಸಂಸ್ಥೆಗಳ ನೋಂದಣಿ ಅಧಿನಿಯಮ, 1960 ರ ಅನ್ವಯ ನೋಂದಣಿಯಾಗಿರುವ ಒಂದು ಸಂಸ್ಥೆ) ಕೊಠಡಿ ಸಂಖ್ಯೆ: 141, ಮೊದಲ ಮಹಡಿ, ಎರಡನೇ ಗೇಟ್, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560001
ದೂರವಾಣಿ ಸಂಖ್ಯೆ : 080–223731090

No. CEG-20011/5/2020 ದಿನಾಂಕ : 23–02–2024

ಅಧಿಸೂಚನೆ

ಇ–ಆಡಳಿತ ಕೇಂದ್ರವು ವಾಹನಗಳನ್ನು ಮಾಸಿಕ ಬಾಡಿಗೆ ಆಧಾರದ ಮೇಲೆ ಟ್ರಾವೆಲ್ಸ್ ಏಜೆನ್ಸಿಯಿಂದ ಪಡೆಯಲು ಟೆಂಡರ್ ಅನ್ನು ದಿನಾಂಕ 22.02.2024 ರಂದು ಅಹ್ವಾನಿಸಿರುತ್ತದೆ (Tender no.CEG/2023-24/SE0021/Call-3). ಟೆಂಡರ್ ದಾಖಲೆಗಳನ್ನು https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಕೆಗೆ ಕೊನೆಯ ದಿ: 29.02.2024 at 4.30 PM ಆಗಿರುತ್ತದೆ. ಹೆಚ್ಚಿನ ವಿವರಗಳಿಗೆ ದಯವಿಟ್ಟು ಆಡಳಿತಾಧಿಕಾರಿ, ಇ–ಆಡಳಿತ ಕೇಂದ್ರ ಇವರನ್ನು ಸಂಪರ್ಕಿಸಬಹುದಾಗಿದೆ.

ಸಹಿ/– ಆಡಳಿತಾಧಿಕಾರಿ
ಇ–ಆಡಳಿತ ಕೇಂದ್ರ

ವಾ.ಸಾ.ಸಂ.ಇ/ವಾಪ್ರ/3861/ಆಕಾರ್/2023–24

ಸಾರಿಗೆ ಇಲಾಖೆ

ಆಯುಕ್ತರ ಕಛೇರಿ, ಸಾರಿಗೆ ಮತ್ತು ರಸ್ತೆ ಸುರಕ್ಷತೆ, 1ನೇ ಮಹಡಿ, ಟಿ.ಟಿ.ಎಂ.ಸಿ ಕಟ್ಟಡ, ಕೆ.ಹೆಚ್.ರಸ್ತೆ, ಶಾಂತಿನಗರ, ಬೆಂಗಳೂರು–560 027.
ದೂರವಾಣಿ: 080–22276433 ಮಿಂಚಂಚೆ: jcteeg-tran-ka@nic.in

ಸಂ: ಸಾಆ/ಪ ಮತ್ತು ಇ–ಆ/ವೈವ–91/2013–14(4) ದಿನಾಂಕ: 22.02.2024

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ)

No. TD/2023-24/SE0034/ Call-2, dtd. 22.02.2024

ಸಾರಿಗೆ ಇಲಾಖೆಯ ರಾಜ್ಯದ ಎಲ್ಲಾ ಉಪಸಾರಿಗೆ ಮತ್ತು ಹಿರಿಯ/ಪ್ರಾದೇಶಿಕ/ಸಹಾಯಕ ಪ್ರಾದೇಶಿಕ ಸಾರಿಗೆ ಕಛೇರಿಗಳಿಗೆ **69 ತಾಂತ್ರಿಕ ಸಹಾಯಕರು**ಗಳನ್ನು ಮಾನವ ಸಂಪನ್ಮೂಲ ಏಜೆನ್ಸಿಯ ಮೂಲಕ ಪಡೆಯುವ ಸಲುವಾಗಿ ಆಸಕ್ತಿಯುಳ್ಳ ಬಿಡ್ಡುದಾರರು/ಸೇವಾದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮರು–ಟೆಂಡರನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಬಿಡ್ಡುಗಳನ್ನು ದಿನಾಂಕ: **01–03–2024ರ** ಅಪರಾಹ್ನ **12.00 ಗಂಟೆಯೊಳಗೆ** ಸಲ್ಲಿಸಬಹುದಾಗಿದ್ದು, ಹೆಚ್ಚಿನ ವಿವರಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ವಿಳಾಸ: https://kppp.karnataka.gov.in ಮುಖಾಂತರ ಪಡೆಯಬಹುದಾಗಿದೆ.

ಸಹಿ/–
ಅಪರ ಸಾರಿಗೆ ಆಯುಕ್ತರು
(ಪರಿಸರ ಮತ್ತು ಇ–ಆಡಳಿತ), ಬೆಂಗಳೂರು

ವಾಸಾಸಂಇ/ವಾ.ಪ್ರ/3857/ಎಂಎಎ/2023–24

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ. 2152/20, ಡಿಫೆನ್ಸ್ ಕಾಲೋನಿ, ಬಿಡಬ್ಲ್ಯೂಎಸ್‌ಎಸ್‌ಬಿ ಟ್ಯಾಂಕ್ ರೋಡ್, ಸಹಕಾರನಗರ, ಬಿಬಿಎಂಪಿ ಕಛೇರಿ, ಬ್ಯಾಟರಾಯನಪುರ, ಬೆಂಗಳೂರು – 560092

ಸಂಖ್ಯೆ: ಕಾಅ/ಬ್ಯಾರಾಪು/ಬಿಬಿಎಂಪಿ/ಕೆಪಿಪಿಪಿ/21/2023–24 ದಿನಾಂಕ: 21–02–2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ದ್ವಿ–ಲಕೋಟೆ ಟೆಂಡರ್) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ ಇವರು ಈ ಕೆಳಕಂಡ ಕಾಮಗಾರಿಗಳಿಗೆ ಬಿಬಿಎಂಪಿಯಲ್ಲಿ ನೋಂದಾಯಿಸಿರುವ ಗುತ್ತಿಗೆದಾರರು ಅಥವಾ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಗುತ್ತಿಗೆದಾರರಿಂದ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 05, 06 ಮತ್ತು 07 ಇಲ್ಲಿನ ರಾಮಾಂಜನೇಯ ಲೇಔಟ್, ಕಟ್ಟಿಗೇನಹಳ್ಳಿ, ವಿನ್ ಫೀಲ್ಡ್ ಗಾರ್ಡ್‌ನ್, ಸೂರ್ಯೋದಯ ಲೇಔಟ್, ಆರ್.ಕೆ. ಹೆಗಡೆನಗರ, ಅಮರಜ್ಯೋತಿ ಲೇಔಟ್, ಎಂ.ಎಸ್. ರಾಮಯ್ಯ ನಾರ್ತ್ ಸಿಟಿ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳು. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 500.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 7,50,000/–**
2	ವಾರ್ಡ್ ಸಂಖ್ಯೆ. 09 ಮತ್ತು 10 ಇಲ್ಲಿನ ಸಿದ್ದಲಿಂಗೇಶ್ವರ ಲೇಔಟ್, ಜೈ ಹನುಮಾನ್ ಲೇಔಟ್, ಇಂಡಿಯನ್ ಎಕ್ಸ್‌ಪ್ರೆಸ್ ಲೇಔಟ್, ಸರ್. ಎಂ.ವಿ. ಲೇಔಟ್, ಕೆನರಾ ಬ್ಯಾಂಕ್ ಲೇಔಟ್, ಹೆಬ್ಬಾಳ ಕೆಂಪಾಪುರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಇತರೆ ಸಂಬಂಧಿತ ಕಾಮಗಾರಿಗಳಿಗೆ ಸುಧಾರಣೆಗಳು. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 300.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 4,50,000/–**
3	ಹೊಸ ವಾರ್ಡ್ ಸಂಖ್ಯೆ. 13 (ವಿದ್ಯಾರಣ್ಯಪುರ) ಇಲ್ಲಿನ ಬಿ.ಇ.ಎಲ್ ಲೇಔಟ್, ಶ್ರೀನಿಧಿ ಲೇಔಟ್ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ಮತ್ತು ಹೊಸ ವಾರ್ಡ್ ಸಂಖ್ಯೆ. 14 (ಕುವೆಂಪುನಗರ) ಇಲ್ಲಿನ ಕಾಮತ್ ಲೇಔಟ್, ಸಿಂಗಾಪುರ, ಕುವೆಂಪುನಗರ ಹಾಗೂ ಸುತ್ತಮುತ್ತ ಪ್ರದೇಶಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳು. (ಇತರೆ) – **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 200.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 3,00,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ: **04–03–2024 ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಬ್ಯಾಟರಾಯನಪುರ ವಿಭಾಗ, ನಂ.2152/20, ಡಿಫೆನ್ಸ್ ಕಾಲೋನಿ, ಬಿಡಬ್ಲ್ಯೂಎಸ್‌ಎಸ್‌ಬಿ ಟ್ಯಾಂಕ್ ರೋಡ್, ಸಹಕಾರನಗರ, ಬಿಬಿಎಂಪಿ ಕಛೇರಿ, ಬ್ಯಾಟರಾಯನಪುರ, ಬೆಂಗಳೂರು – 560092 ಇಲ್ಲಿ ನಡೆಯುವುದು.** 3) ಭರ್ತಿ ಮಾಡಿದ ಟೆಂಡರ್ ದಸ್ತಾವೇಜುನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **07–03–2024 ರಂದು ಸಂಜೆ 4.00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್‌ಗಳನ್ನು ವೆಬ್‌ಸೈಟ್: **https://kppp.karnataka.gov.in** ನಲ್ಲಿ **ಕಾರ್ಯಪಾಲಕ ಅಭಿಯಂತರರ ಕಛೇರಿಯಲ್ಲಿ ದಿನಾಂಕ: 11–03–2024 ರಂದು ಬೆಳಿಗ್ಗೆ 11.00 ಗಂಟೆಗೆ** (ಸಾಧ್ಯವಾದಲ್ಲಿ) ತೆರೆಯಲಾಗುವುದು. 5) ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **13–03–2024 ರಂದು ಬೆಳಿಗ್ಗೆ 11.00 ಗಂಟೆಗೆ ಸಾಧ್ಯವಾದಲ್ಲಿ (ದ್ವಿ–ಲಕೋಟೆ ಪದ್ಧತಿಯಲ್ಲಿ).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ, ಬಿಬಿಎಂಪಿ.

Aster Oncology | Cytecare Hospitals | Fortis Bannerghatta Road | Indian Cancer Society | Mannheim Experience Coffee | ನಮ್ಮ ಮೆಟ್ರೋ namma metro | Narayana Health | NPHCE | Palliative Care

‘ಔಷಧ ಮತ್ತು ಪರೀಕ್ಷೆಯು ನಮ್ಮ ಎಲ್ಲ ಆಸ್ಪತ್ರೆಗಳಲ್ಲೂ ಲಭ್ಯವಾಗಬೇಕು’

ನಗರದ ವಿಧಾನಸೌಧದ ಮುಂಭಾಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ನೂತನವಾಗಿ ಬಿಡುಗಡೆಯಾದ ಆಂಬುಲೆನ್ಸ್ ಗಳು ಬಳಿ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ನಡೆದುಕೊಂಡು ಬರುತ್ತಿರುವ ದೃಶ್ಯ ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಪೀಠಿಕೆ:

ರಾಜ್ಯದ ಪ್ರಗತಿಯಲ್ಲಿ ಆರೋಗ್ಯ ಸೇವೆಯು ಪ್ರಮುಖ ಅಂಶವಾಗಿದೆ. ಇದು ಉತ್ಪಾದಕತೆಯ ಮೇಲೆ ಪರಿಣಾಮ ಬೀರುತ್ತದೆ. ಅಭಿವೃದ್ಧಿಯನ್ನು ಹೆಚ್ಚಿಸಲು ಆರೋಗ್ಯಕರ ಮತ್ತು ಸದೃಢ ಜನಸಂಖ್ಯೆಯ ಅಗತ್ಯವಿದೆ. ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾದ ದಿನೇಶ್ ಗುಂಡೂರಾವ್ ಅವರು ಬಿ ಎಸ್ ಮನು ರಾವ್ ಅವರೊಂದಿಗೆ ನಡೆಸಿದ ಈ ಸಂವಾದದಲ್ಲಿ ರಾಜ್ಯದಲ್ಲಿ ವ್ಯವಸ್ಥೆಯನ್ನು ನವೀಕರಿಸಲು ಮತ್ತು ಗುಣಮಟ್ಟದ ಆರೋಗ್ಯ ಸೇವೆಯನ್ನು ಎಲ್ಲರಿಗೂ ಲಭ್ಯವಾಗುವಂತೆ ಮಾಡಲು ತಮ್ಮ ಕಾರ್ಯಸೂಚಿಯನ್ನು ಹಂಚಿಕೊಂಡಿದ್ದಾರೆ.

• ನೀವು ಆರೋಗ್ಯ ಕ್ಷೇತ್ರದ ಬಗ್ಗೆ ವಿಶೇಷ ಗಮನ-ಹರಿಸುತ್ತಿದ್ದೀರಿ. ವಿಶೇಷವಾಗಿ ಕರ್ನಾಟಕದ ಗ್ರಾಮೀಣ ಪ್ರದೇಶಗಳಿಗೆ ಯಾವ ಉಪಕ್ರಮಗಳನ್ನು ಯೋಜಿಸಿದ್ದೀರಿ?

ನಾವು `ಅನೀಮಿಯಾ ಮುಕ್ತ ಪೌಷ್ಠಿಕ ಕರ್ನಾಟಕ’ ಕಾರ್ಯಕ್ರಮವನ್ನು ಪ್ರಾರಂಭಿಸುವ ಮೂಲಕ ಮುಖ್ಯವಾಗಿ ಯುವತಿಯರು, ವಿವಾಹಿತರು ಮತ್ತು ಗರ್ಭಿಣಿ ಸ್ತ್ರೀಯರಲ್ಲಿ ಅನೀಮಿಯಾ ನಿವಾರಿಸಲು ಬದ್ಧರಾಗಿದ್ದೇವೆ. ಇಲ್ಲಿಯವರೆಗೆ ನಾವು 12 ಲಕ್ಷ ಬಾಲಕಿಯರನ್ನು ತಲುಪಿದ್ದೇವೆ. ಜುಲೈ ವೇಳೆಗೆ ನಾವು ಕರ್ನಾಟಕದಾದ್ಯಂತ ಎಲ್ಲ ಶಾಲೆಗಳ 65 ಲಕ್ಷ ಬಾಲಕಿಯರನ್ನು ತಲುಪಲಿದ್ದೇವೆ.

ಮುಖ್ಯಮಂತ್ರಿಗಳು ಇತ್ತೀಚೆಗೆ ಆಶಾಕಿರಣ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಈ ಉಪಕ್ರಮದಿಂದ ನಾವು ಜನರ ಮನೆ ಬಾಗಿಲಿಗೆ ಕಣ್ಣಿನ ಆರೈಕೆಯನ್ನು ತೆಗೆದುಕೊಂಡು ಹೋಗಿದ್ದೇವೆ. ಎಂಟು ಜಿಲ್ಲೆಗಳಲ್ಲಿ ನಾವು ಕಣ್ಣಿನ ದೋಷಗಳನ್ನು ಪರೀಕ್ಷಿಸುತ್ತಿದ್ದೇವೆ ಮತ್ತು ಅಗತ್ಯವಿದ್ದರೆ ಜನರಿಗೆ ಉಚಿತವಾಗಿ ಚಿಕಿತ್ಸೆ ನೀಡುತ್ತೇವೆ. ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯನ್ನೂ ಉಚಿತವಾಗಿ ಮಾಡುತ್ತಿದ್ದೇವೆ. ಇದನ್ನು ನಾವು ಹೆಚ್ಚಿನ ಜಿಲ್ಲೆಗಳಲ್ಲಿ ವಿಸ್ತರಿಸುತ್ತೇವೆ ಮತ್ತು ಕರ್ನಾಟಕದ ಸಂಪೂರ್ಣ ಜನಸಂಖ್ಯೆಗೂ ಸೌಲಭ್ಯ ಸಿಗುವಂತೆ ಮಾಡಲಿದ್ದೇವೆ

ಈಗಷ್ಟೇ 262 ಹೊಸ ಆಂಬುಲೆನ್ಸ್‌ಗಳಿಗೆ ಚಾಲನೆ ನೀಡಿದ್ದೇವೆ. ನಮ್ಮ ಬಳಕೆಯಲ್ಲಿರುವ ಎಲ್ಲಾ ಆಂಬುಲೆನ್ಸ್‌ಗಳನ್ನು ಶೀಘ್ರದಲ್ಲೇ ಆಧುನೀಕರಿಸುತ್ತಿದ್ದೇವೆ. ಪಿಕ್-ಅಪ್ ಮತ್ತು ಡ್ರಾಪ್ ಅನ್ನು ಉತ್ತಮವಾಗಿ ಮೇಲ್ವಿಚಾರಣೆ ಮಾಡುವ ಮೂಲಕ ಸಮಯ ಮತ್ತು ವ್ಯವಸ್ಥೆಯ ದಕ್ಷತೆಯನ್ನು ಗಮನಿಸುತ್ತೇವೆ. ರೋಗಿಗಳು ದಾರಿಯಲ್ಲಿ ಕೆಲವು ಮೂಲಭೂತ ಆರೈಕೆಯನ್ನು ಪಡೆಯಬಹುದು. ನಾವು ಉತ್ತಮ ಕಮಾಂಡ್ ಸೆಂಟರ್ ಅನ್ನು ಹೊಂದಿದ್ದೇವೆ. ನಾವು 108 ಸೌಲಭ್ಯಗಳಲ್ಲಿ ಸಂಪೂರ್ಣ ಬದಲಾವಣೆ ತರುತ್ತಿದ್ದೇವೆ.

ಟೆಲಿ-ಐಸಿಯು ಸೌಲಭ್ಯ ಮತ್ತೊಂದು ಉಪಕ್ರಮವಾಗಿದೆ. ಅದನ್ನು ಈಗ 42 ತಾಲೂಕು ಆಸ್ಪತ್ರೆಗಳಲ್ಲಿ ಕೈಗೆತ್ತಿಕೊಂಡಿದ್ದೇವೆ. ಇವು ಸ್ಪೆಷಾಲಿಟಿ ಕೇರ್ ಹೊಂದಿರುವ ನಾಲ್ಕು ಜಿಲ್ಲಾ ಆಸ್ಪತ್ರೆಗಳಿಗೆ ಸಂಪರ್ಕ ಹೊಂದಿವೆ. ತಾಲೂಕು ಆಸ್ಪತ್ರೆಗಳಲ್ಲಿ ಇರಲು ಸಾಧ್ಯವಾಗದ ತಜ್ಞರಿಂದ ಐಸಿಯು ನಿರ್ವಹಣೆ ಮಾಡಲಾಗುತ್ತದೆ. ಈಗ, ಅವರು ರೋಗಿಗಳೊಂದಿಗೆ ಸಂವಹನ ನಡೆಸಬಹುದು ಮತ್ತು ರೀಡಿಂಗ್ ಗಳನ್ನು ಗಮನಿಸಬಹುದು. ಈ ವರ್ಷ ಅದನ್ನು ಇನ್ನೂ 60 ತಾಲೂಕುಗಳಿಗೆ ವಿಸ್ತರಿಸಲು ಬಯಸಿದ್ದೇವೆ. ನಾವು ಇಡೀ ರಾಜ್ಯದ ವ್ಯಾಪ್ತಿ ಹೊಂದುವ ಉದ್ದೇಶ ಹೊಂದಿದ್ದೇವೆ. ಪ್ರತಿ ತಾಲೂಕು ಆಸ್ಪತ್ರೆ ಸಂಪರ್ಕ ಪಡೆದರೆ ರೋಗಿಗಳಿಗೆ ಎಲ್ಲರಿಗೂ ಸ್ಪೆಷಲಿಸ್ಟ್ ಆರೈಕೆ ದೊರೆಯುತ್ತದೆ.

ನಾವು ವಿಶೇಷವಾಗಿ ಮಹಿಳೆಯರಿಗೆ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್ ರೋಗ ಪರೀಕ್ಷೆ ಪ್ರಾರಂಭಿಸಿದ್ದೇವೆ. ಅದಕ್ಕಅಗತ್ಯ ಉಪಕರಣಗಳನ್ನು 20 ಜಿಲ್ಲಾ ಆಸ್ಪತ್ರೆಗಳಿಗೆ ಪಡೆದುಕೊಳ್ಳುತ್ತಿದ್ದೇವೆ. ಮಹಿಳೆಯರಲ್ಲಿ ಈ ಕ್ಯಾನ್ಸರ್ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿರುವ ಹಿನ್ನೆಲೆಯಲ್ಲಿ ನಾವು ಇದನ್ನು ಗಂಭೀರವಾಗಿ ಪರಿಗಣಿಸಿದ್ದೇವೆ ಮತ್ತು ಅದನ್ನು ಬಜೆಟ್‌ನಲ್ಲಿ ಸೇರಿಸಲಾಗಿದೆ.

ತೀವ್ರ ಹೃದಯಾಘಾತದ ಸಂದರ್ಭಗಳಲ್ಲಿ ಜೀವ ಉಳಿಸುವ ಉಪಕ್ರಮವಾಗಿ, ನಾವು ಡಾ ಪುನೀತ್ ರಾಜ್‌ಕುಮಾರ್ ಹೃದಯ ಜ್ಯೋತಿ ಯೋಜನೆ ಪ್ರಾರಂಭಿಸಿದ್ದೇವೆ. ನಾವು ತಾಲೂಕು ಆಸ್ಪತ್ರೆಗಳಲ್ಲಿ ವಿಶೇಷ ಔಷಧಿಗಳನ್ನು ನೀಡುತ್ತಿದ್ದೇವೆ. ನಾವು ಇಲ್ಲಿಯವರೆಗೆ ಸುಮಾರು 50 ತಾಲೂಕುಗಳಲ್ಲಿ ವಿಸ್ತರಿಸಿದ್ದೇವೆ. ಹಬ್ ಕೃತಕ ಬುದ್ಧಿಮತ್ತೆಯನ್ನು ಬಳಸಿಕೊಂಡು ಇಸಿಜಿಗಳನ್ನು ಗಮನಿಸುತ್ತದೆ. ಇದರಿಂದ ತೀವ್ರ ಹೃದಯಾಘಾತವಾದರೆ ವ್ಯಕ್ತಿಯನ್ನು ಕೂಡಲೇ ತಾಲೂಕು ಆಸ್ಪತ್ರೆಗೆ ಕರೆದೊಯ್ಯಬಹುದು ಮತ್ತು ಸುವರ್ಣ ಘಳಿಗೆಯಲ್ಲಿ ಚಿಕಿತ್ಸೆ ಪಡೆಯಲು ಸಾಧ್ಯವಾಗುತ್ತದೆ.

ವ್ಯಕ್ತಿಯನ್ನು ತಾಲೂಕು ಆಸ್ಪತ್ರೆಗೆ ಸಾಗಿಸಿ ಸುವರ್ಣ ಗಂಟೆಯೊಳಗೆ ಚಿಕಿತ್ಸೆ ಪಡೆಯಬಹುದು ಎಂಬುದನ್ನು ಇದು ಖಚಿತಪಡಿಸುತ್ತದೆ. ನಂತರ ಸ್ಪೆಷಲಿಸ್ಟ್ ಚಿಕಿತ್ಸೆ ನೀಡಲಾಗುವುದು. ಇದು ಜೀವಗಳನ್ನು ಉಳಿಸುತ್ತದೆ ಮತ್ತು ಹೃದಯಕ್ಕೆ ತೀವ್ರ ಹಾನಿ ತಪ್ಪಿಸುತ್ತದೆ.

• ಸರ್ಕಾರದ ಆರೋಗ್ಯ ವ್ಯವಸ್ಥೆ ಎಷ್ಟು ಪ್ರಬಲವಾಗಿದೆ? ವಿಶೇಷವಾಗಿ ಪ್ರೈಮರಿ ಮತ್ತು ಸೆಕೆಂಡರಿ ಆರೈಕೆ ಹೇಗಿದೆ?

ನಾವು ರಾಜ್ಯದಾದ್ಯಂತ ನಮ್ಮ ಪ್ರಾಥಮಿಕ ಮತ್ತು ಸಮುದಾಯ ಆರೋಗ್ಯ ಕೇಂದ್ರಗಳನ್ನು ಹೊಂದಿದ್ದೇವೆ. ಅವರು ಮೂಲಭೂತ ಆರೈಕೆಯನ್ನು ಒದಗಿಸುತ್ತಾರೆ. ಒಂದು ಪ್ರಕರಣಕ್ಕೆ ಸ್ಪೆಷಲಿಸ್ಟ್ ಚಿಕಿತ್ಸೆ ಅಗತ್ಯವಿದ್ದರೆ ರೋಗಿಯನ್ನು ತಾಲೂಕು ಆಸ್ಪತ್ರೆಗೆ ಶಿಫಾರಸು ಮಾಡಲಾಗುತ್ತದೆ. ನಾವು ಲ್ಯಾಬ್ ಪರೀಕ್ಷೆಗಳನ್ನು ಹೆಚ್ಚಿಸಲು ಮತ್ತು ಔಷಧಗಳ ಲಭ್ಯತೆ ಹೆಚ್ಚಿಸಲು ಶ್ರಮಿಸುತ್ತಿದ್ದೇವೆ. ರಾಜ್ಯದಾದ್ಯಂತ ಎಲ್ಲ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಅಗತ್ಯ ಔಷಧಗಳ ಲಭ್ಯತೆ ಇರುವಂತೆ ನೋಡಿಕೊಳ್ಳುತ್ತಿದ್ದೇವೆ. ಅವರು ಸೂಚಿಸಿದ ಲ್ಯಾಬ್ ಪರೀಕ್ಷೆಗಳನ್ನು ಅವರ ಮಟ್ಟದಲ್ಲಿ ನಡೆಸಲು ಶಕ್ತರಾಗಿರುತ್ತಾರೆ ಮತ್ತು ರೋಗಿಗಳು ಪರೀಕ್ಷೆಗೆ ಬೇರೆ ಕಡೆ ಹೋಗುವಂತಿಲ್ಲ. ಮುಂದಿನ ಆರು ತಿಂಗಳೊಳಗೆ ಔಷಧಿಗಳು ಮತ್ತು ಶಿಫಾರಸು ಮಾಡಲಾದ ಎಲ್ಲಾ ಲ್ಯಾಬ್ ಪರೀಕ್ಷೆಗಳು ಕರ್ನಾಟಕದ ಎಲ್ಲರಿಗೂ ಲಭ್ಯವಿರುತ್ತವೆ ಎಂಬ ವಿಶ್ವಾಸ ನನಗಿದೆ. ನಾವು ಬೃಹತ್ ಸುಧಾರಣೆಗಳಿಗೆ ಶ್ರಮಿಸುತ್ತಿದ್ದೇವೆ. ನಮ್ಮ ಆಸ್ಪತ್ರೆಗಳು ಅತ್ಯುತ್ತಮ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತವೆ.

• ಕರ್ನಾಟಕದಲ್ಲಿ ತಾಯಿ ಮತ್ತು ಮಕ್ಕಳ ಕಲ್ಯಾಣವನ್ನು ಉನ್ನತೀಕರಿಸಲು ನೀವು ಯಾವುದೇ ನಿರ್ದಿಷ್ಟ ಕ್ರಮಗಳ ಬಗ್ಗೆ ಮಾತನಾಡಲು ಬಯಸುತ್ತೀರಾ?

ತಾಯಿ ಮತ್ತು ಮಕ್ಕಳ ಕಲ್ಯಾಣ ನಮ್ಮ ಆರೋಗ್ಯ ವ್ಯವಸ್ಥೆಯ ಮೂಲಭೂತ ಅಂಶವಾಗಿದೆ. ತಾಯಂದಿರು ಆರೋಗ್ಯವಾಗಿರುವುದನ್ನು ಖಚಿತಪಡಿಸಿಕೊಳ್ಳುವ ಗುರಿ ಹೊಂದಿದ್ದೇವೆ. ನಾವು ಸಿಸೇರಿಯನ್ ಬದಲಿಗೆ ನೈಸರ್ಗಿಕ ಜನನವನ್ನು ಉತ್ತೇಜಿಸುತ್ತೇವೆ. ಆರೋಗ್ಯವಂತ ಶಿಶುಗಳ ಜನನಕ್ಕೆ ನಾವು ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ಶಿಶುಗಳನ್ನು ಒಂದು ಆಸ್ಪತ್ರೆಯಿಂದ ಇನ್ನೊಂದು ಆಸ್ಪತ್ರೆಗೆ ಅಗತ್ಯವಿದ್ದಾಗ ಸುರಕ್ಷಿತವಾಗಿ ಸ್ಥಳಾಂತರಿಸಲು ನವಜಾತ ಶಿಶುಗಳ ಆಂಬುಲೆನ್ಸ್‌ಗಳನ್ನು ನಾವು ಹೊಂದಿದ್ದೇವೆ. ಇದು ನಮ್ಮ ಇಲಾಖೆಯ ಮೂಲಭೂತ ಮತ್ತು ಅಗತ್ಯ ಕೆಲಸವಾಗಿದೆ. ನಾವು ಪೌಷ್ಟಿಕಾಂಶ ಸುಧಾರಿಸಲು ಶ್ರಮಿಸುತ್ತಿದ್ದೇವೆ. ನಾವು ಹೆಚ್ಚಿನ ತಾಯಿ ಮತ್ತು ಮಕ್ಕಳ ಆಸ್ಪತ್ರೆಗಳನ್ನು ಸ್ಥಾಪಿಸುತ್ತಿದ್ದೇವೆ. ಇದು ಆದ್ಯತೆಯ ವಿಷಯವಾಗಿದೆ.

• ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು, ನಿರ್ಬಂಧಿಸಲು ಮತ್ತು ನಿಯಂತ್ರಣಕ್ಕೆ ಯಾವುದೇ ನಿರ್ದಿಷ್ಟ ಕ್ರಮಗಳು?

ನಾವು ನಮ್ಮ ಸರ್ವೇಲೆನ್ಸ್ ವ್ಯವಸ್ಥೆಯನ್ನು ಬಲಪಡಿಸಬೇಕಾಗಿದೆ. ನಮ್ಮಲ್ಲಿ ಒಂದು ಸಲಹಾ ಸಮಿತಿ ಇದೆ ಮತ್ತು ಅದು ರೋಗ ಹರಡುವ ಭೀತಿ ಇದ್ದರೆ ಯಾವ ಕ್ರಮ ಕೈಗೊಳ್ಳಬೇಕೆಂದು ನಿರ್ಧರಿಸುತ್ತದೆ. ನಾವು ನಮ್ಮ ಪರೀಕ್ಷೆಯನ್ನು ಸುಧಾರಿಸಬೇಕಾಗಿದೆ. ಹಾಗಾಗಿ ಈ ವರ್ಷ ತಾಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೌಲಭ್ಯಗಳನ್ನು ಹೆಚ್ಚಿಸುತ್ತಿದ್ದೇವೆ. ತಾಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳಲ್ಲಿ ಇಂಟಿಗ್ರೇಟೆಡ್ ಲ್ಯಾಬ್ ಗಳನ್ನು ಸ್ಥಾಪಿಸುತ್ತಿದ್ದೇವೆ. ಆಗ ನಾವು ಯಾವುದೇ ಸಾಂಕ್ರಾಮಿಕ ರೋಗಗಳನ್ನು ನಿರ್ಬಂಧಿಸಲು ಸಾಧ್ಯವಾಗುತ್ತದೆ. ಕೋವಿಡ್-19ರ ನಂತರ, ನಾವು ಉತ್ತಮ ವ್ಯವಸ್ಥೆಯನ್ನು ಹೊಂದಿದ್ದೇವೆ. ಆ ಅನುಭವದಿಂದ ನಾವು ಕಲಿತಿದ್ದೇವೆ. ಅಂತಹ ಯಾವುದೇ ಸಾಂಕ್ರಾಮಿಕ ನಿಭಾಯಿಸಲು ಪ್ರಕ್ರಿಯೆಗಳಿವೆ. ಅಗತ್ಯವಿರುವ ಸಂದರ್ಭದಲ್ಲಿ ಕ್ರಿಟಿಕಲ್ ಕೇರ್, ಐಸಿಯು ಹಾಸಿಗೆಗಳು, ಆಮ್ಲಜನಕದ ಬೆಂಬಲ ಮುಂತಾದ ಅಗತ್ಯ ಮೂಲಸೌಕರ್ಯಗಳನ್ನು ನಾವು ಹೊಂದಿದ್ದೇವೆ. ನಾವು ಎಲ್ಲಾ ಸೌಲಭ್ಯಗಳ ಬಗ್ಗೆ ಸಂಪೂರ್ಣ ಪರಿಶೀಲನೆ ನಡೆಸಿದ್ದೇವೆ ಮತ್ತು ಯಾವುದೇ ಪರಿಸ್ಥಿತಿಯನ್ನು ನಿರ್ವಹಿಸಬಲ್ಲವರಾಗಿದ್ದೇವೆ.

ಸಿಪಿಆರ್ ತರಬೇತಿ ಕಾರ್ಯಕ್ರಮದಲ್ಲಿ

• ಲಸಿಕೆ ನೀಡಿಕೆಯಲ್ಲಿ ಹೇಗೆ ಕೆಲಸ ನಡೆಯುತ್ತಿದೆ?

ಲಸಿಕೆ ನೀಡಿಕೆ ಪ್ರಮುಖ ಕಾರ್ಯಕ್ರಮವಾಗಿದೆ. ನಮ್ಮ ಪ್ರಾಥಮಿಕ ಆರೋಗ್ಯ ಮತ್ತು ಆಶಾ ಕಾರ್ಯಕರ್ತರು ಈ ಕೆಲಸ ಮಾಡುತ್ತಿದ್ದಾರೆ. ದಡಾರ, ರುಬೆಲ್ಲಾ ಮತ್ತು ಹೆಪಟೈಟಿಸ್ ವಿರುದ್ಧ ನಾವು ನಿಯಮಿತ ಲಸಿಕೆ ನೀಡುತ್ತಿದ್ದೇವೆ. ಲಸಿಕೆ ನೀಡಿಕೆಯನ್ನು ಸತತವಾಗಿ ಗಮನಿಸಲಾಗುತ್ತದೆ ಮತ್ತು ಮೇಲ್ವಿಚಾರಣೆ ನಡೆಸಲಾಗುತ್ತದೆ. ನಾವು ಶೇ.97ರಷ್ಟು ಪೂರೈಸಿದ್ದೇವೆ. ನಾನು ಹೇಳಿದಂತೆ ತಾಯಿ ಮತ್ತು ಮಗುವಿನ ಆರೋಗ್ಯ ನಮ್ಮ ಪ್ರಮುಖ ಆದ್ಯತೆಯಾಗಿದೆ.

• ರಾಜ್ಯದಾದ್ಯಂತ ಸರ್ಕಾರಿ ಆಸ್ಪತ್ರೆಗಳನ್ನು ಅಪ್ ಗ್ರೇಡ್ ಮಾಡಲು ಯಾವುದೇ ಯೋಜನೆಗಳು?

ನಾವು ಸಾಕಷ್ಟು ಕೆಲಸ ಮಾಡಿದ್ದೇವೆ. ಈ ಬಜೆಟ್‌ನಲ್ಲಿ ನಮ್ಮ ಆಸ್ಪತ್ರೆಗಳಲ್ಲಿ ಮೂಲಸೌಕರ್ಯಗಳನ್ನು ಸುಧಾರಿಸಲು ಸುಮಾರು 500 ಕೋಟಿ ರೂ.ಗಳನ್ನು ಮೀಸಲಿಟ್ಟಿದ್ದೇವೆ. ಮೊದಲಿಗೆ, ನಾವು ನಮ್ಮ ಅಸ್ತಿತ್ವದಲ್ಲಿರುವ ಆಸ್ಪತ್ರೆಗಳನ್ನು ಸುಧಾರಿಸುತ್ತೇವೆ. ತಾಲೂಕುಗಳಲ್ಲಿ ಆಸ್ಪತ್ರೆಗಳಿಗೆ ಹಾಸಿಗೆಗಳ ಸೇರ್ಪಡೆ ಮಾಡುತ್ತಿದ್ದೇವೆ. ಏಳು ತಾಲೂಕುಗಳಲ್ಲಿ ಹೊಸ ಆಸ್ಪತ್ರೆಗಳನ್ನು ನಿರ್ಮಿಸಲಾಗುತ್ತದೆ. ನಾವು 15 ಜಿಲ್ಲೆಗಳಲ್ಲಿ 46 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು 15 ಕ್ರಿಟಿಕಲ್ ಕೇರ್ ಬ್ಲಾಕ್ ಗಳನ್ನು ಸೇರಿಸುತ್ತಿದ್ದೇವೆ. ಈಗ, ನಮ್ಮ ಆಸ್ಪತ್ರೆಗಳ ಮೂಲ ನಿರ್ವಹಣೆಗಾಗಿ ವಾರ್ಷಿಕವಾಗಿ 75 ಕೋಟಿ ರೂ. ವ್ಯಯಿಸುತ್ತಿದ್ದೇವೆ. ಬೆಂಗಳೂರಿನಲ್ಲಿ, ಕೆಸಿ ಜನರಲ್ ಆಸ್ಪತ್ರೆಯನ್ನು 150 ಕೋಟಿ ರೂಪಾಯಿಗಳ ಬಜೆಟ್‌ನಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ನಾವು 350 ಕೋಟಿ ರೂಪಾಯಿ ವೆಚ್ಚದಲ್ಲಿ 25 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಹ ಪ್ರಾರಂಭಿಸಲಿದ್ದೇವೆ. ನಾವು ರಾಜ್ಯದಲ್ಲಿ 6,193 ಆರೋಗ್ಯ ಕೇಂದ್ರಗಳನ್ನು ಹೊಂದಿದ್ದು ಸುಮಾರು 200 ಹೊಸ ಆರೋಗ್ಯ ಮತ್ತು ಸ್ವಾಸ್ಥ್ಯ ಕೇಂದ್ರಗಳನ್ನು ಸೇರಿಸುತ್ತಿದ್ದೇವೆ. ಆದ್ದರಿಂದ, ಪ್ರಮುಖ ಮೂಲಸೌಕರ್ಯ ಉನ್ನತೀಕರಣ ಪ್ರಾರಂಭವಾಗಿದೆ.

• ನೀವು ಪ್ರಾರಂಭಿಸಿದ ಯಾವುದೇ ಪ್ರಮುಖ ಔಟ್ ರೀಚ್ ಕಾರ್ಯಕ್ರಮಗಳು?

ನಮ್ಮ ಆಶಾ ಕಾರ್ಯಕರ್ತರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಅವರು ಪ್ರಾಥಮಿಕ ತಪಾಸಣೆಗಳನ್ನು ನಡೆಸುತ್ತಾರೆ ಮತ್ತು ಸಾಂಕ್ರಾಮಿಕವಲ್ಲದ ರೋಗಗಳನ್ನು ಪರೀಕ್ಷಿಸುತ್ತಾರೆ. ನಾವು ಎಂಟು ಜಿಲ್ಲೆಗಳಲ್ಲಿ ಗೃಹ ಆರೋಗ್ಯ ಯೋಜನೆಯನ್ನು ಪ್ರಾರಂಭಿಸುತ್ತಿದ್ದೇವೆ. ನಾವು ಪ್ರತಿ ಮನೆಗೆ ಭೇಟಿ ನೀಡುತ್ತೇವೆ ಮತ್ತು ಮಧುಮೇಹ, ಅಧಿಕ ರಕ್ತದೊತ್ತಡ ಇತ್ಯಾದಿಗಳನ್ನು ಪರೀಕ್ಷಿಸುತ್ತೇವೆ. ಜನರು ಸಾಮಾನ್ಯವಾಗಿ ಈ ರೋಗಗಳನ್ನು ಹೊಂದಿದ್ದಾರೆಂದು ತಿಳಿದಿರುವುದಿಲ್ಲ. ಅಲ್ಲದೆ, ಅನೇಕರು ತಿಳಿದಿದ್ದರೂ ಔಷಧಿಗಳನ್ನು ತೆಗೆದುಕೊಳ್ಳುವುದಿಲ್ಲ. ಈಗ, ಪರೀಕ್ಷೆಯೊಂದಿಗೆ ನಾವು ಅವರ ಮನೆ ಬಾಗಿಲಿಗೆ ಉಚಿತವಾಗಿ ಔಷಧಿಗಳನ್ನು ಒದಗಿಸುತ್ತೇವೆ. ಈ ಯೋಜನೆಯು ಅಪಾರ ಪರಿಣಾಮ ಬೀರಲಿದೆ. ಇದು ಹೃದಯಾಘಾತ, ಪಾರ್ಶ್ವವಾಯು, ಕ್ಯಾನ್ಸರ್, ಮೂತ್ರಪಿಂಡದ ಕಾಯಿಲೆಗಳು ಮುಂತಾದ ಅನೇಕ ಇತರ ತೊಡಕುಗಳಿಂದ ಜನರನ್ನು ಉಳಿಸುತ್ತದೆ. ಏಕೆಂದರೆ ಇವುಗಳು ಚಿಕಿತ್ಸೆ ಪಡೆಯದ ಅಧಿಕ ರಕ್ತದೊತ್ತಡ ಮತ್ತು ಮಧುಮೇಹದಿಂದ ಉದ್ಭವಿಸುತ್ತವೆ.

> **• ನೀವು ಕರ್ನಾಟಕದ ಆರೋಗ್ಯಸೇವಾ ತಾಣವಾಗಿ ಉತ್ತೇಜಿಸುತ್ತಿದ್ದೀರಾ?**
>
> ಅದು ತನ್ನಷ್ಟಕ್ಕೆ ತಾನು ಆಗುತ್ತಿದೆ. ಇಲ್ಲಿನ ಸೌಲಭ್ಯಗಳನ್ನು ಬಳಸಿಕೊಳ್ಳಲು ಸಾಕಷ್ಟು ಮಂದಿ ಬರುತ್ತಾರೆ. ಆರೋಗ್ಯ ಮೂಲಸೌಕರ್ಯ ಯೋಜನೆಗಳ ಕುರಿತು ಚರ್ಚೆ ನಡೆಯುತ್ತಿದೆ. ಇದು ಇನ್ನೂ ಆರಂಭಿಕ ಹಂತದಲ್ಲಿದೆ, ಆದರೆ ನಾವು ಅದರತ್ತ ಗಮನ ನೀಡಿದ್ದೇವೆ. ಅಂಗಾಂಗ ದಾನದಲ್ಲಿ ಕರ್ನಾಟಕ ಉತ್ತಮ ಸಾಧನೆ ಮಾಡುತ್ತಿದೆ. ಅಂಗಾಂಗ ದಾನದಲ್ಲಿ ನಾವೀಗ ಭಾರತದಲ್ಲಿ ನಂಬರ್ 2 ಆಗಿದ್ದೇವೆ. ಆದ್ದರಿಂದ ನಾವು ಅನೇಕ ಮಂದಿಯನ್ನು ಆಕರ್ಷಿಸುತ್ತಿದ್ದೇವೆ. ನಾವು ಅಂಗಾಂಗ ದಾನವನ್ನು ಉತ್ತೇಜಿಸಲು ಬಯಸುತ್ತೇವೆ. ಒಂದು ದೇಹವು ಆರು ಜೀವಗಳನ್ನು ಉಳಿಸುತ್ತದೆ.

ಇತ್ತೀಚೆಗೆ, ನಾವು 12 ಮೊಬೈಲ್ ನೇತ್ರ ಚಿಕಿತ್ಸಾಲಯಗಳನ್ನು ಪ್ರಾರಂಭಿಸಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲಿ ಈಗ ಸಂಚಾರಿ ನೇತ್ರ ಚಿಕಿತ್ಸಾಲಯಗಳಿವೆ. ಅವರು ಹಳ್ಳಿಗಳಿಗೆ ಹೋಗಿ ಕಣ್ಣಿನ ದೋಷಗಳನ್ನು ಪರೀಕ್ಷಿಸುತ್ತಾರೆ.

ನಾವು ದೂರದ ಪ್ರದೇಶಗಳಲ್ಲಿ ಸುಮಾರು 70 ಮೊಬೈಲ್ ಕ್ಲಿನಿಕ್‌ಗಳನ್ನು ಪ್ರಾರಂಭಿಸಿದ್ದೇವೆ. ಇವು ಚಲಿಸುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಾಗಿವೆ. ಅದರಲ್ಲಿ ವೈದ್ಯರು ಮತ್ತು ತಂತ್ರಜ್ಞರು ಇರುತ್ತಾರೆ. ಅವು 70 ದೂರದ ತಾಲ್ಲೂಕುಗಳಲ್ಲಿ ಸಂಚರಿಸುತ್ತವೆ.

• ಕ್ಯಾನ್ಸರ್ ಬೆದರಿಕೆ ನಿಭಾಯಿಸಲು ಏನಾದರೂ ನಿರ್ದಿಷ್ಟ ಯೋಜನೆ?

ನಾವು ಮೊದಲು ಜನರ ಜೀವನಶೈಲಿಯನ್ನು ಬದಲಾಯಿಸಬೇಕಾಗಿದೆ. ಆದ್ದರಿಂದ ನಾವು ಅದಕ್ಕೆ ಶಿಕ್ಷಣ ನೀಡಬೇಕು. ಈ ವರ್ಷ ನಾವು ಒಂದು ರೀತಿಯ ಪಠ್ಯಕ್ರಮವನ್ನು ರೂಪಿಸಿ ಶಿಕ್ಷಣ ಇಲಾಖೆಗೆ ಕಳುಹಿಸಿದ್ದೇವೆ. 10ನೇ ತರಗತಿ ಮತ್ತು ಪಿಯುಸಿ ಮಕ್ಕಳಿಗೆ ಅವರ ಜೀವನಶೈಲಿಯಿಂದ ಕ್ಯಾನ್ಸರ್, ಪಾರ್ಶ್ವವಾಯು ಮತ್ತು ಹೃದಯ ಸಂಬಂಧಿ ಸಮಸ್ಯೆಗಳು ಹೇಗೆ ಬರುತ್ತವೆ ಎಂಬುದರ ಕುರಿತು ಅರಿವು ಮೂಡಿಸಲಾಗುತ್ತದೆ. ದೈಹಿಕ ಚಟುವಟಿಕೆಯ ಕೊರತೆ, ಜಂಕ್ ಫುಡ್ ಮತ್ತು ಕೆಟ್ಟ ಅಭ್ಯಾಸಗಳು ಹೃದಯಾಘಾತಕ್ಕೆ ಕಾರಣಗಳಾಗಿವೆ. ನಾವು ಸಾರ್ವಜನಿಕರಿಗೆ ಶಿಕ್ಷಣ ನೀಡುತ್ತಿದ್ದೇವೆ ಮತ್ತು ದೈಹಿಕ ಚಟುವಟಿಕೆಯ ಅಗತ್ಯತೆಯ ಬಗ್ಗೆ ಅವರಿಗೆ ಹೆಚ್ಚು ಅರಿವು ಮೂಡಿಸುತ್ತಿದ್ದೇವೆ. ಆರಂಭಿಕ ರೋಗಪತ್ತೆ ಮತ್ತೊಂದು ಅಂಶವಾಗಿದೆ. ರಾಜ್ಯದಾದ್ಯಂತ ತೆಗೆದ ಎಲ್ಲಾ ಡಿಜಿಟಲ್ ಕ್ಷ-ಕಿರಣಗಳ ಮೂಲಕ ಶ್ವಾಸಕೋಶದ ಕ್ಯಾನ್ಸರ್ ಪರೀಕ್ಷಿಸುವ ಪ್ರಾಯೋಗಿಕ ಯೋಜನೆಯಲ್ಲಿ ನಾವು ಕಾರ್ಯನಿರ್ವಹಿಸುತ್ತಿದ್ದೇವೆ. ಎದೆಯ ಪ್ರತಿ ಡಿಜಿಟಲ್ ಎಕ್ಸ್-ರೇಯನ್ನು ಯಾವುದೇ ಕಾರಣಕ್ಕೆ ತೆಗೆದುಕೊಳ್ಳಲಿ ಅದನ್ನು ಈಗ ಎಐ ಸಾಫ್ಟ್ ವೇರ್ ಪರೀಕ್ಷಿಸುತ್ತದೆ, ಅದು ಅನುಮಾನಾಸ್ಪದ ಪ್ರಕರಣಗಳನ್ನು ಕಂಡುಕೊಳ್ಳುತ್ತದೆ.

ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಪರೀಕ್ಷೆಯನ್ನೂ ನಡೆಸುತ್ತಿದ್ದೇವೆ. ಅಂತಿಮವಾಗಿ ಗರ್ಭಕೋಶದ ಕ್ಯಾನ್ಸರ್ ಗೆ ಲಸಿಕೆ ನೀಡಬೇಕಾಗಿದೆ.

• ಆರೋಗ್ಯಸೇವೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿಮಗೆ ಆಸಕ್ತಿಯೇ?

ಇದು ತುಂಬಾ ಆಸಕ್ತಿದಾಯಕ ಎಂದು ನಾನು ಭಾವಿಸುತ್ತೇನೆ. ಇದರ ಮೂಲಕ ಅನೇಕರ ಜೀವನಗಳನ್ನು ಬದಲಾಯಿಸಬಹುದು ಮತ್ತು ಪರಿಣಾಮ ಬೀರಬಹುದು. ನಮ್ಮ ವ್ಯವಸ್ಥೆಗಳನ್ನು ಸುಧಾರಿಸುವ ಮೂಲಕ ನಮ್ಮ ಸೌಲಭ್ಯಗಳನ್ನು ಸುಧಾರಿಸಲು ನಾವು ಬಯಸುತ್ತೇವೆ. ಆರೋಗ್ಯ ವ್ಯವಸ್ಥೆಯಲ್ಲಿ ಕೆಲಸ ಮಾಡುವುದು ನನಗೆ ಬಹಳ ಸಂತೋಷವನ್ನು ನೀಡುತ್ತದೆ. ಸಾಕಷ್ಟು ಕೆಲಸವಾಗಬೇಕಿದೆ ಮತ್ತು ಸುಧಾರಿಸಲು ತುಂಬಾ ಇದೆ. ನಾನು ಕೆಲಸವನ್ನು ಆನಂದಿಸುತ್ತಿದ್ದೇನೆ.

• ನಿಮಗಾಗಿ ನೀವು ಯಾವುದಾದರೂ ಗುರಿಗಳನ್ನು ಹೊಂದಿದ್ದೀರಾ?

ಗೃಹ ಆರೋಗ್ಯ ನನ್ನ ಗುರಿಯಾಗಿದೆ. ಅಗತ್ಯವಾಗಿರುವ ಮೂಲಭೂತ ಔಷಧಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಲಾಗುತ್ತದೆ. ನಮ್ಮ ಎಲ್ಲಾ ಆಸ್ಪತ್ರೆಗಳಲ್ಲಿ ಅಗತ್ಯವಿರುವ ಪ್ರತಿಯೊಂದು ಔಷಧ ಮತ್ತು ಪರೀಕ್ಷೆಯನ್ನು ಖಚಿತಪಡಿಸಿಕೊಳ್ಳುವುದು ನೀಡುವುದು ನನ್ನ ಇನ್ನೊಂದು ಗುರಿಯಾಗಿದೆ. ಜನರು ನಮ್ಮ ಆಸ್ಪತ್ರೆಗಳಿಗೆ ಹೋಗಿ ಅವರಿಗೆ ಅಗತ್ಯವಿರುವ ಚಿಕಿತ್ಸೆಯನ್ನು ಯಾವುದೇ ತೊಂದರೆಗಳಿಲ್ಲದೆ ಪಡೆಯುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ನಾನು ಬಯಸುತ್ತೇನೆ. ಮುಂದಿನ 6-8 ತಿಂಗಳುಗಳಲ್ಲಿ ಇದನ್ನು ಸಾಧಿಸಲು ನಾನು ಬಯಸುತ್ತೇನೆ. ಮೂರನೆಯ ಗುರಿ ತಾಯಿ ಮತ್ತು ಶಿಶು ಮರಣ ಪ್ರಮಾಣವನ್ನು ಕಡಿಮೆ ಮಾಡುವುದು. ಹೈಟೆಕ್ 104 ಕಾಲ್ ಸೆಂಟರ್ ಮತ್ತು 108 ಆಂಬುಲೆನ್ಸ್ ಸೌಲಭ್ಯಗಳನ್ನು ಒದಗಿಸುವುದು ನಾಲ್ಕನೇ ಗುರಿಯಾಗಿದೆ. ❖

ಗುಣಮಟ್ಟದ ಆರೋಗ್ಯಸೇವೆ ಎಲ್ಲರಿಗೂ ಲಭ್ಯ...

ಪರಿಚಯ:

ಆರೋಗ್ಯ ಸೇವಾ ವಲಯದಲ್ಲಿ ಮೂಲ ಸೌಕರ್ಯ ಮತ್ತು ಯೋಜನೆಗಳು ಸಮೂಹದ ಸ್ವಾಸ್ಥ್ಯ ಕಾಪಾಡುವಲ್ಲಿ ಅತ್ಯಂತ ಪ್ರಮುಖವಾಗಿವೆ. ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರಾದ ಡಾ.ರಣ್ ದೀಪ್ ಅವರು ಬಿ.ಎಸ್. ಮನು ರಾವ್ ಅವರೊಂದಿಗಿನ ಮಾತುಕತೆಯಲ್ಲಿ ಆರೋಗ್ಯವಂತ ಸಮುದಾಯಕ್ಕಾಗಿ ರಾಜ್ಯದ ಕಾರ್ಯಸೂಚಿಯ ವಿವರಗಳನ್ನು ಹಂಚಿಕೊಂಡಿದ್ದಾರೆ.

• ಕ್ಯಾನ್ಸರ್ ಅತ್ಯಂತ ವೇಗವಾಗಿ ಹರಡುತ್ತಾ ಶಾಪವಾಗಿ ಪರಿಣಮಿಸುತ್ತಿದೆ. ಈ ಅಪಾಯವನ್ನು ನಿಭಾಯಿಸಲು ನೀವು ಯಾವ ಉಪಕ್ರಮಗಳನ್ನು ಹೊಂದಿದ್ದೀರಿ?

ಕ್ಯಾನ್ಸರ್ ರಿಸ್ಕ್ ಅಂಶಗಳೊಂದಿಗೆ ಗಮನಾರ್ಹವಾಗಿ ಸಂಬಂಧ ಹೊಂದಿದೆ. ಈ ರಿಸ್ಕ್ ಅಂಶಗಳನ್ನು ಕಡಿಮೆ ಮಾಡುವಲ್ಲಿ ಪ್ರಾಥಮಿಕ ತಡೆಗಟ್ಟುವಿಕೆ ಅತ್ಯಂತ ಮುಖ್ಯವಾದ ಅಂಶವಾಗಿದೆ. ಇದನ್ನು ಸಾಧಿಸುವುದು ಕಠಿಣ ಗುರಿಯಾಗಿದೆ. ಅದು ಬಹುಮುಖಿ ಸ್ವರೂಪ ಹೊಂದಿದೆ. ಈ ಕಾರ್ಯತಂತ್ರದ ಪ್ರಮುಖಾಂಶವೆಂದರೆ ಸಾಮಾಜಿಕ ಮತ್ತು ಜೀವನ ಶೈಲಿ ಬದಲಾವಣೆ ಕುರಿತ ಸಂವಹನ(ಎಸ್.ಬಿ.ಸಿ.ಸಿ.). ರಿಸ್ಕ್ ಅಂಶಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವ ಜೀವನಶೈಲಿಯನ್ನು ಅನುಸರಿಸಲು ಜನರಿಗೆ ಅರಿವು ಮೂಡಿಸುವುದು ಇದರ ಉದ್ದೇಶವಾಗಿದೆ.

ಪ್ರಾಥಮಿಕ ಹಂತದಲ್ಲೇ ತಡೆಗಟ್ಟುವಿಕೆಯ ಹೊರತಾಗಿಯೂ ಆರಂಭಿಕ ತಪಾಸಣೆ ಮತ್ತು ರೋಗಪತ್ತೆಗಳು ತಡೆಗಟ್ಟುವ ತಂತ್ರಗಳಲ್ಲಿ ಅತ್ಯಗತ್ಯವಾಗಿವೆ. ಕ್ಯಾನ್ಸರ್ ಕುರಿತು ಜಾಗೃತಿ ಮೂಡಿಸುವಲ್ಲಿ ಸರ್ಕಾರದ ಕ್ರಿಯಾಶೀಲ ಭಾಗವಹಿಸುವಿಕೆ ಇದ್ದು ಮಾನ್ಯ ಸಚಿವರು ಮತ್ತು ಇಡೀ ರಾಜ್ಯ ಸರಕಾರ ಕ್ಯಾನ್ಸರ್ ಕುರಿತಾದ ಅರಿವನ್ನು ಮೂಡಿಸುವಲ್ಲಿ ಪ್ರಯತ್ನ ನಡೆಸಿವೆ. ವಾಕ್‌ಥಾನ್‌ಗಳು ಮತ್ತು ಸೈಕ್ಲಾಥಾನ್‌ಗಳು, ವಿಶ್ವ ಕ್ಯಾನ್ಸರ್ ದಿನ, ವಿಶ್ವ ತಂಬಾಕು ರಹಿತ ದಿನ ಮುಂತಾದ ದಿನಗಳನ್ನು ಆಚರಿಸಲಾಗುತ್ತಿದೆ. ಈ ಘಟನೆಗಳನ್ನು ಹೆಚ್ಚಿನ ಪ್ರಮುಖ ಮಾಧ್ಯಮಗಳಲ್ಲಿ ಪ್ರಚಾರ ಪಡೆದುಕೊಂಡಾಗ ಅದು ಕ್ಯಾನ್ಸರ್‌ಗಳ ಆರಂಭಿಕ ತಪಾಸಣೆ ಮತ್ತು ಚಿಕಿತ್ಸೆಯ ಬಗ್ಗೆ ಸದೃಢ ಸಂದೇಶಗಳನ್ನು ನೀಡುತ್ತದೆ. ಈ ವರ್ಷ ವಿಶ್ವ ಕ್ಯಾನ್ಸರ್ ದಿನದಂದು ರಾಜ್ಯವು ಕಂಠೀರವ ಕ್ರೀಡಾಂಗಣದಲ್ಲಿ 10,000 ಜನರನ್ನು ಒಗ್ಗೂಡಿಸಿತ್ತು

ಸಾಮಾಜಿಕ ಮಾಧ್ಯಮ ಆಧರಿತ ಸಂವಹನವು ರಾಜ್ಯದ ಮಾಹಿತಿ ಶಿಕ್ಷಣ ಸಂವಹನ ವಿಭಾಗದಡಿ ನಿಯಮಿತ ಚಟುವಟಿಕೆಯಾಗಿದೆ. ತಂಬಾಕು ಬಳಕೆಯನ್ನು ತಪ್ಪಿಸಲು ಅರಿವನ್ನು ಮೂಡಿಸುವ ವಿಶೇಷ ಕಾರ್ಯಕ್ರಮಗಳನ್ನು ನಿಯಮಿತವಾಗಿ ಕೈಗೊಳ್ಳಲಾಗಿದೆ. ನಿಯತ್ರಣಕ್ಕೆ ಸಂಬಂಧಿಸಿದಂತೆ ಸಿಗರೇಟ್ ಮತ್ತಿತರೆ ತಂಬಾಕು ಉತ್ಪನ್ನಗಳ ಕಾಯ್ದೆಯು ಎಸ್.ಬಿ.ಸಿ.ಸಿ.ಗೆ ನೆರವಾಗಬೇಕು.

ಪ್ರಾಥಮಿಕ ಆರೋಗ್ಯ ಕೇಂದ್ರದ ತಂಡಗಳು ಮತ್ತು ಸಾಂಕ್ರಾಮಿಕವಲ್ಲದ ರೋಗಗಳ ತಡೆ ಮತ್ತು ನಿಯಂತ್ರಣದ ರಾಷ್ಟ್ರೀಯ ಕಾರ್ಯಕ್ರಮ(ಎನ್.ಪಿ.-ಎನ್.ಸಿ.ಡಿ.) ಮತ್ತು ಕಾಂಪ್ರಹೆನ್ಸಿವ್ ಪ್ರೈಮರಿ ಹೆಲ್ತ್ ಕೇರ್-ಯೂನಿವರ್ಸಲ್ ಹೆಲ್ತ್ ಕವರೇಜ್(ಸಿ.ಪಿ.ಎಚ್.ಸಿ.-ಯು.ಎಚ್.ಸಿ.) ಕಾರ್ಯಕ್ರಮಗಳ ಅಡಿಯಲ್ಲಿ ನಿಯಮಿತ ರೋಗಪರೀಕ್ಷೆ ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ವೈದ್ಯಾಧಿಕಾರಿಗಳು ಮತ್ತು ಮುಂಚೂಣಿಯ ಕಾರ್ಯಕರ್ತರಿಗೆ ಬಾಯಿ, ಸ್ತನ ಮತ್ತು ಗರ್ಭಕೋಶದ ಕ್ಯಾನ್ಸರ್ ಪರೀಕ್ಷೆ ಕುರಿತು ತರಬೇತಿ ನೀಡಲಾಗಿದೆ. ಎಚ್.ಪಿ.ವಿ. ಲಸಿಕೆ ಪ್ರಾರಂಭವಾದ ಕೂಡಲೇ ಅದು ಗರ್ಭಕೋಶದ ಕ್ಯಾನ್ಸರ್ ಪ್ರಕರಣ ಕಡಿಮೆ ಮಾಡಲು ಸ್ವಾಗತಾರ್ಹ ಕ್ರಮವಾಗಲಿದೆ.

ಆಯುಷ್ಮಾನ್ ಭಾರತ್-ಪ್ರಧಾನಮಂತ್ರಿ ಜನ ಆರೋಗ್ಯ ಯೋಜನೆ- ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನಗಳು (ಎಬಿ-ಪಿಎಂಜೆಎವೈ-ಸಿಎಂಎಸ್ ಎಆರ್.ಕೆ) ರಾಜ್ಯದಲ್ಲಿ ಕ್ಯಾನ್ಸರ್ ನಿಂದ ಬಳಲುತ್ತಿರುವ ಎಲ್ಲ ಅರ್ಹ ರೋಗಿಗಳಿಗೂ ಉಚಿತ ಚಿಕಿತ್ಸೆ ನೀಡುತ್ತಿದೆ. ಬಡತನದ ರೇಖೆಗಿಂತ ಕೆಳಗಿನ ಹಾಗೂ ಮೇಲಿನ ಎಲ್ಲರಿಗೂ ಈ ಯೋಜನೆ ಮುಕ್ತವಾಗಿಸಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ.

• ರಾಜ್ಯದಲ್ಲಿ ಆರೋಗ್ಯ ಸೇವೆ ಉನ್ನತಗೊಳಿಸಲು ನಿಮ್ಮ ಯೋಜನೆಗಳು ಏನು?

ಇತ್ತೀಚೆಗೆ ಡಾ.ಪುನೀತ್ ರಾಜ್ ಕುಮಾರ್ ಹೃದಯ ಜ್ಯೋತಿ ಯೋಜನೆಯನ್ನು ಪ್ರಾರಂಭಿಸಲಾಯಿತು. ಈ ಉಪಕ್ರಮವು ಹೃದಯಾಘಾತದ ಸಂದರ್ಭದ `ಸುವರ್ಣ ಘಳಿಗೆ’ಯಲ್ಲಿ ಜೀವಗಳನ್ನು ಉಳಿಸುವ ಗುರಿ ಹೊಂದಿದೆ. ಈ ಯೋಜನೆಯಡಿಯಲ್ಲಿ 85 ತಾಲ್ಲೂಕು ಮತ್ತು ಜಿಲ್ಲಾ ಆಸ್ಪತ್ರೆಗಳನ್ನು ಸ್ಪೋಕ್ ಸೆಂಟರ್ ಗಳಾಗಿಸಿದ್ದು, ಸೂಪರ್ ಸ್ಪೆಷಾಲಿಟಿ ಕಾರ್ಡಿಯಾಕ್ ಆಸ್ಪತ್ರೆಗಳನ್ನು ಹಬ್ ಸೆಂಟರ್ ಗಳಾಗಿಸಲಾಗಿದೆ. ಉಚಿತ ಇಸಿಜಿಗಳು, ಪ್ರಾರಂಭಿಕ ಎಐ-ಆಧರಿತ ರೋಗಪರೀಕ್ಷೆ ನಡೆಸಲಾಗುತ್ತಿದೆ. ಸ್ಪೋಕ್ ಆಸ್ಪತ್ರೆಗಳಲ್ಲಿ ತಕ್ಷಣದ ಮೊದಲ ಹಂತದ ಚಿಕಿತ್ಸೆ ನೀಡುವುದರ ಜೊತೆಗೆ ಹಬ್ ಆಸ್ಪತ್ರೆಗಳಿಗೆ ಎ.ಎಲ್.ಎಸ್.(ಅಡ್ವಾನ್ಸ್ ಡ್ ಲೈಫ್ ಸಪೋರ್ಟ್) ಆಂಬುಲೆನ್ಸ್ ಮೂಲಕ ತ್ವರಿತವಾಗಿ ದಾಖಲಿಸಲಾಗುತ್ತದೆ. ಅತ್ಯಂತ ಪರಿಣಾಮಕಾರಿ ಮತ್ತು ದುಬಾರಿ `ಟೆನೆಕ್ಟ್ ಪ್ಲೇಸ್’ ಇಂಜೆಕ್ಷನ್ ಅನ್ನು ಉಚಿತವಾಗಿ ಸ್ಪೋಕ್ ಆಸ್ಪತ್ರೆಗಳಲ್ಲಿ ಸ್ಟೆಮಿ(STEMI)-ರೋಗಪರೀಕ್ಷೆಗೆ ಒಳಪಟ್ಟ ರೋಗಿಗಳಿಗೆ ನೀಡಲಾಗುತ್ತದೆ. ಎಇಡಿ-ಆಟೊಮೇಟೆಡ್ ಎಕ್ಸ್ ಟರ್ನಲ್ ಡಿಫೈಬ್ರಿಲ್ಲೇಟರ್ ಅನ್ನು ರಾಜ್ಯದಾದ್ಯಂತ ಸಾರ್ವಜನಿಕ ಸ್ಥಳಗಳಲ್ಲಿ ಸ್ಥಾಪನೆ ಮಾಡಲಾಗುತ್ತದೆ.

ಗೃಹ ಆರೋಗ್ಯ ಯೋಜನೆಯನ್ನು ಸದ್ಯದಲ್ಲೇ ರಾಜ್ಯದಲ್ಲಿ ಪ್ರಾರಂಭಿಸಲಾಗುತ್ತಿದ್ದು ಅದರ ಮೂಲಕ ಆರೋಗ್ಯಸೇವಾ ಸೌಲಭ್ಯಗಳು ಮನೆಬಾಗಿಲಿನಲ್ಲಿ ಸುಲಭವಾಗಿ ಲಭ್ಯವಾಗುತ್ತವೆ.

ಕರ್ನಾಟಕವು ಒಮ್ಮೆ ಬಳಸುವ ಡಯಾಲಿಸಿಸ್ ಮೆಷಿನ್ ಗಳನ್ನು ರಾಜ್ಯದಾದ್ಯಂತ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ಕಡ್ಡಾಯಗೊಳಿಸುತ್ತಿದೆ. ಇದು ಆರೋಗ್ಯಸೇವಾ ಕಾರ್ಯಕರ್ತರು ಮತ್ತು ರೋಗಿಗಳ ನಡುವೆ ಅಡ್ಡ ಸೋಂಕು ಕಡಿಮೆ ಮಾಡುತ್ತದೆ. ಒಮ್ಮೆ ಬಳಸುವ ಡಯಾಲಿಸಿಸ್ ಘಟಕವು ಅನುಕೂಲಕರವಾಗಿದ್ದು ಕಡಿಮೆ ಮಾನವಶಕ್ತಿ ಮತ್ತು ಕಡಿಮೆ ನೀರು ಬಳಸುತ್ತದೆ.

ಕೋವಿಡ್-19ರ ಸಮಯದಲ್ಲಿ ಟೆಲಿಮೆಡಿಸಿನ್ ಅನ್ನು ಮುಂಚೂಣಿಗೆ ತರಲಾಯಿತು ಮತ್ತು ಅಂದಿನಿಂದ ರಾಜ್ಯದಲ್ಲಿ ಮಾದರಿ ಸೇವಾ ವಿತರಣೆಯಾಗಿ ಇದು ಮುಂದುವರೆದಿದೆ. ಟೆಲಿಐಸಿಯು ಹಬ್‌ಗಳು ಮತ್ತು ಸ್ಪೋಕ್‌ಗಳ ನೆಟ್‌ವರ್ಕ್ ಅನ್ನು ಇತ್ತೀಚೆಗೆ ವಿಸ್ತರಿಸಲಾಗಿದೆ ಮತ್ತು ಇದನ್ನು ಎಲ್ಲಾ ತಾಲ್ಲೂಕು ಆಸ್ಪತ್ರೆಗಳಿಗೆ ತಲುಪಲು ಯೋಜಿಸಲಾಗಿದೆ. ಇದು ವೈದ್ಯಕೀಯ ಕಾಲೇಜುಗಳಲ್ಲಿನ ಬೆಂಬಲ ಕೇಂದ್ರಗಳ ಸಹಾಯದಿಂದ ತಾಲ್ಲೂಕು ಆಸ್ಪತ್ರೆಗಳಲ್ಲಿ ಸೂಕ್ಷ್ಮ ಆರೈಕೆ ಸೇವೆಗಳ ಲಭ್ಯತೆಯನ್ನು ಸಾಧ್ಯವಾಗಿಸುತ್ತದೆ.

ನಾವು 105 ಅಡ್ವಾನ್ಸ್ಡ್ ಲೈಫ್ ಸಪೋರ್ಟ್(ಎ.ಎಲ್.ಎಸ್.) ಮತ್ತು 157 ಬೇಸಿಕ್ ಲೈಫ್ ಸಪೋರ್ಟ್(ಬಿ.ಎಲ್.ಎಸ್.) ಆಂಬುಲೆನ್ಸ್ ಸೇವೆಗಳನ್ನು ಪ್ರಾರಂಭಿಸಲು ಯೋಜಿಸಿದ್ದೇವೆ. ಇದು ತುರ್ತುಸ್ಥಿತಿಯಲ್ಲಿ ಆಂಬುಲೆನ್ಸ್ ಸೇವೆಯನ್ನು ಸದೃಢಗೊಳಿಸುವುದರಲ್ಲಿ ಗಮನಾರ್ಹ ಹೆಜ್ಜೆಯಾಗಿದೆ. ಇಲಾಖೆಯು 108 ತುರ್ತು ಆಂಬುಲೆನ್ಸ್ ಸೇವೆಗಳು ಮತ್ತು 104 ಆರೋಗ್ಯ ಸಹಾಯವಾಣಿಗಳನ್ನು ರೂಪಿಸುವಲ್ಲಿ ಶ್ರಮಿಸುತ್ತಿದೆ.

ಉಚಿತ ಎಂ.ಆರ್.ಐ. ಮತ್ತು ಸಿ.ಟಿ.ಸ್ಕ್ಯಾನ್ ಎಲ್ಲ ಜಿಲ್ಲೆ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ. ನಾವು ಆರು ತಿಂಗಳಲ್ಲಿ 158969 ಸಿಟಿ ಸ್ಕ್ಯಾನ್ ಗಳು ಮತ್ತು 53659 ಎಂ.ಆರ್.ಐ.ಗಳನ್ನು ನಡೆಸಿದ್ದೇವೆ.

ಆಸ್ಪತ್ರೆಗಳಲ್ಲಿ ಕಾಯುವ ಸಮಯವನ್ನು ಕಡಿಮೆ ಮಾಡಲು, ಪ್ರಸ್ತುತದ ಹಾಸ್ಪಿಟಲ್ ಮ್ಯಾನೇಜ್‌ಮೆಂಟ್ ಇನ್ಫರ್ಮೇಷನ್ ಸಿಸ್ಟಮ್ (ಎಚ್.ಎಂ.ಐ.ಎಸ್) ನೆಟ್‌ವರ್ಕ್ ಅನ್ನು ಕ್ಯೂ.ಆರ್. ಕೋಡ್ ಆಧಾರಿತ ಫಾಸ್ಟ್-ಟ್ರ್ಯಾಕ್ ಒಪಿಡಿ ನೋಂದಣಿ ವ್ಯವಸ್ಥೆಯ ಮೂಲಕ ನಿರ್ವಹಿಸಲಾಗುತ್ತಿದೆ. ಇದು ಆಯುಷ್ಮಾನ್ ಭಾರತ್ ಡಿಜಿಟಲ್ ಮಿಷನ್ ಅಡಿಯಲ್ಲಿ ಇಂಟರ್ ಆಪರೇಬಲ್ ಹೆಲ್ತ್‌ಕೇರ್ ಡೇಟಾ ಸಿಸ್ಟಮ್‌ನ ದೊಡ್ಡ ಇಕೊಸಿಸ್ಟಂ ಅಡಿಯಲ್ಲಿದೆ. ದೇಶದಲ್ಲಿ ಈ ಯೋಜನೆಯನ್ನು ಅಳವಡಿಸಿಕೊಂಡ ಮೊದಲಿಗರಲ್ಲಿ ನಾವು ಒಬ್ಬರು.

ಇಲಾಖೆಯು ಇತ್ತೀಚೆಗೆ ಸಿ.ಎಸ್.ಆರ್. ಅಡಿಯಲ್ಲಿ ಸಾರ್ವಜನಿಕ ಆರೋಗ್ಯ ವ್ಯವಸ್ಥೆಗಳನ್ನು ಸದೃಢಗೊಳಿಸಲು ಸಹಯೋಗಗಳು ಮತ್ತು ಫಂಡಿಂಗ್ ಅವಕಾಶಗಳನ್ನು ಆವಿಷ್ಕರಿಸಲು ಸೆಂಟರ್ ಫಾರ್ ಸೆಲ್ಯುಲರ್ ಅಂಡ್ ಮಾಲಿಕ್ಯುಲರ್ ಪ್ಲಾಟ್ ಫಾರ್ಮ್ಸ್(ಸಿ-ಕ್ಯಾಂಪ್) ರೌಂಡ್ ಟೇಬಲ್ ಸಹ-ಆಯೋಜನೆ ಮಾಡಿತ್ತು.

ಆರೋಗ್ಯ ರಕ್ಷಣೆಯಲ್ಲಿ ಇತರ ರಾಜ್ಯಗಳು ಪುನರಾವರ್ತಿಸುವಂತೆ ಕರ್ನಾಟಕವನ್ನು ಮಾದರಿ ರಾಜ್ಯವನ್ನಾಗಿ ಮಾಡುವುದು ನಮ್ಮ ಗುರಿಯಾಗಿದೆ. ಆರೋಗ್ಯ ಇಲಾಖೆಯು ಆಸ್ಟ್ರಾ ಜೆನೆಕಾದೊಂದಿಗೆ ಒಡಂಬಡಿಕೆಗೆ ಸಹಿ ಹಾಕಿದ್ದು ಅದರಂತೆ ಒಂದು ಎದೆಯ ಎಕ್ಸ್-ರೇ ಮೂಲಕ 29 ಶ್ವಾಸಕೋಶ ರೋಗಗಳನ್ನು ರೋಗಿಯಲ್ಲಿ ಕಂಡುಕೊಳ್ಳುವ ಕೃತಕ ಬುದ್ಧಿಮತ್ತೆ(ಎಐ)ಯನ್ನು ಅಳವಡಿಸಲಿದೆ.

ಡಾ.ರಣ್ ದೀಪ್

ಈ ಎಐ-ಸನ್ನದ್ಧ ಎದೆಯ ಎಕ್ಸ್-ರೇ ವ್ಯವಸ್ಥೆಯು ಕರ್ನಾಟಕದಾದ್ಯಂತ 21 ಜಿಲ್ಲಾ ಆಸ್ಪತ್ರೆಗಳಲ್ಲಿ ಲಭ್ಯವಿರುತ್ತದೆ.

• ಕರ್ನಾಟಕದಲ್ಲಿ ಕುಟುಂಬ ಕಲ್ಯಾಣ ಕ್ರಮಗಳನ್ನು ಸುಧಾರಿಸಲು ಏನಾದರೂ ಹೊಸ ಉಪಕ್ರಮಗಳಿವೆಯೇ?

ವಿಶ್ವ ಆರೋಗ್ಯ ಸಂಸ್ಥೆ(ಡಬ್ಲ್ಯು.ಎಚ್.ಒ.) ಕೆಲವು ಜಿಲ್ಲೆಗಳಲ್ಲಿ ಸಬ್-ಡರ್ಮಲ್ ಸಿಂಗಲ್ ರಾಡ್ ಇಂಪ್ಲಾಂಟ್ ಗಳನ್ನು ಅಳವಡಿಸಲು ಒಪ್ಪಿಕೊಂಡಿದೆ. ಎಲ್ಲಾ ಸೌಲಭ್ಯಗಳಲ್ಲಿ ಮತ್ತು ಕಾಂಡೋಮ್‌ಗಳು, ತುರ್ತು ಗರ್ಭನಿರೋಧಕ ಮಾತ್ರೆಗಳು ಮತ್ತು ಗರ್ಭಧಾರಣೆಯ ಪರೀಕ್ಷಾ ಕಿಟ್‌ಗಳೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಸ್ವಯಂ-ಆರೈಕೆ ಕಿಟ್ ಅಳವಡಿಸಲಾಗಿದೆ. ಕುಟುಂಬ ಯೋಜನಾ ವಿಧಾನಗಳಿಗಾಗಿ ರಾಜ್ಯವು ಆಸ್ಪತ್ರೆಗಳಲ್ಲಿ ಸೆಂಟರ್ಸ್ ಆಫ್ ಎಕ್ಸಲೆನ್ಸ್ ಸ್ಥಾಪಿಸಲು ಯೋಜಿಸುತ್ತಿದೆ.

• ನೀವು ಯಾವ ಯೋಜನೆಯನ್ನು ಪ್ರಮುಖವಾಗಿ ಹೇಳಲು ಬಯಸುತ್ತೀರಿ?

ಎಬಿ-ಪಿಎಂಜೆಎವೈ-ಸಿಎಂಎಸ್ ಎಆರ್.ಕೆ ಪ್ರಮುಖವಾದ ಯೋಜನೆಯಾಗಿದೆ. ಇದು ಯೂನಿವರ್ಸಲ್ ಹೆಲ್ತ್ ಕವರೇಜ್(ಯು.ಎಚ್.ಸಿ.)ಯ ಪ್ರಮುಖ ಚಾಲಕ ಶಕ್ತಿಯಾಗಿದೆ. ಈ ಯೋಜನೆಯು ರಾಜ್ಯದ ಜನರು ಸಾರ್ವಜನಿಕ ಮತ್ತು ನಿಯೋಜಿತ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳಲು ತಮ್ಮ ಹಣವನ್ನು ವೆಚ್ಚ ಮಾಡುವುದನ್ನು ಕಡಿಮೆ ಮಾಡುವುದಲ್ಲದೆ ಇದು ವಿಕೇಂದ್ರೀಕೃತ ಹಣಕಾಸಿನ ಯೋಜನೆ ಮೂಲಕ ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಸುಧಾರಿಸುತ್ತದೆ . ಯು.ಎಚ್.ಸಿ.ಯ ಎರಡು ರೀತಿಯ ಕಾರ್ಯತಂತ್ರದ ಮೂಲಕ ಮುಂದಿನ ವರ್ಷಗಳಲ್ಲಿ ರಾಜ್ಯವು ಜನರಿಗೆ ಗುಣಮಟ್ಟದ ಆರೋಗ್ಯಸೇವೆಯನ್ನು ಸುಧಾರಿಸಲು ಶಕ್ತವಾಗಿದೆ. ಕರ್ನಾಟಕವು ಈ ಯೋಜನೆಯ ಅಡಿಯಲ್ಲಿ ಪ್ರತಿ ತಿಂಗಳು ಎರಡು ಲಕ್ಷಕ್ಕೂ ಹೆಚ್ಚು ಪ್ರಿ-ಆಥರೈಸೇಷನ್ ಕೋರಿಕೆಗಳನ್ನು ಪಡೆಯುತ್ತಿರುವುದು ಈ ಯೋಜನೆಯ ಅಡಿಯಲ್ಲಿ ಆರೈಕೆಯ ಪ್ರಮಾಣವನ್ನು ತೋರಿಸುತ್ತದೆ.

ರೋಗ ನಿಯಂತ್ರಣ ಮತ್ತು ಮೇಲ್ವಿಚಾರಣಾ ಕ್ರಮಗಳ ನಿಮ್ಮ ಉಪಕ್ರಮಗಳನ್ನು ದಯವಿಟ್ಟು ವಿವರಿಸಿ.

ಇಲಾಖೆಯು ವಿಶೇಷ ಕಾರ್ಯಕ್ರಮ-ಇಂಟಿಗ್ರೇಟೆಡ್ ಡಿಸೀಸ್ ಸರ್ವೇಲೆನ್ಸ್ ಪ್ರೋಗ್ರಾಮ್(ಐ.ಡಿ.ಎಸ್.ಪಿ.) ಹೊಂದಿದ್ದು ಇದು ಐಟಿ-ಆಧರಿತ ಪ್ಲಾಟ್ ಫಾರಂ ಹಾಗೂ ಇಂಟಿಗ್ರೇಟೆಡ್ ಹೆಲ್ತ್ ಇನ್ಫರ್ಮೇಷನ್ ಪ್ಲಾಟ್ ಫಾರಂ(ಐ.ಎಚ್.ಐ.ಪಿ.) ಹೊಂದಿದೆ. ಎಲ್ಲ ಸಾರ್ವಜನಿಕ ಆರೋಗ್ಯ ಸೌಲಭ್ಯಗಳು ಮತ್ತು ಎಲ ಖಾಸಗಿ ಆಸ್ಪತ್ರೆಗಳು ರೋಗಗಳನ್ನು ನೇರವಾಗಿ ಈ ಪೋರ್ಟಲ್ ನಲ್ಲಿ ವರದಿ ಮಾಡುತ್ತವೆ ಮತ್ತು ರೋಗಗಳ ಹೆಚ್ಚಳ ಕುರಿತು ಮೊದಲೇ ಎಚ್ಚರಿಕೆ ನೀಡುತ್ತವೆ. ಈ ಪೋರ್ಟಲ್ ಅನ್ನು ಸ್ಟೇಟ್ ಸರ್ವೇಲೆನ್ಸ್ ಯೂನಿಟ್ ನಿರ್ವಹಿಸುತ್ತಿದ್ದು ಅದು ನಿಯಮಿತವಾಗಿ ದತ್ತಾಂಶ ಆಧರಿಸಿ ರೋಗ ಪ್ರಸಾರದ ಎಚ್ಚರಿಕೆಗಳನ್ನು ಕಳುಹಿಸುತ್ತದೆ.

ಕರ್ನಾಟಕವು ರೇಬೀಸ್ ಅನ್ನು ಸೂಚಿಸಬಲ್ಲ ರೋಗ ಎಂದು ಘೋಷಿಸಿರುವ ಕೆಲವೇ ರಾಜ್ಯಗಳಲ್ಲಿ ಒಂದಾಗಿದೆ. ರಾಜ್ಯವು ತನ್ನ ಎಲ್ಲ ಆರೋಗ್ಯ ಕೇಂದ್ರಗಳಲ್ಲಿ ರೇಬೀಸ್-ನಿರೋಧಕ ಲಸಿಕೆಯ ಸ್ಥಿರವಾದ ಪೂರೈಕೆ ಹೊಂದಿದೆ.

ಸಾಂಕ್ರಾಮಿಕಗಳ ಕುರಿತಾದ ನಿಯಮಿತವಾದ ಮೇಲ್ವಿಚಾರಣೆಯ ಸಭೆಗಳನ್ನು ಕಾಲಕಾಲಕ್ಕೆ ನಡೆಸಲಾಗುತ್ತದೆ. ❖

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,217
ಇಂದಿನ ಅಂತ್ಯ	22,212
▼	4
ದಿನದ ಗರಿಷ್ಠ	22,186

ವಿನಿಮಯ ದರ

$ ಡಾಲರ್	82.93
£ ಪೌಂಡ್	104.99
€ ಯುರೊ	89.73
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹560
12 ಕ್ಕೆ ₹76
ಮೈಸೂರು
100ಕ್ಕೆ ₹560

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹915 (905)
ಸೂರ್ಯಕಾಂತಿ (ರಿಫೈನ್ಡ್)	₹910 (905)
ಪಾಮೋಲಿನ್	₹858 (860)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹325-460
ದ್ವಿತಳಿ (ಬಿ.ವಿ) ₹305-562

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹162.50
ಆರ್‌ಎಸ್‌ಎಸ್-5 ₹157.50
ಗುಡ್ ಲಾಟ್ ₹141

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)
ಬೆಳ್ತಂಗಡಿ ₹9197-9197
ತಿಪಟೂರು ₹7400-9000

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	950-1000
ನಡುಗೋಲು	1050-1100
ರಾಶಿ	1150-1200
ರಾಶಿ ಉತ್ತಮ	1300-1350
ಹೆರಕಿದ್ದು	1900-2000
ಹಸಿರು ಸಾಧಾರಣ	1200-1300
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	500

ಅಡಿಕೆ (ಬಂಟ್ವಾಳ)

ಕೋಕ	18000-28500
ಹೊಸತು	28500-33000
ಹಳತು	33000-42500

ಕುಮಟ

ಚಿಪ್ಪು	11161-28809
ಕೋಕ	16019-25509
ಫ್ಯಾಕ್ಟರಿ	11161-19239
ಹಳೆಚಾಲಿ	32999-36899
ಹೊಸಚಾಲಿ	29999-33099

ಶಿವಮೊಗ್ಗ

ಬೆಟ್ಟೆ	46440-53009
ಗೊರಬಲು	15689-32169
ರಾಶಿ	30009-47899
ಸರಕು	57320-82700

ಸಿದ್ದಾಪುರ

ಬಿಳಿಗೋಟು	25299-28119
ಚಾಲಿ	34009-37199
ಕೋಕ	24299-26799
ಹೊಸಚಾಲಿ	29059-34099
ಕೆಂಪುಗೋಟು	30699-34099
ರಾಶಿ	43019-46579
ತಟ್ಟಿಬೆಟ್ಟೆ	39109-42469

ಶಿರಸಿ

ಬೆಟ್ಟೆ	37699-44819
ಬಿಳಿಗೋಟು	24199-31611
ಚಾಲಿ	33662-38312
ಕೆಂಪುಗೋಟು	27600-33899
ರಾಶಿ	43399-46781

ಯಲ್ಲಾಪುರ

ಅಪಿ	54479-60869
ಬಿಳಿಗೋಟು	22899-29199
ಚಾಲಿ	30122-37699
ಕೋಕ	14899-28635
ಕೆಂಪುಗೋಟು	24899-35399
ರಾಶಿ	43299-53469
ತಟ್ಟಿಬೆಟ್ಟೆ	36599-43219

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	-	14,000	-	183.15 ಸೆಂಟ್ಸ್
ಎಸಿ	-	7,500	-	
ಆರ್‌ಪಿ	-	13,550	-	ಲಂಡನ್
ಆರ್‌ಸಿ	-	280 on OT	-	3,113 ಡಾಲರ್ಸ್

ಜಿಯೊ ಫೈನಾನ್ಶಿಯಲ್ ಷೇರು ಶೇ 15ರಷ್ಟು ಏರಿಕೆ

ನವದೆಹಲಿ (ಪಿಟಿಐ): ಷೇರುಪೇಟೆಯಲ್ಲಿ ಶುಕ್ರವಾರ ಉದ್ಯಮಿ ಮುಕೇಶ್ ಅಂಬಾನಿ ಒಡೆತನದ ರಿಲಯನ್ಸ್ ಸಮೂಹಕ್ಕೆ ಸೇರಿರುವ ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಕಂಪನಿಯ ಷೇರುಗಳ ಮೌಲ್ಯವು ಶೇ 15ರಷ್ಟು ಏರಿಕೆ ಕಂಡಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿಯಲ್ಲಿ ಜಿಯೊ ಫೈನಾನ್ಶಿಯಲ್ ಷೇರಿನ ಮೌಲ್ಯವು ಶೇ 10.62ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹355ಕ್ಕೆ ತಲುಪಿದೆ. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್‌ನಲ್ಲಿ ಷೇರಿನ ಮೌಲ್ಯ ಶೇ 10.18ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹333.90ಕ್ಕೆ ಮುಟ್ಟಿದೆ.

ನಿಫ್ಟಿಯಲ್ಲಿ ಕಂಪನಿಯ ಒಟ್ಟು 27 ಕೋಟಿ ಈಕ್ವಿಟಿ ಷೇರುಗಳು ಮಾರಾಟವಾದರೆ, ಸೆನ್ಸೆಕ್ಸ್‌ನಲ್ಲಿ 2.43 ಕೋಟಿ ಷೇರುಗಳು ಮಾರಾಟವಾಗಿವೆ. ಕಂಪನಿಯ ಮಾರುಕಟ್ಟೆ ಮೌಲ್ಯವು ₹27,922 ಕೋಟಿಯಿಂದ ₹2.12 ಲಕ್ಷ ಕೋಟಿಗೆ ಏರಿಕೆಯಾಗಿದೆ.

ಷೇರು ವಹಿವಾಟಿನ ಅಂತ್ಯದಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಮೌಲ್ಯವು ₹20.20 ಲಕ್ಷ ಕೋಟಿ ದಾಟಿದೆ. ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಬೆಲೆ 52 ವಾರಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ. ನಿಫ್ಟಿಯಲ್ಲಿ ಪ್ರತಿ ಷೇರಿನ ಬೆಲೆ ₹2,995.10 ಹಾಗೂ ಸೆನ್ಸೆಕ್ಸ್‌ನಲ್ಲಿ ₹2,996.15ಕ್ಕೆ ತಲುಪಿದೆ.

ಷೇರುದಾರರ ವಿಶೇಷ ಸಭೆಯಿಂದ ದೂರ ಉಳಿದ ಬೈಜು ಕುಟುಂಬ

ರವೀಂದ್ರನ್ ಪದಚ್ಯುತಿಗೆ ನಿರ್ಣಯ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿಯ ಮಾತೃಸಂಸ್ಥೆಯಾದ ಥಿಂಕ್ ಆ್ಯಂಡ್ ಲರ್ನ್ ಆಡಳಿತ ಮಂಡಳಿಯಿಂದ ಸಿಇಒ ಬೈಜು ರವೀಂದ್ರನ್ ಹಾಗೂ ಅವರ ಕುಟುಂಬದ ಸದಸ್ಯರನ್ನು ಪದಚ್ಯುತಿಗೊಳಿಸುವಂತೆ ಶುಕ್ರವಾರ ವರ್ಚುವಲ್ ಆಗಿ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ (ಇಜಿಎಂ) ಶೇ 60ಕ್ಕೂ ಹೆಚ್ಚು ಷೇರುದಾರರು ಮತ ಚಲಾಯಿಸಿದ್ದಾರೆ.

ರವೀಂದ್ರನ್

‘ಸಭೆಯಲ್ಲಿ ಮಂಡಿಸಿದ ಏಳು ನಿರ್ಣಯಗಳಿಗೆ ಷೇರುದಾರರು ಸರ್ವಾನುಮತದಿಂದ ಒಪ್ಪಿಗೆ ನೀಡಿದ್ದಾರೆ’ ಎಂದು ಸಭೆ ಕರೆದಿದ್ದ ಹೂಡಿಕೆದಾರರೊಬ್ಬರು ಹೇಳಿದ್ದಾರೆ.

ಕಂಪನಿಯ ನಿರ್ವಹಣೆಯಲ್ಲಿ ರವೀಂದ್ರನ್ ಮತ್ತು ಅವರ ಕುಟುಂಬವು ಸಂಪೂರ್ಣವಾಗಿ ವೈಫಲ್ಯ ಕಂಡಿದೆ. ಹಣಕಾಸಿನ ಅವ್ಯವಹಾರದಲ್ಲಿ ಭಾಗಿಯಾಗಿದೆ. ಹಾಗಾಗಿ, ಹೊಸದಾಗಿ ಆಡಳಿತ ಮಂಡಳಿಯನ್ನು ಪುನರ್ ರಚಿಸಬೇಕು. ಕೂಡಲೇ, ಕಂಪನಿಯ ನಾಯಕತ್ವವನ್ನು ಬದಲಾಯಿಸಬೇಕು. ಕಂಪನಿಯು ಸ್ವಾಧೀನ ಪಡಿಸಿಕೊಂಡಿರುವ ಸ್ವತ್ತುಗಳ ಬಗ್ಗೆ ಮೂರನೇ ವ್ಯಕ್ತಿಯಿಂದ ನ್ಯಾಯಯುತ ತನಿಖೆ ನಡೆಸಬೇಕು ಎಂದು ನಿರ್ಣಯಗಳನ್ನು ಮಂಡಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಹೂಡಿಕೆದಾರರು ಕರೆದಿರುವ ಸಭೆಯನ್ನು ಪ್ರಶ್ನಿಸಿ ರವೀಂದ್ರನ್ ಅವರು ಕರ್ನಾಟಕದ ಹೈಕೋರ್ಟ್‌ನ ಮೊರೆ ಹೋಗಿದ್ದು, ನ್ಯಾಯಾಲಯವು ಮಾರ್ಚ್ 13ಕ್ಕೆ ವಿಚಾರಣೆಯನ್ನು ಮುಂದೂಡಿದೆ. ಹಾಗಾಗಿ, ಸಭೆಯಲ್ಲಿ ಕೈಗೊಂಡಿರುವ ಈ ನಿರ್ಣಯಗಳು ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿವೆ.

ಸಭೆಯಿಂದ ದೂರ ಉಳಿದ ಕುಟುಂಬ: ‘ಕಂಪನಿಯ ನಿಯಮಾವಳಿಗಳ ಅನ್ವಯ ಸಭೆ ಕರೆದಿಲ್ಲ’ ಎಂದು ದೂರಿದ್ದ ರವೀಂದ್ರನ್ ಹಾಗೂ ಕುಟುಂಬವು ಸಭೆಯಿಂದ ದೂರ ಉಳಿದಿತ್ತು.

‘ಕಂಪನಿಯ ನಿಯಮಾವಳಿ ಅನ್ವಯ ಸಭೆಯಲ್ಲಿ ಕನಿಷ್ಠ ಒಬ್ಬರು ಸಂಸ್ಥಾಪಕರು ಭಾಗವಹಿಸಬೇಕಿದೆ. ನಿರ್ದಿಷ್ಟ ಕೋರಂ ಕೂಡ ಇರಬೇಕು. ಕೇವಲ ಶೇ 20ರಷ್ಟು ಷೇರುದಾರರಷ್ಟೇ ಭಾಗವಹಿಸಿದ್ದಾರೆ’ ಎಂದು ಹೇಳಿದೆ.

‘ಸಭೆಯಲ್ಲಿ ಕೈಗೊಂಡಿರುವ ನಿರ್ಣಯಗಳಿಗೆ ಮಾನ್ಯತೆ ಇಲ್ಲ. ಅಲ್ಲದೇ, ಅನುಷ್ಠಾನಗೊಳಿಸಲು ಸಾಧ್ಯವಾಗದಂತಹ ಕಾನೂನು ಬಾಹಿರ ನಿರ್ಣಯಗಳನ್ನು ಕೈಗೊಳ್ಳಲಾಗಿದೆ’ ಎಂದು ಪ್ರತಿಕ್ರಿಯಿಸಿದೆ.

ಲುಕ್‌ಔಟ್ ನೋಟಿಸ್ ಜಾರಿ: ರವೀಂದ್ರನ್ ವಿರುದ್ಧ ಮತ್ತೆ ಹೊಸದಾಗಿ ಲುಕ್‌ಔಟ್ ನೋಟಿಸ್ ಜಾರಿ ಮಾಡುವಂತೆ ಜಾರಿ ನಿರ್ದೇಶನಾಲಯವು (ಇ.ಡಿ), ಬ್ಯೂರೊ ಆಫ್ ಇಮಿಗ್ರೇಷನ್ (ಬಿಒಐ) ಅಧಿಕಾರಿಗಳಿಗೆ ಸೂಚಿಸಿದೆ.

ರವೀಂದ್ರನ್ ವಿರುದ್ಧ ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಉಲ್ಲಂಘನೆಗೆ ಸಂಬಂಧಿಸಿದಂತೆ ಬೆಂಗಳೂರಿನ ಇ.ಡಿ ಕಚೇರಿಯು ತನಿಖೆ ನಡೆಸುತ್ತಿದೆ. ಹೂಡಿಕೆದಾರರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಕ್ರಮಕ್ಕೆ ಮುಂದಾಗಿದೆ ಎಂದು ಹೇಳಲಾಗಿದೆ. ಆದರೆ, ಅವರು ಸದ್ಯ ದುಬೈನಲ್ಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಹೊಸದಾಗಿ ಆಡಳಿತ ಮಂಡಳಿ ಪುನರ್ ರಚಿಸಲು ಒತ್ತಾಯ
- ಕರ್ನಾಟಕ ಹೈಕೋರ್ಟ್‌ನಿಂದ ಮಾರ್ಚ್ 13ರಂದು ರವೀಂದ್ರನ್ ಅರ್ಜಿಯ ವಿಚಾರಣೆ
- ಸಭೆಗೆ ಮಾನ್ಯತೆ ಇಲ್ಲ: ಕುಟುಂಬದ ಹೇಳಿಕೆ

ಕಂಪನಿ ನ್ಯಾಯಮಂಡಳಿಯ ಮೊರೆ

ಸಮರ್ಥವಾಗಿ ಕಂಪನಿ ನಡೆಸುವಲ್ಲಿ ರವೀಂದ್ರನ್ ವಿಫಲರಾಗಿದ್ದಾರೆ. ದಬ್ಬಾಳಿಕೆ ಹಾಗೂ ಅವ್ಯವಹಾರದಲ್ಲಿ ತೊಡಗಿದ್ದಾರೆ. ಹಾಗಾಗಿ, ಹಾಲಿ ಇರುವ ಆಡಳಿತ ಮಂಡಳಿಯನ್ನು ಬದಲಾಯಿಸಿ ಹೊಸದಾಗಿ ಪುನರ್ ರಚಿಸಬೇಕು ಎಂದು ಕೋರಿ ಆರು ಪ್ರಮುಖ ಹೂಡಿಕೆದಾರರ ಪೈಕಿ ನಾಲ್ವರು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ ಬೆಂಗಳೂರು ಘಟಕಕ್ಕೆ ಅರ್ಜಿ ಸಲ್ಲಿಸಿದ್ದಾರೆ.

ಕಂಪನಿಯ ಖಾತೆಗಳ ಬಗ್ಗೆ ನ್ಯಾಯಯುತ ಲೆಕ್ಕಪರಿಶೋಧನೆಗೆ ಸೂಚಿಸಬೇಕು ಎಂದು ಅರ್ಜಿಯಲ್ಲಿ ಕೋರಿದ್ದಾರೆ. ‘ನ್ಯಾಯಮಂಡಳಿಯಲ್ಲಿ ಹೂಡಿಕೆದಾರರು ಸಲ್ಲಿಸಿರುವ ಅರ್ಜಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ’ ಎಂದು ಬೈಜುಸ್ ಕಂಪನಿಯ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಕಿಯಾ ಕಾರಿನಲ್ಲಿ ತಾಂತ್ರಿಕ ದೋಷ

ನವದೆಹಲಿ (ಪಿಟಿಐ): ಕಿಯಾ ಸೆಲ್ಟೋಸ್ ಎಸ್‌ಯುವಿ ಪೆಟ್ರೋಲ್ ಮಾದರಿಯ ಕೆಲವು ಕಾರುಗಳಲ್ಲಿ ತಾಂತ್ರಿಕ ದೋಷ ಕಂಡುಬಂದಿದೆ ಎಂದು ದಕ್ಷಿಣ ಕೊರಿಯಾದ ಕಾರು ತಯಾರಕಾ ಕಂಪನಿ ಕಿಯಾ ಇಂಡಿಯಾ ತಿಳಿಸಿದೆ.

2023ರ ಫೆಬ್ರುವರಿ 28ರಿಂದ ಜುಲೈ 13ರ ನಡುವೆ ತಯಾರಿಸಿರುವ 4,358 ಕಾರುಗಳಲ್ಲಿನ ಎಲೆಕ್ಟ್ರಾನಿಕ್ ಆಯಿಲ್ ಪಂಪ್ ಕಂಟ್ರೋಲರ್‌ನಲ್ಲಿ ದೋಷ ಕಂಡುಬಂದಿದೆ. ಈ ಕಾರುಗಳನ್ನು ವಾಪಸ್ ಪಡೆದು ದೋಷ ಸರಿಪಡಿಸಿ ಮಾಲೀಕರಿಗೆ ಮರಳಿಸಲಾಗುವುದು ಎಂದು ಕಂಪನಿ ತಿಳಿಸಿದೆ.

ಈ ಬಗ್ಗೆ ಕೇಂದ್ರ ರಸ್ತೆ ಸಾರಿಗೆ ಮತ್ತು ರಾಷ್ಟ್ರೀಯ ಹೆದ್ದಾರಿ ಸಚಿವಾಲಯಕ್ಕೂ ಮಾಹಿತಿ ನೀಡಲಾಗಿದೆ. ಗ್ರಾಹಕರ ಸುರಕ್ಷತೆಯೇ ಕಂಪನಿಯ ಆದ್ಯತೆಯಾಗಿದೆ ಎಂದು ತಿಳಿಸಿದೆ.

ವಿಮಾನ ಪ್ರಯಾಣಿಕರಿಗೆ ಏರ್‌ಟೆಲ್‌ನಿಂದ ಮೊಬೈಲ್ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ದೂರಸಂಪರ್ಕ ಕಂಪನಿಯಾದ ಭಾರ್ತಿ ಏರ್‌ಟೆಲ್, ವಿಮಾನ ಪ್ರಯಾಣಿಕರಿಗೆ ಮಾರ್ಗಮಧ್ಯೆಯೂ ಮೊಬೈಲ್ ಸಂಪರ್ಕ ಸೇವೆ ಕಲ್ಪಿಸಲು ನಿರ್ಧರಿಸಿದ್ದು, ಈ ಸಂಬಂಧ ‘ಏರೊ ಮೊಬೈಲ್’ ಸಂಸ್ಥೆಯ ಜೊತೆಗೆ ಒಡಂಬಡಿಕೆ ಮಾಡಿಕೊಂಡಿದೆ.

ಏರ್‌ಟೆಲ್ ಕಂಪನಿಯು, 19 ವಿಮಾನಯಾನ ಸಂಸ್ಥೆಗಳ ಜೊತೆಗೆ ಒಪ್ಪಂದ ಮಾಡಿಕೊಂಡಿದೆ. ಈ ಸಂಸ್ಥೆಗಳ ವಿಮಾನಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಮೊಬೈಲ್ ಸಂಪರ್ಕ ಸೇವೆ ಲಭಿಸಲಿದೆ.

ಇದಕ್ಕಾಗಿ ದಿನದ 24 ಗಂಟೆಗಳ ಕಾಲ ಸೇವೆ ನೀಡಲು ಪ್ರತ್ಯೇಕ ಸಂಪರ್ಕ ಕೇಂದ್ರವನ್ನು ತೆರೆಯಲಾಗುವುದು. ಗ್ರಾಹಕರ ಸಮಸ್ಯೆಗಳಿಗೆ ತಕ್ಷಣವೇ ಪರಿಹಾರ ನೀಡಲು ವಾಟ್ಸ್‌ಆ್ಯಪ್ ಸೇವೆಯನ್ನೂ ಒದಗಿಸಲಾಗುವುದು ಎಂದು ಕಂಪನಿ ತಿಳಿಸಿದೆ.

ಪ್ರಯಾಣಿಕರು ವಿಮಾನಗಳಲ್ಲಿ ಪ್ರಯಾಣಿಸುವ ವೇಳೆ ಕರೆ, ಎಸ್‌ಎಂಎಸ್ ಮತ್ತು ಡಾಟಾ ಸೇವೆ ಪಡೆದುಕೊಳ್ಳಬಹುದಾಗಿದೆ. ಸ್ಪರ್ಧಾತ್ಮಕ ದರದಲ್ಲಿ ಗ್ರಾಹಕರಿಗೆ ಈ ಸೌಲಭ್ಯ ನೀಡಲು ಏರ್‌ಟೆಲ್ ಮುಂದಾಗಿದೆ. ₹195, ₹295 ಹಾಗೂ ₹595 ದರದಲ್ಲಿ ಮೂರು ರೋಮಿಂಗ್ ಪ್ಯಾಕೇಜ್‌ಗಳನ್ನು ಘೋಷಿಸಿದ್ದು, ಇವುಗಳ ಬಳಕೆಯು ಒಂದು ದಿನಕ್ಕೆ ಸೀಮಿತವಾಗಿದೆ.

ಭಾರ್ತಿ ಏರ್‌ಟೆಲ್‌ನ ನಿರ್ದೇಶಕ (ಗ್ರಾಹಕರ ಅನುಭವ ಮತ್ತು ಮಾರುಕಟ್ಟೆ ವಿಭಾಗ) ಅಮಿತ್ ತ್ರಿಪಾಠಿ ಮಾತನಾಡಿ, ‘ವಿಮಾನದ ಪ್ರಯಾಣಿಕರಿಗೆ ಮೊಬೈಲ್ ಸೇವೆ ಒದಗಿಸಲು ಕಂಪನಿ ಮುಂದಾಗಿರುವುದು ಹೆಮ್ಮೆಯ ವಿಷಯ. ಪಯಣದ ವೇಳೆ ಪ್ರಯಾಣಿಕರು ತಮ್ಮ ಪ್ರೀತಿಪಾತ್ರರ ಜೊತೆಗೆ ಸಂಭಾಷಿಸಲು ಇದರಿಂದ ಅನುಕೂಲವಾಗಲಿದೆ’ ಎಂದು ತಿಳಿಸಿದ್ದಾರೆ.

ಕಲಬುರಗಿ ವಿಮಾನ ನಿಲ್ದಾಣದಲ್ಲಿ ರಾತ್ರಿ ಸೇವೆ ಆರಂಭ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ವಿಮಾನ ನಿಲ್ದಾಣದಲ್ಲಿ ಗುರುವಾರ ತಡರಾತ್ರಿ ವಿಮಾನವು ಸುರಕ್ಷಿತವಾಗಿ ಇಳಿದಿದ್ದು, ಬೆಂಗಳೂರು–ಕಲಬುರಗಿ ನಡುವೆ ರಾತ್ರಿ ವಿಮಾನ ಸೇವೆ ಆರಂಭಗೊಂಡಿತು.

ಅಲಯನ್ಸ್ ಏರ್‌ಲೈನ್ಸ್‌ನ ವಿಮಾನವು ಪ್ರತಿ ಗುರುವಾರ ಸಂಜೆ 6.45ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 8ಕ್ಕೆ ಕಲಬುರಗಿ ತಲುಪಲಿದೆ. ರಾತ್ರಿ 8.45ಕ್ಕೆ ಕಲಬುರಗಿಯಿಂದ ಹೊರಟು ರಾತ್ರಿ 10ಕ್ಕೆ ಬೆಂಗಳೂರು ತಲುಪಲಿದೆ.

2019ರ ನವೆಂಬರ್ 22ರಂದು ಇಲ್ಲಿನ ನಿಲ್ದಾಣದಲ್ಲಿ ವಿಮಾನ ಸಂಚಾರಕ್ಕೆ ಚಾಲನೆ ನೀಡಲಾಗಿತ್ತು. ಐದು ವರ್ಷಗಳ ಬಳಿಕ ರಾತ್ರಿ ಲ್ಯಾಂಡಿಂಗ್ ಸೇವೆಗೆ ಚಾಲನೆ ಸಿಕ್ಕಿದೆ.

ತಾಂತ್ರಿಕ ಕಾರಣದಿಂದಾಗಿ ಗುರುವಾರ (ಫೆ. 22) ರಾತ್ರಿ ಅಲಯನ್ಸ್ ಏರ್‌ಲೈನ್ಸ್‌ನ ವಿಮಾನವು ರಾತ್ರಿ 10.40ಕ್ಕೆ ಬೆಂಗಳೂರಿನಿಂದ ಹೊರಟು ರಾತ್ರಿ 11.52ಕ್ಕೆ ಕಲಬುರಗಿಗೆ ಬಂದಿಳಿದಿತ್ತು. ಸಂಸದ ಡಾ.ಉಮೇಶ ಜಾಧವ ಅವರೂ ಪ್ರಯಾಣಿಕರೊಂದಿಗೆ ಬೆಂಗಳೂರಿನಿಂದ ಕಲಬುರಗಿಗೆ ಪ್ರಯಾಣ ಮಾಡಿದ್ದರು.

ಮೋದಿ ಕುರಿತು ತಪ್ಪು ಮಾಹಿತಿ

ಗೂಗಲ್ ಎ.ಐ ‘ಜೆಮಿನಿ’ ವಿರುದ್ಧ ಕ್ರಮ: ಕೇಂದ್ರ ಸಚಿವ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರ ಬಗ್ಗೆ ಗೂಗಲ್ ಕೃತಕ ಬುದ್ಧಿಮತ್ತೆ ಸಾಧನವಾದ ‘ಜೆಮಿನಿ’ ತಪ್ಪು ಮಾಹಿತಿ ನೀಡಿದೆ ಎಂದು ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಖಾತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

‘ಜೆಮಿನಿ’ ಬಳಕೆದಾರರಾದ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಪೂರ್ವಗ್ರಹ ಪೀಡಿತವಾಗಿ ಪ್ರತಿಕ್ರಿಯಿಸಿದೆ. ಇದು ಮಾಹಿತಿ ತಂತ್ರಜ್ಞಾನ ಕಾಯ್ದೆಯ ಮಧ್ಯಸ್ಥಿಕೆಗಾರರ (ಐ.ಟಿ ನಿಯಮಗಳು) ನಿಯಮ 3(1)(ಬಿ)ರ ಸ್ಪಷ್ಟ ಉಲ್ಲಂಘನೆಯಾಗಿದೆ. ಕ್ರಿಮಿನಲ್ ದಂಡ ಸಂಹಿತೆಯ ಹಲವು ನಿಯಮಗಳ ನೇರ ಉಲ್ಲಂಘನೆಯೂ ಆಗಿದೆ ಎಂದು ಹೇಳಿದ್ದಾರೆ.

ತಮ್ಮ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ಗೂಗಲ್ ಇಂಡಿಯಾದ ಹೆಸರನ್ನು ನಮೂದಿಸಿರುವ ಸಚಿವರು, ಸಚಿವಾಲಯವು ಕಂಪನಿ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಲಿದೆ ಎಂದು ಎಚ್ಚರಿಕೆ ನೀಡಿದ್ದಾರೆ.

‘ಜೆಮಿನಿ’ಗೆ ಕೇಳಿದ ಪ್ರಶ್ನೆ ಏನು?: ಪತ್ರಕರ್ತರೊಬ್ಬರು ‘ಈಸ್ ಮೋದಿ ಎ ಫ್ಯಾಸಿಸ್ಟ್?’ ಎಂದು ‘ಜೆಮಿನಿ’ಗೆ ಪ್ರಶ್ನೆ ಕೇಳಿದ್ದಾರೆ. ಇದಕ್ಕೆ ಅದು ದೋಷಪೂರಿತವಾದ ಉತ್ತರ ನೀಡಿದೆ.

ಆದರೆ, ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಉಕ್ರೇನ್‌ನ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ಉಲ್ಲೇಖಿಸಿ ಇದೇ ಪ್ರಶ್ನೆ ಕೇಳಿದಾಗ ಜಾಗರೂಕವಾಗಿ ಉತ್ತರಿಸಿದೆ ಎಂದು ಹೇಳಿರುವ ಅವರು, ಈ ಕುರಿತ ಸ್ಕ್ರೀನ್ ಶಾಟ್‌ಗಳನ್ನು ‘ಎಕ್ಸ್’ನಲ್ಲಿ ಹಂಚಿಕೊಂಡಿದ್ದಾರೆ.

ಗೂಗಲ್ ಎ.ಐ ಸಾಧನವು ನೀಡಿರುವ ಉತ್ತರವು ಪೂರ್ವಗ್ರಹಪೀಡಿತವಾಗಿದೆ. ಇದರ ವಿರುದ್ಧ ಕೇಂದ್ರ ಸರ್ಕಾರವು ಕಠಿಣ ಕ್ರಮಕೈಗೊಳ್ಳಬೇಕು ಎಂದು ಅವರು ಒತ್ತಾಯಿಸಿದ್ದಾರೆ.

ಮೋದಿ ಅವರ ಬಗ್ಗೆ ಉತ್ತರಿಸುವಾಗ ಗೂಗಲ್ ಸಾಧನವು ತಾರತಮ್ಯದ ಧೋರಣೆ ತಳೆದಿದೆ ಎಂದು ಹಲವು ನೆಟ್ಟಿಗರು ಟೀಕಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ
23-02-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	890 (880)
ಪಾಮ್ ವಾರದ ಡೆಲಿವರಿ	856 (858)
ಸೂರ್ಯಕಾಂತಿ ಎಣ್ಣೆ ಕಚ್ಚಾ	850 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹61,800 (61,800)
ಬೆಳ್ಳಿ ಕೆ.ಜಿ ₹69,700 (70,350)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ರಷ್ಯಾ ವಿರುದ್ಧ ಇನ್ನಷ್ಟು ನಿರ್ಬಂಧಕ್ಕೆ ಅಮೆರಿಕ ಚಿಂತನೆ

ವಾಷಿಂಗ್ಟನ್ (ಎ.ಪಿ): ಯುದ್ಧ ಪರಿಕರಗಳಿಗೆ ಸಂಬಂಧಿಸಿದಂತೆ ರಷ್ಯಾದ ಮೇಲೆ 500ಕ್ಕೂ ಹೆಚ್ಚು ಹೊಸ ನಿರ್ಬಂಧಗಳನ್ನು ಹೇರಲು ಅಮೆರಿಕ ಚಿಂತನೆ ನಡೆಸಿದೆ.

ಯುದ್ಧ ಮೂರನೇ ವರ್ಷಕ್ಕೆ ಕಾಲಿಡುತ್ತಿರುವ ಸಂದರ್ಭದಲ್ಲಿ ರಷ್ಯಾದ ಮೇಲೆ ಆರ್ಥಿಕ ಒತ್ತಡ ಹೇರುವ ಕ್ರಮವಾಗಿ ಈ ತೀರ್ಮಾನಕ್ಕೆ ಬಂದಿದೆ. 2022ರ ಫೆಬ್ರುವರಿ 24ರಂದು ಉಕ್ರೇನ್ ಮೇಲೆ ಯುದ್ಧ ಸಾರಿದ ನಂತರ ರಷ್ಯಾದ ಮೇಲೆ ಹೇರಲಾಗುತ್ತಿರುವ ಅತಿದೊಡ್ಡ ನಿರ್ಬಂಧವಾಗಿದೆ.

ಐದು ಪ್ರತ್ಯೇಕ ಪ್ರಕರಣಗಳಿಗೆ ಸಂಬಂಧಿಸಿ ರಷ್ಯಾದ ಎರಡನೇ ಅತಿದೊಡ್ಡ ಬ್ಯಾಂಕ್‌ನ ಮುಖ್ಯಸ್ಥ, ಮಧ್ಯವರ್ತಿ ಗುರಿಯಾಗಿಸಿ ನ್ಯಾಯಾಂಗ ಇಲಾಖೆಯು ವಿವಿಧ ಕ್ರಮಗಳನ್ನು ಪ್ರಕಟಿಸಿದ ಹಿಂದೆಯೇ ನಿರ್ಬಂಧದ ಚಿಂತನೆ ನಡೆದಿದೆ.

ಡೊನಾಲ್ಡ್ ಟ್ರಂಪ್ ಜೊತೆಗೆ ಗುರುತಿಸಿಕೊಂಡಿರುವ ರಿಪಬ್ಲಿಕನ್ ಪಕ್ಷದ ಕೆಲ ಸಂಸದರ ವಿರೋಧದ ನಡುವೆಯೂ ಜೋ ಬೈಡನ್ ಆಡಳಿತವು ಉಕ್ರೇನ್‌ಗೆ ಪೂರ್ಣ ಬೆಂಬಲ ನೀಡಲು ಒತ್ತು ನೀಡಿದೆ.

ಈಗಾಗಲೇ ರಷ್ಯಾದ ಅಧಿಕಾರಿಗಳು, ಉದ್ಯಮಿಗಳು, ಬ್ಯಾಂಕ್‌ಗಳು, ಕಂಪನಿಗಳು, ಕೈಗಾರಿಕೆಗಳಿಗೆ ಅನ್ವಯಿಸಿ ಈಗಾಗಲೇ ಅಮೆರಿಕ ಹಲವು ನಿರ್ಬಂಧಗಳನ್ನು ಹೇರಿದೆ.

ಸ್ಕೀಯಿಂಗ್ ಆಟ
ಉತ್ತರ ಕಾಶ್ಮೀರದ ಗುಲ್ಮಾರ್ಗ್‌ನಲ್ಲಿ ಶುಕ್ರವಾರ ಸುರಿದ ಹಿಮದಲ್ಲಿ ಸ್ಕೀಯಿಂಗ್ ಆಡುತ್ತಿರುವ ಮಕ್ಕಳು –ಪಿಟಿಐ ಚಿತ್ರ

ಗಾಜಾ ಮೇಲೆ ದಾಳಿ: 71 ಸಾವು

ಜೆರುಸಲೇಂ (ಎಪಿ): ದಕ್ಷಿಣ ಮತ್ತು ಮಧ್ಯ ಗಾಜಾದಲ್ಲಿ ಇಸ್ರೇಲಿ ಪಡೆಗಳು ನಡೆಸಿದ ದಾಳಿಯಲ್ಲಿ 71 ಜನರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಅಧಿಕಾರಿಗಳು ತಿಳಿಸಿದ್ದಾರೆ.

ಇಸ್ರೇಲ್ ಆಕ್ರಮಿತ ವೆಸ್ಟ್ ಬ್ಯಾಂಕ್‌ನಲ್ಲೂ ಉದ್ವಿಗ್ನ ಪರಿಸ್ಥಿತಿ ತೀವ್ರಗೊಂಡಿದೆ. ಇಲ್ಲಿನ ಚೆಕ್‌ಪಾಯಿಂಟ್ ಬಳಿಯ ರಸ್ತೆಯೊಂದರಲ್ಲಿ ಗುರುವಾರ ಮೂವರು ಬಂದೂಕುಧಾರಿಗಳು ಗುಂಡು ಹಾರಿಸಿದ್ದಾರೆ. ಇದರಲ್ಲಿ ಒಬ್ಬ ಇಸ್ರೇಲ್ ವ್ಯಕ್ತಿ ಮೃತಪಟ್ಟಿದ್ದು ಐವರು ಗಾಯಗೊಂಡಿದ್ದಾರೆ. ದಾಳಿಕೋರರಲ್ಲಿ ಇಬ್ಬರನ್ನು ಹತ್ಯೆ ಮಾಡಲಾಗಿದ್ದು, ಮೂರನೇ ವ್ಯಕ್ತಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದ್ದಾರೆ.

ಗಾಜಾ ಪಟ್ಟಿಯಲ್ಲಿ ಬಿಕ್ಕಟ್ಟು ಹೆಚ್ಚುತ್ತಿರುವ ಬೆನ್ನಲ್ಲೇ ಯುರೋಪಿನ ರಾಜತಾಂತ್ರಿಕರು ಕದನ ವಿರಾಮಕ್ಕೆ ಒತ್ತಡ ಹೆಚ್ಚಿಸುತ್ತಿದ್ದಾರೆ. ಇದರ ಬೆನ್ನಲ್ಲೇ ‘ನಮ್ಮ ಒತ್ತೆಯಾಳುಗಳ ಸಮಾಲೋಚಕರಿಗೆ ನೀಡಿರುವ ಅಧಿಕಾರವನ್ನು ನಾವು ಮತ್ತಷ್ಟು ವಿಸ್ತರಿಸುತ್ತೇವೆ’ ಎಂದು ಇಸ್ರೇಲ್‌ನ ರಕ್ಷಣಾ ಸಚಿವ ಯೋವ್ ಗ್ಯಾಲಂಟ್ ಗುರುವಾರ ತಿಳಿಸಿದ್ದಾರೆ.

ಇಸ್ರೇಲ್ ಮತ್ತು ಹಮಾಸ್ ಬಂಡುಕೋರರ ನಡುವೆ ಯುದ್ಧ ಆರಂಭವಾದ ಬಳಿಕ 15 ಲಕ್ಷಕ್ಕೂ ಹೆಚ್ಚು ಮಂದಿ ಈಜಿಪ್ಟ್ ಗಡಿಯ ಸಮೀಪವಿರುವ ರಫಾ ನಗರಕ್ಕೆ ಆಶ್ರಯ ಅರಸಿ ಬಂದಿದ್ದಾರೆ. ಗಾಜಾ ಆರೋಗ್ಯ ಸಚಿವಾಲಯದ ಅಂದಾಜಿನ ಪ್ರಕಾರ ಯುದ್ಧ ಆರಂಭವಾದ ಬಳಿಕ 29,000ಕ್ಕೂ ಹೆಚ್ಚು ಪ್ಯಾಲೆಸ್ಟೀನ್ ಪ್ರಜೆಗಳು ಮೃತಪಟ್ಟಿದ್ದಾರೆ.

ಗಾಜಾಪಟ್ಟಿಯ ದಕ್ಷಿಣ ಭಾಗದಲ್ಲಿ ಗುರುವಾರ ನಡೆದ ಇಸ್ರೇಲ್ ಬಾಂಬ್ ದಾಳಿಯಲ್ಲಿ ಮೃತಪಟ್ಟವರ ಸಂಬಂಧಿಕರು ರೋದಿಸಿದರು –ಎಎಫ್‌ಪಿ ಚಿತ್ರ

ಗಾಜಾಪಟ್ಟಿ ನಿಯಂತ್ರಣಕ್ಕೆ ಯೋಜನೆ

ಹಮಾಸ್ ವಿರುದ್ಧದ ಯುದ್ಧ ಕೊನೆಗೊಂಡ ಬಳಿಕ ಇಸ್ರೇಲ್ ಗಾಜಾಪಟ್ಟಿಯಲ್ಲಿ ಭದ್ರತೆಯನ್ನು ನಿಯಂತ್ರಿಸುವ ಮತ್ತು ನಾಗರಿಕ ವ್ಯವಹಾರಗಳಲ್ಲಿ ಪ್ರಮುಖ ಪಾತ್ರ ನಿರ್ವಹಿಸುವ ಯೋಜನೆಯನ್ನು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೇತನ್ಯಾಹು ಹೊಂದಿದ್ದಾರೆ. ಈ ಕುರಿತು ಯೋಜನೆಯನ್ನು ಅವರು ಅನುಮೋದನೆಗಾಗಿ ಸಂಪುಟದ ಮುಂದಿಟ್ಟಿದ್ದಾರೆ.

ಯುದ್ಧಾನಂತರದ ಇಸ್ರೇಲ್‌ನ ಪಾತ್ರ ಮತ್ತು ನೋಟದ ಕುರಿತ ಯೋಜನೆ ಇದಾಗಿದೆ. ಅದಾಗ್ಯೂ ಪ್ಯಾಲೆಸ್ಟೀನ್‌ನ ಸ್ವಾಯತ್ತ ಸರ್ಕಾರಕ್ಕಾಗಿ ಅಮೆರಿಕದ ಪ್ರಸ್ತಾಪಗಳಿಗೆ ಇದು ವ್ಯತಿರಿಕ್ತವಾಗಿದೆ ಎನ್ನಲಾಗುತ್ತಿದೆ. ಪ್ರಧಾನಮಂತ್ರಿಗಳ ಕಚೇರಿ ಈ ಯೊಜನೆಯನ್ನು ಗುರುವಾರ ರಾತ್ರಿ ಪ್ರಕಟಿಸಿದೆ. 2007ರಲ್ಲಿ ಗಾಜಾ ಪಟ್ಟಿಯನ್ನು ಅತಿಕ್ರಮಿಸಿದ ಬಂಡುಕೋರ ಹಮಾಸ್ ಗುಂಪನ್ನು ಹತ್ತಿಕ್ಕಲು ಇಸ್ರೇಲ್ ನಿರ್ಧರಿಸಿರುವುದನ್ನು ಈ ಯೋಜನೆ ಪುನರುಚ್ಚರಿಸುತ್ತದೆ.

ಚಂದ್ರನ ಅಂಗಳ ತಲುಪಿದ ಖಾಸಗಿ ಬಾಹ್ಯಾಕಾಶ ನೌಕೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಖಾಸಗಿ ಕಂಪನಿಯೊಂದು ಚಂದ್ರನ ಅಂಗಳದಲ್ಲಿ ಇದೇ ಮೊದಲ ಬಾರಿಗೆ ವಾಣಿಜ್ಯ ಉದ್ದೇಶದ ಬಾಹ್ಯಾಕಾಶ ನೌಕೆಯನ್ನು ನೆಲೆಯೂರಿಸುವ ಮೂಲಕ ಇತಿಹಾಸ ಸೃಷ್ಟಿಸಿದೆ.

ಕಳೆದ 50 ವರ್ಷಗಳ ಇತಿಹಾಸದಲ್ಲಿ ಚಂದ್ರನ ಅಂಗಳವನ್ನು ತಲುಪಿಸಿದ ಅಮೆರಿಕದ ಮೊದಲ ಬಾಹ್ಯಾಕಾಶ ನೌಕೆಯೂ ಇದಾಗಿದೆ.

ಈ ಮೊದಲು ಭಾರತ, ರಷ್ಯಾ ಮತ್ತು ಅಮೆರಿಕ ಮತ್ತು ಚೀನಾ ಈ ಸಾಧನೆಯನ್ನು ಮಾಡಿದ್ದವು. ಈ ಹಿಂದೆ ಅಮೆರಿಕದ ‘ಅಪೊಲೊ 17’ ಬಾಹ್ಯಾಕಾಶ ನೌಕೆಯು 1972ರಲ್ಲಿ ಚಂದ್ರನ ಅಂಗಳವನ್ನು ತಲುಪಿತ್ತು.

ಅಮೆರಿಕ ಖಾಸಗಿ ಸಂಸ್ಥೆ ಇನುಷಿಟಿವ್ ಮಷಿನ್ಸ್ ನಿರ್ಮಿಸಿರುವ ‘ಒಡಿಸ್ಸಿಯಸ್’ ಎಂದು ಹೆಸರಿಸಲಾಗಿರುವ ಲ್ಯಾಂಡರ್ ಅಮೆರಿಕದ ಸ್ಥಳೀಯ ಕಾಲಮಾನ ಗುರುವಾರ, ಸಂಜೆ 6.30ಕ್ಕೆ ಚಂದ್ರನ ಅಂಗಳವನ್ನು ತಲುಪಿತು. ದಕ್ಷಿಣ ಧ್ರುವದ ಬಳಿಯೇ ಈ ಲ್ಯಾಂಡರ್ ಅನ್ನು ಇಳಿಸಲಾಗಿದೆ ಎಂದು ವರದಿ ತಿಳಿಸಿದೆ.

‘ಕಳೆದ ಅರ್ಧ ಶತಮಾನದ ಅವಧಿಯಲ್ಲಿ ಇದೇ ಮೊದಲ ಬಾರಿಗೆ ಅಮೆರಿಕ ಚಂದ್ರನಲ್ಲಿಗೆ ಮರಳಿದೆ’ ಎಂದು ‘ನಾಸಾ’ದ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಈ ಕುರಿತು ಪ್ರತಿಕ್ರಿಯಿಸಿದರು.

ವಾಲ್ ಸ್ಟ್ರೀಟ್ ಜರ್ನಲ್ ಪ್ರಕಾರ, ಲ್ಯಾಂಡರ್ ‘ಒಡಿಸ್ಸಿಯಸ್’ ನಾಸಾದ ಸಂಶೋಧನಾ ಪರಿಕರಗಳನ್ನು ಹೊತ್ತೊಯ್ದಿದೆ. ಜೊತೆಗೆ ಕಲಾವಿದ ಜೆಫ್ ಕೂನ್ಸ್ ರೂಪಿಸಿರುವ ಕಾಷ್ಠಶಿಲ್ಪವನ್ನು ಒಯ್ದಿದೆ ಎಂದರು. ಚಂದ್ರನ ಅಂಗಳದಲ್ಲಿ ಈ ಲ್ಯಾಂಡರ್ ಒಂದು ವಾರದ ನಂತರ ಕಾರ್ಯಾರಂಭ ಮಾಡಬಹುದು ಎಂದು ಆಶಿಸಲಾಗಿದೆ.

ಧರ್ಮ ನಿಂದನೆ ಆರೋಪ: ಪ್ರತಿಭಟನೆ

ಇಸ್ಲಾಮಾಬಾದ್ (ರಾಯಿಟರ್ಸ್): ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಧರ್ಮನಿಂದನೆ ಮಾಡಿದ್ದಾರೆ ಎಂದು ಆರೋಪಿಸಿ ವಿವಿಧ ಧಾರ್ಮಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳ ಬೆಂಬಲಿಗರು ಪಾಕಿಸ್ತಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ತೆಹ್ರೀಕ್-ಎ-ಲಬ್ಬೈಕ್ ಪಾಕಿಸ್ತಾನ್ (ಟಿಎಲ್‌ಪಿ) ನೇತೃತ್ವದಲ್ಲಿ ವಿವಿಧ ಧಾರ್ಮಿಕ ಸಂಘಟನೆಗಳು ಮತ್ತು ರಾಜಕೀಯ ಪಕ್ಷಗಳು ಪ್ರತಿಭಟನೆಗೆ ಕರೆ ನೀಡಿದ್ದವು.

ಧರ್ಮ ನಿಂದನೆ ಪ್ರಕರಣದಲ್ಲಿ ಆರೋಪಿಯಾಗಿದ್ದ ಅಲ್ಪಸಂಖ್ಯಾತ ಅಹಮದಿ ಸಮುದಾಯದ ವ್ಯಕ್ತಿಯೊಬ್ಬರಿಗೆ ಜಾಮೀನು ಮಂಜೂರು ಮಾಡುವ ಮೂಲಕ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಖಾಜಿ ಫಯಾಜ್ ಇಸಾ ಅವರು ಧರ್ಮ ನಿಂದನೆ ಮಾಡಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಅಹಮದಿ ಸಮುದಾಯದ ವ್ಯಕ್ತಿಗೆ ನ್ಯಾಯಾಲಯವು ಈಚೆಗೆ ಜಾಮೀನು ನೀಡಿತ್ತು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 9663542555, 9035482999

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಪ್ರಜಾವಾಣಿ
To place your ad in Prajavani Classifieds
ಜಾಹೀರಾತು ನೀಡಿಕೆಗಾಗಿ ಸಂಪರ್ಕಿಸಿರಿ:
9886213331 : 9901641752
9845114560 : 9731810277
080 - 45557163 / 164
E-mail: dhclassifieds@deccanherald.co.in

Multiple Vacancy

REQUIRED Experienced Telecaller, Loan Recovery Supervisor for BankLoan collection. Salary 30,000 + Incentive Contact: 9620206756.

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಭವಿಷ್ಯ

Astrology

ವಶೀಕರಣ ಸ್ಪೆಷಲಿಸ್ಟ್, ಕೇರಳದ ಮಾಂತ್ರಿಕರು, ಪ್ರೇಮವಿಚಾರ, ಇಷ್ಟಪಟ್ಟವರು ನಿಮ್ಮಂತಾಗಲು, ಸ್ತ್ರೀಪುರುಷ ವಶೀಕರಣ ಅಷ್ಟಮಂಗಲ ಪೂಜೆಯಿಂದ ನಿಮ್ಮೆಲ್ಲಾ ಸಮಸ್ಯೆಗಳಿಗೆ ಪರಿಹಾರ. 9900574892

ಪ್ರವಾಸ

Travel

22.02.2024 15.03.2024 ಅಯೋಧ್ಯಾ,ಕಾಶಿ,ಬುದ್ಧಗಯಾ ಬೈದ್ಯನಾಥ್.04.03.2024 ಸೋಮನಾಥ್,ದ್ವಾರಕ ನಿಷ್ಕಳಂಕ ಮಹಾದೇವ ಓಂಕಾರೇಶ್ವರ ಮಹಾಕಾಳೇಶ್ವರ. 02.03.2024 17.03.2024 ಮಹಾಶಿವರಾತ್ರಿ ನೇಪಾಳ,ಮುಕ್ತಿನಾಥ ಪೋಕ್ರ,ಲುಂಬಿನಿ. 11.05.2024 23.05.2024 ಚಾರ್‌ಧಾಮ್ ಪ್ರವಾಸ ಮಧ್ಯ/ದಕ್ಷಿಣಆಂಧ್ರ ಪ್ರವಾಸಗಳಿಗೆ ಸಂಪರ್ಕಿಸಿ. ವಿಷ್ಣು ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 7204173686 9686708171

19.4.2024 ಅಯೋಧ್ಯಾ, ಕಾಶಿ,ಗಯಾ, ಪ್ರಯಾಗ್‌ರಾಜ್ 21.4.2024ದೆಹಲಿ, ಅಮೃತ್‌ಸರ್, ವೈಷ್ಣೋದೇವಿ, ಹರಿದ್ವಾರ,ಪ್ರಯಾಗರಾಜ್, ಅಯೋಧ್ಯಾ, ಕಾಶಿ,ಗಯಾ. 15.5.2024ಯಮುನೋತ್ರಿ, ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

8 ದಿನಗಳ ಸೌತ್‌ಆಫ್ರಿಕಾ 7/11 ದಿನಗಳ ಸಿಂಗಾಪುರ್, ಮಲೇಶಿಯಾ, ಥೈಲ್ಯಾಂಡ್ 7 ದಿನಗಳ ಜಪಾನ್, 7 ದಿನಗಳ ಶ್ರೀಲಂಕಾ, 6 ದಿನಗಳ ಕಾಶ್ಮೀರ, 8 ದಿನಗಳ ಭೂತಾನ್ 5 ದಿನಗಳ ಬಾಕು ಭಟ್ ಟ್ರಾವೆಲ್ಸ್: 9844166555/ 9844037295

12.04.2024 17.05.2024 ಸಿಂಗಾಪುರ್ ಮಲೇಶಿಯಾ, ಥೈಲ್ಯಾಂಡ್ 7/11 ದಿನಗಳು. 12.04.2024 ದುಬೈ,ಅಬುದಾಬಿ 5 ದಿನಗಳು. 12.04.2024 05.05.2024 ಭೂತಾನ್ 8 ದಿನಗಳು. 17.03.2024 12.04.2024 ಶ್ರೀಲಂಕಾ 7 ದಿನಗಳು. 02.04.2024 03.05.2024 29.05.2024 ಅಸ್ಸಾಂ ಅರುಣಾಚಲಪ್ರದೇಶ ಮೇಘಾಲಯ 9 ದಿನಗಳು. 25.03.2024 16.04.2024 ಕಾಶಿ,ಗಯಾ,ಅಯೋಧ್ಯಾ 8 ದಿನಗಳು. 05.04.2024 25.04.2024 14.05.2024 ಶಿಮ್ಲಾ ಕುಲುಮನಾಲಿ 7 ದಿನಗಳು. 21.04.2024 06.05.2024 ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ 7 ದಿನಗಳು. 15.04.2024 21.05.2024 ನೇಪಾಳ 9 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

29/04/2024 ಮತ್ತು 05/05/2024ರಿಂದ 22ದಿನಗಳ ವಿಮಾನ ಮತ್ತು ಎಸಿ.ಬಸ್ಸಿನಲ್ಲಿ ಬದರಿನಾಥ್, ಕೇದಾರನಾಥ್,ಕಾಶ್ಮೀರ, ಗುಲ್ಮಾರ್ಗ್,ವೈಷ್ಣೋದೇವಿ, ಅಮೃತಸರ,ಕಾಶಿ,ಅಯೋಧ್ಯ ಇತ್ಯಾದಿ 13ದಿನಗಳ ಚಾರದಾಮ್ ಮತ್ತು 27/6/2024ರಿಂದ ಅಮರನಾಥ್ ಯಾತ್ರೆಗಳಿಗೆ ಕೂಡಲೇ ವಿಚಾರಿಸಿ: ವಿಷ್ಣು ಟ್ರಾವೆಲ್ ಲೈನ್ಸ್,164/3 ಮಿನರ್ವ ಬಸ್-ಸ್ಟಾಪ್ ಎದುರು ಆರ್.ವಿ.ರಸ್ತೆ. ಬೆಂಗಳೂರು-04. 8105657052/ 9480182865.

16.3.2024 ಮತ್ತು 29.3.2024 ರಿಂದ 5ದಿನ ಕಾಶಿ. ಅಯೋಧ್ಯೆ. ಗಯಾ. ಅಲಹಾಬಾದ್. 23.3.2024 ರಿಂದ 8ದಿನ ಉಜ್ಜಯಿನಿ. ಓಂಕಾರೇಶ್ವರ, ಭೀಮಾಶಂಕರ, ಶಿರಡಿ, ತುಳಜಾಪುರ, ಎಲ್ಲೋರ, ಪಂಡರಾಪುರ. 28.3.2024 ರಿಂದ 4ದಿನ ರಾಮೇಶ್ವರ- ಕನ್ಯಾಕುಮಾರಿ- ಮಧುರೈ- ಶ್ರೀರಂಗ.21.4.2024 ರಿಂದ 10 ದಿನ, ವೈಷ್ಣೋದೇವಿ. ದೆಹಲಿ, ಕುಲುಮನಾಲಿ, ವಾಘಾಬಾರ್ಡರ್. 27.4.2024 ರಿಂದ 4ದಿನ, ಧರ್ಮಸ್ಥಳ- ಹೊರನಾಡು- ಕೊಲ್ಲೂರು ಮೂಕಾಂಬಿಕೆ, ಸಿಗಂದೂರು. 28.4.2024 ರಿಂದ 4ದಿನ ತಿರುನಲ್ಲಾರ್. ಚಿದಂಬರಂ, ತಂಜಾವೂರು, ಶ್ರೀರಂಗ. 7.5.2024 ರಿಂದ 7ದಿನ ಸಿಂಗಾಪುರ- ಮಲೇಷಿಯಾ, 12.6.2024 ರಿಂದ 13ದಿನ ಚಾರ್‌ದಾಮ್ ಪ್ರವಾಸ ಕೇದಾರನಾಥ, ಬದರೀನಾಥ, ಇತರೆ ಸ್ಥಳಗಳು. ಶ್ರೀಗುರುರಾಜ ಟ್ರಾವಲ್ಸ್: ಕೋಲಾರ. 9900124333, 9611082432, 8123099913

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸಂತ ರವಿದಾಸ್ ಅವರ 647ನೇ ಜನ್ಮದಿನೋತ್ಸವ ಹಾಗೂ ಸಾರ್ವಜನಿಕ ಸಭೆಯಲ್ಲಿ ಪ್ರಧಾನಿ ಟೀಕೆ

ಪರಿಶಿಷ್ಟರ ಏಳಿಗೆ ಸಹಿಸದ 'ಇಂಡಿಯಾ': ಮೋದಿ

ವಾರಾಣಸಿ (ಪಿಟಿಐ): ವಿರೋಧಪಕ್ಷಗಳ ಮೈತ್ರಿಕೂಟವಾದ 'ಇಂಡಿಯಾ'ದ ನಾಯಕರು ಜಾತಿಯ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಶುಕ್ರವಾರ ವಾಗ್ದಾಳಿ ನಡೆಸಿದರು.

ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಸಮುದಾಯದವರು ಉನ್ನತ ಸ್ಥಾನಗಳನ್ನು ಅಲಂಕರಿಸುವುದನ್ನು ಸಹಿಸಲೂ ಅವರಿಗೆ ಆಗುತ್ತಿಲ್ಲ ಎಂದು ಟೀಕಿಸಿದ ಪ್ರಧಾನಿ, ದ್ರೌಪದಿ ಮುರ್ಮು ಸ್ಪರ್ಧಿಸಿದ್ದ ರಾಷ್ಟ್ರಪತಿ ಚುನಾವಣೆಯನ್ನು ಉಲ್ಲೇಖಿಸಿದರು.

ವಾರಾಣಸಿ ಲೋಕಸಭಾ ಕ್ಷೇತ್ರದಲ್ಲಿ ಆಯೋಜನೆಗೊಂಡಿದ್ದ ಸಂತ ರವಿದಾಸ್ ಅವರ 647ನೇ ಜನ್ಮದಿನೋತ್ಸವ ಹಾಗೂ ಸಾರ್ವಜನಿಕ ಸಭೆ ಕಾರ್ಯಕ್ರಮದಲ್ಲಿ ಪ್ರಧಾನಿ ಮಾತನಾಡಿದರು.

ವಾರಾಣಸಿಯಲ್ಲಿ ಶುಕ್ರವಾರ ನಡೆದ ಸಾರ್ವಜನಿಕರ ಸಮಾರಂಭದಲ್ಲಿ ಪಾಲ್ಗೊಂಡಿದ್ದ ಪ್ರಧಾನಿ ನರೇಂದ್ರ ಮೋದಿ ಬೆಂಬಲಿಗರತ್ತ ಕೈಬೀಸಿ ಶುಭ ಕೋರಿದರು –ಪಿಟಿಐ ಚಿತ್ರ

ಜಾತಿಯ ಹೆಸರಿನಲ್ಲಿ ಜನರನ್ನು ಪ್ರಚೋದಿಸುವುದರಿಂದಲೂ ಮನುಷ್ಯತ್ವಕ್ಕೆ ಪೆಟ್ಟು ಬೀಳಲಿದೆ. 'ಇಂಡಿಯಾ' ನಾಯಕರು ಜಾತಿ ಹೆಸರಿನಲ್ಲಿ ಜನರನ್ನು ಎತ್ತಿಕಟ್ಟುವ ಹಾಗೂ ದಲಿತರು, ವಂಚಿತರ ಪರ ಯೋಜನೆಗಳನ್ನು ವಿರೋಧಿಸುವುದರಲ್ಲಿ ನಿರತರಾಗಿದ್ದಾರೆ. ಇದನ್ನು ದಲಿತರು, ಹಿಂದುಳಿದ ವರ್ಗದ ಜನರು ಅರಿತುಕೊಳ್ಳಬೇಕಾಗಿದೆ ಎಂದು ಹೇಳಿದರು.

ಇದೇ ಜನರು ಜಾತಿ ಕಲ್ಯಾಣದ ಹೆಸರಿನಲ್ಲಿ ಇಂದು ಕುಟುಂಬ ಹಿತಾಸಕ್ತಿಯ ರಾಜಕಾರಣದಲ್ಲಿ ತೊಡಗಿದ್ದಾರೆ. ಶೌಚಾಲಯ ಕಟ್ಟುವ ಕಾರ್ಯ ಆರಂಭವಾದಾಗ ಅಣಕವಾಡಿದರು. ಡಿಜಿಟಲ್ ಇಂಡಿಯಾ, ಜನ್‌ಧನ್ ಖಾತೆಗಳ ಬಗ್ಗೆಯೂ ವ್ಯಂಗ್ಯವಾಗಿ ಮಾತನಾಡಿದರು ಎಂದು ಪ್ರಧಾನಿ ವಾಗ್ದಾಳಿ ನಡೆಸಿದರು.

